www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮಕುಶಲ
ಯುಕ್ತವಾದ ಆಹಾರ, ರಾತ್ರಿವೇಳೆಯ ನೆಮ್ಮದಿಯ ನಿದ್ರೆ ಮತ್ತು ಅಧ್ಯಾತ್ಮಾಭಿಮುಖವಾಗಿರುವ ಸಾತ್ವಿಕಜೀವನ, ವ್ಯಾಯಾಮ ಇವು ಶರೀರಸ್ವಾಸ್ಥ್ಯಕ್ಕೆ ಆಧಾರಸ್ತಂಭಗಳು

ಆಳ-ಅಗಲ: ಕ್ರಿಪ್ಟೋಕರೆನ್ಸಿ ನೆತ್ತಿ ಮೇಲೆ ತೂಗುಗತ್ತಿ
ಬರ ಅಧ್ಯಯನಕ್ಕೆ ರಾಜ್ಯಕ್ಕೆ ₹100 ಕೋಟಿ 5
ಸರ್ಕಾರದಲ್ಲಿ 36 ಸಾವಿರ ನೌಕರರು 'ಹೊರಗುತ್ತಿಗೆ' 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
52,154 ▲	15,315 ▲	₹48,830 (ಬೆಂಗಳೂರು)	₹72,300 (ಬೆಂಗಳೂರು)	72.68 ▲

ಟೂಲ್‌ಕಿಟ್ ತನಿಖೆ ಚುರುಕು • ಇನ್ನಿಬ್ಬರ ವಿರುದ್ಧ ಜಾಮೀನುರಹಿತ ವಾರಂಟ್

ಐಎಸ್‌ಐ ನಂಟು ಆರೋಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಪರಿಸರ ಕಾರ್ಯಕರ್ತೆ ಬೆಂಗಳೂರಿನ ದಿಶಾ ರವಿ ಅವರ ಬಂಧನದೊಂದಿಗೆ 'ಟೂಲ್‌ಕಿಟ್ ಪ್ರಕರಣ'ದ ತನಿಖೆಯನ್ನು ಪೊಲೀಸರು ಇನ್ನಷ್ಟು ಚುರುಕುಗೊಳಿಸಿದ್ದಾರೆ. ದಿಶಾ ಮತ್ತು ಪೊಲೀಸರು ಹುಡುಕುತ್ತಿರುವ ನಿಕಿತಾ ಜೇಕಬ್ ಹಾಗೂ ಶಾಂತನು ಮಲಿಕ್ ಅವರಿಗೆ ಭಾರತದ ತನಿಖಾ ಸಂಸ್ಥೆಗಳ ನಿಗಾದಲ್ಲಿರುವ ವಿದೇಶಿ ವ್ಯಕ್ತಿ, ಐಎಸ್‌ಐ ಜತೆ ಸಂಬಂಧ ಹೊಂದಿರುವ ಪೀಟರ್ ಫ್ರೆಡರಿಕ್ ಜತೆಗೆ ನಂಟು ಇದೆ ಎಂದು ದೆಹಲಿ ಪೊಲೀಸರು ಸೋಮವಾರ ಆರೋಪಿಸಿದ್ದಾರೆ.

ನಿಕಿತಾ ಅವರು ಬಾಂಬೆ ಹೈಕೋರ್ಟ್‌ನಲ್ಲಿ ವಕೀಲ ವೃತ್ತಿ ಮಾಡುತ್ತಿದ್ದಾರೆ; ಮಹಾರಾಷ್ಟ್ರದ ಬೀಡ್ ನಿವಾಸಿ ಶಾಂತನು ಅವರು ಎಂಜಿನಿಯರ್. ಈ ಇಬ್ಬರ ವಿರುದ್ಧವೂ ಪೊಲೀಸರು ಜಾಮೀನುರಹಿತ ವಾರಂಟ್ ಪಡೆದುಕೊಂಡಿದ್ದಾರೆ. ಬಂಧನದಿಂದ ರಕ್ಷಣೆ ಕೋರಿ ಈ ಇಬ್ಬರೂ ಬಾಂಬೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಖಾಲಿಸ್ತಾನ ಹೋರಾಟದ ಪರವಾಗಿರುವ ಪೋಯೆಟಿಕ್ ಜಸ್ಟಿಸ್ ಫೌಂಡೇಶನ್ ಜನವರಿ 11ರಂದು ಆಯೋಜಿಸಿದ್ದ 'ಝೂಮ್' ಸಭೆಯಲ್ಲಿ ನಿಕಿತಾ ಮತ್ತು ಶಾಂತನು ಭಾಗವಹಿಸಿದ್ದಾರೆ. ಈ ಸಭೆಯಲ್ಲಿ 60–70 ಜನರು ಇದ್ದರು. ಇವರೆಲ್ಲರ ಜತೆಗೂಡಿ ನಿಕಿತಾ ಮತ್ತು ಶಾಂತನು ಅವರು ಟೂಲ್‌ಕಿಟ್ ಸಿದ್ಧಪಡಿಸಿದ್ದಾರೆ. ನಿಕಿತಾ ಅವರ ಮನೆಯಲ್ಲಿ ಹಗಲಿನಲ್ಲಿ ನಡೆಸಿದ ಶೋಧದಲ್ಲಿ ಎರಡು ಲ್ಯಾಪ್‌ಟಾಪ್ ಮತ್ತು ಒಂದು ಐಫೋನ್ ಸಿಕ್ಕಿವೆ ಎಂದು ದೆಹಲಿ ಪೊಲೀಸ್ ಇಲಾಖೆಯ ಸೈಬರ್ ಘಟಕದ ಜಂಟಿ ಆಯುಕ್ತ ಪ್ರೇಮ್‌ನಾಥ್ ಅವರು ವಿವರಿಸಿದ್ದಾರೆ.

ಪೀಟರ್ ಹೆಸರು ಏಕೆ ಬಂತು?

'ಸಾಮಾಜಿಕ ಜಾಲತಾಣದಲ್ಲಿ ಯಾರನ್ನು ಫಾಲೋ ಮಾಡಬೇಕು ಎಂಬ ಪಟ್ಟಿ ಟೂಲ್‌ಕಿಟ್‌ನಲ್ಲಿ ಇದೆ. ಅದರಲ್ಲಿ ಮಾಧ್ಯಮ ಸಂಸ್ಥೆಗಳು, ಫ್ಯಾಕ್ಟ್‌ಚೆಕ್ ಮಾಡುವ ಪ್ರಮುಖರು, ಎನ್‌ಜಿಒಗಳು ಮತ್ತು ಇತರರು ಇದ್ದಾರೆ. ಈ ಪಟ್ಟಿಯಲ್ಲಿ ಪೀಟರ್ ಹೆಸರು ಕೂಡ ಇದೆ. ಪಾಕಿಸ್ತಾನದ ಗೂಢಚರ ಸಂಸ್ಥೆ ಐಎಸ್‌ಐನ ಕಾಶ್ಮೀರ ಘಟಕದ ಪ್ರಮುಖ ವ್ಯಕ್ತಿ ಭಜನ್ ಸಿಂಗ್ ಭಿಂದರ್ ಅಲಿಯಾಸ್ ಇಕ್ಬಾಲ್ ಚೌಧರಿ ಜತೆಗೆ ನಂಟು ಹೊಂದಿರುವ ಕಾರಣಕ್ಕೆ 2006ರಿಂದಲೇ ಪೀಟರ್ ಮೇಲೆ ಭಾರತದ ತನಿಖಾ ಸಂಸ್ಥೆಗಳು ನಿಗಾ ಇರಿಸಿವೆ' ಎಂದು ಸೈಬರ್ ಘಟಕ ಉಪ ಆಯುಕ್ತ ಮನೀಷಿ ಚಂದ್ರ ಹೇಳಿದ್ದಾರೆ.

ಈ ಮೂವರಿಗೆ ಪೀಟರ್ ಜತೆಗೆ ನಂಟು ಇದೆಯೇ ಎಂಬುದನ್ನು ದಿಶಾ ಅವರು ತಿಳಿಸಬಹುದು. ಪೀಟರ್ ಹೆಸರು ಪಟ್ಟಿಯಲ್ಲಿ ಏಕೆ ಬಂತು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಅದಲ್ಲದೆ, ಭಿಂದರ್ ಜತೆಗೆ ಈ ಮೂವರು ನೇರ ಸಂಪರ್ಕ ಹೊಂದಿದ್ದಾರೆಯೇ ಎಂಬುದನ್ನೂ ತಿಳಿಯಬೇಕಿದೆ ಎಂದು ಅವರು ಹೇಳಿದ್ದಾರೆ.

> **ದಿಶಾ ಬಳಿಕ ಇನ್ನೊಬ್ಬ ಕಾರ್ಯಕರ್ತೆ ನಿಕಿತಾ ಜೇಕಬ್ ಅವರ ಹಿಂದೆ ಪೊಲೀಸರು ಬಿದ್ದಿದ್ದಾರೆ. ಇದು ಅಮಿತ್ ಶಾಹಿ ಎಂಬ ಹೆಸರಿನ ತಾನಾಶಾಹಿ (ನಿರಂಕುಶಾಧಿಕಾರ)**
> **ಜೈರಾಮ್ ರಮೇಶ್**
> ಕಾಂಗ್ರೆಸ್ ಮುಖಂಡ

ನಿಕಿತಾ ಮತ್ತು ಶಾಂತನು ಅವರು ತಲೆಮರೆಸಿಕೊಂಡಿದ್ದಾರೆ. ಇದೇ 12ರಂದು ತಮ್ಮ ಮನೆಯಲ್ಲಿ ತನಿಖಾಧಿಕಾರಿಗಳ ಮುಂದೆ ಹಾಜರಾಗುವುದಾಗಿ ಪತ್ರ ಬರೆದು ನಿಕಿತಾ ಕೊಟ್ಟಿದ್ದರು. ಆದರೆ, ತನಿಖಾಧಿಕಾರಿಗಳು ಅಲ್ಲಿಗೆ ಹೋದಾಗ ಅವರು ಪರಾರಿಯಾಗಿದ್ದರು. ಶಾಂತನು ಕೂಡ ಮನೆಯಲ್ಲಿ ಇರಲಿಲ್ಲ ಎಂದು ಮಾಧ್ಯಮ ಗೋಷ್ಠಿಯಲ್ಲಿ ಸೋಮವಾರ ಆರೋಪಿಸಿದ್ದಾರೆ.

ಈ ಇಬ್ಬರು ತಲೆಮರೆಸಿಕೊಂಡ ಬಳಿಕ ದಿಶಾ ವಿರುದ್ಧ ಕಾರ್ಯಾಚರಣೆ ನಡೆಸಲಾಯಿತು. ಟೂಲ್‌ಕಿಟ್ ಹಂಚಿಕೊಂಡ ವಾಟ್ಸ್‌ಆ್ಯಪ್ ಗುಂಪನ್ನು ಆಗಲೇ ಅವರು ಅಳಿಸಿ ಹಾಕಿದ್ದರು. ದಿಶಾ ಅವರನ್ನು ಅವರ ತಾಯಿಯ ಸಮ್ಮುಖದಲ್ಲಿ ಬಂಧಿಸಲಾಗಿದೆ. ಆ ಸಂದರ್ಭದಲ್ಲಿ ಸ್ಥಳೀಯ ಪೊಲೀಸ್ ಠಾಣೆಯ ಠಾಣಾಧಿಕಾರಿಯೂ ಇದ್ದರು. ಬಂಧನ ವೇಳೆಯಲ್ಲಿ ಎಲ್ಲ ನಿಯಮಗಳನ್ನೂ ಪಾಲಿಸಲಾಗಿದೆ ಎಂದು ಪ್ರೇಮ್‌ನಾಥ್ ಹೇಳಿದ್ದಾರೆ.

'ಬಂಧನವೇ ಅಕ್ರಮ'

ದಿಶಾ ಅವರ ಬಂಧನದ ಬಗ್ಗೆ ಟೀಕೆಗಳು ವ್ಯಕ್ತವಾಗಿವೆ. ಬಂಧಿಸಿದ ವಿಧಾನವೇ ಅಕ್ರಮ ಎಂದು ಕೆಲವು ವಕೀಲರು ಮತ್ತು ಸಾಮಾಜಿಕ ಹೋರಾಟಗಾರರು ಹೇಳಿದ್ದಾರೆ. ದಿಶಾ ಅವರನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಿದ ಮ್ಯಾಜಿಸ್ಟ್ರೇಟ್ ಕೂಡ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

ದಿಶಾ ಅವರನ್ನು ಬೇರೆ ರಾಜ್ಯಕ್ಕೆ ಕರೆದೊಯ್ಯಬೇಕಿದ್ದ ಕಾರಣ ಮೊದಲಿಗೆ ಬೆಂಗಳೂರಿನ ನ್ಯಾಯಾಲಯಕ್ಕೆ ಹಾಜರುಪಡಿಸಿ ಪ್ರಯಾಣದ ಅನುಮತಿ ಪಡೆಯಬೇಕಿತ್ತು. ಬದಲಿಗೆ, ಅವರನ್ನು ದೆಹಲಿಯಲ್ಲಿ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಲಾಗಿದೆ ಎಂದು ಕ್ಯಾಂಪೇನ್ ಫಾರ್ ಜುಡಿಶಿಯಲ್ ಅಕೌಂಟೆಬಿಲಿಟಿ ಎಂಡ್ ರಿಫಾರ್ಮ್ಸ್ (ಸಿಜೆಎಆರ್) ಸಂಘಟನೆಯು ಹೇಳಿದೆ.

10ನೇ ಪುಟ ನೋಡಿ

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–7

ಇಂದಿನ ಪಾಡ್‌ಕಾಸ್ಟ್ ವಿಶೇಷ
ಸುದ್ದಿ ಸ್ವಾರಸ್ಯ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ವಿರೋಧ ವ್ಯಕ್ತವಾದ ಬೆನ್ನಲ್ಲೇ ಹೇಳಿಕೆಗೆ ಸ್ಪಷ್ಟನೆ ಕೊಟ್ಟ ಸಚಿವ

'ಬಿಪಿಎಲ್ ನಿಯಮ ಬದಲಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್, ಟಿ.ವಿ, ರೆಫ್ರಿಜರೇಟರ್ ಹೊಂದಿರುವವರ ಬಿಪಿಎಲ್ ಕಾರ್ಡ್ ಹಿಂದಕ್ಕೆ ಪಡೆಯಲಾಗುವುದು ಎಂದು ಹೇಳಿದ್ದ ಆಹಾರ ಸಚಿವ ಉಮೇಶ ಕತ್ತಿ, ತಮ್ಮ ಹೇಳಿಕೆಗೆ ತೀವ್ರ ವಿರೋಧ ವ್ಯಕ್ತವಾದ ಬೆನ್ನಲ್ಲೇ, ಈಗ ಜಾರಿಯಲ್ಲಿರುವ ನಿಯಮಗಳೇ ಮುಂದುವರಿಯುತ್ತವೆ ಎಂದು ಸ್ಪಷ್ಟನೆ ನೀಡಿದ್ದಾರೆ.

ಉಮೇಶ ಕತ್ತಿ

ಸೋಮವಾರ ಈ ಕುರಿತು ಪ್ರಕಟಣೆ ಹೊರಡಿಸಿರುವ ಸಚಿವ ಕತ್ತಿ, 2016 ಮತ್ತು 2017 ರಲ್ಲಿ ತಿದ್ದುಪಡಿ ಮಾಡಿರುವ ಆದೇಶವನ್ನೇ ಪಾಲಿಸಲಾಗುತ್ತದೆ. ಯಾವುದೇ ಬದಲಾವಣೆಗಳನ್ನು ಮಾಡುವುದಿಲ್ಲ ಎಂದು ಹೇಳಿದ್ದಾರೆ.

ಕತ್ತಿ ಹೇಳಿದ್ದೇನು: ಟಿ.ವಿ, ರೆಫ್ರಿಜರೇಟರ್, ಬೈಕ್ ಮತ್ತು ಹೆಚ್ಚು ಜಮೀನು ಹೊಂದಿರುವವರು. ಸರ್ಕಾರಿ, ಅರೆ ಸರ್ಕಾರಿ ನೌಕರರು ಹಾಗೂ ₹1.20 ಲಕ್ಷಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಇರುವವರು ಬಿಪಿಎಲ್ ಕಾರ್ಡ್ ಹೊಂದುವಂತಿಲ್ಲ. ಅಂತಹವರು ಬಿಪಿಎಲ್ ಕಾರ್ಡ್ ಹೊಂದಿದ್ದರೆ ಕೂಡಲೇ ಅದನ್ನು ಮರಳಿಸಬೇಕು. ಇದಕ್ಕೆ ಮಾರ್ಚ್ 31 ಗಡುವು ನಿಗದಿ ಮಾಡಲಾಗಿದೆ ಎಂದು ಕತ್ತಿ ಬೆಳಗಾವಿಯಲ್ಲಿ ಹೇಳಿದ್ದರು.

ಮುಂಬರುವ ದಿನಗಳಲ್ಲಿ ಸಮೀಕ್ಷೆ ನಡೆಸಿ ಅಕ್ರಮವಾಗಿ ಬಿಪಿಎಲ್ ಕಾರ್ಡ್ ಹೊಂದಿರುವವರನ್ನು ಪತ್ತೆ ಮಾಡಿ ರದ್ದು ಮಾಡುವುದಾಗಿಯೂ ಹೇಳಿದ್ದರು. ಈ ಹೇಳಿಕೆಯ ಬಗ್ಗೆ ವ್ಯಾಪಕ ಖಂಡನೆ ವ್ಯಕ್ತವಾಗಿದೆ.

4ನೇ ಪುಟ ನೋಡಿ

'ಮಾನದಂಡ ಪರಿಷ್ಕರಣೆ ಅಗತ್ಯ'

'ಬಿಪಿಎಲ್ ಕಾರ್ಡ್‌ಗಳನ್ನು ಪಡೆಯುವ ಅರ್ಹತೆಯ ಮಾನದಂಡವನ್ನು ಕಾಲ ಕಾಲಕ್ಕೆ ಪರಿಷ್ಕರಿಸುವುದು ಅಗತ್ಯ. ಮಾನದಂಡ ಬಿಗಿಗೊಳಿಸಲಿದ್ದೇವೆ' ಎಂದು ಆಹಾರ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಬಿ.ಎಚ್.ಅನಿಲ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಅರ್ಹ ಬಡ ಕುಟುಂಬಗಳಿಗೇ ಅದರ ಪ್ರಯೋಜನ ಸಿಗಬೇಕು ಎಂಬ ಕಾರಣಕ್ಕೆ ಈ ಚಿಂತನೆ ನಡೆದಿದೆ. ಟಿ.ವಿ, ಫ್ರಿಜ್ ಹೊಂದಿರುವವರೂ ಕಡು ಬಡವರೇ ಎಂಬುದನ್ನು ನಾವು ನಿರ್ಧರಿಸಬೇಕಾಗಿದೆ' ಎಂದೂ ಅವರು ಹೇಳಿದರು.

ಖಾಸಗೀಕರಣ: ನಾಲ್ಕು ಬ್ಯಾಂಕ್‌ಗಳ ಪಟ್ಟಿ ಸಿದ್ಧ

ನವದೆಹಲಿ/ಮುಂಬೈ (ರಾಯಿಟರ್ಸ್): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಖಾಸಗೀಕರಣದ ವಿಚಾರದಲ್ಲಿ ಮುಂದಡಿ ಇರಿಸಿರುವ ಕೇಂದ್ರ ಸರ್ಕಾರವು, ಮಧ್ಯಮ ಗಾತ್ರದ ನಾಲ್ಕು ಬ್ಯಾಂಕ್‌ಗಳ ಪಟ್ಟಿಯನ್ನು ಸಿದ್ಧಪಡಿಸಿದೆ.

ಬ್ಯಾಂಕ್ ಆಫ್ ಮಹಾರಾಷ್ಟ್ರ, ಬ್ಯಾಂಕ್ ಆಫ್ ಇಂಡಿಯಾ, ಇಂಡಿಯನ್ ಓವರ್ಸೀಸ್ ಬ್ಯಾಂಕ್ ಮತ್ತು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಹೆಸರುಗಳು ಈ ಪಟ್ಟಿಯಲ್ಲಿ ಇವೆ ಎಂದು ಮೂಲಗಳು ತಿಳಿಸಿವೆ. ಈ ನಾಲ್ಕು ಬ್ಯಾಂಕ್‌ಗಳ ಪೈಕಿ ಎರಡು ಬ್ಯಾಂಕ್‌ಗಳಲ್ಲಿನ ಕೇಂದ್ರದ ಷೇರು ಪಾಲನ್ನು 2021–22ನೇ ಸಾಲಿನಲ್ಲಿ ಖಾಸಗಿಯವರಿಗೆ ಮಾರಾಟ ಮಾಡಲಾಗುತ್ತದೆ ಎಂದು ಗೊತ್ತಾಗಿದೆ.

ಬ್ಯಾಂಕ್‌ಗಳ ಖಾಸಗೀಕರಣವು ರಾಜಕೀಯವಾಗಿ ಸವಾಲಿನ ಕೆಲಸವಾದರೂ, ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಎರಡನೆಯ ಹಂತದ ಬ್ಯಾಂಕ್‌ಗಳ ಖಾಸಗೀಕರಣದ ಮೂಲಕ ಆ ಪ್ರಕ್ರಿಯೆ ಶುರು ಮಾಡಲು ಮುಂದಾಗಿದೆ.

11ನೇ ಪುಟ ನೋಡಿ

ನೌಕರರ ಸಂಖ್ಯೆ

50 ಸಾವಿರ — ಬ್ಯಾಂಕ್ ಆಫ್ ಇಂಡಿಯಾ ನೌಕರರ ಸಂಖ್ಯೆ (BOI)

33 ಸಾವಿರ — ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ನೌಕರರ ಸಂಖ್ಯೆ (Central Bank of India)

26 ಸಾವಿರ — ಇಂಡಿಯನ್ ಓವರ್ಸೀಸ್ ಬ್ಯಾಂಕ್ ನೌಕರರ ಸಂಖ್ಯೆ (Indian Overseas Bank)

13 ಸಾವಿರ — ಬ್ಯಾಂಕ್ ಆಫ್ ಮಹಾರಾಷ್ಟ್ರ ನೌಕರರ ಸಂಖ್ಯೆ (Bank of Maharashtra)

ಬ್ಯಾಂಕ್ ನೌಕರರ ಸಂಘಟನೆಗಳು ಮಾಡಿರುವ ಅಂದಾಜು

ಚಿನಕುರಳಿ
ಪ್ರಕಾಶ್ ಶೆಟ್ಟಿ

ಒಳ ಪುಟಗಳು

ಎಸ್‌ಟಿ ಮೀಸಲಾತಿಗೆ ಒತ್ತಾಯ: ಉರುಳುಸೇವೆ 4
ಗೋಪ್ಯತಾ ನೀತಿ ಪರಿಷ್ಕರಣೆ: ಕೇಂದ್ರ, ವಾಟ್ಸ್‌ಆ್ಯಪ್‌ಗೆ 'ಸುಪ್ರೀಂ' ನೋಟಿಸ್ 6
ಜಿಎಸ್‌ಟಿ ನೋಂದಣಿ ಅಮಾನತಿಗೆ ವಿರೋಧ 11

‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ಆಯೋಜಿಸಿದ್ದ ಕ್ಯಾನ್ಸರ್ ಜಾಗೃತಿ ವೆಬಿನಾರ್‌ನಲ್ಲಿ ವೈದ್ಯ ಸೋಮಶೇಖರ್ ಹೇಳಿಕೆ

ಯುವ ಮನಸ್ಸುಗಳಿಗೆ ಜಗತ್ತು ಬದಲಿಸುವ ಶಕ್ತಿಯಿದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಗತ್ತನ್ನು ಬದಲಿಸುವ ಶಕ್ತಿ ಯುವ ಮನಸ್ಸುಗಳಿಗಿದೆ. ಈಗಿನ ಮಕ್ಕಳು ಬೌದ್ಧಿಕವಾಗಿ ಸದೃಢರಾಗಿದ್ದಾರೆ. ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲು ಅವರು ಮುಂದಾಗಬೇಕು’ ಎಂದು ಮಣಿಪಾಲ್ ಆಸ್ಪತ್ರೆಗಳ ಸಮೂಹದ ಶಸ್ತ್ರಚಿಕಿತ್ಸೆ ಗಂತಿಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎಸ್.ಪಿ.ಸೋಮಶೇಖರ್ ಹೇಳಿದರು.

ವಿಶ್ವ ಕ್ಯಾನ್ಸರ್ ದಿನದ ಪ್ರಯುಕ್ತ ‘ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್’, ಮಣಿಪಾಲ್ ಆಸ್ಪತ್ರೆಗಳ ಸಮೂಹದ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ‘ನಾನು ಮಾಡಬಹುದು ಮತ್ತು ನಾನು ಮಾಡುತ್ತೇನೆ. ಕ್ಯಾನ್ಸರ್ ವಿರುದ್ಧ ಯುವ ಮನಸ್ಸುಗಳು ನಿಲ್ಲುತ್ತವೆ’ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

‘ಕ್ಯಾನ್ಸರ್ ಕೊನೆಯ ಹಂತ ತಲುಪುವವರೆಗೂ ಅದರ ಯಾವ ಲಕ್ಷಣಗಳೂ ರೋಗಿಗಳಲ್ಲಿ ಕಾಣಿಸಿಕೊಳ್ಳುವುದಿಲ್ಲ. ಎಲ್ಲರೂ ವರ್ಷದಲ್ಲಿ ಒಮ್ಮೆ ಕ್ಯಾನ್ಸರ್ ಪರೀಕ್ಷೆ ಮಾಡಿಸಿಕೊಳ್ಳಬೇಕು. ಹಾಗಾದಲ್ಲಿ ಈ ರೋಗವನ್ನು ಪ್ರಾರಂಭಿಕ ಹಂತದಲ್ಲೇ ಪತ್ತೆ ಮಾಡಬಹುದು. ಜಗತ್ತಿನಲ್ಲಿ ಸುಮಾರು 1.4 ಕೋಟಿ ಯುವಕ, ಯುವತಿಯರು ಈ ರೋಗದಿಂದ ಗುಣಮುಖರಾಗಿದ್ದಾರೆ. ಇದು ವಾಸಿಮಾಡಬಹುದಾದ ಕಾಯಿಲೆ ಎಂಬುದಕ್ಕೆ ಇದೊಂದು ನಿದರ್ಶನ’ ಎಂದು ತಿಳಿಸಿದರು.

ನಟಿ ಶ್ವೇತಾ ಆರ್. ಪ್ರಸಾದ್, ‘ತಾರೆಗಳಿಗೆ ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಹಿಂಬಾಲಕರಿರುತ್ತಾರೆ. ನಾವು ಏನು ಮಾಡುತ್ತೇವೊ ಅದನ್ನು ಅವರು ಅನುಕರಿಸುತ್ತಾರೆ. ಪ್ರತಿಯೊಂದು ಹಂತದಲ್ಲೂ ನಮ್ಮನ್ನು ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ಹೀಗಾಗಿ ನಟಿಯಾಗಿ ಯುವ ಸಮುದಾಯಕ್ಕೆ ಸರಿಯಾದ ಮಾರ್ಗ ತೋರಿಸಬೇಕಾದ ಗುರುತರ ಜವಾಬ್ದಾರಿ ನನ್ನ ಮೇಲಿದೆ. ಆ ಕೆಲಸ ನಾನು ಮಾಡುತ್ತಿದ್ದೇನೆ’ ಎಂದು ನುಡಿದರು.

‘ಸರಿಯಾದ ಜೀವನ ಕ್ರಮ ಮತ್ತು ಆಹಾರ ಪದ್ಧತಿಯನ್ನು ಅಳವಡಿಸಿಕೊಳ್ಳುವ ಮೂಲಕ ಕ್ಯಾನ್ಸರ್ ರೋಗವನ್ನು ದೂರವಿಡಬಹುದು’ ಎಂದು ಒ.ಪಿ. ಜಿಂದಾಲ್ ಗ್ಲೋಬಲ್ ವಿಶ್ವವಿದ್ಯಾಲಯದ ಕಾನೂನು ವಿದ್ಯಾರ್ಥಿನಿ ಸಂಯುಕ್ತ ಅಯ್ಯರ್ ಹೇಳಿದರು.

ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಅಂಜನಾ, ‘ನಾನು ನನ್ನ ಸ್ನೇಹಿತೆಯರನ್ನು ಭೇಟಿ ಮಾಡಿದಾಗ ಅವರು ಸ್ತನ ಮತ್ತು ಗರ್ಭಕೋಶದ ಕ್ಯಾನ್ಸರ್ ಬಗ್ಗೆ ಮಾತನಾಡಲು ಹಿಂಜರಿದಿದ್ದನ್ನು ಗಮನಿಸಿದ್ದೇನೆ. ಇಂತಹ ಮನಸ್ಥಿತಿ ದೂರವಾಗಿ ಮುಕ್ತವಾಗಿ ಅನುಭವಗಳನ್ನು ಹಂಚಿಕೊಳ್ಳುವ ವಾತಾವರಣ ನಿರ್ಮಾಣವಾಗಬೇಕು. ಹಾಗಾದಾಗ ಕ್ಯಾನ್ಸರ್‌ಗೆ ಕಡಿವಾಣ ಹಾಕುವುದು ಸುಲಭವಾಗುತ್ತದೆ’ ಎಂದರು.

‘ಎಚ್‌ಪಿವಿ ಲಸಿಕೆ ಬಗ್ಗೆ ಅರಿವು ಇಲ್ಲ’

‘ಮೂರು ವಾರಗಳ ಹಿಂದೆ ನಾನು ಪರೀಕ್ಷೆಗಾಗಿ ಸ್ತ್ರೀರೋಗ ತಜ್ಞೆಯ ಬಳಿ ಹೋಗಿದ್ದೆ. ಆಗ ಅವರು ಎಚ್‌ಪಿವಿ ಲಸಿಕೆ ಹಾಕಿಸಿಕೊಂಡಿದ್ದೀರಾ ಎಂದು ಕೇಳಿದರು. ಆ ಪ್ರಶ್ನೆ ಕೇಳಿ ನನಗೆ ಆಶ್ಚರ್ಯವಾಯಿತು. ಎಚ್‌ಪಿವಿ ಲಸಿಕೆ ಎಂದರೇನು, ಅದನ್ನು ಯಾಕಾಗಿ ತೆಗೆದುಕೊಳ್ಳುತ್ತಾರೆ ಎಂಬುದು ನನಗೆ ಗೊತ್ತೇ ಇರಲಿಲ್ಲ. ಆ ಚುಚ್ಚುಮದ್ದನ್ನು ತೆಗೆದುಕೊಂಡರೆ ಕ್ಯಾನ್ಸರ್ ತಗಲುವುದಿಲ್ಲ ಎಂದು ಅವರು ಬಿಡಿಸಿ ಹೇಳಿದರು. ಬಳಿಕ ಲಸಿಕೆಯ ಮೂರು ಡೋಸ್‌ಗಳನ್ನು ಪಡೆದುಕೊಂಡೆ. ನಂತರ ಎಚ್‌ಪಿವಿ ಲಸಿಕೆ ಬಗ್ಗೆ ಮನೆಯವರನ್ನು ಪ್ರಶ್ನಿಸಿದೆ. ಸ್ನೇಹಿತರನ್ನೂ ಕೇಳಿದೆ. ಅವರಿಗೂ ಇದರ ಬಗ್ಗೆ ಎಳ್ಳಷ್ಟೂ ಜ್ಞಾನವಿರಲಿಲ್ಲ. ಬಳಿಕ ನಾನೇ ಲಸಿಕೆಯ ಮಹತ್ವವನ್ನು ಮನವರಿಕೆ ಮಾಡಿಕೊಟ್ಟೆ’ ಎಂದು ಸೇಂಟ್ ಜೋಸೆಫ್ ಕಾಲೇಜಿನ ವಿದ್ಯಾರ್ಥಿನಿ ಅನಿಕಾ ಬೇಬಿ ಹೇಳಿದರು.

ಸುದ್ದಿ 2 ನಿಮಿಷ

ಹೈಕೋರ್ಟ್‌ಗೆ ಮೈಸೂರು ವಕೀಲರ ಸಂಘ ವಿವರಣೆ

ಬೆಂಗಳೂರು: ‘ಸಿಎಎ ಹಾಗೂ ಎನ್‌ಆರ್‌ಸಿ ಕಾಯ್ದೆ ವಿರೋಧಿಸಿ ನಡೆದ ಪ್ರತಿಭಟನೆ ವೇಳೆ ‘ಫ್ರೀ ಕಾಶ್ಮೀರ್’ ಎಂಬ ಭಿತ್ತಿಪತ್ರ ಪ್ರದರ್ಶಿಸಿದ ಆರೋಪದಲ್ಲಿ ಬಂಧನಕ್ಕೆ ಒಳಗಾಗಿದ್ದ ವಿದ್ಯಾರ್ಥಿನಿ ನಳಿನಿ ಬಾಲಕುಮಾರ್ ಪರ ವಕಾಲತ್ತು ವಹಿಸದಂತೆ ಯಾವುದೇ ನಿರ್ಣಯ ಕೈಗೊಂಡಿಲ್ಲ’ ಎಂದು ಹೈಕೋರ್ಟ್‌ಗೆ ಮೈಸೂರು ಜಿಲ್ಲಾ ವಕೀಲರ ಸಂಘ ಸ್ಪಷ್ಟಪಡಿಸಿದೆ.

‘ಸಂಘದ ಸದಸ್ಯ ವಕೀಲರೊಬ್ಬರು ನಳಿನಿ ಅವರ ಪರ ವಕಾಲತ್ತು ವಹಿಸಿದ್ದು, ಈಗಾಗಲೇ ಅವರು ನ್ಯಾಯಾಲಯದಿಂದ ಜಾಮೀನು ಪಡೆದಿದ್ದಾರೆ’ ಎಂದು ಸಂಘದ ಪರ ವಕೀಲರು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠಕ್ಕೆ ವಿವರಿಸಿದರು.

2020ರ ಜನವರಿ 8ರಂದು ನಡೆದ ಪ್ರತಿಭಟನೆ ಸಂದರ್ಭದಲ್ಲಿ ಮಾನಸ ಗಂಗೋತ್ರಿಯಲ್ಲಿ ‘ಫ್ರೀ ಕಾಶ್ಮೀರ್’ ಫಲಕವನ್ನು ಹಿಡಿದಿದ್ದಕ್ಕಾಗಿ ನಳಿನಿ ಬಾಲಕುಮಾರ್ ವಿರುದ್ಧ ಪ್ರಕರಣ ದಾಖಲಾಗಿತ್ತು. ತುಮಕೂರು ವಕೀಲ ಎಲ್. ರಮೇಶ್ ನಾಯಕ್ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ನ್ಯಾಯಾಂಗ ನಿಂದನೆ ಪ್ರಕರಣ ಹಿಂಪಡೆಯಲು ಮನವಿ

ಬೆಂಗಳೂರು: ನ್ಯಾಯಾಲಯದ ಕಲಾಪದಿಂದ ದೂರ ಉಳಿದಿದ್ದ ದಾವಣಗೆರೆ ಮತ್ತು ಮಂಡ್ಯ ಜಿಲ್ಲೆಯ ವಕೀಲರ ಸಂಘಗಳ ವಿರುದ್ಧ ದಾಖಲಿಸಿಕೊಂಡಿರುವ ಸ್ವಯಂ ಪ್ರೇರಿತ ನ್ಯಾಯಾಂಗ ನಿಂದನೆ ಪ್ರಕರಣವನ್ನು ಹಿಂಪಡೆಯುವಂತೆ ಬೆಂಗಳೂರು ವಕೀಲರ ಸಂಘವು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಅವರಿಗೆ ಮನವಿ ಮಾಡಿದೆ.

‘ವಕೀಲರು(ಬಾರ್) ಮತ್ತು ನ್ಯಾಯಮೂರ್ತಿಗಳು(ಪೀಠ) ನ್ಯಾಯಾಂಗದ ಎರಡು ಚಕ್ರಗಳಿದ್ದಂತೆ. ಒಂದಿಲ್ಲದೆ ಮತ್ತೊಂದು ಚಲಿಸುವುದಿಲ್ಲ. ನ್ಯಾಯಾಂಗದ ಮುಖ್ಯಸ್ಥರಾಗಿರುವ ತಾವು ಎರಡರ ನಡುವೆ ಸಮತೋಲವನ್ನು ಕಾಪಾಡಿಕೊಂಡು ಮುನ್ನಡೆಸಬೇಕು. ನ್ಯಾಯಾಂಗ ನಿಂದನೆ ಕ್ರಮ ಜರುಗಿಸುವುದು ಆಕ್ರಮಣ ಎನಿಸಿಕೊಳ್ಳುತ್ತದೆ. ಹೀಗಾಗಿ, ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಲು ಮುಂದಾಗಬೇಕು’ ಎಂದು ಸಂಘದ ಅಧ್ಯಕ್ಷ ಎ.ಪಿ. ರಂಗನಾಥ್ ಮತ್ತು ಪ್ರಧಾನ ಕಾರ್ಯದರ್ಶಿ ಎ.ಎನ್. ಗಂಗಾಧರಯ್ಯ ಕೋರಿದ್ದಾರೆ.

ಮಂಡ್ಯ, ಮದ್ದೂರು, ಶ್ರೀರಂಗಪಟ್ಟಣ, ಮಳವಳ್ಳಿ, ಕೆ.ಆರ್.ಪೇಟೆ ಮತ್ತು ದಾವಣಗೆರೆ ವಕೀಲರ ಸಂಘಗಳು ವಿವಿಧ ಕಾರಣಗಳಿಂದ ನ್ಯಾಯಾಲಯದ ಕಲಾಪಗಳಿಂದ ದೂರ ಉಳಿದಿದ್ದವು. ಇದನ್ನು ಗಂಭೀರವಾಗಿ ಪರಿಗಣಿಸಿದ ಪೀಠ, ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿಕೊಂಡು ಆರು ಸಂಘಗಳ ಪದಾಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸಿತ್ತು.

2025ರಿಂದ ಜಾಗ್ವಾರ್ ವಿದ್ಯುತ್ ಚಾಲಿತ ಕಾರು

ನವದೆಹಲಿ (ಪಿಟಿಐ): ಇಂಗಾಲದ ಹೊರಸೂಸುವಿಕೆಯನ್ನು 2039ರೊಳಗೆ ಶೂನ್ಯಕ್ಕೆ ತಗ್ಗಿಸುವ ಕಂಪನಿ ತಾನಾಗಬೇಕು ಎಂಬ ಬಯಕೆ ಇರುವುದಾಗಿ ಟಾಟಾ ಮೋಟರ್ಸ್ ಮಾಲೀಕತ್ವದ ‘ಜಾಗ್ವಾರ್ ಲ್ಯಾಂಡ್ ರೋವರ್’ (ಜೆಎಲ್‌ಆರ್) ಕಂಪನಿ ಹೇಳಿದೆ. ಇದರ ಭಾಗವಾಗಿ 2025ರಿಂದ ಜಾಗ್ವಾರ್ ಸಂಪೂರ್ಣ ವಿದ್ಯುತ್ ಚಾಲಿತ ಐಷಾರಾಮಿ ಕಾರುಗಳನ್ನು ಮಾರುಕಟ್ಟೆಗೆ ಬಿಡಲಿದೆ.

ಹೊಸ ಕಾರ್ಯತಂತ್ರದ ಭಾಗವಾಗಿ ಜಾಗ್ವಾರ್ ಮತ್ತು ಲ್ಯಾಂಡ್ ರೋವರ್‌ನ ಎಲ್ಲ ಮಾದರಿಗಳು ಈ ದಶಕದ ಅಂತ್ಯದ ವೇಳೆಗೆ ಸಂಪೂರ್ಣ ವಿದ್ಯುತ್ ಚಾಲಿತ ಎಂಜಿನ್‌ನೊಂದಿಗೆ ಲಭ್ಯವಾಗಲಿವೆ. ಲ್ಯಾಂಡ್ ರೋವರ್‌ನ ಮೊದಲ ಸಂಪೂರ್ಣ ವಿದ್ಯುತ್ ಚಾಲಿತ ಎಸ್‌ಯುವಿ 2024ರಲ್ಲಿ ಮಾರುಕಟ್ಟೆ ಪ್ರವೇಶಿಸಲಿದೆ. ಅದಾದ ನಂತರದ ಐದು ವರ್ಷಗಳಲ್ಲಿ ಲ್ಯಾಂಡ್ ರೋವರ್ ಆರು ವಿದ್ಯುತ್ ಚಾಲಿತ ವಾಹನಗಳನ್ನು ಬಿಡುಗಡೆ ಮಾಡಲಿದೆ ಎಂದು ಜೆಎಲ್‌ಆರ್‌ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಥಿಯರಿ ಬೊಲೋರ್ ತಿಳಿಸಿದ್ದಾರೆ.

ಗಾಯನ ಸಮಾಜ: ಪ್ರಸಾದ್ ಅಧ್ಯಕ್ಷ

ಬೆಂಗಳೂರು: ಬೆಂಗಳೂರು ಗಾಯನ ಸಮಾಜದ ಅಧ್ಯಕ್ಷರಾಗಿ ಡಾ.ಎಂ.ಆರ್.ವಿ.ಪ್ರಸಾದ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಡಾ.ಎಂ.ಆರ್.ವಿ.ಪ್ರಸಾದ್

ಭಾನುವಾರ ನಡೆದ ಚುನಾವಣೆಯಲ್ಲಿ ಸತತ ಐದನೇ ಬಾರಿಗೆ ಅಧ್ಯಕ್ಷರಾಗಿ ಪ್ರಸಾದ್ ಆಯ್ಕೆಯಾದರು.

ಉಪಾಧ್ಯಕ್ಷರಾಗಿ ಅಚ್ಯುತರಾವ್ ಪದಕಿ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಅನೂರು ಅನಂತ ಕೃಷ್ಣಶರ್ಮ, ಎಚ್.ಎಸ್.ವೇಣುಗೋಪಾಲ್, ಕೆ.ನಾಗರಾಜ್, ಕೆ.ಎಸ್.ಹನುಮಂತರಾವ್, ಎಂ.ಸೂರ್ಯಪ್ರಸಾದ್, ಎ.ಗೌರಿಶಂಕರ, ಎಸ್.ಎಸ್.ಪ್ರಸಾದ್, ಪಿ.ಶ್ರೀನಿವಾಸಮೂರ್ತಿ, ಕೌಸಲ್ಯ ಮೂರ್ತಿ ಆಯ್ಕೆಯಾಗಿದ್ದಾರೆ.

‘ಬ್ರಿಟಿಷರಿಂದ ಕನ್ನಡಿಗರ ಕನಸು ಮಲಿನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ರಿಟಿಷರು ಬಿಟ್ಟಿರುವ ಕನಸುಗಳನ್ನು ನನಸು ಮಾಡುವಂತಹ ವಿಶ್ವವಿದ್ಯಾಲಯಗಳು ಬೇಡ. ವಿದ್ಯಾರ್ಥಿಗಳಲ್ಲಿ ಕನ್ನಡದ ಸೃಜನಶೀಲತೆ ಸೃಷ್ಟಿಸುವ ವಿಶ್ವವಿದ್ಯಾಲಯಗಳು ಬೇಕು’ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಚಂದ್ರಶೇಖರ ಕಂಬಾರ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಮಹಿಳಾ ಸಾಹಿತ್ಯ ಸಂಪುಟ’ ಹಾಗೂ ‘ಕನ್ನಡ ಜಾನಪದ ವಿಶ್ವಕೋಶ’ ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

‘ಕನ್ನಡಿಗರ ಸೃಜನಶೀಲತೆ ಮತ್ತು ಕನಸುಗಳನ್ನು ಬ್ರಿಟಿಷರು ಮಲಿನಗೊಳಿಸಿದ್ದಾರೆ. ಮಕ್ಕಳಿಗೆ ಇಂಗ್ಲಿಷ್ ಕಥೆ ಹೇಳಿದರೆ, ಯಥಾವತ್ತಾಗಿ ಕಂಠಪಾಠ ಮಾಡಿಬಿಡುತ್ತಾರೆ. ಎಷ್ಟು ಬಾರಿ ಕೇಳಿದರೂ ಅದರಲ್ಲಿ ಬದಲಾವಣೆ ಇರುವುದಿಲ್ಲ. ಆದರೆ, ಕನ್ನಡದ ಕಥೆ ಆಲಿಸಿದ ಮಗುವು ವ್ಯಕ್ತಿ ಮತ್ತು ಸಂದರ್ಭಕ್ಕೆ ತಕ್ಕಂತೆ ಹಾಗೂ ಹೊಸ ಆಯಾಮದೊಂದಿಗೆ ಕಥೆ ಹೇಳುತ್ತದೆ. ಇದೇ ಕನ್ನಡದ ಸೃಜನಶೀಲತೆ’ ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ (ಎಡದಿಂದ ಎರಡನೆಯವರು) ಚಂದ್ರಶೇಖರ ಕಂಬಾರ ಅವರು ‘ಮಹಿಳಾ ಸಾಹಿತ್ಯ ಸಂಪುಟ’ ಹಾಗೂ ‘ಕನ್ನಡ ಜಾನಪದ ವಿಶ್ವಕೋಶ’ ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಮನು ಬಳಿಗಾರ್, ಮಹಿಳಾ ಸಾಹಿತ್ಯ ಸಂಪುಟಗಳ ಮಾಲಿಕೆಯ ಸಂಪಾದಕಿ ಡಾ.ಮಲ್ಲಿಕಾ ಘಂಟಿ, ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧಿಕಾರಿ ಪಿ.ಮಲ್ಲಿಕಾರ್ಜುನಪ್ಪ ಇದ್ದಾರೆ —ಪ್ರಜಾವಾಣಿ ಚಿತ್ರ

‘ಕನ್ನಡ ಭಾಷೆ, ಅದರ ಇತಿಹಾಸಕ್ಕೆ ದೊಡ್ಡ ಪರಂಪರೆಯಿದೆ. ಸಾಹಿತ್ಯದ ಮುಖ್ಯ ಪ್ರಕಾರವೇ ಕಥೆ. ಇದು, ನಮ್ಮ ಸೃಜಶೀಲತೆಯನ್ನು ಹೆಚ್ಚಿಸುತ್ತದೆ. ಇದನ್ನು ನಾವು ಉಳಿಸಿ, ಬೆಳೆಸಬೇಕು. ಇಂಗ್ಲಿಷ್ ಇಲ್ಲದೆ ಬದುಕೇ ಇಲ್ಲ ಎಂದು ನಮ್ಮ ಕನಸುಗಳನ್ನು ಕೊಲ್ಲದಿರಿ’ ಎಂದು ಕಿವಿಮಾತು ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮನು ಬಳಿಗಾರ್, ‘ನಾವು ಪ್ರಕಟಿಸಿದ ‘ಮಹಿಳಾ ಸಾಹಿತ್ಯ ಸಂಪುಟ’ದ ಜವಾಬ್ದಾರಿಯನ್ನು ಮಹಿಳೆಯರು ಹೊತ್ತಿದ್ದರು. ಕೆಲವರು ಗಡುವಿಗೂ ಮುನ್ನ ಲೇಖನಗಳನ್ನು ಕಳುಹಿಸಿ, ಅತ್ಯಂತ ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸಿದರು’ ಎಂದರು.

‘ಕೂ’ ಆ್ಯಪ್ ಬಳಸಲು ಕೇಂದ್ರದ ಸೂಚನೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ರೈತರ ಪ್ರತಿಭಟನೆಗೆ ಸಂಬಂಧಿಸಿದಂತೆ ಟ್ವಿಟರ್ ಜೊತೆಗಿನ ಜಟಾಪಟಿ ನಡೆದಿರುವಂತೆಯೇ, ಕೇಂದ್ರ ಸರ್ಕಾರ ಟ್ವಿಟರ್‌ಗೆ ಪರ್ಯಾಯವಾದ, ಸ್ವದೇಶಿಯ ‘ಕೂ’ ಆ್ಯಪ್ ವೇದಿಕೆಯನ್ನು ಮಾಹಿತಿ ಪ್ರಸಾರಕ್ಕೆ ಬಳಸಲು ಚಿಂತನೆ ನಡೆಸಿದೆ.



‘ಕೂ’ ಲಾಂಛನ

‘ಕೂ’ ಆ್ಯಪ್‌ನಲ್ಲಿ ಖಾತೆ ಹೊಂದಬೇಕು. ಯಾವುದೇ ಪ್ರಕಟಣೆ ಇದ್ದರೂ ಈ ವೇದಿಕೆಯಲ್ಲಿಯೇ ಸಾರ್ವಜನಿಕರಿಗೆ ಹಂಚಿಕೊಳ್ಳಬೇಕು ಎಂದು ಎಲ್ಲ ಸಚಿವರು, ಹಿರಿಯ ಅಧಿಕಾರಿಗಳಿಗೂ ಸೂಚನೆ ನೀಡುವ ಸಂಭವವಿದೆ.

‘2–3 ಗಂಟೆ ತರುವಾಯ ಟ್ವಿಟರ್‌ನಲ್ಲೂ ಈ ಮಾಹಿತಿ ಹಂಚಿಕೊಳ್ಳಲಾಗುತ್ತದೆ. ಮೊದಲು ‘ಕೂ’ ಆ್ಯಪ್, 30 ನಿಮಿಷದ ನಂತರ ಟ್ವಿಟರ್‌ನಲ್ಲಿ ಮಾಹಿತಿ ಹಂಚಿಕೆ ಮಾಡಬೇಕು ಎಂಬ ಚಿಂತನೆಯೂ ಇದೆ ಎಂದು ಮೂಲಗಳು ತಿಳಿಸಿವೆ.

ಅಲ್ಲದೆ, ಮಾಹಿತಿ ಹಂಚಿಕೆಗೆ ‘ಕೂ’ ಆ್ಯಪ್ ಅನ್ನೇ ಬಳಸುವಂತೆ ಕೇಂದ್ರ ಸರ್ಕಾರವು ಎನ್‌ಡಿಎ ಮತ್ತು ಬಿಜೆಪಿ ಆಡಳಿತವಿರುವ ರಾಜ್ಯಗಳಿಗೂ ಸೂಚನೆ ನೀಡುವ ಸಂಭವವಿದೆ ಇದೆ ಎನ್ನಲಾಗಿದೆ.

ನಗರದಲ್ಲಿ ಇಂದು

ರಸ್ತೆ ಸುರಕ್ಷತಾ ಸೈಕಲ್ ಜಾಥಾ: ಸ್ಥಳ–ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬಿ.ಟಿ.ಎಂ 4ನೇ ಹಂತ, ಎಲೆಕ್ಟ್ರಾನಿಕ್ ಸಿಟಿ, ಬೆಳಿಗ್ಗೆ 7.30

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಘಟಿಕೋತ್ಸವ: ಅತಿಥಿಗಳು–ಕೆ.ಸುಧಾಕರ್, ರವಿ ಡಿ.ಚನ್ನಣ್ಣನವರ್, ಎಸ್.ಶ್ರೀಕಂಠ, ಸ್ಥಳ–ಕೋಟೆ ಹೈಸ್ಕೂಲ್ ಮೈದಾನ, ಕೆ.ಆರ್.ರಸ್ತೆ, ಬೆಳಿಗ್ಗೆ 9.30

ನೂತನ ಗ್ರಾಮ ಪಂಚಾಯತಿ ಸದಸ್ಯರಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ: ಆಯೋಜನೆ–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಸ್ಥಳ–ಜಿಲ್ಲಾ ಪಂಚಾಯಿತಿ ಕಟ್ಟಡ, ಕೆಂಪೇಗೌಡ ರಸ್ತೆ, ಬೆಳಿಗ್ಗೆ 11

ವಿದ್ವಾನ್ ಚಿಂತಲಪಲ್ಲಿ ಕೃಷ್ಣಮೂರ್ತಿ ಶತಮಾನೋತ್ಸವ: ಉದ್ಘಾಟನೆ–ವಿದ್ವಾನ್ ಟಿ.ಎಸ್.ಚಂದ್ರಶೇಖರ, ಅಧ್ಯಕ್ಷತೆ–ಅನೂರು ಅನಂತಕೃಷ್ಣ ಶರ್ಮ, ಆಯೋಜನೆ–ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಸಂಜೆ 5

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Finance

NRI'S INVESTMENT AND FINANCE AVAILABLE ON LOW INTEREST AGAINST PROPERTIES,LAND & BUILDINGS, SITES, FLATS ALSO COMPANIES, BUSINESSES CALL:7411265189

JOB OPPORTUNITIES

Multiple Vacancy

REQUIREDEXPERIENCED MANAGER, SUPERVISOR, FIELD EXECUTIVES (DRA_QUALIFIED) & TELECALLER (Males_&_Females) For MNC Banking Collections.Contact:- 9902952498, 7019700755, 080-42123018.

Part-Time Jobs

COVID'19 SITUATION those who lost there job Our Company providing Work from home Earn 35-40K Per month Call 7019215243

OTHERS

For Sale

OWNER LEAVING... Immediate sale Leather sofa Boxcot Dining Diwan Curtains kids bike tables: 9845414482/ 7975436976

PERSONAL

Change of Name

I, C.P. Nagendra S/o Late T. Puttaiah aged about 55 Years, Residing at No. 144, Ramakrishnappa Building, 1st Main, 1st Cross, Avalahalli, Girinagar, Bengaluru- 560 085. Have Changed My Minor's Daughter Name From Harshitha. C.N To DIMPU C.N vide affidavit dated 15.02.2021 before Notary K. Venkateshan, Bangalore.

I, SANTOSH HULLOLLI S/o Maruti, R/a. #205, 2nd Floor, Kristal Sunstone Apartment, 5th A Cross, 17th 'E' Main Road, 6th Block, Koramangala, Bengaluru- 560095. Have Changed my Name to SANTOSH M HULLOLLI, Vide Affidavit dated 13.02.2021 before Notary K.V. MANI, Bengaluru.

I, VIKAS Nagraj aged about 26 years, S/o Nagaraj Araluguppe Bhyrappa Residing at No. 65/75, 18th Main, 5th Cross, Banashankari 1st Stage,Bangalore 560050. have changed my name to VIKAS vide affidavit dated 12.02.2021 before notary L. Shankaranarayana, Bangalore.

SIBARANI GHOSH M/o 14824552K- HAV- SUBHASISH GHOSH R/a Kanakpur East Midnapore,West Bengal changed name from SIBARANI GHOSH to SHIBARANI GHOSH notary Harisha G Bangalore

14814248M- HAV- VINAY KUMAR at MT Coy, ASC Centre and College Bangalore changed my minor daughter's name from POOJA KUMARI to POOJA SINGH notary Harisha G Bangalore.

POONAM W/O 14814248M- HAV-VINAY KUMAR R/a Guru Ramdas Nagar, Koil, Aligarh, Uttar Pradesh changed name POONAM to POONAM DEVI notary Harisha G Bangalore.

I, NIRMALA SURESHKUMAR R/a, Maan Sarovar Building, Church Road, Opposite Corporation Bank, Hiriyur- 572143, Have Changed SURESH KUMAR NIRMALA DEVI Vide Affidavit 15.02.2021 Before Notary Hemalatha, Bangalore.

Lost

DOCUMENT LOST

INTEK SECURITY SYSTEMS PVT LTD., No. 223, 13 th Cross, 2 nd Stage, Binnamangala, Hoysalanagar, Indiranagar Bangalore - 560038. We lost/misplaced original Sales Tax Statutory document Form-C No.0906132C178731 DT: 29.06.2013 for Rs.8,39,945.00, Document Form-I No. 054593 for Rs.26,46,650.00 And Document Form-I No.057773 for Rs.13,22,700.00. **If anybody found please contact 81976 77305 or inform to Near Police Station.**

REAL ESTATE SELLING

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 8618691434, 8073277210

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

CONNECT

DH Classifieds
BOOK YOUR AD FOR SUNDAY & GET 50% OFF ON WEEKDAYS
For Lineage & Single/ Multi Column Classifieds Display ads
For more information Contact: 9880856233 9731810277 9886213331

BDS @ Karnataka @ 6-12 Lac Package
BAMS @ 14-20 Lac Package Karnataka
BHMS @ 13-15 Lac Package Karnataka
Neet Score. 87-113 | Last date 18.02.21
63059 53095, 73383 76874

ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿಯಮಿತ
ಆಡಳಿತ ಕಛೇರಿ: ನಂ.113, ಆರ್.ವಿ.ರಸ್ತೆ, ವಿ.ವಿ.ಪುರಂ, ಬೆಂಗಳೂರು–560 004
ದೂರವಾಣಿ: 080–2660 1152/ 2660 1153

ಆಡಳಿತ ಮಂಡಳಿ ಚುನಾವಣೆಯ ಫಲಿತಾಂಶ ಘೋಷಣೆ

ಬ್ಯಾಂಕಿನ ಮುಂದಿನ ಐದು ವರ್ಷಗಳ ಅವಧಿಯ ಆಡಳಿತ ಮಂಡಳಿ ಚುನಾವಣೆಯು ತಾ: 21–02–2021 ರ ಭಾನುವಾರದಂದು ನಿಗದಿಪಡಿಸಲಾಗಿತ್ತು. ಚುನಾವಣಾ ಪ್ರಕ್ರಿಯೆಯಲ್ಲಿ ಎಲ್ಲಾ ಹದಿಮೂರು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿರುವುದರಿಂದ ಸದರಿ ಚುನಾವಣೆಯು ಇರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.
ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ ಎಲ್ಲಾ ಸದಸ್ಯ ಬಾಂಧವರಿಗೆ ಬ್ಯಾಂಕಿನ ಪರವಾಗಿ ವಂದನೆಗಳು.
ಸಹಿ/–
ಸ್ಥಳ : ಬೆಂಗಳೂರು (ಎಲ್.ಬಾಬು ರೆಡ್ಡಿ)
ದಿನಾಂಕ : 15–02–2021 ಮುಖ್ಯ ಕಾರ್ಯನಿರ್ವಹಣಾಧಿಕಾರಿ

Government of India
ಪ್ರಧಾನ ಮಹಾಲೇಖಾಪಾಲರ ಕಾರ್ಯಾಲಯ (ಆಡಿಟ್ 1), ಕರ್ನಾಟಕ
ಆಡಿಟ್ ಭವನ, (ಬಹುಮಹಡಿ ಕಟ್ಟಡಗಳ ಹತ್ತಿರ), ಬೆಂಗಳೂರು-560001.
ಹರಾಜು ಮಾರಾಟ
ಹಳೆಯ ಕಛೇರಿ ಪೀಠೋಪಕರಣಗಳು ಮತ್ತಿತರ ಸ್ಕ್ರಾಪ್ ವಸ್ತುಗಳ ಹರಾಜನ್ನು 20.02.2021 (ಶನಿವಾರ) ಬೆಳಗ್ಗೆ 11.00 ಗಂಟೆಗೆ ಮಹಾಲೇಖಾಪಾಲರ ಕಾರ್ಯಾಲಯ, (ಆಡಿಟ್ 1), ಆಡಿಟ್ ಭವನ, (ಬಹುಮಹಡಿ ಕಟ್ಟಡಗಳ ಹತ್ತಿರ), ಪೀಠೋಪಕರಣಗಳು ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥಿತಿಯಲ್ಲಿ ನಡೆಸಲಾಗುತ್ತದೆ. ಬಿಡ್ ಮೊತ್ತಗಳು ಜಿಎಸ್‌ಟಿಯನ್ನು ಒಳಗೊಂಡಿರುವುದಿಲ್ಲ.
ಸಹಿ/-
ವರಿಷ್ಠ ಲೆಕ್ಕಪರಿಶೋಧನಾಧಿಕಾರಿ (ಹೌಸಕೀಪಿಂಗ್).
ದೂರವಾಣಿ: 080 22640353

THE KARNATAKA STATE CRICKET ASSOCIATION
M.Chinnaswamy Stadium,
Cubbon Road , Bangalore – 560 001

NOTIFICATION

Design, supply, installation, testing and commissioning of VFR airconditioning system for KSCA Hubli and Belgaum Projects. KSCA invites Manufacturers / Authorised channel partners of the manufacturer for undertaking the work of design, supply, installation, testing and commissioning of VFR airconditioning system for KSCA Hubli and Belgaum Projects. Those Interested may collect the tender document from the office of Electrical Engineer, KSCA, from 16.02.2021 to 22.02.2021 during office hours, on submission of a request letter and payment of Rs. 15,000/- plus GST as tender document fee (Non refundable). Last date for submission of tender document is 3 PM on 27.02.2021.
For further details please contact Mr. Syamjith.T,
Electrical Engineer, Mobile No.+91- 9844441684
Hon. Secretary, KSCA

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560055.

ಬಹಿರಂಗ ಹರಾಜು ಇಸ್ತಿಹಾರ್
ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ,

ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ.441) ಹಾಗೂ ವಸೂಲಾಧಿಕಾರಿಗಳು ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ., ನಂ–32, ಕೆ.ಹೆಚ್. ರಸ್ತೆ, ಬೆಂಗಳೂರು – 560027. ಇವರ ಹುಕ್ಕುಂ ಈ ಕೆಳಗೆ ನಮೂದಿಸಿರುವ ಸಿ.ಇ.ಪಿ **ಸಂಖ್ಯೆ ಎ.ಆರ್.ಇ/ಯು.ಬಿ.ಎಫ್/323,324,325,326,327&328/2018–19ಗಳಂತೆ** ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಸೂಚಿಸಿರುವ ಸುಸ್ತಿದಾರರು **ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,** 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–55. ಇವರಲ್ಲಿ ತಮ್ಮ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಬ್ಯಾಂಕಿಗೆ ಆಧಾರ ಮಾಡಿದ ಈ ಕೆಳಗೆ ನಮೂದಿಸಿರುವ ಸ್ವತ್ತುಗಳನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 38 ರನ್ವಯ ಬಹಿರಂಗ ಹರಾಜು ಮಾಡಲಾಗುವುದು. ಸಾರ್ವಜನಿಕರು ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತುಗಳನ್ನು ಹರಾಜಿನಲ್ಲಿ ಪಡೆದುಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ **ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ., ನಂ.156, 2ನೇ ಅಂತಸ್ತು, 8ನೇ ಮುಖ್ಯರಸ್ತೆ, 17 ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 55 ಇವರಲ್ಲಿ ಪಡೆಯಬಹುದು. ದೂರವಾಣಿ ಸಂಖ್ಯೆ: 23442648, 23449450. ಮೊಬೈಲ್ 9449842016**

ಸುಸ್ತಿದಾರರ ಹೆಸರು	ಹರಾಜು ಮಾಡುವ ಆಸ್ತಿಗಳ ವಿವರ	ಹರಾಜು ನಡೆಯಲಿರುವ ಸ್ಥಳ, ದಿನಾಂಕ ಸಮಯ ಮತ್ತು ವಸೂಲಾಗಬೇಕಾಗಿರುವ ಮೊತ್ತ
ಶ್ರೀ.ಕೆ.ಎಲ್.ಮೂಡಲಗಿರಿಯಪ್ಪ 	ನಂ.16/1, ಹಳೆ ನಂ.278/ಎ, ಪಿ.ಐ.ಡಿ.ನಂ.9–12–16/1, 8ನೇ 'ಸಿ' ಮೈನ್, 'ಎ' ಬ್ಲಾಕ್, ಸುಬ್ರಮಣ್ಯನಗರ, 2ನೇ ಹಂತ, ರಾಜಾಜಿನಗರ, ಬೆಂಗಳೂರು–55 ಇಲ್ಲಿರುವ ಪೂರ್ವ ಪಶ್ಚಿಮ 42+40/2 ಅಡಿಗಳು & ಉತ್ತರ ದಕ್ಷಿಣ 25 ಅಡಿಗಳ ನಿವೇಶನದಲ್ಲಿರುವ ಮನೆಗೆ ಚೆಕ್ಕುಬಂದಿ ಪೂರ್ವಕ್ಕೆ–ರಸ್ತೆ ಪಶ್ಚಿಮಕ್ಕೆ–ಸ್ಥಿರಾಸ್ತಿ ಸಂಖ್ಯೆ. 280 ಉತ್ತರಕ್ಕೆ–ಸ್ಥಿರಾಸ್ತಿ ಸಂಖ್ಯೆ..278/ಡಿ & 278/ಬಿ ದಕ್ಷಿಣಕ್ಕೆ – ಸ್ಥಿರಾಸ್ತಿ ಸಂಖ್ಯೆ.278/ಎ	ನಂ.16/1, ಹಳೆ ನಂ.278/ಎ, 8ನೇ 'ಸಿ' ಮೈನ್, ಮಿಲ್ಕ್ ಕಾಲೋನಿ 'ಎ' ಬ್ಲಾಕ್, ಸುಬ್ರಮಣ್ಯನಗರ, ಬೆಂಗಳೂರು–55. ದಿನಾಂಕ: 19.02.2021 ರ ಶುಕ್ರವಾರ ಬೆಳಿಗ್ಗೆ 11–30 ಘಂಟೆ ಮೀಸಲು ಬೆಲೆ ರೂ.80,00,000/–

ಹರಾಜಿನ ಷರತ್ತುಗಳು ಮತ್ತು ನಿಯಮಗಳು

1.ಹರಾಜಿನ ಮುನ್ನ ಸಾಲ ಮರುಪಾವತಿಯಾದಲ್ಲಿ ಸದರೀಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ.
2.ಕಟ್ಟಡ ಯಾವ ರೀತಿಯಲ್ಲಿದೆಯೋ ಅದೇ ರೀತಿಯಲ್ಲಿ ಹರಾಜು ಮಾಡಲಾಗುವುದು.
3.ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚೆ ರೂ.1,00,000/– ಗಳನ್ನು ಠೇವಣಿಯಾಗಿ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು.
4.ಹರಾಜಿನಲ್ಲಿ ಬಿಡ್ ನಿಂತ ನಂತರ ಅಂದು ಹರಾಜು ಮೊಬಲಗಿನ ಶೇ.15 ರಷ್ಟು ಹಣವನ್ನು ಸ್ಥಳದಲ್ಲಿಯೇ ಪಾವತಿಸಿ ರಸೀತಿಯನ್ನು ಪಡೆಯುವುದು. ಉಳಿದ ಹಣವನ್ನು ನೋಂದಣಿ ವೆಚ್ಚ ಸಹಿತ 45 ದಿನಗೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್‌ದಾರರು ಪಾವತಿ ಮಾಡಿರುವ ಹಣವನ್ನು ಕಾನೂನು ರೀತ್ಯ ಮುಟ್ಟುಗೋಲು ಹಾಕಿಕೊಂಡು ಬದಲಿ ಹರಾಜು ಮಾಡಲಾಗುವುದು.
5.ಬಿಡ್ ಮೊಬಲಗು ಆಸ್ತಿಯ ಬೆಲೆಗಿಂತ ಕಡಿಮೆಯಾದಲ್ಲಿ ಆಸ್ತಿಯನ್ನು ಅಂತಹ ಬಿಡ್ ದಾರರಿಗೆ ಬಿಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆ.ಸಿ.ಎಸ್.ನಿಯಮಗಳ ಪ್ರಕಾರ ಮಾರಾಟಾಧಿಕಾರಿಯವರು ಹೊಂದಿರುತ್ತಾರೆ.
6.ಹರಾಜಿನಲ್ಲಿ ಯೋಗ್ಯ ಬೆಲೆ ಬಾರದಿದ್ದಲ್ಲಿ ಹರಾಜಿಗಿಟ್ಟಿರುವ ಸ್ಥಿರಾಸ್ತಿಯನ್ನು ಖರೀದಿಸುವ ಮತ್ತು ಆಸ್ತಿ ವರ್ಗಾವಣೆ ಮಾಡಿಕೊಳ್ಳುವ ಹಕ್ಕನ್ನು ಬ್ಯಾಂಕು ಹೊಂದಿರುತ್ತದೆ.
7.ಹರಾಜಿಗಿಟ್ಟಿರುವ ಸ್ಥಿರಾಸ್ತಿಯ ವಿವರಣೆ ಮತ್ತು ಅಂದಾಜು ವಿಸ್ತೀರ್ಣದ ವಿಷಯದಲ್ಲಿ ಯಾವುದಾದರೂ ತಪ್ಪುಗಳಿದ್ದರೆ ಸರ್ಕಾರದವರು ಜವಾಬ್ದಾರರಾಗುವುದಿಲ್ಲ.
8.ಸ್ಥಿರಾಸ್ತಿ ಹರಾಜಿನ ಮಾರಾಟ ಸ್ಥಿರೀಕರಣವು ಹರಾಜಿನ ಷರತ್ತಿಗಳಿಗೊಳಪಟ್ಟಿರುತ್ತದೆ. ಬಿಡ್‌ದಾರರು ಷರತ್ತುಗಳನ್ನು ಪಾಲಿಸದಿದ್ದಲ್ಲಿ ಮಾರಾಟ ಸ್ಥಿರೀಕರಣಕ್ಕೆ ಸರ್ಕಾರದವರು ಜವಾಬ್ದಾರರಾಗುವುದಿಲ್ಲ.
9.ಮೂಲ ಸಾಲಗಾರರಾಗಲೀ, ಜಾಮೀನುದಾರರಾಗಲೀ ಅಥವಾ ಅವರ ಹಿತೈಷಿಗಳಾಗಲೀ ಬಹಿರಂಗ ಹರಾಜಿನಲ್ಲಿ ಆಸ್ತಿ ಮಾರಾಟ ಮಾಡಿದ 30 ದಿನಗೊಳಗಾಗಿ ಸಾಲದ ಪೂರ್ಣ ಬಾಕಿ ಮತ್ತು ಹರಾಜಿನಲ್ಲಿ ಆಸ್ತಿ ಖರೀದಿಸಿದ ಬಿಡ್‌ದಾರರು ಬ್ಯಾಂಕಿಗೆ ಠೇವಣಿ ಮಾಡಿದ ಹಣದ ಮೇಲೆ ಶೇ 5 ರಷ್ಟು ಹಣವನ್ನು ಬ್ಯಾಂಕಿಗೆ ಪಾವತಿ ಮಾಡಿದಲ್ಲಿ ಹರಾಜಿನಲ್ಲಿ ಆಸ್ತಿ ಖರೀದಿಸಿದವರು ಅವರು ಪಾವತಿಸಿದ ಠೇವಣಿಯ ಮೇಲೆ ಶೇ 5 ರಷ್ಟು ಹಣ ಪಡೆಯಲು ಮಾತ್ರ ಹಕ್ಕುಳ್ಳವಾಗಿರುತ್ತಾರೆ ಹಾಗೂ ಹರಾಜಿನಲ್ಲಿ ಕೂಗಿದ ಆಸ್ತಿಗೆ ಹಕ್ಕು ಇರುವುದಿಲ್ಲ.

ದಿನಾಂಕ: 07.01.2021
ಬೆಂಗಳೂರು.
ಮಾರಾಟಾಧಿಕಾರಿ
ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಮಲ್ಲೇಶ್ವರಂ, ಬೆಂಗಳೂರು – 55.

ಸಂಶೋಧನೆಗೆ ಮುಂದಾದ ಡಾ. ಗುರುಮೂರ್ತಿ ಹೆಗಡೆ • ವಿವಿಧ ಉತ್ಪನ್ನಗಳ ತಯಾರಿಕೆ

ಅಡಿಕೆಯಿಂದ ಬುಲೆಟ್ ಪ್ರೂಫ್ ಜಾಕೆಟ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾನೋ ತಂತ್ರಜ್ಞಾನ ಬಳಸಿ ಅಡಕೆಯಿಂದ ಯೋಧರು, ಸಶಸ್ತ್ರ ಪಡೆಗಳ ಸಿಬ್ಬಂದಿ ಬಳಸಬಹುದಾದಷ್ಟು ಸಾಮರ್ಥ್ಯ ಇರುವ ಬುಲೆಟ್ ಪ್ರೂಫ್ ಜಾಕೆಟ್‌ಗಳನ್ನು ತಯಾರಿಸುವ ಸಂಶೋಧನೆ ಫಲ ಕೊಡುವತ್ತ ಸಾಗಿದೆ.

ನಗರದ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ನ್ಯಾನೋ ಮೆಟಿರಿಯಲ್ಸ್ ಆ್ಯಂಡ್ ಡಿಸ್‌ಪ್ಲೇಸ್ ಕೇಂದ್ರದಲ್ಲಿ ಅಡಿಕೆ ಸೇರಿದಂತೆ ವಿವಿಧ ಕೃಷಿ ಉತ್ಪನ್ನಗಳ ಮೇಲೆ ಪ್ರಯೋಗಗಳು ನಡೆಯುತ್ತಿವೆ.

ಕೇಂದ್ರದ ಮುಖ್ಯಸ್ಥ ಹಾಗೂ ಪ್ರಾಧ್ಯಾಪಕ ಡಾ. ಗುರುಮೂರ್ತಿ ಹೆಗಡೆ ಅವರು ವಿದ್ಯಾರ್ಥಿಗಳ ನೆರವಿನಿಂದ ಈಗಾಗಲೇ ಅಡಿಕೆಯ ನ್ಯಾನೋ ಪಾರ್ಟಿಕಲ್‌ನಿಂದ ಎಪಾಕ್ಸಿ ಫೈಬರ್ ಗಾಜು, ನೀರಿನ ಪೈಪ್, ಬ್ಯಾಟರಿ, ನೀರು ಶುದ್ಧಿಕಾರಕ ಪರಿಕರ, ನೆಲ ಸ್ವಚ್ಛತಾ ದ್ರಾವಣ ಸೇರಿದಂತೆ ವಿವಿಧ ವಸ್ತುಗಳನ್ನು ಸಿದ್ಧಗೊಳಿಸಿದ್ದಾರೆ. ಅವರು ಈ ಸಂಶೋಧನೆಗಳ ಹಕ್ಕುಸ್ವಾಮ್ಯ (ಪೇಟೆಂಟ್) ಪಡೆದುಕೊಂಡಿದ್ದು, ಅಂತರರಾಷ್ಟ್ರೀಯ ಜರ್ನಲ್‌ಗಳಲ್ಲಿ ಕೂಡ ಸಂಶೋಧನಾ ಪ್ರಬಂಧಗಳು ಪ್ರಕಟಗೊಂಡಿವೆ.

ಅಡಕೆಯಿಂದ ತಯಾರಿಸಿದ ಎಪಾಕ್ಸಿ ಫೈಬರ್ ಗಾಜು

ಕಳೆದ ನಾಲ್ಕು ವರ್ಷಗಳ ಸಂಶೋಧನೆಗಳು ಈಗ ಫಲಿತಾಂಶ ನೀಡುತ್ತಿವೆ. ಸಿದ್ಧಗೊಂಡ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಲು ರಾಜ್ಯ ಸರ್ಕಾರದ ಸಹಕಾರ ಅತ್ಯಗತ್ಯ.

ಡಾ. ಗುರುಮೂರ್ತಿ ಹೆಗಡೆ, ಸಂಶೋಧಕ

ಅಡಿಕೆಯಿಂದ ಸಂಶೋಧಿಸಿರುವ ಉತ್ಪನ್ನಗಳನ್ನು ರಾಜ್ಯ ಸರ್ಕಾರದ ನೆರವಿನಿಂದ ಮಾರುಕಟ್ಟೆಗೆ ಪರಿಚಯಿಸಲು ಮುಂದಾಗಿದ್ದಾರೆ. ಈ ಬಗ್ಗೆ ಅಡಿಕೆ ಕಾರ್ಯಪಡೆಗೆ ಮಾದರಿ ಪ್ರದರ್ಶಿಸಿ, ಪೂರಕ ದಾಖಲಾತಿಗಳನ್ನು ಒದಗಿಸಿದ್ದಾರೆ. ಅಡಿಕೆಯ ನ್ಯಾನೋ ಪಾರ್ಟಿಕಲ್ ನೆರವಿನಿಂದ ಮುಂದಿನ ದಿನಗಳಲ್ಲಿ ಮದ್ದು ಗುಂಡುಗಳು, ಮೊಬೈಲ್ ಪರದೆ, ನೀರಿನ ಬಾಟಲಿ ಸೇರಿದಂತೆ ವಿವಿಧ ವಸ್ತುಗಳನ್ನು ಸಂಶೋಧಿಸಲು ಮುಂದಾಗಿದ್ದಾರೆ. ಬುಲೆಟ್ ಪ್ರೂಫ್ ಜಾಕೆಟ್‌ಗಳನ್ನು ಡಿಆರ್‌ಡಿಒ ಪ್ರಯೋಗಾಲಯದ ಸಹಯೋಗದಲ್ಲಿ ಸಿದ್ಧಪಡಿಸಲು ಸಿದ್ಧತೆ ನಡೆಸುತ್ತಿದ್ದಾರೆ. 10 ವರ್ಷಗಳು ವಿದೇಶದಲ್ಲಿದ್ದ ಅವರು, ಕಳೆದ 5 ವರ್ಷಗಳಿಂದ ಇಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ.

ಅಡಿಕೆಯಿಂದ ಫೈಬರ್ ಗಾಜು ಸಿದ್ಧ

‘ಎಪಾಕ್ಸಿ ಫೈಬರ್ ಗಾಜನ್ನು ಕೂಡ ಅಡಿಕೆಯಿಂದ ತಯಾರಿಸಲಾಗಿದೆ. ಇದು 200 ಡಿಗ್ರಿ ಸೆಲ್ಸಿಯಸ್ ತಾಪಮಾನವನ್ನು ತಡೆದುಕೊಳ್ಳಲಿದೆ. ಯಾವುದೇ ಗೀರುಗಳು ಕೂಡ ಇದರ ಮೇಲೆ ಬೀಳುವುದಿಲ್ಲ. ಹೆಚ್ಚಿನ ಅವಧಿ ಬಾಳಿಕೆ ಬರಲಿದೆ. ಬಾಗಿಲುಗಳ ರೂಪದಲ್ಲಿ, ಮನೆಗಳ ಮುಂದೆ ಹಾಕುವ ಪಾರದರ್ಶಕ ಮೇಲು ಹಾಸು, ಶಾಲಾ–ಕಾಲೇಜುಗಳಲ್ಲಿ ಬಳಸುವ ಬೋರ್ಡ್ ಸೇರಿದಂತೆ ವಿವಿಧ ಮಾದರಿಗಳಲ್ಲಿ ಬಳಸಬಹುದು. ಔಷಧ ಉದ್ಯಮಗಳಲ್ಲಿ ಪೆಲಾಡಿಯಂ ಕಾರ್ಬನ್ ಕೆಟಲಿಸ್ಟ್‌ಗೆ ಬದಲಾಗಿ ಅಡಿಕೆಯ ನ್ಯಾನೋ ಪಾರ್ಟಿಕಲ್ ಅನ್ನು ಬಳಸಬಹುದು ಎಂಬುದನ್ನು ದೃಢಪಡಿಸಲಾಗಿದೆ’ ಎಂದರು.

ಅಧಿಕ ಬಾಳಿಕೆ: ‘ಮೊದಲು ಅಡಿಕೆ ಸಿಪ್ಪೆಯನ್ನು ಪ್ರಯೋಗಕ್ಕೆ ಒಳಪಡಿಸಲಾಯಿತು. ಆದರೆ, ಅದರಲ್ಲಿ ನಮಗೆ ಫಲಿತಾಂಶ ದೊರೆಯಲಿಲ್ಲ. ಅಡಿಕೆಯನ್ನು ಪುಡಿಮಾಡಿ, ಸಾವಿರ ಡಿಗ್ರಿಯಲ್ಲಿ ನ್ಯಾನೋ ಪಾರ್ಟಿಕಲ್ ಆಗಿ ಪರಿವರ್ತಿಸಲಾಯಿತು. ಅದರಿಂದ ಬ್ಯಾಟರಿ ತಯಾರಿಸಲಾಯಿತು. ಬಳಿಕ ವಿವಿಧ ವಸ್ತುಗಳನ್ನು ಸಂಶೋಧಿಸಿದೆವು’ ಎಂದು ಗುರುಮೂರ್ತಿ ಹೆಗಡೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬುಲೆಟ್ ಪ್ರೂಫ್ ಜಾಕೆಟ್ ತಯಾರಿಕೆಗೆ ಸಿದ್ಧತೆಗಳು ನಡೆಯುತ್ತಿವೆ. ಲೋಹದ ಗುಂಡುಗಳ ಬದಲು ಅಡಿಕೆಯ ಗುಂಡುಗಳನ್ನು ಕೂಡ ತಯಾರಿಸಲು ನಿರ್ಧರಿಸಿದ್ದೇವೆ. ಅದರ ಪರಿಣಾಮದ ಬಗ್ಗೆ ಅಧ್ಯಯನಗಳನ್ನು ನಡೆಸಲಾಗಿದೆ. ಅದೇ ರೀತಿ, ಡಾಂಬರುಗಳ ಜತೆಗೆ ಅಡಿಕೆಯ ನ್ಯಾನೋ ಪಾರ್ಟಿಕಲ್ ಮಿಶ್ರಣ ಮಾಡಿ, ರಸ್ತೆಗಳಿಗೆ ಬಳಸಲಾಗಿದೆ. ಸಿಮೆಂಟ್‌ಗೆ ಜತೆಗೆ ಕೂಡ ಸೇರಿಸಿ, ಕಟ್ಟಡ ನಿರ್ಮಾಣಕ್ಕೆ ಬಳಕೆ ಮಾಡಬಹುದು. ಈಗ ಸಿದ್ಧಪಡಿಸಿರುವ ಎಲ್ಲ ವಸ್ತುಗಳು ಮಾರುಕಟ್ಟೆಯಲ್ಲಿ ಇರುವ ವಸ್ತುಗಳಿಗಿಂತ ಶೇ 30 ರಷ್ಟು ಹೆಚ್ಚು ಬಲಿಷ್ಠ ಎನ್ನುವುದು ಸಾಬೀತಾಗಿದೆ’ ಎಂದು ವಿವರಿಸಿದರು.

ಮೌಲ್ಯಮಾಪನ: ಸುಗ್ರೀವಾಜ್ಞೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಬಿಬಿಎಸ್ ಕೋರ್ಸ್‌ನ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಿಯಂತ್ರಿಸುವ ಸಂಬಂಧ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ಹೊರಡಿಸಿದ ಸುಗ್ರೀವಾಜ್ಞೆ ತಿದ್ದುಪಡಿಯನ್ನು ಹೈಕೋರ್ಟ್ ರದ್ದುಪಡಿಸಿದೆ.

ತಿದ್ದುಪಡಿ ಪ್ರಶ್ನಿಸಿ ಬಿ.ಕೆ. ಬಸಂತ್ ಮತ್ತು ಇತರರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಪೀಠ, ಈ ಆದೇಶ ನೀಡಿದೆ.

‘ಯಾವ ಪ್ರಕರಣಗಳಲ್ಲಿ ನಾಲ್ಕು ಮೌಲ್ಯಮಾಪನಗಳಲ್ಲಿ ಶೇ 15ರಷ್ಟು ಅಥವಾ ಅದಕ್ಕಿಂತ ಹೆಚ್ಚು ಅಂಕಗಳು ವ್ಯತ್ಯಾಸ ಆಗಿದೆಯೋ ಅಂತಹ ಪ್ರಕರಣಗಳಲ್ಲಿ ಐದನೇ ಮೌಲ್ಯಮಾಪನಕ್ಕೆ ಅವಕಾಶ ಕೊಡಬಹುದು. ಇದು ಅನುತ್ತೀರ್ಣರಾಗಿರುವ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುತ್ತದೆ’ ಎಂದು ನ್ಯಾಯಾಲಯ ಆದೇಶಿಸಿದೆ.

‘ಸಲಹಾ ಮಂಡಳಿಯಂತಹ ತಜ್ಞರ ಅಭಿಪ್ರಾಯವನ್ನು ಪಡೆಯದೆ, ಸುಗ್ರೀವಾಜ್ಞೆ ಹೊರಡಿಸಿದ ರೀತಿ ವೈದ್ಯಕೀಯ ಶಿಕ್ಷಣದ ಭವಿಷ್ಯಕ್ಕೆ ಉತ್ತಮ ಅಲ್ಲ. ನೀತಿಗಳನ್ನು ರೂಪಿಸುವಾಗ, ತಜ್ಞರ ಅಭಿಪ್ರಾಯವನ್ನು ಪಡೆಯಬೇಕು ಮತ್ತು ವಿದ್ಯಾರ್ಥಿ ಸಮುದಾಯದ ಕುಂದು–ಕೊರತೆಗಳನ್ನು ಸಹ ಕೇಳಬೇಕು’ ಎಂದು ಪೀಠ ತಿಳಿಸಿದೆ.

ಅನುದಾನ ಕಡಿತ: ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದ ಬಳಿಕ ದಾಸರಹಳ್ಳಿ ಕ್ಷೇತ್ರಕ್ಕೆ ಅನುದಾನ ಕಡಿತ ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಬಿಬಿಎಂಪಿ ಆಯುಕ್ತರಿಗೆ ಹೈಕೋರ್ಟ್ ಸೋಮವಾರ ನೋಟಿಸ್ ನೀಡಿದೆ. ಕ್ಷೇತ್ರದಲ್ಲಿ ಜೆಡಿಎಸ್ ಶಾಸಕರು ಇರುವ ಕಾರಣಕ್ಕೆ ಅನುದಾನ ಕಡಿತ ಮಾಡಲಾಗಿದೆ ಎಂದು ಆರೋಪಿಸಿ ಕ್ಷೇತ್ರದ ನಿವಾಸಿ ಅಶ್ವತ್ಥನಾರಾಯಣ್ ಎಲ್. ಎಂಬುವರು ಸಾರ್ವಜನಿಕ ಹಿತಾಸಕ್ತಿ ದಾವೆ ಹೂಡಿದ್ದರು. ಈ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ನ್ಯಾಯಪೀಠ ವಿಚಾರಣೆ ನಡೆಸಿತು.

’2019ರ ಫೆಬ್ರುವರಿಯಲ್ಲಿ ಮುಖ್ಯಮಂತ್ರಿಗಳ ನವ ಬೆಂಗಳೂರು ಯೋಜನೆಯಡಿ ಪಾಲಿಕೆಗೆ ಹೆಚ್ಚುವರಿಯಾಗಿ ₹5,155 ಕೋಟಿ ಅನುದಾನವನ್ನು ಮಂಜೂರು ಮಾಡಲಾಗಿತ್ತು. ಈ ಯೋಜನೆಯಡಿ ದಾಸರಹಳ್ಳಿ ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿತ್ತು. ಆದರೆ, ಕ್ಷೇತ್ರಕ್ಕೆ ಬಿಡುಗಡೆಯಾದ ₹572 ಕೋಟಿ ಮೊತ್ತವನ್ನು ಯಾವುದೇ ವಿವರಣೆ ನೀಡದೆ ಬಿಜೆಪಿ ಸರ್ಕಾರ ಬಂದ ಬಳಿಕ ಹಿಂಪಡೆಯಲಾಗಿದೆ. ಇದರಿಂದಾಗಿ, ಕೋವಿಡ್ ಸಂಕಷ್ಟ ಕಡಿಮೆಯಾದ ನಂತರವೂ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳು ಅರ್ಧಕ್ಕೆ ನಿಂತಿದೆ. ಇದೀಗ ಶಾಲೆಗಳು ಮತ್ತೆ ಆರಂಭವಾಗಿದ್ದು, ರಸ್ತೆಗಳು ದಯನೀಯ ಸ್ಥಿತಿಯಲ್ಲಿವೆ. ಇದರಿಂದಾಗಿ, ವಿದ್ಯಾರ್ಥಿಗಳ ಸಂಚಾರಕ್ಕೆ ತೊಂದರೆಯಾಗಿದೆ. ಆದ್ದರಿಂದ, ಹಿಂಪಡೆದ ಅನುದಾನವನ್ನು ಮಂಜೂರು ಮಾಡಲು ನಿರ್ದೇಶನ ನೀಡಬೇಕು‘ ಎಂದು ಅರ್ಜಿಯಲ್ಲಿ ಕೋರಲಾಗಿದೆ. ಅರ್ಜಿದಾರರ ಪರವಾಗಿ ವಕೀಲ ಜಿ.ಆರ್. ಮೋಹನ್ ವಾದಿಸಿದರು.

ಲಂಬಾಣಿ ಭಾಷೆ, ಸಂಸ್ಕೃತಿಯ ಅಭಿವೃದ್ಧಿಗೆ ಅಕಾಡೆಮಿ: ಲಿಂಬಾವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಂಬಾಣಿ ಸಾಹಿತ್ಯ, ಸಂಸ್ಕೃತಿ ಮತ್ತು ಭಾಷೆಯನ್ನು ಸಂರಕ್ಷಿಸಿ ಪ್ರಚುರಪಡಿಸುವ ಉದ್ದೇಶದಿಂದ ಲಂಬಾಣಿ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಸ್ಥಾಪಿಸಿ ಆದೇಶ ಹೊರಡಿಸಲಾಗಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ ಆಯೋಜಿಸಿದ್ದ ಸಂತ ಶ್ರೀ ಸೇವಾಲಾಲ್ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಬೆಂಗಳೂರಿನಲ್ಲಿರುವ ತಾಂಡಾ ಅಭಿವೃದ್ಧಿ ನಿಗಮದ ಕಟ್ಟಡದಲ್ಲಿ ತಾತ್ಕಾಲಿಕವಾಗಿ ಅಕಾಡೆಮಿಯ ಪ್ರಧಾನ ಕಚೇರಿ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಕೊಪ್ಪಳದ ಬಹದ್ದೂರ್ ಬಂಡೆ ಪ್ರದೇಶದಲ್ಲಿರುವ ಬಂಜಾರ ಭವನದಲ್ಲಿ ಶಾಖಾ ಕಚೇರಿ ಸ್ಥಾಪಿಸಲು ಉದ್ದೇಶಿಸಲಾಗಿದೆ’ ಎಂದು ಅವರು ತಿಳಿಸಿದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ' ಆಯೋಜಿಸಿದ್ದ "ಸಂತ ಸೇವಾಲಾಲ್ ಜಯಂತೋತ್ಸವ" ಕಾರ್ಯಕ್ರಮದಲ್ಲಿ ಲಂಬಾಣಿ ಕಲಾವಿದರು ನೃತ್ಯ ಮಾಡಿ ಗಮನ ಸೆಳೆದರು. 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ' ಸಚಿವ ಅರವಿಂದ ಲಿಂಬಾವಳಿ ಮತ್ತು ಶಾಸಕ ಪ್ರಕಾಶ್ ಕೆ. ರಾಥೋಡ್ ಇದ್ದರು ಪ್ರಜಾವಾಣಿ ಚಿತ್ರ/ ರಂಜು ಪಿ

‘ಬಜೆಟ್‌ನಲ್ಲಿ ಇತರ ಭಾಷಾ ಅಕಾಡೆಮಿಗಳಿಗೆ ನೀಡಿದಂತೆ ಲಂಬಾಣಿ ಸಂಸ್ಕೃತಿ ಮತ್ತು ಭಾಷಾ ಅಭಿವೃದ್ಧಿ ಅಕಾಡೆಮಿಗೂ ಹೆಚ್ಚಿನ ಅನುದಾನ ಒದಗಿಸಲಾಗುವುದು. ಶೀಘ್ರದಲ್ಲೇ ಅಕಾಡೆಮಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡಲಾಗುತ್ತದೆ’ ಎಂದೂ ಅವರು ನುಡಿದರು.

28 ಕ್ಷೇತ್ರಗಳಲ್ಲಿ ಪದವಿ ಕಾಲೇಜು: ಅಶ್ವತ್ಥನಾರಾಯಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೊದಲ ಹಂತದಲ್ಲಿ ಬೆಂಗಳೂರಿನ ಎಲ್ಲ 28 ವಿಧಾನಸಭೆ ಕ್ಷೇತ್ರಗಳಲ್ಲಿ ಗುಣಮಟ್ಟದ ಸರ್ಕಾರಿ ಪದವಿ ಕಾಲೇಜುಗಳನ್ನು ಆರಂಭಿಸಿ, ನಂತರ ಈ ಯೋಜನೆಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸಲು ಉದ್ದೇಶಿಸಲಾಗಿದೆ’ ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಉನ್ನತ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಮಾತನಾಡಿದ ಅವರು, ‘ಬೆಂಗಳೂರು ಕೇಂದ್ರ, ಬೆಂಗಳೂರು ಹಾಗೂ ಬೆಂಗಳೂರು ಉತ್ತರ ವಿಶ್ವವಿದ್ಯಾಲಯಗಳ ಮೂಲಕ ಈ ವಿಧಾನಸಭೆ ಕ್ಷೇತ್ರಗಳಲ್ಲಿ ಪದವಿ ಕಾಲೇಜುಗಳನ್ನು ಆರಂಭಿಸಲಾಗುವುದು’ ಎಂದರು.

‘ಬೆಂಗಳೂರಿನ ಜನಸಂಖ್ಯೆ 1.50 ಕೋಟಿ ದಾಟಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಅಗತ್ಯಗಳನ್ನು ಪರಿಣಾಮಕಾರಿಯಾಗಿ ಪೂರೈಸಬೇಕಾದರೆ ಹೊಸ ಕಾಲೇಜುಗಳನ್ನು ಆರಂಭಿಸಬೇಕಾಗಿದೆ. ಅಲ್ಲದೆ, ಈ ಕಾಲೇಜುಗಳಿಗೆ ಅಗತ್ಯವಾದ ಭೂಮಿಯನ್ನು ಸರ್ಕಾರವೇ ನೀಡಬೇಕು. ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗುವುದು’ ಎಂದರು.

‘ನಗರದ ವ್ಯಾಪ್ತಿಯಲ್ಲಿ ಕಾಲೇಜುಗಳ ನಿರ್ಮಾಣಕ್ಕೆ ಬೇಕಾಗುವ ಭೂಮಿ ಎಲ್ಲೆಲ್ಲಿ ಲಭ್ಯವಿದೆ ಎಂಬ ಮಾಹಿತಿ ನೀಡುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಅವರಿಗೆ ಸೂಚಿಸಿದ್ದೇನೆ. ಶೀಘ್ರದಲ್ಲಿ ನಗರದ ಎಲ್ಲ ಶಾಸಕರ ಸಭೆ ಕರೆದು, ಭೂಮಿ ಪಡೆಯುವ ಸಂಬಂಧ ಚರ್ಚಿಸಲಾಗುವುದು’ ಎಂದರು.

8 ಸಾವಿರ ಬೋಧಕರ ಮಂಜೂರು: ‘ರಾಜ್ಯದ ಪದವಿ ಕಾಲೇಜುಗಳಿಗೆ ಇನ್ನೂ 8,000 ಬೋಧಕ ಹುದ್ದೆಗಳನ್ನು ಮಂಜೂರು ಮಾಡುವಂತೆ ಹಾಗೂ ರಾಜ್ಯದ ಒಟ್ಟು ಬಜೆಟ್ ಗಾತ್ರದಲ್ಲಿ ಶೇ 3.5ರಷ್ಟು ಮೊತ್ತವನ್ನು ಉನ್ನತ ಶಿಕ್ಷಣಕ್ಕೆ ಮೀಸಲಿಡುವಂತೆಯೂ ಮನವಿ ಮಾಡಲಾಗಿದೆ’ ಎಂದರು.

ಉತ್ತರ ವಿಶ್ವವಿದ್ಯಾಲಯಕ್ಕೆ ಭೂಮಿ



ಅಶ್ವತ್ಥನಾರಾಯಣ

‘ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ ಜಂಗಮಕೋಟೆ ಬಳಿ 172 ಎಕರೆ ಜಾಗ ಗುರುತಿಸಿದ್ದು, 57 ಎಕರೆ ಹಸ್ತಾಂತರಿಸಲಾಗಿದೆ. ಶೀಘ್ರವೇ 53 ಎಕರೆ ಹಸ್ತಾಂತರಿಸುವುದಾಗಿ ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಅಲ್ಲದೆ 61 ಎಕರೆಯಲ್ಲಿ 51 ಎಕರೆ ಸರ್ಕಾರದ್ದು ಎನ್ನುವುದು ಗೊತ್ತಾಗಿದ್ದು, ಅದನ್ನೂ ವಶಕ್ಕೆ ಪಡೆಯಲಾಗುವುದು. ತಿಂಗಳ ಒಳಗೆ ಈ ಪ್ರಕ್ರಿಯೆ ಮುಗಿಯಲಿದೆ’ ಎಂದು ಅಶ್ವತ್ಥನಾರಾಯಣ ಹೇಳಿದರು.

ಜಂಗಮಕೋಟೆಯಲ್ಲಿ ‘ಜ್ಞಾನ ನಗರ’: ಈ ವಿಶ್ವವಿದ್ಯಾಲಯ ಸ್ಥಾಪಿಸಲು ಸರ್ಕಾರ 2015ರಲ್ಲಿ ನಿರ್ಧಾರ ಕೈಗೊಂಡಿತ್ತು. ಆದರೆ, ಅಸ್ತಿತ್ವಕ್ಕೆ ಬಂದಿದ್ದು 2018ರಲ್ಲಿ. ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಬಳಿ ಸುಸಜ್ಜಿತ ಕ್ಯಾಂಪಸ್ ನಿರ್ಮಾಣವಾಗಲಿದೆ. ಈ ಜಾಗ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಮೀಪವಿದೆ. ಇಲ್ಲಿ ‘ಜ್ಞಾನ ನಗರ’ (ನಾಲೆಡ್ಜ್ ಸಿಟಿ) ಸ್ಥಾಪಿಸಲಾಗುವುದು’ ಎಂದರು.

ಕಸದ ತಾಣವಾಗಿರುವ ಆಸ್ಪತ್ರೆ ಆವರಣ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ನರಸೀಪುರ ಗ್ರಾಮ ಪಂಚಾಯಿತಿ ಆಡಳಿತ ಕೇಂದ್ರದ ಸುತ್ತಮುತ್ತ ಕಳೆ, ಪ್ಲಾಸ್ಟಿಕ್ ತ್ಯಾಜ್ಯ ಹಾಗೂ ಮದ್ಯದ ಪ್ಯಾಕ್‌ಗಳು ಬಿದ್ದಿದ್ದು, ರೋಗ–ರುಜಿನಗಳಿಗೆ ಆಹ್ವಾನ ನೀಡುತ್ತಿವೆ ಎಂದು ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಪಂಚಾಯಿತಿ ಕಚೇರಿಯ ಪಕ್ಕದಲ್ಲಿಯೇ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ. ಈ ಆಸ್ಪತ್ರೆ ಸುತ್ತಲೂ ಪಾರ್ಥೇನಿಯಂ ಕಳೆ ಬೆಳೆದಿದ್ದರೆ, ಮುಂಭಾಗದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಬಿದ್ದಿದೆ. ಆಸ್ಪತ್ರೆ ಆವರಣ ಶುಚಿಯಾಗಿರಬೇಕು. ಆದರೆ ಕಸದ ತೊಟ್ಟಿಯಂತಾಗಿದೆ’ ಎಂದು ಚಿಕಿತ್ಸೆಗೆ ಬಂದಿದ್ದ ವ್ಯಕ್ತಿಯೊಬ್ಬರು ದೂರಿದರು.

‘ಈ ಮಾರ್ಗದಲ್ಲಿ ಹತ್ತಾರು ಅಂಗಡಿಗಳಿದ್ದು, ಅವರೆಲ್ಲರೂ ಇಲ್ಲಿ ಕಸ ತಂದು ಸುರಿಯುತ್ತಾರೆ. ಸರ್ಕಾರಿ ಶಾಲಾ ಪಕ್ಕದ ಚರಂಡಿಯು ತುಂಬಿಕೊಂಡು ಗಬ್ಬು ವಾಸನೆ ಬೀರುತ್ತಿದೆ. ಕಸ ಸಂಗ್ರಹ ಮತ್ತು ನಿರ್ವಹಣೆಗೆ ಪಂಚಾಯಿತಿಯು ಯಾವುದೇ ವ್ಯವಸ್ಥೆ ಮಾಡಿಲ್ಲ’ ಎಂದು ನಿವಾಸಿ ರವೀಶ್ ಅಸಮಾಧಾನ ವ್ಯಕ್ತಪಡಿಸಿದರು.

ಆಸ್ಪತ್ರೆ ಪಕ್ಕದಲ್ಲಿ ಬಿದ್ದಿರುವ ಕಸದ ರಾಶಿ

‘ಅರಣ್ಯ ಇಲಾಖೆಯವರು ಇಲ್ಲಿ ಸಸಿಗಳನ್ನು ನೆಟ್ಟಿದ್ದಾರೆ. ಪಾರ್ಥೇನಿಯಂ ಕಳೆ ಹೆಚ್ಚಾಗಿರುವುದರಿಂದ ಸಸಿಗಳು ಒಣಗಿ ಹೋಗಿವೆ. ಇಲ್ಲೆಲ್ಲ ವಿಷ ಜಂತುಗಳು ಸೇರಿಕೊಂಡಿವೆ. ಸಂಜೆ ವೇಳೆ ಸೊಳ್ಳೆ ಕಾಟ ಹೆಚ್ಚಾಗುತ್ತದೆ. ಜೋರು ಗಾಳಿ ಬೀಸಿದರೆ ಕೆಟ್ಟ ವಾಸನೆ ಬರುತ್ತದೆ. ಈ ಸಂಬಂಧ ಪಂಚಾಯಿತಿ ಪಿಡಿಒ ಅವರಿಗೆ ದೂರು ನೀಡಿದರೂ ಕ್ರಮ ಕೈಗೊಂಡಿಲ್ಲ’ ಎಂದು ಅವರು ದೂರಿದರು.

ಹಿಂದೂ ಸಲಹಾ ಸಮಿತಿ ಹೆಸರಿನಲ್ಲಿ ವಂಚನೆ: ಎಫ್‌ಐಆರ್

ಬೆಂಗಳೂರು: ಕೇಂದ್ರ ಸರ್ಕಾರದ ಹಿಂದೂ ಸಲಹಾ ಸಮಿತಿ ಹಾಗೂ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಹೆಸರು ಹೇಳಿಕೊಂಡು ಸಾರ್ವಜನಿಕರಿಂದ ಹಣ ಪಡೆದು ವಂಚಿಸುತ್ತಿದ್ದ ಆರೋಪದಡಿ ರಾಘವೇಂದ್ರ ಸರ್ವಂ ವಿರುದ್ಧ ಶಂಕರಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವಿಶ್ವ ಹಿಂದೂ ಪರಿಷತ್ ಸಂಘಟನೆ ರಾಜ್ಯ ಸಂಘಟನಾ ಕಾರ್ಯದರ್ಶಿ ಬಸವರಾಜ್ ದೂರು ನೀಡಿದ್ದಾರೆ. ಆರೋಪಿಗಳು ಎನ್ನಲಾದ ರಾಘವೇಂದ್ರ ಸರ್ವಂ ಹಾಗೂ ರಾಜೇಶ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರ ಜೊತೆ ಫೋಟೊ ತೆಗೆಸಿಕೊಂಡಿದ್ದ ಆರೋಪಿ ರಾಘವೇಂದ್ರ, ಅದೇ ಫೋಟೊಗಳನ್ನು ಸಾರ್ವಜನಿಕರಿಗೆ ತೋರಿಸುತ್ತಿದ್ದ. ತನಗೆ ರಾಜಕೀಯ ಮುಖಂಡರು ತುಂಬಾ ಪರಿಚಯವೆಂದು ಹೇಳುತ್ತಿದ್ದ. ಸರ್ಕಾರಿ ಕೆಲಸ ಕೊಡಿಸುವುದಾಗಿ ಲಕ್ಷಾಂತರ ರೂಪಾಯಿ ಹಣ ಪಡೆದು ವಂಚಿಸುತ್ತಿದ್ದ’ ಎಂದೂ ಮೂಲಗಳು ಹೇಳಿವೆ.

‘ವಿಎಚ್‌ಪಿ ರಾಷ್ಟ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್, ಇತ್ತೀಚೆಗೆ ಬೆಂಗಳೂರಿಗೆ ಬಂದಿದ್ದರು. ಅದನ್ನು ತಿಳಿದುಕೊಂಡಿದ್ದ ರಾಘವೇಂದ್ರ, ನಕಲಿ ಗುರುತಿನ ಚೀಟಿ ಬಳಸಿಕೊಂಡು ಅಲೋಕ್‌ಕುಮಾರ್ ಅವರನ್ನು ಭೇಟಿಯಾಗಿ ಫೋಟೊ ತೆಗೆಸಿಕೊಂಡಿದ್ದ. ಇದು ತಿಳಿಯುತ್ತಿದ್ದಂತೆ ದೂರುದಾರ ಬಸವರಾಜ್ ಪ್ರಶ್ನಿಸಿದ್ದರು. ಅಷ್ಟಕ್ಕೆ ರಾಘವೇಂದ್ರ, ಬಸವರಾಜ್‌ಗೆ ಕರೆ ಮಾಡಿ ಬೆದರಿಸಿದ್ದನೆಂಬುದು ದೂರಿನಲ್ಲಿದೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಗಂಗಶೆಟ್ಟಿ ಕೆರೆ ಉಳಿಸಲು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕೆ.ಆರ್.ಪುರದ ಗಂಗಶೆಟ್ಟಿ ಕೆರೆ ಒತ್ತುವರಿಯಾಗಿದೆ ಎಂದು ಆರೋಪಿಸಿ ಕೃಷ್ಣರಾಜಪುರ ಕೆರೆ ಸಂರಕ್ಷಣಾ ಸಮಿತಿ, ಅಖಿಲ ಕರ್ನಾಟಕ ಮತ್ತು ವ್ಯಾಪಾರಿಗಳ ಒಕ್ಕೂಟ ಹಾಗೂ ಸಿಪಿಎಮ್ ಸಂಘಟನೆಗಳ ವತಿಯಿಂದ ಖಾಕಿ ಬಟ್ಟೆ ಧರಿಸಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ನೇತೃತ್ವ ವಹಿಸಿ ಮಾತನಾಡಿದ ಅಖಿಲ ಕರ್ನಾಟಕ ರೈತರ ಮತ್ತು ವ್ಯಾಪಾರಿಗಳ ಒಕ್ಕೂಟದ ಅಧ್ಯಕ್ಷ ಎಲೆ ಶ್ರೀನಿವಾಸ್, ’ಕೆ.ಆರ್.ಪುರ ಸರ್ವೆ ನಂ. 58 ರಲ್ಲಿ ಗಂಗಶೆಟ್ಟಿ ಕೆರೆ ಇದ್ದು ಅದು ಬಿಬಿಎಂಪಿ ಕಚೇರಿಯ ಹಿಂಭಾಗ ಹಾಗೂ ತಹಶಿಲ್ದಾರ್ ಕಚೇರಿ ಮುಂಭಾಗ ಇದ್ದರೂ ಅಧಿಕಾರಿಗಳ ಗಮನಕ್ಕೆ ಬಾರದಿರುವುದು ದುರಂತ‘ ಎಂದರು.

ವಿವಿಧ ಸಂಘಟನೆಗಳ ಕಾರ್ಯಕರ್ತರು ತಹಶೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು

ಕೆ.ಆರ್.ಪುರ ಸಂತೆ ಮೈದಾನದಿಂದ ಹೊರಟ ಪ್ರತಿಭಟನೆ ಮೆರವಣಿಗೆ ದೇವಸಂದ್ರ ಸುತ್ತಮುತ್ತಲ ಬಡಾವಣೆಗಳು, ಮುಖ್ಯ ರಸ್ತೆಗಳ ಮೂಲಕ ತಹಶೀಲ್ದಾರ ಕಚೇರಿಗೆ ತೆರಳಿತು.

’ತಾಲ್ಲೂಕು ಕಚೇರಿಯಲ್ಲಿ ತಹಶೀಲ್ದಾರ್ ಸಿಗದ ಕಾರಣ ಮಂಗಳವಾರ ಬೆಳಿಗ್ಗೆ ತಹಶೀಲ್ದಾರ್ ಕಚೇರಿಯನ್ನು ನೂರು ಸುತ್ತು ಸುತ್ತಿ ನೂರೊಂದು ತೆಂಗಿನ ಕಾಯಿ ಒಡೆದು ಮನವಿ ಮತ್ರ ನೀಡಲಾಗುವುದು‘ ಎಂದು ಎಲೆ ಶ್ರೀನಿವಾಸ್ ತಿಳಿಸಿದರು.

‘ಯುವ ಸಬಲೀಕರಣ: ವಾರದಲ್ಲಿ ಪ್ರಸ್ತಾವನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಲು ಮುಂದಿನ ಬಜೆಟ್‌ನಲ್ಲಿ ಏನೇನು ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕು, ಸರ್ಕಾರದಿಂದ ಏನೇನು ನೆರವು ಅಗತ್ಯವಿದೆ ಎಂಬ ಬಗ್ಗೆ ವಾರದೊಳಗೆ ಪ್ರಸ್ತಾವನೆ ಸಲ್ಲಿಸುವಂತೆ ಇಲಾಖೆಯ ಅಧಿಕಾರಿಗಳಿಗೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಕೆ.ಸಿ. ನಾರಾಯಣಗೌಡ ಸೂಚಿಸಿದರು.

ಇಲಾಖೆಯ ರಾಜ್ಯಮಟ್ಟದ ಪ್ರಗತಿ ಪರಿಶೀಲನೆ ಸೋಮವಾರ ನಡೆಸಿದ ಸಚಿವರು, ‘ಯುವ ಜನತೆಯ ಪ್ರತಿನಿಧಿಯಾಗಿ, ಧ್ವನಿಯಾಗಿ ಕೆಲಸ ಮಾಡಬೇಕು. ಯುವ ಸಮೂಹದ ಒಟ್ಟಾರೆ ಸಮಸ್ಯೆಗಳಿಗೆ ಸ್ಪಂದಿಸಬೇಕು’ ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

‘ರಾಜ್ಯದಲ್ಲಿ ನಡೆಯುತ್ತಿರುವ ಅಪರಾಧ ಚಟುವಟಿಕೆಯಲ್ಲಿ ಶೇ 50ರಷ್ಟು ಯುವಕರೇ ಇದ್ದಾರೆ ಎನ್ನುವುದು ಕಳವಳಕಾರಿ ಸಂಗತಿ. ಇದನ್ನು ತಡೆಯಲು, ಜಾತಿ, ಧರ್ಮ, ಪ್ರಾಂತಗಳ ಆಧಾರದಲ್ಲಿ ಗುಂಪುಗಳಾಗಿ ವಿಂಗಡಣೆ ಹೊಂದುತ್ತಿರುವ ಮತ್ತು ದುಶ್ಚಟಗಳಿಗೆ ಬಲಿಯಾಗುತ್ತಿರುವವರ ಮನಸ್ಸು ಪರಿವರ್ತನೆಗೆ ಇಲಾಖೆಯಿಂದ ಕಾರ್ಯಕ್ರಮ ರೂಪಿಸಬೇಕು’ ಎಂದು ಸಲಹೆ ನೀಡಿದರು.

ಕ್ರೀಡಾ ಇಲಾಖೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಕಡಿಮೆ ಪ್ರಗತಿ ಸಾಧಿಸಿ ರುವ ಅಧಿಕಾರಿಗಳನ್ನು ತರಾಟೆಗೆ ತೆಗೆದು ಕೊಂಡ ಸಚಿವರು, ‘ಕ್ರೀಡಾಂಗಣ, ಈಜುಕೊಳಗಳನ್ನು ಸರಿಯಾಗಿ ನಿರ್ವಹಿಸಬೇಕು. ಪ್ರತಿ ತಾಲ್ಲೂಕಿನಲ್ಲಿ ಕ್ರೀಡಾಂಗಣ ಇರಬೇಕು. ಕ್ರೀಡಾಂಗಣ ಇಲ್ಲದ ಕಡೆಗಳಲ್ಲಿ ಹೊಸತಾಗಿ ನಿರ್ಮಾಣಕ್ಕೆ ಸ್ಥಳ ಗುರುತಿಸಬೇಕು. ಪ್ರತಿ ಜಿಲ್ಲೆಯಿಂದ 100 ಕ್ರೀಡಾಪಟುಗಳನ್ನು ಸಿದ್ಧಪಡಿಸಬೇಕು. ಪ್ರವಾಸಿ ತಾಣಗಳಲ್ಲಿ ಸಾಹಸ ಕ್ರೀಡೆಯ ತರಬೇತಿ, ಸ್ಪರ್ಧೆ ಆಯೋಜಿಸಬೇಕು’ ಎಂದು ಸಚಿವರು ಸೂಚಿಸಿದರು.

ಸಭೆಗೂ ಮೊದಲು ಯುವ ಸ್ಪಂದನ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಾರಾಯಣಗೌಡ, ವಿವೇಕಾನಂದರ ಜಯಂತಿ ಅಂಗವಾಗಿ ನಿಮ್ಹಾನ್ಸ್ ಸಹಯೋಗದಲ್ಲಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿದರು.

‘ರಾಜ್ಯದಲ್ಲಿ ಎರಡು ಜನೌಷಧಿ ವಿತರಣೆ ಕೇಂದ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಜನೌಷಧಿ ಅಂಗಡಿಗಳಿಗೆ ಔಷಧ ಪೂರೈಕೆಯನ್ನು ಇನ್ನಷ್ಟು ತ್ವರಿತಗೊಳಿಸಲು ಎರಡು ಹೊಸ ವಿತರಣಾ ಕೇಂದ್ರಗಳಿಗೆ ಅನುಮತಿ ನೀಡಲಾಗುವುದು’ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ.ಸದಾನಂದ ಗೌಡ ತಿಳಿಸಿದರು.

ನಗರದಲ್ಲಿ ಜನೌಷಧಿ ಕೇಂದ್ರದವರ ಜೊತೆ ಸೋಮವಾರ ಸಭೆ ನಡೆಸಿ, ಅವರ ಕುಂದು-ಕೊರತೆ, ಬೇಡಿಕೆಯನ್ನು ಆಲಿಸಿದರು.

‘ಬೆಂಗಳೂರು ಮತ್ತು ಮೈಸೂರಿನಲ್ಲಿ ಜನೌಷಧಿ ವಿತರಣಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ರಾಜ್ಯ ಸಹಕಾರಿ ಮಾರುಕಟ್ಟೆ ಒಕ್ಕೂಟಕ್ಕೆ ಹುಬ್ಬಳ್ಳಿಯಲ್ಲಿ ಜನೌಷಧ ವಿತರಣಾ ಕೇಂದ್ರ ಆರಂಭಿಸಲು ಪರವಾನಗಿ ನೀಡಲಾಗಿದ್ದು, ಶೀಘ್ರದಲ್ಲೇ ಕಾರ್ಯಾರಂಭ ಮಾಡಲಿದೆ. ಕಲ್ಯಾಣ ಕರ್ನಾಟಕ ಹಾಗೂ ಕರಾವಳಿ ಭಾಗದಲ್ಲಿ ವಿತರಣಾ ಕೇಂದ್ರಗಳನ್ನು ಆರಂಭಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ’ ಎಂದರು.

ಚಿತ್ರಾವಳಿ

ಶ್ರೀರಾಮ ಮಂದಿರ ನಿರ್ಮಾಣಕ್ಕೆ ಮಾಜಿ ಶಾಸಕ ಎಸ್ ಮುನಿರಾಜು ನೇತೃತ್ವದಲ್ಲಿ ಶೆಟ್ಟಿಹಳ್ಳಿಯಲ್ಲಿ ರಾಮ ಭಕ್ತರಿಂದ ಸಂಗ್ರಹಿಸಿದ ₹1.61 ಕೋಟಿ ಮೊತ್ತದ ಚೆಕ್ ಅನ್ನು ಪೇಜಾವರ ಮಠದ ವಿಶ್ವ ಪ್ರಸನ್ನ ಸ್ವಾಮೀಜಿ ಅವರಿಗೆ ಹಸ್ತಾಂತರಿಸಲಾಯಿತು. ಕೇಂದ್ರ ಸಚಿವ ಡಿ.ವಿ ಸದಾನಂದ ಗೌಡ, ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ವಿಭಾಗದ ಸಂಘಟನಾ ಕಾರ್ಯದರ್ಶಿ ತಿಪ್ಪೇಸ್ವಾಮಿ ಇದ್ದರು.

ಬೆಂಗಳೂರು ನಗರ ಜಿಲ್ಲೆಯ ನೂತನ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರಿಗೆ ನಿರ್ಗಮಿತ ಜಿಲ್ಲಾಧಿಕಾರಿ ಜಿ.ಎನ್.ಶಿವಮೂರ್ತಿ ಅವರು ಸೋಮವಾರ ಅಧಿಕಾರ ಹಸ್ತಾಂತರಿಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಅನಿತಾ ಲಕ್ಷ್ಮೀ ಇದ್ದರು.

ವೆಬ್‌ಸೈಟ್ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಛಾಯಾಚಿತ್ರಗಳು ಮತ್ತು ಅದಕ್ಕೆ ಸಂಬಂಧಿತ ಉತ್ಪನ್ನಗಳನ್ನು ಉತ್ತೇಜಿಸುವ ಉದ್ದೇಶದಿಂದ ಪಿಕ್ಸ್‌ಫಾರ್‌ಕಾಸ್ ವೆಲ್‌ಫೇರ್ ಅಸೋಸಿಯೇಷನ್ ವತಿಯಿಂದ ವೆಬ್‌ಸೈಟ್ ಉದ್ಘಾಟಿಸಲಾಯಿತು

ಕಾರ್ಯಕ್ರಮದಲ್ಲಿ ಗಗನ್ ನಾರಂಗ್, ವಿಜಯ್ ಕುಮಾರ್ ಗೋಗಿ, ಸುನೀಲ್ ಲಿಮಾಯೆ ಹಾಗೂ ಇತರರು ಭಾಗವಹಿಸಿದ್ದರು.

‘ಸಂಘದ ವೆಬ್‌ಸೈಟ್ https://www.pix4cause.com ಮುಖೇನ ಉತ್ಪನ್ನಗಳ ಮಾರಾಟದಿಂದ ಬರುವ ಆದಾಯವನ್ನು ಪ್ರಕೃತಿ ಮತ್ತು ವನ್ಯಜೀವಿಗಳ ಸಂರಕ್ಷಣೆಯಲ್ಲಿ ತೊಡಗಿರುವ ಸಿಬ್ಬಂದಿ ಮತ್ತು ಕುಟುಂಬಗಳ ಕಲ್ಯಾಣದ ದೃಷ್ಟಿಯಿಂದ ದತ್ತಿ ಚಟುವಟಿಕೆಗಳಿಗೆ ಬಳಸಲಾಗುವುದು. ವನ್ಯಜೀವಿ ಛಾಯಾಗ್ರಾಹಕ ಮೋಹನ್ ಥಾಮಸ್ ಇದರ ನೇತೃತ್ವ ವಹಿಸಿದ್ದಾರೆ’ ಎಂದು ಪ್ರಕಟಣೆ ತಿಳಿಸಿದೆ.

स्टील अथॉरिटी ऑफ इण्डिया लिमिटेड
STEEL AUTHORITY OF INDIA LIMITED
(ಭಾರತ ಸರ್ಕಾರದ ಉದ್ದಿಮೆ)

ಸೈಲ್ ಪೆನ್ಷನ್ ಸ್ಕೀಮ್ ಫೇಸ್–2

ಅರ್ಹ ಮಾಜಿ–ಉದ್ಯೋಗಿಗಳು/ಅವರ ಅವಲಂಬಿತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಸೈಲ್ ಸಂಸ್ಥೆಯು ತನ್ನ ಮಾಜಿ ಉದ್ಯೋಗಿಗಳಿಗಾಗಿ ದಿನಾಂಕ 29.04.2019ರ ಸುತ್ತೋಲೆ ಮೂಲಕ ಸೈಲ್ ಪೆನ್ಷನ್ ಸ್ಕೀಮ್ ಆರಂಭಿಸಿದೆ ಮತ್ತು ನಮ್ಮ ದಿನಾಂಕ 1.2.2020, 21.8.2020 ಹಾಗೂ 20.10.2020ರ ಸುತ್ತೋಲೆಗಳ ಮುಖಾಂತರ 31.3.2015 ರವರೆಗಿನ ಅವಧಿಯ ಮಾಜಿ ಉದ್ಯೋಗಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸೈಲ್ ಪೆನ್ಷನ್ ಸ್ಕೀಮ್‌ನ ಫೇಸ್–2 ಮಂಜೂರಾಗಿದ್ದು, 31.3.2020 ರವರೆಗೆ ಪ್ರತ್ಯೇಕಗೊಂಡಿರುವ ಮಾಜಿ ಉದ್ಯೋಗಿಗಳಿಗಾಗಿ ಸೈಲ್ ಪೆನ್ಷನ್ ಸ್ಕೀಮ್ ಅಡಿಯಲ್ಲಿ ಅರ್ಹ ಮಾಜಿ ಉದ್ಯೋಗಿಗಳಿಂದ/ಫಲಾನುಭವಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸ್ವೀಕರಿಸುವ ಪ್ರಕ್ರಿಯೆಯು ಇದೀಗ ಸೈಲ್ ವೆಬ್‌ಸೈಟ್‌ನಲ್ಲಿ ಆರಂಭವಾಗಿದೆ (www.sail.co.in).

ಪ್ರತ್ಯೇಕಗೊಂಡ ದಿನಾಂಕದ ಮೇರೆಗೆ ಮಾಜಿ ಉದ್ಯೋಗಿಗಳ ಹಿರಿತನದ ಆಧಾರದಲ್ಲಿ ಪೆನ್ಷನ್ ಬಿಡುಗಡೆ ಮಾಡಲಾಗುತ್ತದೆ.

ಎಲ್ಲಾ ಮಾಜಿ ಉದ್ಯೋಗಿಗಳು/ಅವಲಂಬಿತರು (ಮಾಜಿ ಉದ್ಯೋಗಿಗಳು ಮೃತರಾಗಿದ್ದಲ್ಲಿ) ತಮ್ಮ ಅರ್ಹತೆ, ನಾಮನಿರ್ದೇಶನ, ಪೆನ್ಷನ್ ಆಯ್ಕೆಗಳು ಹಾಗೂ ಸೈಲ್ ಪೆನ್ಷನ್ ಸ್ಕೀಮ್‌ನಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಖಚಿತಪಡಿಸಿಕೊಳ್ಳಲು ಹಾಗೂ ಸೈಲ್ ಪೆನ್ಷನ್ ಸ್ಕೀಮ್ ಅಡಿಯಲ್ಲಿನ ಅರ್ಜಿ ನಮೂನೆ ಭರ್ತಿ ಮಾಡಲು ಸೈಲ್ ವೆಬ್‌ಸೈಟ್‌ಗೆ ಭೇಟಿ ನೀಡಿರಿ (https://www.sail.co.in/en/sail-penstion) ಅಥವಾ ನಿಮ್ಮ ನಗರದಲ್ಲಿನ ಸಮೀಪದ ಸೈಲ್ ಕಚೇರಿಗಳಿಗೆ ಭೇಟಿ ನೀಡಬೇಕೆಂದು ಕೋರಲಾಗಿದೆ.

ನೊಂದಾಯಿತ ಕಚೇರಿ: ಇಸ್ಪಾತ್ ಭವನ, ಲೋಧಿ ರಸ್ತೆ, ನವದೆಹಲಿ–110003
ಫೋನ್: +91 11 24367481, ಫ್ಯಾಕ್ಸ್: +91 11 24367015
ಕಾರ್ಪೊರೇಟ್ ಐಡೆಂಟಿಟಿ ನಂಬರ್:L27109DL1973GO1006454, ವೆಬ್‌ಸೈಟ್: www.sail.co.in
ಪ್ರತಿಯೊಬ್ಬರ ಜೀವನದಲ್ಲೂ ಒಂದಿಷ್ಟು ಸೈಲ್ ಇರುತ್ತದೆ

1196CC ಇಂಜಿನ್ | ಗ್ರೌಂಡ್ ಕ್ಲೀಯರೆನ್ಸ್ | ಪವರ್ ಆಂಡ್ ಟಾರ್ಕ್ | ಕಂಫರ್ಟೇಬಲ್ ಕ್ಯಾಬಿನ್ | ದೊಡ್ಡ ಟಯರ್‌ಗಳು | ₹60 000* ವರೆಗೆ ಉಳಿಸಿರಿ

EECO CARGO SUPER CARRY

ಬೆಂಗಳೂರು							ತುಮಕೂರು
ಗರುಡ	ಸುರಕ್ಷಾ	ಪ್ರಥಮ್	ಬಿಮಲ್	ವರುಣ್	ಕಲ್ಯಾಣಿ	ಆರ್ ಎನ್ ಎಸ್	ಸಾಕೇತ್
ಮಿಷನ್ ರಸ್ತೆ	ಜಿಗಣಿ	ದೊಮ್ಮಸಂದ್ರ,	ಯಶವಂತಪುರ	ಹೆಬ್ಬಾಳ	ಮಾಗಡಿ ಮುಖ್ಯ ರಸ್ತೆ,	ರಾಜಾಜಿನಗರ	ತುಮಕೂರು
9071434991	8884442360	9606033664, 9901722335	9845433063	9513394767	9900046692	6366429954, 080-23130022	9663542535

*Terms and conditions apply. The Terms & Conditions are subject to change without any prior notice. Above mentioned savings amount is the value of maximum savings on selected models. Images used are for illustration purposes only. Accessories and features shown may not be a part of standard equipment and may vary for each variant. *Offer includes consumer offer, exchange bonus and corporate offer (wherever applicable) on selected models/variants. All offers are valid till 28th Feb, 2021.

ನರ್ಸಿಂಗ್ ಕಾಲೇಜಿನಲ್ಲಿ 40 ಮಂದಿಗೆ ಕೊರೊನಾ ಪತ್ತೆಯಾದ ಬೆನ್ನಲ್ಲೇ ಬೊಮ್ಮನಹಳ್ಳಿಯಲ್ಲಿ 28 ಮಂದಿಗೆ ಕೋವಿಡ್

ಸೋಂಕು ತಡೆಗೆ ನಿಯಮ ಮತ್ತೆ ಕಟ್ಟುನಿಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವಲ್ ಬೈರಸಂದ್ರದಲ್ಲಿ ಮಂಜುಶ್ರೀ ನರ್ಸಿಂಗ್ ಕಾಲೇಜಿನ 40 ವಿದ್ಯಾರ್ಥಿಗಳಿಗೆ ಕೋವಿಡ್ ದೃಢಪಟ್ಟ ಬೆನ್ನಲ್ಲೇ ಬೊಮ್ಮನಹಳ್ಳಿ ವಲಯದ ವ್ಯಾಪ್ತಿಯ ಎಸ್‌ಎನ್‌ಎನ್ ರಾಜ್ ಲೇಕ್ ವ್ಯೂವ್ ರೆಸಿಡೆನ್ಸಿ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ವಾಸಿಸುತ್ತಿರುವ 28 ಮಂದಿಯಲ್ಲಿ ಕೊರೊನಾ ಸೋಂಕು ಪತ್ತೆಯಾಗಿದೆ.

ನಿರ್ದಿಷ್ಟ ಪ್ರದೇಶಗಳಲ್ಲಿ ಸೋಂಕು ವ್ಯಾಪಕವಾಗಿ ಹಬ್ಬಿರುವುದು ಹಾಗೂ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಪಾಲಿಸದೇ ಇರುವುದು ಬಿಬಿಎಂಪಿ ಅಧಿಕಾರಿಗಳ ತಲೆನೋವಿಗೆ ಕಾರಣವಾಗಿದೆ. ಸೋಂಕು ಹಬ್ಬುವುದನ್ನು ತಡೆಯಲು ನಿಯಮಗಳನ್ನು ಮತ್ತೆ ಕಟ್ಟುನಿಟ್ಟಾಗಿ ಜಾರಿಗೊಳಿಸಲು ಬಿಬಿಎಂಪಿ ಮುಂದಾಗಿದೆ. ಈ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸುವ ಸಲುವಾಗಿ ಬಿಬಿಎಂಪಿ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ಸೋಮವಾರ ಅಧಿಕಾರಿಗಳ ಸಭೆ ನಡೆಸಿದರು.

ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಆಯುಕ್ತರು, 'ಈ ಎರಡು ಪ್ರಕರಣಗಳಿಂದಾಗಿ ಸೋಂಕು ಕ್ಷಿಪ್ರಗತಿಯಲ್ಲಿ ಹರಡುವ ಸಾಧ್ಯತೆ ಇದೆ. ಹಾಗಾಗಿ ಕೋವಿಡ್ ಹರಡದಂತೆ ತಡೆಯಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ನರ್ಸಿಂಗ್ ಕಾಲೇಜಿನ 210 ವಿದ್ಯಾರ್ಥಿಗಳಿಗೂ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಎಸ್‌ಎನ್‌ಎನ್ ರಾಜ್ ಲೇಕ್ ವ್ಯೂವ್ ರೆಸಿಡೆನ್ಸಿಯಲ್ಲಿ 500 ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿದ್ದೇವೆ. ಇನ್ನೂ ಸಾವಿರ ಮಂದಿಯನ್ನು ಪರೀಕ್ಷೆಗೆ ಒಳಪಡಿಸುತ್ತೇವೆ. ಈ ಸಲುವಾಗಿಯೇ ಆರು ಶಿಬಿರಗಳನ್ನು ಸ್ಥಾಪಿಸಲಾಗಿದೆ' ಎಂದು ತಿಳಿಸಿದರು.

ಎನ್.ಮಂಜುನಾಥ ಪ್ರಸಾದ್

'ಕೇರಳದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದೆ. ಅಲ್ಲಿಂದ ಬಂದಿರುವ ವಿದ್ಯಾರ್ಥಿಗಳಿಂದ ಮಂಜುಶ್ರೀ ನರ್ಸಿಂಗ್ ಕಾಲೇಜಿನಲ್ಲಿ ಸೋಂಕು ಹರಡಿದೆ. ಬೊಮ್ಮನಹಳ್ಳಿ ವಲಯದ ಎಸ್‌ಎನ್‌ಎನ್ ರೆಸಿಡೆನ್ಸಿಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಕಿರು ಸಭಾಂಗಣದಲ್ಲಿ ಹೆಚ್ಚು ಜನ ಸೇರಿದ್ದರು. ಕೋವಿಡ್ ನಿಯಂತ್ರಣ ನಿಯಮಗಳನ್ನು ಕಡೆಗಣಿಸಿದ್ದರಿಂದ ಅಲ್ಲಿ ಹೆಚ್ಚು ಪ್ರಕರಣಗಳು ಕಂಡುಬಂದಿವೆ' ಎಂದು ತಿಳಿಸಿದರು.

'ಕೇರಳದಿಂದ ಬರುವವರಿಗೆ ಯಾವುದೇ ನಿರ್ಬಂಧವಿಲ್ಲ. ಆ ರಾಜ್ಯದಿಂದ ಬರುವ ವ್ಯಕ್ತಿಗಳು ತಮಗೆ ಸೋಂಕು ಇಲ್ಲ ಎಂಬುದನ್ನು ಸಾಬೀತುಪಡಿಸಲು 72 ಗಂಟೆಗಳಿಂದ ಈಚೆಗೆ ಆರ್‌ಟಿಪಿಸಿಆರ್ ಪರೀಕ್ಷೆಯ ವರದಿಯನ್ನು ಹೊಂದಿರಬೇಕು. ಈ ನಿಯಮ ಉಲ್ಲಂಘಿಸಿದರೆ ಪ್ರಕೃತಿ ವಿಕೋಪ ನಿರ್ವಹಣೆ ಕಾಯ್ದೆ ಅನುಸಾರ ಕ್ರಮ ಕೈಗೊಳ್ಳಲಿದ್ದೇವೆ' ಎಂದು ಎಚ್ಚರಿಸಿದರು.

ಆರ್‌ಡಬ್ಲ್ಯುಎ ಜೊತೆ ಸಂಪರ್ಕದಲ್ಲಿರಿ: ಕೋವಿಡ್ ನಿಯಂತ್ರಣಕ್ಕೆ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಅಥವಾ ಬಡಾವಣೆಗಳಲ್ಲಿರುವ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ನೆರವನ್ನು ಪಡೆಯಬೇಕು ಎಂದು ಬಿಬಿಎಂಪಿ ಆಯುಕ್ತರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕೊರೊನಾ ಸೋಂಕು ಲಕ್ಷಣಗಳಿರುವವರನ್ನು ಪ್ರತ್ಯೇಕಪಡಿಸಿ ಚಿಕಿತ್ಸೆ ನೀಡಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮಾಹಿತಿ ನೀಡಲು ಆರ್‌ಡಬ್ಲ್ಯುಎ ಪ್ರತಿನಿಧಿಗಳ ಜೊತೆ ಆಯುಕ್ತರು ಮಂಗಳವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಸಭೆ ನಡೆಸಲಿದ್ದಾರೆ. ಕೋವಿಡ್ ಪರೀಕ್ಷೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಡೆಸುವುದಕ್ಕೂ ಈ ಸಂಘಗಳ ಸಹಕಾರ ಕೋರಲಿದ್ದಾರೆ.

'ಹೆಚ್ಚು ಜನ ಸೇರಿಸಿ ಯಾವುದಾದರೂ ಕಾರ್ಯಕ್ರಮ ಆಯೋಜಿಸುವುದಾದರೆ ಕೋವಿಡ್ ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸಬೇಕು' ಎಂದೂ ಆಯುಕ್ತರು ಸಲಹೆ ನೀಡಿದ್ದಾರೆ.

ವಿಶೇಷ ಆಯುಕ್ತರಾದ ತುಳಸಿ ಮದ್ದಿನೇನಿ, ಬಸವರಾಜು, ಡಿ.ರಂದೀಪ್, ರೆಡ್ಡಿ ಶಂಕರ ಬಾಬು, ರವೀಂದ್ರ, ರಾಜೇಂದ್ರ ಚೋಳನ್ ಹಾಗೂ ಎಲ್ಲ ವಲಯಗಳ ಜಂಟಿ ಆಯುಕ್ತರು, ಆರೋಗ್ಯಾಧಿಕಾರಿಗಳು ಸಭೆಯಲ್ಲಿ ಸಲಹೆ ನೀಡಿದರು.

ಅಂಕಿ ಅಂಶ

341
ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಕೋವಿಡ್ ಪರೀಕ್ಷಾ ತಂಡಗಳು

100
ಪ್ರತಿ ತಂಡ ನಿತ್ಯ ನಡೆಸುವ ಕೋವಿಡ್ ಪರೀಕ್ಷೆಗಳು

ಪರೀಕ್ಷೆ ಹೆಚ್ಚಳಕ್ಕೆ ಸೂಚನೆ

'ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಕಡೆ ಪರೀಕ್ಷೆಗಳ ಸಂಖ್ಯೆಯನ್ನೂ ಹೆಚ್ಚಳ ಮಾಡಲು ಸೂಚಿಸಿದ್ದೇನೆ. ಪಾಲಿಕೆ ವ್ಯಾಪ್ತಿಯಲ್ಲಿ 141 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 200 ಹೆಚ್ಚುವರಿ ತಂಡಗಳಿದ್ದು, ಇವು ದಿನವೊಂದರಲ್ಲಿ 34 ಸಾವಿರ ಪರೀಕ್ಷೆಗಳನ್ನು ನಡೆಸುವ ಸಾಮರ್ಥ್ಯವನ್ನು ಹೊಂದಿವೆ. ಸದ್ಯ ನಿತ್ಯ 20 ಸಾವಿರದಿಂದ 22 ಸಾವಿರ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ' ಎಂದು ಬಿಬಿಎಂಪಿ ಆಯುಕ್ತರು ವಿವರಿಸಿದರು.

'ಕೋವಿಡ್ ಪರೀಕ್ಷೆಗಳು ಸಾಂಗವಾಗಿ ನಡೆಯುವಂತೆ ನೋಡಿಕೊಳ್ಳಲು ಎಲ್ಲ ವಲಯಗಳ ಜಂಟಿ ಆಯುಕ್ತರು ನಿತ್ಯವೂ ಹಾಗೂ ವಲಯದ ವಿಶೇಷ ಆಯುಕ್ತರು ಎರಡು ದಿನಗಳಿಗೊಮ್ಮೆ ಪರಿಶೀಲನಾ ಸಭೆ ನಡೆಸಬೇಕು. ಹೆಚ್ಚು ಪ್ರಕರಣಗಳು ಕಂಡುಬರುವ ಕಡೆ ಸೋಂಕಿತರನ್ನು ಪ್ರತ್ಯೇಕಪಡಿಸಲು ಕ್ರಮವಹಿಸಬೇಕು. ಸೋಂಕಿತರ ಜೊತೆ ನೇರ ಹಾಗೂ ಪರೋಕ್ಷ ಸಂಪರ್ಕಕ್ಕೆ ಬಂದವರನ್ನು ಪತ್ತೆ ಮಾಡಿ ಪರೀಕ್ಷೆಗೆ ಒಳಪಡಿಸಬೇಕು. ಅವರನ್ನೂ ಪ್ರತ್ಯೇಕಪಡಿಸಬೇಕು ಎಂದು ಸೂಚನೆ ನೀಡಲಾಗಿದೆ. ಈ ಕಾರ್ಯಕ್ಕೆ ಆರೋಗ್ಯ, ಕಂದಾಯ ವಿಭಾಗದ ಹಾಗೂ ಎಂಜಿನಿಯರಿಂಗ್ ವಿಭಾಗದ ಅಧಿಕಾರಿಗಳ ಬಳಸಿಕೊಳ್ಳಬಹುದು' ಎಂದು ತಿಳಿಸಿದರು.

ನಿಯಮ ಜಾರಿಗೆ ಮಾರ್ಷಲ್‌ಗಳ ನಿಯೋಜನೆ

ನಗರದಲ್ಲಿ ಇತ್ತೀಚೆಗೆ ಕೋವಿಡ್ ಪ್ರಕರಣಗಳು ಕಡಿಮೆಯಾಗುತ್ತಿದೆ. ಅದರ ಜೊತೆಗೇ ನಾಗರಿಕರು ಮಾಸ್ಕ್ ಧರಿಸುವುದು ಹಾಗೂ ಪರಸ್ಪರ ಅಂತರ ಕಾಪಾಡುವ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸದಿರುವುದು ಬಿಬಿಎಂಪಿಯ ಕಳವಳಕ್ಕೆ ಕಾಣವಾಗಿದೆ.

'ಮಾರ್ಷಲ್‌ಗಳನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ಕೋವಿಡ್ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು' ಎಂದು ಆಯುಕ್ತರು ಸೂಚನೆ ನೀಡಿದ್ದಾರೆ.

ಐಐಎಸ್‌ಸಿ ಮಾಜಿ ನಿರ್ದೇಶಕ ಜಿ.ಪದ್ಮನಾಭನ್ (ಎಡ) 'ಜೈವಿಕ ತಂತ್ರಜ್ಞಾನ' ಗ್ಯಾಲರಿ ವೀಕ್ಷಿಸಿದರು. ಟಿ. ಜಿ. ಸೀತಾರಾಂ, ಕೆ.ಮದನ್ ಗೋಪಾಲ್ ಇದ್ದಾರೆ

'ಲಸಿಕೆ ತಪ್ಪದೇ ಹಾಕಿಸಿಕೊಳ್ಳಿ'

ಬೆಂಗಳೂರು: 'ಲಸಿಕೆ ಯಾವುದೇ ಆಗಿರಲಿ ಅದರಿಂದ ಸಣ್ಣಪುಟ್ಟ ಅಡ್ಡ ಪರಿಣಾಮಗಳು ಆಗುವುದು ಸಹಜ. ಅದಕ್ಕೆ ಹೆದರಿ ಯಾರೂ ಲಸಿಕೆಯಿಂದ ದೂರ ಉಳಿಯಬೇಡಿ. ಎಲ್ಲರೂ ಕೋವಿಡ್ ಲಸಿಕೆ ಹಾಕಿಸಿಕೊಳ್ಳಿ' ಎಂದು ಐಐಎಸ್‌ಸಿ ಮಾಜಿ ನಿರ್ದೇಶಕ ಜಿ.ಪದ್ಮನಾಭನ್ ಮನವಿ ಮಾಡಿದರು.

ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತುಸಂಗ್ರಹಾಲಯವು (ವಿಐಟಿಎಂ) ಸ್ಥಾಪಿಸಿರುವ 'ಜೈವಿಕ ತಂತ್ರಜ್ಞಾನ' ಗ್ಯಾಲರಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕೋವಿಡ್ ರೋಗ ನಿಯಂತ್ರಣಕ್ಕೆ ಬಂದಿರಬಹುದು. ಆದರೆ ವೈರಾಣು ಇನ್ನೂ ಸತ್ತಿಲ್ಲ. ಅದು ರೂಪಾಂತರಗೊಳ್ಳುವ ಸಾಧ್ಯತೆ ಇರುತ್ತದೆ. ಹೀಗಾಗಿ ಯಾರೂ ಮೈಮರೆಯಬಾರದು. ಚಿಕ್ಕಂದಿನಲ್ಲಿ ನಾನು ಕಾಲರಾ ಲಸಿಕೆ ಹಾಕಿಸಿಕೊಂಡಿದ್ದೆ. ಆಗ ಎರಡು ದಿನ ನೋವಾಗಿತ್ತು. ಲಸಿಕೆ ಚುಚ್ಚಿಸಿಕೊಂಡ ನಂತರ ಇಂತಹ ಅನುಭವಗಳಾಗುವುದು ಸಹಜ' ಎಂದರು.

'ಈ ಗ್ಯಾಲರಿಯನ್ನು ದೇಸಿಯವಾಗಿ ಅಭಿವೃದ್ಧಿಪಡಿಸಲಾಗಿದೆ. ಇದು 'ಆತ್ಮ ನಿರ್ಭರ ಭಾರತ' ಯೋಜನೆಗೆ ಉತ್ತಮ ನಿದರ್ಶನ. ಕೃಷಿ, ಕೈಗಾರಿಕೆ, ಹೈನುಗಾರಿಕೆ ಹಾಗೂ ಪರಿಸರ ಜೈವಿಕ ತಂತ್ರಜ್ಞಾನಗಳ ಕುರಿತು ಈ ಗ್ಯಾಲರಿಯಲ್ಲಿ ವಿಶೇಷ ಮಾಹಿತಿ ಒದಗಿಸಲಾಗಿದೆ. ಮಕ್ಕಳು, ವಿದ್ಯಾರ್ಥಿಗಳು ಇದರ ಲಾಭ ಪಡೆದುಕೊಳ್ಳಬೇಕು' ಎಂದು ಐಐಟಿ (ಗುವಾಹಟಿ) ನಿರ್ದೇಶಕ ಹಾಗೂ ವಿಐಟಿಎಂ ಕಾರ್ಯಕಾರಿ ಸಮಿತಿ ಮುಖ್ಯಸ್ಥ ಟಿ.ಜಿ.ಸೀತಾರಾಂ ಹೇಳಿದರು.

'ಸುಮಾರು ₹1 ಕೋಟಿ ವೆಚ್ಚದಲ್ಲಿ ಗ್ಯಾಲರಿ ನಿರ್ಮಿಸಲಾಗಿದೆ. ಹಿಂದಿನ ಕೆಲ ವರ್ಷಗಳಲ್ಲಿ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳು ನಡೆದಿವೆ. ಅವುಗಳ ಕುರಿತು ಜನರಿಗೆ ಮಾಹಿತಿ ಒದಗಿಸಬೇಕೆಂಬುದು ಈ ಗ್ಯಾಲರಿಯ ಉದ್ದೇಶ. ದಕ್ಷಿಣ ಭಾರತದಲ್ಲೇ ಇದೊಂದು ಹೊಸ ಪ್ರಯೋಗ' ಎಂದು ವಿಐಟಿಎಂ ನಿರ್ದೇಶಕ ಕೆ.ಮದನ್ ಗೋಪಾಲ್ ತಿಳಿಸಿದರು.

ಸಿದ್ಧವಾಗುತ್ತಿದೆ ಮೂರನೇ ಹಂತದ ಪಟ್ಟಿ

ಬೆಂಗಳೂರು: ಕೋವಿಡ್ ಲಸಿಕೆ ನೀಡುವ ಮೊದಲ ಎರಡು ಹಂತಗಳ ಪ್ರಕ್ರಿಯೆಗಳು ಪೂರ್ಣಗೊಂಡ ಬಳಿಕ ಮೂರನೇ ಹಂತದ ಲಸಿಕೆ ಅಭಿಯಾನವನ್ನು ಹಮ್ಮಿಕೊಳ್ಳಲು ಪಾಲಿಕೆ ಸಿದ್ಧತೆ ನಡೆಸಿದೆ. ಮತದಾರರ ಪಟ್ಟಿಯ ಆಧಾರದಲ್ಲಿ 50 ರಿಂದ 60 ವರ್ಷದೊಳಗಿನವರು, 60 ರಿಂದ 70 ವರ್ಷದೊಳಗಿನವರು, 70 ರಿಂದ 80 ವರ್ಷದೊಳಗಿನವರು, 80 ರಿಂದ 90 ವರ್ಷದೊಳಗಿನವರು ಹಾಗೂ 90 ವರ್ಷ ಮೇಲ್ಪಟ್ಟವರ ಪಟ್ಟಿಯನ್ನು ಪ್ರತ್ಯೇಕವಾಗಿ ಸಿದ್ಧಪಡಿಸಲಾಗುತ್ತಿದೆ. ವಾರ್ಡ್ ವಾರು ಪಟ್ಟಿ ತಯಾರಿಸಲು ಆಯುಕ್ತರು ಸೂಚನೆ ನೀಡಿದ್ದಾರೆ. ಇದರ ಜೊತೆಗೆ, ಅನ್ಯ ರೋಗಗಳಿಂದ ಬಳಲುತ್ತಿರುವ 50 ವರ್ಷದೊಳಗಿನವರ ಸಮೀಕ್ಷೆ ನಡೆಸಲೂ ಕ್ರಮವಹಿಸಲಾಗಿದೆ.

'ಈ ಸಮೀಕ್ಷೆ ಮುಂದಿನ ವಾರದಿಂದ ಪ್ರಾರಂಭವಾಗಲಿದೆ. ಮಾರ್ಚ್‌ನಲ್ಲಿ ಸಮೀಕ್ಷೆ ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ' ಎಂದು ಆಯುಕ್ತರು ತಿಳಿಸಿದರು.

ಫೆ 25ರ ಬಳಿಕ ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಕಾರ್ಯಕರ್ತರು ಕೋವಿಡ್ ಲಸಿಕೆ ಪಡೆಯುವುದಕ್ಕೆ ಸರ್ಕಾರ ಇದೇ 25ರ ಗಡುವು ನಿಗದಿಪಡಿಸಿದೆ.

'ಆರೋಗ್ಯ ಕಾರ್ಯಕರ್ತರು ಕೋವಿಡ್ ಲಸಿಕೆ ಪಡೆಯುವುದಕ್ಕೆ ರಾಜ್ಯ ಸರ್ಕಾರ ಅಂತಿಮ ದಿನಾಂಕ ನಿಗದಿಪಡಿಸಿದೆ. ಅವರು ಇದೇ 25 ರೊಳಗೆ ಲಸಿಕೆ ಪಡೆಯಬೇಕು. ಆ ಬಳಿಕ ಅವರಿಗೆ ಲಸಿಕೆ ನೀಡುವುದಿಲ್ಲ. ಲಸಿಕೆಯ ಮೊದಲ ಡೋಸ್ ಪಡೆದವರಿಗೆ ಮಾತ್ರ ಎರಡನೇ ಡೋಸ್ ನೀಡಲಾಗುತ್ತದೆ' ಎಂದು ಬಿಬಿಎಂಪಿ ಆಯುಕ್ತ ಎನ್. ಮಂಜುನಾಥ ಪ್ರಸಾದ್ ಸ್ಪಷ್ಟಪಡಿಸಿದರು.

ಕೋವಿಡ್ ಲಸಿಕೆ ಪಡೆಯಲು 1.80 ಲಕ್ಷ ಆರೋಗ್ಯ ಕಾರ್ಯಕರ್ತರು ಹೆಸರು ನೋಂದಾಯಿಸಿದ್ದರು. ಆದರೆ, ಅವರಲ್ಲಿ 90 ಸಾವಿರ ಮಂದಿಯಷ್ಟೇ ಇದುವರೆಗೆ ಲಸಿಕೆ ಪಡೆದಿದ್ದಾರೆ.

ಎರಡನೇ ಡೋಸ್ ನೀಡುವ ಪ್ರಕ್ರಿಯೆ ಪ್ರಾರಂಭ

ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದ ಆರೋಗ್ಯ ಕಾರ್ಯಕರ್ತರಿಗೆ ಎರಡನೇ ಡೋಸ್ ನೀಡುವ ಪ್ರಕ್ರಿಯೆ ಸೋಮವಾರ ಆರಂಭವಾಗಿದೆ. ಬಿಬಿಎಂಪಿ ಆರೋಗ್ಯ ಕಾರ್ಯಕರ್ತರು, ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಮುಂಚೂಣಿಯಲ್ಲಿದ್ದ ಇತರ ಸಿಬ್ಬಂದಿಗೆ ಲಸಿಕೆಯ ಮೊದಲ ಡೋಸ್ ನೀಡುವ ಪ್ರಕ್ರಿಯೆಯೂ ಮುಂದುವರಿದಿದೆ.

'ಆರೋಗ್ಯ ಕಾರ್ಯಕರ್ತರು ಹಾಗೂ ಕೋವಿಡ್ ನಿಯಂತ್ರಣದಲ್ಲಿ ಮುಂಚೂಣಿಯಲ್ಲಿದ್ದ ಇತರ ಸಿಬ್ಬಂದಿ ಸೇರಿದಂತೆ 2.42 ಲಕ್ಷ ಮಂದಿಗೆ ಲಸಿಕೆ ನೀಡಲಾಗುತ್ತಿದೆ. ಇವರಲ್ಲಿ 93 ಸಾವಿರ ಮುಂಚೂಣಿ ಕಾರ್ಯಕರ್ತರು ಮಾರ್ಚ್ ಮೊದಲನೇ ವಾರದವರೆಗೆ ಲಸಿಕೆ ಪಡೆಯಬಹುದು. ಇವರಿಗೆ ಮಾರ್ಚ್ ತಿಂಗಳಲ್ಲಿ ಎರಡನೇ ಡೋಸ್ ನೀಡಲಾಗುತ್ತದೆ' ಎಂದು ಆಯುಕ್ತರು ಮಾಹಿತಿ ನೀಡಿದರು. 2275 ಆರೋಗ್ಯ ಕಾರ್ಯಕರ್ತರಿಗೆ ಲಸಿಕೆಯ ಎರಡನೇ ಡೋಸನ್ನು ಸೋಮವಾರ ನೀಡಬೇಕಿತ್ತು. 1102 ಮಂದಿ ಮಾತ್ರ ಪಡೆದರು.

ಸೋಮವಾರ 3,280 ಆರೋಗ್ಯ ಕಾರ್ಯಕರ್ತರಿಗೆ ಲಸಿಕೆ ನೀಡಲು ನಿರ್ಧರಿಸಲಾಗಿತ್ತು. ಆದರೆ ಲಸಿಕೆ ಪಡೆದಿದ್ದು 216 ಮಂದಿ ಮಾತ್ರ. ಕೋವಿಡ್ ನಿಯಂತ್ರಣದಲ್ಲಿ ಮುಂಚೂಣಿಯಲ್ಲಿದ್ದ 2127 ಮಂದಿ ಸಿಬ್ಬಂದಿ ಲಸಿಕೆ ಪಡೆಯಬೇಕಿದ್ದು, 367 ಮಂದಿ ಮಾತ್ರ ಪಡೆದಿದ್ದಾರೆ.

ನಗರದ ಕೋವಿಡ್ ಪ್ರಕರಣಗಳು

4,02,212 ಒಟ್ಟು ಸೋಂಕಿತರು

3,93,883 ಗುಣಮುಖರಾದವರು

3,898 ಸಕ್ರಿಯ ಪ್ರಕರಣ

4,430 ಸಾವು

ಸೋಮವಾರದ ಏರಿಕೆ

196 ದೃಢಪಟ್ಟ ಪ್ರಕರಣ

227 ಗುಣಮುಖ

2 ಸಾವು

ಸುದ್ದಿ 2 ನಿಮಿಷ

ಕೋವಿಡ್: ಪರೀಕ್ಷೆ ಗಣನೀಯ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಸೋಮವಾರ 42,245 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. ಇವು ಈ ವರ್ಷದಲ್ಲಿ 24 ಗಂಟೆಗಳ ಅವಧಿಯಲ್ಲಿ ನಡೆಸಲಾದ ಅತಿ ಕಡಿಮೆ ಪರೀಕ್ಷೆಗಳಾಗಿವೆ.

ರಾಜ್ಯದಲ್ಲಿ ಹೊಸದಾಗಿ 368 ಕೋವಿಡ್ ಪ್ರಕರಣಗಳು ಸೋಮವಾರ ದೃಢಪಟ್ಟಿವೆ. ಈವರೆಗೆ ಕೋವಿಡ್ ಪೀಡಿತರಾದವರ ಸಂಖ್ಯೆ 9.45 ಲಕ್ಷ ದಾಟಿದೆ. ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು ಮಾತ್ರ ಮೃತಪಟ್ಟಿರುವುದು ದೃಢಪಟ್ಟಿದೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,267ಕ್ಕೆ ತಲುಪಿದೆ.

ಸೋಮವಾರ 84 ಮಂದಿ ಸೇರಿದಂತೆ ಕಳೆದ ನ.25ರಿಂದ ಬ್ರಿಟನ್‌ನಿಂದ ರಾಜ್ಯಕ್ಕೆ 10,866 ಮಂದಿ ಬಂದಿದ್ದಾರೆ. ಅವರಲ್ಲಿ ಈವರೆಗೆ 25 ಮಂದಿಯಲ್ಲಿ ರೂಪಾಂತರ ವೈರಾಣು ಕಾಣಿಸಿಕೊಂಡಿದೆ.

ಕೋವಿಡ್ ಪೀಡಿತರಲ್ಲಿ ಮತ್ತೆ 430 ಮಂದಿ ಗುಣಮುಖರಾಗಿದ್ದಾರೆ. ಇದರಿಂದಾಗಿ ಕಾಯಿಲೆಯಿಂದ ಚೇತರಿಸಿಕೊಂಡವರ ಸಂಖ್ಯೆ 9.27 ಲಕ್ಷ ದಾಟಿದೆ. 5,772 ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 128 ಮಂದಿ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇದ್ದಾರೆ.

ಸಹಾಯಕ ಎಂಜಿನಿಯರ್‌ಗಳು ಪೊಲೀಸ್ ಕಸ್ಟಡಿಗೆ

ಬೆಂಗಳೂರು: ನಕಲಿ ಖಚಿತ ಅಳತೆ ವರದಿ (ಸಿಡಿಆರ್) ಸೃಷ್ಟಿಸಿ ಬಡಾವಣೆ ಯೋಜನೆಗಳಿಗೆ ಅನುಮತಿ ನೀಡಿದ್ದ, ನಿವೇಶನಗಳನ್ನು ಅಕ್ರಮವಾಗಿ ಮಾರಾಟ ಮಾಡಲು ಸಹಕರಿಸುತ್ತಿದ್ದ ಆರೋಪದಡಿ ಬಂಧಿಸಲಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ನಾಲ್ವರು ಸಹಾಯಕ ಎಂಜಿನಿಯರ್‌ಗಳನ್ನು ಹೆಚ್ಚಿನ ವಿಚಾರಣೆಗಾಗಿ ಶೇಷಾದ್ರಿಪುರ ಪೊಲೀಸರ ಕಸ್ಟಡಿಗೆ ನೀಡಲಾಗಿದೆ.

ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು, ಬನಶಂಕರಿ ಕಚೇರಿಯ ಎಂ.ಎಸ್. ಶಂಕರ್ ಮೂರ್ತಿ, ಆರ್.ಟಿ.ನಗರ ಕಚೇರಿಯ ಕೆ.ಎನ್. ರವಿಕುಮಾರ್, ಡಿ. ಶ್ರೀರಾಮ್, ಶಬ್ಬೀರ್ ಅಹಮ್ಮದ್ ಹಾಗೂ ಶ್ರೀನಿವಾಸ್ ಅವರನ್ನು ಬಂಧಿಸಿದ್ದರು. ಆರಂಭದಲ್ಲಿ ಶ್ರೀನಿವಾಸ್ ಅವರನ್ನು ಮಾತ್ರ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ್ದರು.

ಆದರೆ, ಉಳಿದ ನಾಲ್ವರು ನ್ಯಾಯಾಂಗ ಬಂಧನದಲ್ಲಿದ್ದರು. ಅವರನ್ನು ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಪೊಲೀಸರ ಮನವಿ ಪುರಸ್ಕರಿಸಿದ ನ್ಯಾಯಾಲಯ, ಶಂಕರಮೂರ್ತಿ, ರವಿಕುಮಾರ್, ಶಬ್ಬೀರ್ ಅಹಮ್ಮದ್ ಹಾಗೂ ಡಿ. ಶ್ರೀರಾಮ್ ಅವರನ್ನು ಪೊಲೀಸರ ಕಸ್ಟಡಿಗೆ ನೀಡಿದೆ.

ಪ್ರಧಾನಿಗೆ ಪತ್ರ ಬರೆಯಲು ಅಲೋಪಥಿ ವೈದ್ಯರ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ಆಯುರ್ವೇದ ವೈದ್ಯರಿಗೆ ಕೆಲವು ಶಸ್ತ್ರಚಿಕಿತ್ಸೆ ನಡೆಸಲು ಅವಕಾಶ ನೀಡಿರುವ ಅಧಿಸೂಚನೆ ಹಿಂಪಡೆಯಲು ಆಗ್ರಹಿಸಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯಲು ಅಲೋಪಥಿ ವೈದ್ಯರು ನಿರ್ಧರಿಸಿದ್ದಾರೆ.

ಅಪೆಂಡಿಕ್ಸ್, ಪಿತ್ತಕೋಶ, ಹಾನಿಕಾರಕವಲ್ಲದ ಗೆಡ್ಡೆ ತೆಗೆಯುವುದು, ಗ್ಯಾಂಗ್ರಿನ್, ಹಲ್ಲಿನ ರೂಟ್‌ಕ್ಯಾನಲ್ ಮುಂತಾದ ಸಾಮಾನ್ಯ ಶಸ್ತ್ರಚಿಕಿತ್ಸೆಗಳನ್ನು ನಡೆಸಲು ಆಯುರ್ವೇದ ವೈದ್ಯರಿಗೆ ಅನುಮತಿ ನೀಡಿ, ಸೆಂಟ್ರಲ್ ಕೌನ್ಸಿಲ್ ಆಫ್ ಇಂಡಿಯನ್ ಮೆಡಿಸಿನ್ ಅಧಿಸೂಚನೆ ಹೊರಡಿಸಿತ್ತು. ಇದನ್ನು ವಿರೋಧಿಸಿ ಅಲೋಪಥಿ ವೈದ್ಯರು 15 ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸಿದ್ದರು.

'ನೂತನ ಅಧಿಸೂಚನೆಯಿಂದ ಆಗಬಹುದಾದ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ' ಎಂದು ಭಾರತೀಯ ವೈದ್ಯಕೀಯ ಸಂಘದ (ಐಎಂಎ) ಬೆಂಗಳೂರು ಶಾಖೆಯ ವಕ್ತಾರ ಡಾ. ಎಸ್.ಶ್ರೀನಿವಾಸ್ ಮಾಹಿತಿ ನೀಡಿದರು.

'ರಾಜ್ಯದಲ್ಲಿ 178 ಐಎಂಎ ಶಾಖೆಗಳಿವೆ. ಆಯಾ ಶಾಖೆಗಳ ವ್ಯಾಪ್ತಿಯಲ್ಲಿರುವ ಶಾಸಕರು ಹಾಗೂ ಸಂಸದರನ್ನು ಭೇಟಿಯಾಗಿ ಭವಿಷ್ಯದ ಅನಾಹುತಗಳ ಬಗ್ಗೆ ಮನವರಿಕೆ ಮಾಡಲಾಗುವುದು' ಎಂದು ಹೇಳಿದರು.

₹ 6.50 ಲಕ್ಷ ಮೌಲ್ಯದ ಆಭರಣ ಜಪ್ತಿ: ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಾರ್ವಜನಿಕರನ್ನು ಅಡ್ಡಗಟ್ಟಿ ಚಿನ್ನದ ಸರ, ಮೊಬೈಲ್ ಹಾಗೂ ದ್ವಿಚಕ್ರ ವಾಹನ ಸುಲಿಗೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಕಲಾಸಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕಾಟನ್‌ಪೇಟೆ ಫ್ಲವರ್ ಗಾರ್ಡನ್ ನಿವಾಸಿ ವಿಘ್ನೇಶ್ (25), ಆಂಜಿನಪ್ಪ ಗಾರ್ಡನ್‌ನ ದಿನೇಶ್ (21) ಹಾಗೂ ಕೋರಮಂಗಲ ರಾಜೇಂದ್ರನಗರದ ಸುರೇಶ್ (20) ಬಂಧಿತರು. ಅವರಿಂದ ₹ 6.50 ಲಕ್ಷ ಮೌಲ್ಯದ ಚಿನ್ನಾಭರಣ, ಮೊಬೈಲ್‌ಗಳು ಹಾಗೂನಾಲ್ಕು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲಿಸರು ಹೇಳಿದರು.

'ಠಾಣೆ ವ್ಯಾಪ್ತಿಯ ಬಂಬೂ ಬಜಾರ್ 1ನೇ ಅಡ್ಡರಸ್ತೆಯಲ್ಲಿ ವ್ಯಕ್ತಿಯೊಬ್ಬರು ಫೆ. 3ರಂದು ನಡೆದುಕೊಂಡು ಹೊರಟಿದ್ದರು. ದ್ವಿಚಕ್ರ ವಾಹನದಲ್ಲಿ ಬಂದಿದ್ದ ಆರೋಪಿಗಳು, ವ್ಯಕ್ತಿಯನ್ನು ಅಡ್ಡಗಟ್ಟಿ ಬೆದರಿಸಿದ್ದರು. ಚಿನ್ನದ ಸರ, ಚಿನ್ನದ ಉಂಗುರ, ಮೊಬೈಲ್ ಹಾಗೂ ಪರ್ಸ್ ಕಿತ್ತುಕೊಂಡು ಆರೋಪಿಗಳು ಪರಾರಿಯಾಗಿದ್ದರು. ಕೃತ್ಯದ ಬಗ್ಗೆ ವ್ಯಕ್ತಿ ದೂರು ನೀಡಿದ್ದರು. ಅದರನ್ವಯ ಆರೋಪಿಗಳನ್ನು ಬಂಧಿಸಲಾಗಿದೆ. ಇವರು ಸಿಟಿ ಮಾರ್ಕೆಟ್ ಠಾಣೆ ವ್ಯಾಪ್ತಿಯಲ್ಲೂ ಕೃತ್ಯ ಎಸಗಿರುವುದು ತನಿಖೆಯಿಂದ ಕಂಡುಬಂದಿದೆ' ಎಂದೂ ಪೊಲೀಸರು ತಿಳಿಸಿದರು.

ಕದ್ದ ಆಭರಣ ಅಡವಿಟ್ಟು ಐಷಾರಾಮಿ ಜೀವನ

ಮನೆಯೊಂದರಲ್ಲಿ ಕದ್ದಿದ್ದ ಚಿನ್ನಾಭರಣಗಳನ್ನು ಅಡವಿಟ್ಟು, ಅದರಿಂದ ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ ಆರೋಪಿ ಮಂಜುನನ್ನು (35) ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

'ಸುಬೇದಾರ್ ಪಾಳ್ಯ ನಿವಾಸಿಯಾದ ಮಂಜು, ಬಂಡೇಮಠ ಲೇಔಟ್‌ನಲ್ಲಿರುವ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ. ಆತನಿಂದ ₹ 20 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಯಾವುದೇ ಕೆಲಸಕ್ಕೆ ಹೋಗದೇ ಸ್ಥಳೀಯ ಯುವಕರ ಜೊತೆ ಗುಂಪು ಕಟ್ಟಿಕೊಂಡು ಆರೋಪಿ ಓಡಾಡುತ್ತಿದ್ದ. 2020ರಲ್ಲಿ ಬಂಡೇಮಠ ಲೇಔಟ್‌ನಲ್ಲಿರುವ ಮನೆಯೊಂದಕ್ಕೆ ನುಗ್ಗಿದ ಮಂಜು, ಚಿನ್ನಾಭರಣ ಬ್ಯಾಗ್ ಕದ್ದುಕೊಂಡು ಪರಾರಿಯಾಗಿದ್ದ.'

'ಘಟನೆ ಬಗ್ಗೆ ಮನೆಯ ಮಾಲೀಕರು ದೂರು ನೀಡಿದ್ದರು. ಆರೋಪಿ, ಚಿನ್ನಾಭರಣವನ್ನು ₹ 10 ಲಕ್ಷಕ್ಕೆ ಫೈನಾನ್ಸ್ ಕಂಪನಿಯಲ್ಲಿ ಅಡವಿಟ್ಟಿದ್ದ. ಅದರಿಂದ ಬಂದ ಹಣದಲ್ಲೇ ಐಷಾರಾಮಿ ಜೀವನ ನಡೆಸುತ್ತಿದ್ದ. ಇತ್ತೀಚೆಗೆ ಮತ್ತೊಂದು ಮನೆಯಲ್ಲಿ ಕಳ್ಳತನ ಮಾಡಲು ಸಂಚು ರೂಪಿಸಿದ್ದ. ಠಾಣೆ ವ್ಯಾಪ್ತಿಯಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ವೇಳೆಯಲ್ಲಿ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕಳ್ಳತನ ಕೃತ್ಯ ಬಯಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

ಪ್ರತಿಭಟನೆ

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರೋಧಿಸಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಮತ್ತು ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಟ್ಯಾನರಿ ರಸ್ತೆಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

-ಪ್ರಜಾವಾಣಿ ಚಿತ್ರ

ಟೋಲ್‌ಗೇಟ್: ನಗದು ಕೌಂಟರ್‌ನಲ್ಲೇ ವಾಹನ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ರಸ್ತೆಯಲ್ಲಿರುವ ಟೋಲ್‌ಗೇಟ್‌ನ ನಗದು ಕೌಂಟರ್‌ನಲ್ಲಿ ಸೋಮವಾರ ವಾಹನಗಳ ದಟ್ಟಣೆ ಇರುವುದು ಕಂಡುಬಂತು.

ಟೋಲ್‌ಗೇಟ್‌ಗಳಲ್ಲಿ ಫಾಸ್ಟ್ಯಾಗ್ ಕಡ್ಡಾಯಗೊಳಿಸುವುದಾಗಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಘೋಷಿಸಿದ್ದು, ಫಾಸ್ಟ್ಯಾಗ್ ಕೌಂಟರ್‌ಗಳಲ್ಲಿ ಮಾತ್ರ ಬೆಳಿಗ್ಗೆಯಿಂದಲೇ ವಾಹನಗಳ ಸಂಖ್ಯೆ ಕಡಿಮೆ ಇತ್ತು.

ನಗದು ಕೌಂಟರ್‌ನಲ್ಲಿ ಹಣ ಪಾವತಿಸಿ ಮುಂದಕ್ಕೆ ಹೋಗುವವರ ಸಂಖ್ಯೆಯೇ ಹೆಚ್ಚಿತ್ತು. ಕೌಂಟರ್ ಎದುರು ದಟ್ಟಣೆ ಉಂಟಾಗಿ ವಾಹನಗಳು ನಿಧಾನಗತಿಯಲ್ಲಿ ಸಂಚರಿಸಿದವು.

'ಕಳೆದ ವರ್ಷದಿಂದಲೇ ಫಾಸ್ಟ್ಯಾಗ್ ಅಳವಡಿಕೆ ಬಗ್ಗೆ ಆದೇಶಗಳು ಹೊರಬೀಳುತ್ತಿವೆ. ಇದೇ ಜ. 1ರಿಂದ ಫಾಸ್ಟ್ಯಾಗ್ ಕಡ್ಡಾಯವೆಂದು ಎನ್‌ಎಚ್‌ಎಐ ಹೇಳಿತ್ತು. ಅಷ್ಟಾದರೂ ಸಾರ್ವಜನಿಕರು, ಹೆಚ್ಚಾಗಿ ತಲೆಕೆಡಿಸಿಕೊಳ್ಳುತ್ತಿಲ್ಲ. ಬಹುತೇಕರು ಇದುವರೆಗೂ ಫಾಸ್ಟ್ಯಾಗ್ ಸ್ಟಿಕರ್ ಪಡೆದುಕೊಂಡಿಲ್ಲ. ಪಡೆದುಕೊಂಡವರು, ಬ್ಯಾಂಕ್ ಖಾತೆಯಲ್ಲಿ ಹಣ ನಿರ್ವಹಣೆ ಮಾಡುತ್ತಿಲ್ಲ' ಎಂದು ಟೋಲ್ ಗೇಟ್ ಸಿಬ್ಬಂದಿಯೊಬ್ಬರು ಹೇಳಿದರು.

'ನಗದು ಕೌಂಟರ್‌ನಲ್ಲಿ ಸೋಮವಾರ ತಡರಾತ್ರಿಯವರೆಗೂ ನಿಗದಿತ ಶುಲ್ಕವನ್ನೇ ಪಡೆಯುತ್ತೇವೆ. ಆ ನಂತರ, ಎನ್‌ಎಚ್‌ಎಐ ಆದೇಶದಂತೆ ದುಪ್ಪಟ್ಟು ಶುಲ್ಕ ಸಂಗ್ರಹಿಸಲು ಸಿದ್ಧತೆ ಮಾಡಿಕೊಂಡಿದ್ದೇವೆ. ಆಕಸ್ಮಾತ್, ಪುನಃ ಕಡ್ಡಾಯ ದಿನಾಂಕ ವಿಸ್ತರಿಸಿದರೆ ಯಥಾಸ್ಥಿತಿ ಕಾಯ್ದುಕೊಳ್ಳುತ್ತೇವೆ' ಎಂದೂ ತಿಳಿಸಿದರು.

ಗೊಂದಲ ಸೃಷ್ಟಿ: ಹೊರ ರಾಜ್ಯ ಹಾಗೂ ಹೊರ ನಗರಗಳಿಂದ ಬರುವ ಹಲವು ಚಾಲಕರಿಗೆ ಫಾಸ್ಟ್ಯಾಗ್ ಬಗ್ಗೆ ತಿಳಿವಳಿಕೆ ಇಲ್ಲ. ಇದರಿಂದಲೂ ಟೋಲ್‌ಗೇಟ್‌ನಲ್ಲಿ ಗೊಂದಲಗಳು ಸೃಷ್ಟಿಯಾಗುತ್ತಿವೆ.

'ಸರಕು ಸಾಗಣೆ ವಾಹನಗಳ ಮಾಲೀಕರ ಹೆಸರಿನಲ್ಲಿ ಫಾಸ್ಟ್ಯಾಗ್ ಇರುತ್ತದೆ. ಆದರೆ, ಅಂಥ ವಾಹನಗಳನ್ನು ಚಾಲಕರು ತರುತ್ತಾರೆ. ಟೋಲ್‌ನಲ್ಲಿ ಹಣ ಪಾವತಿ ಮಾಡುವಾಗ ಏನಾದರೂ ಸಮಸ್ಯೆಯಾದರೆ ಚಾಲಕರು, ಮಾಲೀಕರಿಗೆ ಕರೆ ಮಾಡಿ ಹೇಳುತ್ತಾರೆ. ಅವರು ಹಣ ಪಾವತಿ ಮಾಡುವವರೆಗೂ ವಾಹನ ಟೋಲ್‌ನಲ್ಲೇ ನಿಲ್ಲಬೇಕಾಗುತ್ತದೆ. ಇಂಥ ಹಲವು ಘಟನೆಗಳು ಇಂದು ಸಾಮಾನ್ಯವಾಗಿಬಿಟ್ಟಿವೆ' ಎಂದೂ ಸಿಬ್ಬಂದಿ ಹೇಳಿದರು.

ಮುಖ್ಯಾಂಶಗಳು

- ಫಾಸ್ಟ್ಯಾಗ್ ತಿಳಿವಳಿಕೆ ಇಲ್ಲದೇ ಗೊಂದಲ
- ಬಹುತೇಕರು ಇದುವರೆಗೂ ಫಾಸ್ಟ್ಯಾಗ್ ಸ್ಟಿಕರ್ ಪಡೆದುಕೊಂಡಿಲ್ಲ
- ಸ್ಟಿಕರ್ ಪಡೆದ ಕೆಲವರು ಬ್ಯಾಂಕ್ ಖಾತೆಯಲ್ಲಿ ಹಣ ನಿರ್ವಹಣೆ ಮಾಡುತ್ತಿಲ್ಲ

ಶಿವಮೊಗ್ಗದ ರೈಲು ಬೆಳಿಗ್ಗೆ 5ಕ್ಕೆ ಬೆಂಗಳೂರಿಗೆ

ಶಿವಮೊಗ್ಗ: 'ಶಿವಮೊಗ್ಗದಿಂದ ರಾತ್ರಿ ಹೊರಟು ಬೆಳಿಗ್ಗೆ 3.45ಕ್ಕೆ ಬೆಂಗಳೂರು ತಲುಪುತ್ತಿದ್ದ ರೈಲು ಸಾರ್ವಜನಿಕರ ಅನುಕೂಲಕ್ಕಾಗಿ ಬೆಳಿಗ್ಗೆ 5ಕ್ಕೆ ತಲುಪಲಿದೆ. ಪ್ರತಿದಿನ ಬೆಳಿಗ್ಗೆ 5.30ಕ್ಕೆ ಹೊರಡುತ್ತಿದ್ದ ಜನಶತಾಬ್ದಿ ಯಶವಂತಪುರ ತಲುಪುತ್ತಿತ್ತು. ಈಗ ಮೆಜೆಸ್ಟಿಕ್‌ಗೆ ತಲುಪಲಿದೆ' ಎಂದು ಸಂಸದ ಬಿ.ವೈ. ರಾಘವೇಂದ್ರ ಮಾಹಿತಿ ನೀಡಿದರು.

ಶಿವಮೊಗ್ಗ ರೈಲು ನಿಲ್ದಾಣದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರೈಲ್ವೆ ಮಾರ್ಗದ ₹ 116.31 ಕೋಟಿ ವೆಚ್ಚದ ಮೂರು ಮೇಲು ಸೇತುವೆ ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.

'ತಾತ್ಕಾಲಿಕವಾಗಿ ಸ್ಥಗಿತಗೊಂಡಿರುವ ಚೆನ್ನೈ, ತಿರುಪತಿ ರೈಲು ಸಂಚಾರ ಪುನರಾರಂಭಗೊಳಿಸಲು ರೈಲ್ವೆ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಶೀಘ್ರ ಆರಂಭಗೊಳ್ಳುವ ನಿರೀಕ್ಷೆ ಇದೆ. ಅಲ್ಲದೇ ಡಿಆರ್‌ಡಿಒ ಕೇಂದ್ರವನ್ನು ಶಿವಮೊಗ್ಗದಲ್ಲಿ ಆರಂಭಿಸುವಂತೆ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಅವರಲ್ಲಿ ಮನವಿ ಮಾಡಿಕೊಳ್ಳಲಾಗಿದೆ. ₹ 160 ಕೋಟಿ ವೆಚ್ಚದಲ್ಲಿ ಜೋಗ ಅಭಿವೃದ್ಧಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ' ಎಂದರು.

ಪೊಲೀಸ್ ಠಾಣೆ ಸಮೀಪದ ಮೋರಿಯಲ್ಲಿ ಅಸ್ಥಿಪಂಜರ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಸಂಚಾರ ಪೊಲೀಸ್ ಠಾಣೆ ಸಮೀಪದಲ್ಲಿರುವ ಮೋರಿಯೊಂದರಲ್ಲಿ ಸೋಮವಾರ ಅಸ್ಥಿಪಂಜರ ಪತ್ತೆಯಾಗಿದ್ದು, ಅದು ಯಾರದ್ದು ಎಂಬುದನ್ನು ತಿಳಿಯಲು ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ನಾಲ್ಕು ವರ್ಷಗಳ ಹಿಂದೆ ಮೃತಪಟ್ಟಿರುವ ವ್ಯಕ್ತಿಯ ಅಸ್ಥಿಪಂಜರವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಂಚಾರ ಠಾಣೆಯಿಂದ 50 ಮೀಟರ್ ದೂರದಲ್ಲಿ ಎಚ್‌ಬಿಆರ್ ಕಲ್ಯಾಣ ಮಂಟಪವಿದ್ದು, ಅದರ ಬಳಿಯ ಮೋರಿಯಲ್ಲಿ ಅಸ್ಥಿಪಂಜರವಿತ್ತು. ಕಲ್ಲು ಹಾಗೂ ಮಣ್ಣಿನಿಂದ ಮೋರಿ ಮುಚ್ಚಿಕೊಂಡಿತ್ತು. ಇತ್ತೀಚೆಗೆ ಮೋರಿ ಸ್ವಚ್ಛಗೊಳಿಸಲು ಕಲ್ಲು ತೆಗೆಯಲಾಗಿತ್ತು. ಮಣ್ಣು ಕೊಚ್ಚಿಕೊಂಡು ಹೋಗಿ ಅಸ್ಥಿಪಂಜರ ಕಂಡಿದೆ.'

'ನಾಲ್ಕು ವರ್ಷಗಳಹಿಂದೆ ಬಿಬಿಎಂಪಿ ಸಿಬ್ಬಂದಿ, ಮೋರಿ ಕಾಮಗಾರಿ ನಡೆಸಿ ಮೇಲ್ಭಾಗದಲ್ಲಿ ಕಲ್ಲು ಹಾಕಿದ್ದರು. ಅದೇ ವೇಳೆ ವ್ಯಕ್ತಿಯ ಮೃತದೇಹವನ್ನು ಮೋರಿಯಲ್ಲಿ ಹಾಕಿರುವ ಅನುಮಾನವಿದೆ. ಜೊತೆಗೆ, ಮಳೆಗಾಲದಲ್ಲಿ ನೀರಿನೊಂದಿಗೆ ತೇಲಿಕೊಂಡು ಬಂದು ಮೃತದೇಹ ಮೋರಿಯಲ್ಲಿ ಸಿಲುಕಿಕೊಂಡಿರುವ ಸಾಧ್ಯತೆಯೂ ಇದೆ. ಎಲ್ಲ ಆಯಾಮದಲ್ಲಿ ತನಿಖೆ ನಡೆಸಲಾಗುತ್ತಿದೆ. ಇದು ಕೊಲೆಯೋ ಅಥವಾ ಬೇರೆ ಏನಾದರೂ ಆಗಿದೆಯೋ ಎಂಬುದು ತನಿಖೆಯಿಂದ ಗೊತ್ತಾಗಬೇಕಿದೆ' ಎಂದೂ ಮೂಲಗಳು ತಿಳಿಸಿವೆ.

'ಅಸ್ಥಿಪಂಜರ, ಅದರ ಬಳಿ ಸಿಕ್ಕ ವಸ್ತುಗಳು ಹಾಗೂ ಸ್ಥಳದಲ್ಲಿರುವ ಮಣ್ಣನ್ನು ಸಂಗ್ರಹಿಸಿ ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಮೃತಪಟ್ಟ ವ್ಯಕ್ತಿ ಯಾರು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ನಾಲ್ಕು ವರ್ಷಗಳಿಂದ ನಾಪತ್ತೆಯಾಗಿರುವ ವ್ಯಕ್ತಿಗಳು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ಕಾಣೆಯಾದ ವ್ಯಕ್ತಿಗಳ ಸಂಬಂಧಿಕರು ಯಾರಾದರೂ ಇದ್ದರೆ ಪೊಲೀಸರನ್ನು ಸಂಪರ್ಕಿಸಬಹುದು' ಎಂದೂ ಮೂಲಗಳು ಹೇಳಿವೆ.

ಅಕ್ಕನಿಗೆ ಹೊಡೆದಿದ್ದಕ್ಕೆ ಭಾವನ ಕೊಲೆ

ಬೆಂಗಳೂರು: ಅಕ್ಕನ ಮೇಲೆ ಹಲ್ಲೆ ಮಾಡಿದನೆಂಬ ಕಾರಣಕ್ಕೆ ತನ್ನ ಭಾವನನ್ನೇ ಕೊಲೆ ಮಾಡಿರುವ ಘಟನೆ ನಂದಿನಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಈ ಸಂಬಂಧ ಭಾಮೈದನನ್ನು ಪೊಲೀಸರು ಬಂಧಿಸಿದ್ದಾರೆ.

'ಜೈಮಾರುತಿ ನಗರ ನಿವಾಸಿ ಹಾಜಿ ಮಲಂಗ್‌ಖಾನ್ (45) ಕೊಲೆ ಆಗಿದೆ. ಈ ಪ್ರಕರಣದಲ್ಲಿ ಕೂಲಿನಗರದ ನಿವಾಸಿಯಾಗಿರುವ ಆರೋಪಿ ಖಾದರ್ ಖಾನ್‌ನನ್ನು (24) ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಮುಂಬೈನ ಹಾಜಿ ಮಲಂಗ್‌ಖಾನ್, ಕೆಲಸ ಹುಡುಕಿಕೊಂಡು 15 ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. ಆರ್‌ಎಂಸಿ ಯಾರ್ಡ್‌ನಲ್ಲಿರುವ ಲಾರಿ ಗ್ಯಾರೇಜ್‌ನಲ್ಲಿ ಕೆಲಸಕ್ಕೆ ಸೇರಿದ್ದರು. ಆರೋಪಿ ಖಾದರ್ ಖಾನ್‌ನ ಅಕ್ಕ ಶಾಹೀನಾ ಅವರನ್ನು ಕೆಲ ವರ್ಷಗಳ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ.'

'ಮದ್ಯವ್ಯಸನಿಯಾಗಿದ್ದ ಹಾಜಿ ಮಲಂಗ್‌ಖಾನ್, ನಿತ್ಯವೂ ಪತ್ನಿ ಜೊತೆ ಜಗಳ ತೆಗೆದು ಹಲ್ಲೆ ಮಾಡುತ್ತಿದ್ದರು. ಇದರಿಂದ ಬೇಸತ್ತ ಪತ್ನಿ ಶಾಹೀನಾ, ನಂದಿನಿ ಲೇಔಟ್ ಠಾಣೆಗೆ ದೂರು ನೀಡಿದ್ದರು. ಆ ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ನಡೆಯುತ್ತಿದೆ' ಎಂದೂ ಪೊಲೀಸರು ತಿಳಿಸಿದರು.

ಖಾದರ್ ಖಾನ್

'ಪತಿಯಿಂದ ದೂರವಾಗಿದ್ದ ಶಾಹೀನಾ, ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸವಿದ್ದರು. ಭಾನುವಾರ ಶಾಹೀನಾ ಮನೆಗೆ ಬಂದಿದ್ದ ಹಾಜಿ ಮಲಂಗ್‌ಖಾನ್, ಗಲಾಟೆ ಮಾಡಿದ್ದರು. ಮನೆಯಲ್ಲಿದ್ದ ಖಾದರ್ ಖಾನ್, ಭಾವನಿಗೆ ಎಚ್ಚರಿಕೆ ನೀಡಿ ವಾಪಸು ಕಳುಹಿಸಿದ್ದರು. ಮದ್ಯ ಕುಡಿದು ತಡರಾತ್ರಿ ಪುನಃ ಮನೆಗೆ ಬಂದಿದ್ದ ಹಾಜಿ ಮಲಂಗ್‌ಖಾನ್, ಪತ್ನಿ ಮೇಲೆ ಹಲ್ಲೆ ಮಾಡಿದ್ದರು. ಅಕ್ಕ ಕರೆ ಮಾಡಿ ತಿಳಿಸುತ್ತಿದ್ದಂತೆ ಸ್ನೇಹಿತರ ಜೊತೆ ಮನೆಗೆ ಬಂದಿದ್ದ ಖಾದರ್ ಖಾನ್, ಹಾಜಿ ಮಲಂಗ್‌ಖಾನ್ ತಲೆಗೆ ಹಾಲೋಬ್ರಿಕ್ಸ್ ಇಟ್ಟಿಗೆಯಿಂದ ಹೊಡೆದಿದ್ದ. ತೀವ್ರ ರಕ್ತಸ್ರಾವವಾಗಿ ಹಾಜಿ ಮಲಂಗ್‌ಖಾನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದೂ ಪೊಲೀಸರು ಹೇಳಿದರು.

'ಘಟನೆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿದ್ದ ಸಿಬ್ಬಂದಿ, ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ಆರೋಪಿಯನ್ನು ಬಂಧಿಸಿದ್ದು, ಆತ ತಪ್ಪೊಪ್ಪಿಕೊಂಡಿದ್ದಾನೆ' ಎಂದೂ ತಿಳಿಸಿದರು.

ಕುಂದುಕೊರತೆಗಳ ಪರಿಹಾರ: ಬಿಬಿಎಂಪಿ ಕಾಯ್ದೆ–2020ರಲ್ಲಿ ಉಲ್ಲೇಖ

ವಲಯಕ್ಕೊಂದು ಪ್ರಾಧಿಕಾರ ಇರಲಿ

• ಪ್ರವೀಣ್ ಕುಮಾರ್ ಪಿ.ವಿ.

ಬಿಬಿಎಂಪಿ ಕಾಯ್ದೆ
ಬಡಕಲು ಬಿಂಬ? 5

ಬೆಂಗಳೂರು: ಆಡಳಿತ ವ್ಯವಸ್ಥೆಯ ಸಾಮರ್ಥ್ಯ ಮತ್ತು ಕಾರ್ಯಕ್ಷಮತೆ ಹೇಗಿದೆ ಎಂಬುದು ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಪರಿಹಾರೋಪಾಯ ಕಂಡುಕೊಳ್ಳುವ ವಿಚಾರದಲ್ಲಿ ಹೇಗೆ ಸ್ಪಂದಿಸುತ್ತಾರೆ ಎಂಬುದರ ಮೂಲಕ ವ್ಯಕ್ತವಾಗುತ್ತದೆ. ‘ಕುಂದು ಕೊರತೆ ಪ್ರಾಧಿಕಾರ’ ರಚಿಸುವ ಪ್ರಸ್ತಾಪವು ಅಂಧಕಾರದ ನಡುವೆ ಕೋಲ್ಮಿಂಚಿನಂತೆ ‘ಬಿಬಿಎಂಪಿ ಕಾಯ್ದೆ –2020’ರಲ್ಲಿ ಕಾಣಿಸಿಕೊಂಡಿದೆ.

ಬಿಬಿಎಂಪಿ ಆಡಳಿತ ವ್ಯವಸ್ಥೆಯದ್ದು ದಪ್ಪ ಚರ್ಮ. ಗಬ್ಬೆದ್ದು ಹೋಗಿರುವ ಊರಿನ ಕೆರೆಗಳನ್ನು ಸ್ವಚ್ಛಗೊಳಿಸುವ ಜವಾಬ್ದಾರಿ ತಮ್ಮದು ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಚಾಟಿ ಬೀಸುವವರೆಗೆ ಬಿಬಿಎಂಪಿಗೆ ಅನಿಸುವುದೇ ಇಲ್ಲ. ನಗರವನ್ನು ಕುರೂಪ ಗೊಳಿಸಿರುವ ಅನಧಿಕೃತ ಜಾಹಿರಾತುಗಳನ್ನು ಸ್ವಯಂಪ್ರೇರಿತವಾಗಿ ತೆರವು ಗೊಳಿಸಬೇಕು ಎಂದು ಹೈಕೋರ್ಟ್ ಆದೇಶ ಮಾಡುವವರೆಗೆ ಗೊತ್ತಾಗುವುದೇ ಇಲ್ಲ. ರಸ್ತೆಗಳೆಲ್ಲ ಗುಂಡಿಮಯವಾಗಿ ಜನರ ಪ್ರಾಣವನ್ನೇ ನುಂಗುತ್ತಿದ್ದರೂ ಅವುಗಳನ್ನು ಮುಚ್ಚಲು ಬಿಬಿಎಂಪಿ ಕ್ರಮ ಕೈಗೊಳ್ಳಬೇಕಾದರೆ ಹೈಕೋರ್ಟ್ ಕಟ್ಟುನಿಟ್ಟಿನ ಸೂಚನೆ ನೀಡಬೇಕಾಗುತ್ತದೆ. ಶಕ್ತಿಯುತವಾದ ‘ಕುಂದು ಕೊರತೆ ಪ್ರಾಧಿಕಾರ’ ರಚನೆ ಆಗಿದ್ದೇ ಆದರೆ, ಅದು ಸಕ್ರಿಯವಾಗಿ ಹಾಗೂ ಸ್ವತಂತ್ರವಾಗಿ ಕಾರ್ಯನಿರ್ವಹಿಸಿದ್ದೇ ಆದರೆ ಜನರ ಗೋಳುಗಳಿಗೆ ಒಂದಿಷ್ಟು ಪರಿಹಾರ ಸಿಗಬಹುದು ಎಂಬ ಭರವಸೆ ಜನರಲ್ಲಿ ಮೂಡಿದೆ.

ಬಿಬಿಎಂಪಿ ಕಾಯ್ದೆಯಲ್ಲಿ 368ರಿಂದ374ರವರೆಗಿನ ಸೆಕ್ಷನ್‌ಗಳಲ್ಲಿ ಕುಂದು ಕೊರತೆಗಳ ಪರಿಹಾರ ಪ್ರಾಧಿಕಾರದ (ಅರೆ ನ್ಯಾಯಾಂಗ ಪ್ರಾಧಿಕಾರ) ಸಂರಚನೆ ಮತ್ತು ನಿರ್ವಹಣೆಯ ನಿಬಂಧನೆಗಳನ್ನು ಉಲ್ಲೇಖಿಸಲಾಗಿದೆ. ಇದೊಂದು ಸ್ವಾಗತಾರ್ಹ ಬೆಳವಣಿಗೆ ಎನ್ನುತ್ತಾರೆ ನಗರ ಯೋಜನಾ ತಜ್ಞರು.

ಆದರೆ, 709 ಚದರ ಕಿ.ಮೀ. ಪ್ರದೇಶದ ವ್ಯಾಪ್ತಿಯನ್ನು ಹೊಂದಿರುವ ಹಾಗೂ 1.39 ಕೋಟಿ ಜನಸಂಖ್ಯೆಯನ್ನು ಹೊಂದಿರುವ ಬಿಬಿಎಂಪಿಗೆ ಒಂದು ಕುಂದುಕೊರತೆ ಪ್ರಾಧಿಕಾರ ಸಾಕೇ ಎಂಬುದು ಪ್ರಶ್ನೆ ವಲಯ ಕ್ಕೊಂದು ಕುಂದುಕೊರತೆ ಪ್ರಾಧಿಕಾರ ರಚಿಸಿದ್ದೇ ಆದರೆ ಆಡಳಿತ ವ್ಯವಸ್ಥೆಯನ್ನು ಇನ್ನಷ್ಟು ಜನಸ್ನೇಹಿಯಾಗಿ ರೂಪಿಸ ಬಹುದು ಎಂದು ಸಲಹೆ ನೀಡುತ್ತಾರೆ ಸೆಂಟರ್ ಫಾರ್ ಅರ್ಬನ್ ಗವರ್ನನ್ಸ್ ಸ್ಟಡೀಸ್ ಆ್ಯಂಡ್ ಪಾಲಿಸಿ ರಿಸರ್ಚ್ ಸಂಸ್ಥೆಯ ನಿರ್ದೇಶಕ ಸಿ.ಆರ್.ರವೀಂದ್ರ.

‘ಈ ಪ್ರಾಧಿಕಾರದ ಪ್ರತಿ ವಲಯಕ್ಕೊಂದು ಶಾಖೆಯನ್ನು ಹೊಂದಿದ್ದರೆ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬಲ್ಲುದು ಹಾಗೂ ಜನರ ನಿರೀಕ್ಷೆಗಳನ್ನು ಈಡೇರಿಸಬಲ್ಲುದು’ ಎಂದು ಅವರು ಅಭಿಪ್ರಾಯಪಟ್ಟರು.

ಜನರ ದೂರು ದುಮ್ಮಾನ ಆಲಿಸುವುದಕ್ಕೆಂದೇ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಸಹಾಯವಾಣಿಗಳಿವೆ (080–22660000 ಹಾಗೂ 9480685700). ಇದಲ್ಲದೇ ಪ್ರತಿ ವಲಯ ಮಟ್ಟದಲ್ಲಿ ಪ್ರತ್ಯೇಕ ಸಹಾಯವಾಣಿಗಳನ್ನು ಒದಗಿಸಲಾಗಿದೆ. ಮಳೆ ಅಥವಾ ಪ್ರವಾಹದ ಸಂದರ್ಭದಲ್ಲಿ ಅವಾಂತರಗಳು ಸೃಷ್ಟಿಯಾದಾಗ ಲಷ್ಟೇ ಇವು ಹೆಚ್ಚು ಸಕ್ರಿಯವಾಗಿರುವುದನ್ನು ಕಾಣಬಹುದು. ಇವುಗಳಲ್ಲದೇ, ‘ಸಹಾಯ 2.0’ ಆ್ಯಪ್ ಅನ್ನು ಕೂಡಾ ಬಿಬಿಎಂಪಿ ಹೊಂದಿದೆ. ಜನರು ಮೊಬೈಲ್‌ನಲ್ಲಿ ಹೇಳಿಕೊಳ್ಳುವ ದೂರು ದುಮ್ಮಾನಗಳನ್ನು ಆಲಿಸಿ, ಪರಿ ಹಾರ ಕಾರ್ಯ ಕೈಗೊಂಡು ಅದರ ಕುರಿತು ದೂರುದಾರರಿಗೆ ಮಾಹಿತಿ ನೀಡುವ ವ್ಯವಸ್ಥೆ ಇರುವ ಆ್ಯಪ್ ಇದು.

ಸಮಸ್ಯೆ ಬಗೆಹರಿಸುವುದಕ್ಕೆ ಇದರಲ್ಲಿ ಕಾಲಮಿತಿಯನ್ನೂ ನಿಗದಿಪಡಿಸಲಾಗುತ್ತದೆ. ಆ ಆ್ಯಪ್‌ನಲ್ಲಿ ದೂರು ನೀಡಿದರೆ, ‘ಸಮಸ್ಯೆಯನ್ನು ಬಗೆಹರಿಸಲಾಗಿದೆ’ ಎಂಬ ಸಂದೇಶ ಮೊಬೈಲ್‌ಗೆ ಬರುತ್ತದೆ. ಅದರೆ, ವಾಸ್ತವದಲ್ಲಿ ಸಮಸ್ಯೆ ಬಗೆಹರಿದಿರುವುದೇ ಇಲ್ಲ ಎಂಬುದು ನಗರದ ನಿವಾಸಿಗಳ ಅಳಲು.

‘ಕುಂದುಕೊರತೆಗಳನ್ನು ಆಲಿಸಲೆಂದೇ ಪ್ರತ್ಯೇಕ ಹಾಗೂ ಸ್ವತಂತ್ರ ಪ್ರಾಧಿಕಾರ ರಚನೆಗೊಂಡರೆ ಮಹತ್ತರ ಬದಲಾವಣೆಗಳು ಆಗಲಿವೆ. ಈ ಪ್ರಾಧಿಕಾರದ ಮುಖ್ಯಸ್ಥರು (ಒಂಬುಡ್ಸ್‌ಮನ್) ದೂರುದಾರರಿಂದ ಮತ್ತು ಬಿಬಿಎಂಪಿ ಅಧಿಕಾರಿಗಳಿಂದ ಪ್ರತಿಕ್ರಿಯೆ ಪಡೆದು ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಕೈ ಗೊಳ್ಳಬೇಕಾಗುತ್ತದೆ. ಅರೆನ್ಯಾಯಿಕ ವ್ಯವಸ್ಥೆಯ ಈ ಪ್ರಾಧಿಕಾರವು ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ನಿರ್ದಿಷ್ಟ ಜವಬ್ದಾರಿಗಳನ್ನು ಗೊತ್ತುಪಡಿಸಿದರೆ, ಬಿಬಿಎಂಪಿ ಅಧಿಕಾರಿಗಳು ಅದಕ್ಕೆ ಬದ್ಧರಾಗಿರಬೇಕಾಗುತ್ತದೆ. ನಿರ್ಲಕ್ಷ್ಯವಹಿಸಿದರೆ ಅವರ ವಿರುದ್ಧ ಕ್ರಮ ಕೈಗೊಳ್ಳುವ ಅಧಿಕಾರವೂ ಪ್ರಾಧಿಕಾರಕ್ಕಿರುತ್ತದೆ’ ಎಂದು ರವೀಂದ್ರ ತಿಳಿಸಿದರು.

‘ನಾಗರಿಕರ ಮೂಲಭೂತ ಹಕ್ಕನ್ನು ಈ ಪ್ರಾಧಿಕಾರ ಖಾತರಿಪಡಿಸಲಿದೆ. ಲೋಕಾಯುಕ್ತ ಸಂಸ್ಥೆಯಂತೆಯೇ ಕಾರ್ಯನಿರ್ವಹಿಸುವ ಈ ಪ್ರಾಧಿಕಾರ ವನ್ನು ನಿಷ್ಪಕ್ಷಪಾತವಾಗಿ ರಚಿಸಿದ್ದೇ ಆದರೆ, ದಕ್ಷತೆಯಿಂದ ಕೆಲಸ ಮಾಡದ ಬಿಬಿಎಂಪಿ ಅಧಿಕಾರಿಗಳನ್ನು ನಿಯಂತ್ರಿಸುವ ಶಕ್ತಿಶಾಲಿ ಸಾಧನವಾಗಿ ಇದು ಬಳಕೆ ಆಗಲಿದೆ’ ಎಂದು ಅವರು ಆಶಾವಾದ ವ್ಯಕ್ತಪಡಿಸಿದರು.

‘ಕುಂದುಕೊರತೆ ಪ್ರಾಧಿಕಾರವನ್ನು ಬಲಿಷ್ಠವಾಗಿ ರೂಪಿಸುವ ಬಗ್ಗೆ ಸರ್ಕಾರ ಕಾಳಜಿಯಿಂದ ರಚಿಸಬೇಕು. ಆಗ ಮಾತ್ರ ಬೆಂಗಳೂರಿನ ಜನರನ್ನು ಕಾಡುತ್ತಿರುವ ಅನೇಕ ಸಮಸ್ಯೆಗಳಿಗೆ ನಿಜವಾದ ಅರ್ಥದಲ್ಲಿ ಪರಿಹಾರ ಕಂಡುಕೊಳ್ಳಲು ಸಾಧ್ಯ’ ಎನ್ನುತ್ತಾರೆ ಸೆಂಟರ್ ಫಾರ್ ಅರ್ಬನ್ ಗವರ್ನನ್ಸ್ ಸ್ಟಡೀಸ್ ಆ್ಯಂಡ್ ಪಾಲಿಸಿ ರಿಸರ್ಚ್ ಸಂಸ್ಥೆಯ ನಿರ್ದೇಶಕ ಪಿ.ಜಿ.ಶೆಣೈ.

ಮುಖ್ಯಾಂಶಗಳು

- ಕುಂದುಕೊರತೆ ಪ್ರಾಧಿಕಾರವು ಅರ್ಜಿದಾರರ ದೂರು ಪರಿಹರಿಸಲು ಅಗತ್ಯವಿರುವ ಯಾವುದೇ ದಾಖಲೆಗಳನ್ನು ಪಾಲಿಕೆಯಿಂದ ಕೇಳಬಹುದು
- ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ ಅಡಿಯಲ್ಲಿ ಸಿವಿಲ್ ನ್ಯಾಯಾಲಯಕ್ಕೆ ನೀಡಲಾದ ಅಧಿಕಾರ ಇದಕ್ಕೂ ಇರಲಿದೆ
- ಕುಂದುಕೊರತೆ ನಿರ್ವಹಣಾ ಪ್ರಾಧಿಕಾರಿಯ ಅಧಿಕಾರದ ಅವಧಿ 5 ವರ್ಷ
- ಪ್ರಾಧಿಕಾರದ ಆದೇಶ ಸಮಾಧಾನ ತಾರದಿದ್ದರೆ 30 ದಿನಗಳ ಒಳಗೆ ಅದನ್ನು ಕರ್ನಾಟಕ ಅಪೀಲುಗಳ ನ್ಯಾಯಮಂಡಳಿಗೆ ಮೇಲ್ಮನವಿ ಸಲ್ಲಿಸಬಹುದು

ವ್ಯಾಪ್ತಿಗೆ ಬರುವ ವಿಚಾರಗಳು

- ರಸ್ತೆ ನಿರ್ವಹಣೆ
- ಬೀದಿದೀಪ ನಿರ್ವಹಣೆ
- ಯಾವುದೇ ಯೋಜನೆಯನ್ನು ಅಥವಾ ಫಲಾನುಭವಿಗಳನ್ನು ಗುರುತಿಸುವುದು
- ಯಾವುದೇ ಯೋಜನೆಯ ಪ್ರಯೋಜನ ಹಂಚಿಕೆ
- ಸ್ವಚ್ಛತೆ ನಿರ್ವಹಣೆ

‘ಪ್ರಾಯೋಗಿಕವಾಗಿ ಒಂದು ಪ್ರದೇಶದಲ್ಲಿ ಅನುಷ್ಠಾನಗೊಳಿಸಿ ಯಶಸ್ವಿಯಾದರೆ ವಿಸ್ತರಿಸಲಿ’

ವರಮಾನದ ಮೇಲಷ್ಟೇ ಕಣ್ಣಿಟ್ಟು ಪಾರ್ಕಿಂಗ್ ನೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಹೊಸ ಪಾರ್ಕಿಂಗ್ ನೀತಿಯನ್ನು ತರಾತುರಿಯಲ್ಲಿ ಜಾರಿಗೊಳಿಸದೆ ಸಾಧಕ ಬಾಧಕಗಳ ಬಗ್ಗೆ ಸರ್ಕಾರ ಚರ್ಚೆ ನಡೆಸಬೇಕು ಮತ್ತು ಪ್ರಾಯೋಗಿಕ ಒಂದು ಪ್ರದೇಶದಲ್ಲಿ ಅನುಷ್ಠಾನಗೊಳಿಸಿ, ಯಶಸ್ವಿಯಾದರೆ ಮಾತ್ರ ಎಲ್ಲ ಪ್ರದೇಶಗಳಿಗೆ ವಿಸ್ತರಿಸಬೇಕು’ ಎಂದು ‘ಸಿಟಿಜನ್ ಆ್ಯಕ್ಷನ್ ಫೋರಂ’ ಸದಸ್ಯ ಡಿ.ಎಸ್. ರಾಜಶೇಖರ್ ಸಲಹೆ ನೀಡಿದರು.

‘ಪ್ರಜಾವಾಣಿ’ ಫೇಸ್‌ಬುಕ್ ಲೈವ್ ಚರ್ಚೆಯಲ್ಲಿ ಮಾತನಾಡಿದ ಅವರು, ‘ಸ್ವಂತ ವಾಹನಗಳನ್ನು ರಸ್ತೆ ಬದಿ ನಿಲ್ಲಿಸಲೂ ಶುಲ್ಕ ನೀಡಬೇಕು ಎಂಬ ಪಾರ್ಕಿಂಗ್ ನೀತಿಯನ್ನು ಏಕಾಏಕಿ ಅನುಷ್ಠಾನಗೊಳಿಸಲು ಆಗುವುದಿಲ್ಲ. ಅದಕ್ಕೂ ಮುನ್ನ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಬೇಕು. ಪರ್ಯಾಯ ವಾಹನ ನಿಲುಗಡೆ ತಾಣದ ವ್ಯವಸ್ಥೆ ಮಾಡಬೇಕು. ಅದ್ಯಾವುದನ್ನೂ ಮಾಡದೆ ವರಮಾನದ ಮೇಲಷ್ಟೇ ಕಣ್ಣಿಟ್ಟುಕೊಂಡು ನೀತಿಗಳನ್ನು ಜಾರಿಗೆ ತಂದರೆ ಹೇಗೆ’ ಎಂದು ಪ್ರಶ್ನಿಸಿದರು.

‘ಕೋವಿಡ್ ಕಾರಣದಿಂದ ಜನ ಉದ್ಯೋಗ ಇಲ್ಲದೆ ತತ್ತರಿಸಿ ಹೋಗಿದ್ದಾರೆ. ಅವರಿಗೆ ನೆರವಾಗುವ ಬದಲು ಅವರ ಮೇಲೆ ಹೊರೆ ಹೇರಲು ಸರ್ಕಾರ ಹೊರಟಿದೆ. ಈ ನೀತಿ ಜಾರಿಗೆ ನಾವು ಅವಕಾಶ ಕೊಡುವುದಿಲ್ಲ. ನಗರ ಭೂಸಾರಿಗೆ ನಿರ್ದೇಶನಾಲಯ(ಡಲ್ಟ್) ನೀಡಿರುವ ಶಿಫಾರಸುಗಳನ್ನು ಬಿಬಿಎಂಪಿ ಅಧಿಕಾರಿಗಳು ಸಂಪೂರ್ಣವಾಗಿ ಓದಬೇಕು. ಅದನ್ನು ಬಿಟ್ಟು ಸರ್ಕಾರಕ್ಕೆ ವರಮಾನ ಬರಲಿದೆ ಎಂಬ ಕೊನೆಯ ಒಂದೇ ಒಂದು ಸಾಲನ್ನು ಓದಿಕೊಂಡು ಮುಂದುವರಿದರೆ ಬೆಂಗಳೂರಿನ ಜನ ರೊಚ್ಚಿಗೇಳಲಿದ್ದಾರೆ’ ಎಂದರು.


ಡಿ.ಎಸ್.ರಾಜಶೇಖರ್

‘ರಸ್ತೆ ಬದಿಯಲ್ಲಿ ವಾಹನ ನಿಲುಗಡೆ ಆಗುತ್ತಿರುವುದಕ್ಕೆ ಹೊಣೆಯನ್ನು ಬಿಬಿಎಂಪಿ ಹೊರಬೇಕೇ ಹೊರತು ಸಾರ್ವಜನಿಕರಲ್ಲ. ನಿಯಮಗಳನ್ನು ಉಲ್ಲಂಘಿಸಿ ಮನೆಗಳನ್ನು ನಿರ್ಮಿಸಿಕೊಳ್ಳಲು ಅವಕಾಶ ಕೊಟ್ಟವರು ಅಧಿಕಾರಿಗಳು. ಈಗ ಜನರ ಮೇಲೆ ಭಾರ ಹೊರಿಸಲು ಮುಂದಾಗಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಹೊಸ ಪಾರ್ಕಿಂಗ್ ನೀತಿ ಜಾರಿಗೆ ಬಂದರೆ ರಸ್ತೆ ಬದಿಯಲ್ಲಿ ವಾಹನ ನಿಲುಗಡೆ ಇಲ್ಲವಾಗಿ ಸುಗಮ ಸಂಚಾರಕ್ಕೆ ಅನುಕೂಲವಾಗಲಿದೆ, ಸಾರ್ವಜನಿಕ ಸಾರಿಗೆ ಬಳಕೆ ಹೆಚ್ಚಾಗಿ ವಾಯು ಮಾಲಿನ್ಯ ಕಡಿಮೆಯಾಗಲಿದೆ ಎಂದು ಬಿಬಿಎಂಪಿ ಹೇಳುತ್ತಿದೆ. ಇವರ ಕಲ್ಪನೆಯೇ ಬೇರೆ, ವಾಸ್ತವಾಂಶವೇ ಬೇರೆ’ ಎಂದು ಹೇಳಿದರು.

‘ಏಕೆಂದರೆ, ಯಾವ ಬಡಾವಣೆಗಳಲ್ಲೂ ವಾಹನ ನಿಲುಗಡೆಗೆ ಪರ್ಯಾಯ ವ್ಯವಸ್ಥೆ ಇಲ್ಲ. ಕಾರು ಮಾಲೀಕರು ಅನಿವಾರ್ಯವಾಗಿ ಶುಲ್ಕ ಪಾವತಿಸಿ ಮನೆ ಮುಂದೆಯೇ ವಾಹನ ನಿಲ್ಲಿಸಿಕೊಳ್ಳುತ್ತಾರೆ. ಸಾರ್ವಜನಿಕ ಸಾರಿಗೆ ಕೊನೆಯ ತಾಣಕ್ಕೆ ಸಂಪರ್ಕ ಇಲ್ಲದ ಕಾರಣ ಕಾರು ಮತ್ತು ಬೈಕ್‌ಗಳನ್ನು ಉಪಯೋಗಿಸಲೇಬೇಕಾದ ಅನಿವಾರ್ಯತೆ ಇದೆ. ಸಮಸ್ಯೆಯ ಮೂಲಗಳನ್ನು ಸರಿಪಡಿಸದೆ ಕೇವಲ ಶುಲ್ಕ ವಿಧಿಸುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಹೊಸ ಪಾರ್ಕಿಂಗ್ ನೀತಿ ಮತ್ತೊಂದು ರೀತಿಯ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡಲಿದೆ’ ಎಂದು ಅವರು ಪ್ರತಿಪಾದಿಸಿದರು.

ಪ್ರಜಾವಾಣಿ ಸಂವಾದ

‘ದುರಾಲೋಚನೆಯಿಂದ ಕೂಡಿರುವ ನೀತಿ’

‘ಪಾರ್ಕಿಂಗ್ ಸಮಸ್ಯೆಯನ್ನು ನಗರಕ್ಕೆ ತಂದಿಟ್ಟಿರುವುದೇ ಬಿಬಿಎಂಪಿ. ತನ್ನ ತಪ್ಪು ಮುಚ್ಚಿಕೊಳ್ಳಲು ಈಗ ದುರಾಲೋಚನೆಯಿಂದ ಕೂಡಿರುವ ಪಾರ್ಕಿಂಗ್ ನೀತಿ 2.0 ಜಾರಿಗೆ ತರಲು ಹೊರಟಿದೆ’ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಸಹ ಸಂಚಾಲಕಿ ಶಾಂತಲಾ ದಾಮ್ಲೆ ಕಿಡಿ ಕಾರಿದರು.

‘ಕಟ್ಟಡಗಳನ್ನು ನಿರ್ಮಿಸುವಾಗ ನಿಯಮಗಳ ಪ್ರಕಾರ ವಾಹನಗಳ ನಿಲುಗಡೆಗೆ ಅವಕಾಶ ಕಲ್ಪಿಸಿಕೊಳ್ಳಬೇಕು. ಆದರೆ, ನಿಯಮ ಉಲ್ಲಂಘಿಸಿ ಕಟ್ಟಡ ನಕ್ಷೆ ಇದೆಯೇ ಎಂಬುದನ್ನು ಗಮನಿಸದ ಅಧಿಕಾರಿಗಳು ಅನುಮೋದನೆ ನೀಡುತ್ತಿದ್ದಾರೆ. ಸ್ವಾಧೀನಾನುಭವ ಪ್ರಮಾಣ ಪತ್ರ (ಒ.ಸಿ) ನೀಡುವಾಗಲೂ ಅದನ್ನು ಗಮನಿಸಿಲ್ಲ ಎಂದರೆ ಲಂಚ ಪಡೆದು ಒ.ಸಿ ನೀಡಿದ್ದಾರೆ ಎಂದೇ ಅರ್ಥ’ ಎಂದರು.

‘ನಿಯಮ ಉಲ್ಲಂಘಿಸಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿರುವವರ ವಿರುದ್ಧ ಕ್ರಮ ಕೈಗೊಳ್ಳಲಿ. ಅದಕ್ಕೂ ಮೊದಲು ಈ ರೀತಿಯ ಕಟ್ಟಡಗಳ ನಿರ್ಮಾಣಕ್ಕೆ ಯಾವ ಅಧಿಕಾರಿ ಕಾರಣ ಎಂಬುದನ್ನು ಪತ್ತೆ ಹಚ್ಚಿ ಅವರಿಂದಲೂ ದಂಡ ವಸೂಲಿ ಮಾಡಲಿ. ಪಾರ್ಕಿಂಗ್ ಶುಲ್ಕದಿಂದ ಬರುವ ವರಮಾನಕ್ಕಿಂತ ಹೆಚ್ಚು ಆದಾಯ ಸರ್ಕಾರಕ್ಕೆ ಬರಲಿದೆ’ ಎಂದು ಹೇಳಿದರು.

‘ಆಟೋಚಾಲಕರು, ತಳ್ಳುವ ಗಾಡಿ ಇಟ್ಟುಕೊಂಡು ಜೀವನ ನಡೆಸುವವರು ಇದ್ದಾರೆ. ಮೊದಲೇ ಅವರು ಚಿಕ್ಕ ಮನೆಗಳಲ್ಲಿ ವಾಸವಿದ್ದಾರೆ. ಅವರು ಮನೆಯೊಳಗೆ ವಾಹನ ನಿಲುಗಡೆ ಸಾಧ್ಯವೇ, ಡೆಲಿವರಿ ಬಾಯ್‌ಗಳು ತಮ್ಮ ವಾಹನಗಳನ್ನು ಎಲ್ಲಿ ನಿಲ್ಲಿಸಿ ಮನೆ–ಮನೆಗೆ ವಸ್ತುಗಳನ್ನು ತಲುಪಿಸಬೇಕು, ಯಾವುದೋ ದೇಶದಲ್ಲಿ ಈ ರೀತಿಯ ಪಾರ್ಕಿಂಗ್ ವ್ಯವಸ್ಥೆ ಇರಬಹುದು. ಅಷ್ಟರ ಮಟ್ಟಿನ ಸೌಕರ್ಯವನ್ನು ನಮ್ಮ ಸರ್ಕಾರಗಳು ಕಲ್ಪಿಸಿವೆಯೇ’ ಎಂದು ಪ್ರಶ್ನಿಸಿದರು.

‘ಇನ್ನು ಬಿಟಿಎಸ್‌ನಿಂದ ಬಿಎಂಟಿಸಿ ಆದ ಬಳಿಕ ಬಸ್‌ಗಳ ಬಣ್ಣ ಬದಲಾಯಿತೇ ಹೊರತು, ಸುಧಾರಣೆ ಕಾಣಲಿಲ್ಲ. ಬಸ್ ಹತ್ತಬೇಕೆಂದರೆ ಆಟೋರಿಕ್ಷಾ ಅಥವಾ ಟ್ಯಾಕ್ಸಿ ಹಿಡಿದು ನಿಲ್ದಾಣಗಳಿಗೆ ಬರಬೇಕು. ಕೊನೆಯ ತಾಣಕ್ಕೆ ಬಸ್ ವ್ಯವಸ್ಥೆ ಇಲ್ಲ. ಬೆಂಗಳೂರಿನ ಜನರು ಮೋಜಿಗಾಗಿ ಕಾರುಗಳನ್ನು ರಸ್ತೆಗೆ ಇಳಿಸುತ್ತಿಲ್ಲ. ಅನಿವಾರ್ಯವಾಗಿ ಕಾರು ಮತ್ತು ಬೈಕ್‌ಗಳನ್ನು ಬಳಕೆ ಮಾಡುತ್ತಿದ್ದಾರೆ’ ಎಂದರು.

‘ವಾರ್ಡ್ ಮತ್ತು ಏರಿಯಾ ಮಟ್ಟದಲ್ಲಿ ಸಭೆಗಳನ್ನು ನಡೆಸಿ ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಿ ಬಳಿಕ ಅವರಿಗೆ ಅಗತ್ಯ ಇರುವ ಯೋಜನೆಗಳನ್ನು ರೂಪಿಸಬೇಕು. ನಿಯಮ ರೂಪಿಸಿ ಬಳಿಕ ಜನರ ಬಳಿ ಕೊಂಡೊಯ್ಯುವುದು ಪಾಲಿಕೆಯ ಆಡಳಿತದ ವೈಖರಿಯಲ್ಲ’ ಎಂದು ಹೇಳಿದರು.

‘ಪ್ರತಿ ಏರಿಯಾದಲ್ಲೂ ಬಹುಮಹಡಿ ಕಟ್ಟಡಗಳನ್ನು ಕಟ್ಟಿ ಸಾರ್ವಜನಿಕರ ವಾಹನ ನಿಲುಗಡೆಗೆ ಉಚಿತವಾಗಿ ಅವಕಾಶ ನೀಡಬೇಕು. ಅದ್ಯಾವುದನ್ನೂ ಮಾಡದೆ ಕೇವಲ ಶುಲ್ಕ ವಸೂಲಿಗೆ ಮುಂದಾಗುವುದು ಸರಿಯಲ್ಲ. ಈ ನೀತಿ ಜಾರಿಗೆ ನಾವು ಅವಕಾಶ ಕೊಡುವುದೂ ಇಲ್ಲ’ ಎಂದರು.

ಶಾಂತಲಾ ದಾಮ್ಲೆ

ಕೋವಿಡ್–19: ಮಹಾರಾಷ್ಟ್ರದಲ್ಲಿ ಮತ್ತೆ ಪರಿಸ್ಥಿತಿ ಗಂಭೀರ

ಮುಂಬೈ, ಔರಂಗಾಬಾದ್(ಪಿಟಿಐ): ಮಹಾರಾಷ್ಟ್ರದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿದ್ದು, ಪರಿಸ್ಥಿತಿ ಗಂಭೀರವಾಗುತ್ತಿದೆ ಎಂದು ರಾಜ್ಯ ಸರ್ಕಾರ ಹೇಳಿದೆ.

ಮಹಾರಾಷ್ಟ್ರದಲ್ಲಿ ಸೋಮವಾರ 3,365 ಹಾಗೂ ಭಾನುವಾರ 4,092 ಪ್ರಕರಣಗಳು ದೃಢಪಟ್ಟಿವೆ. ಸೋಮ ವಾರ ಸೋಂಕಿನಿಂದ 23 ರೋಗಿಗಳು ಮೃತಪಟ್ಟರೆ 3,100 ಮಂದಿ ಗುಣಮುಖರಾಗಿದ್ದಾರೆ.

’ಕೆಲವು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಹೆಚ್ಚುತ್ತಿವೆ. ಆದರೂ, ಜನರು ಕೋವಿಡ್–19 ನಿಯಮಾವಳಿಗಳನ್ನು ಪಾಲಿಸುತ್ತಿಲ್ಲ. ಹೀಗಾಗಿ, ಕಠಿಣ ನಿರ್ಧಾರ ಕೈಗೊಳ್ಳುವುದು ಅನಿವಾರ್ಯವಾಗಲಿದೆ’ ಎಂದು ಉಪ ಮುಖ್ಯಮಂತ್ರಿ ಅಜೀತ್ ಪವಾರ್ ತಿಳಿಸಿದ್ದಾರೆ.

ಪರಿಸ್ಥಿತಿಯ ಪರಾಮರ್ಶೆ ನಡೆಸಲು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಮಂಗಳವಾರ ಹಿರಿಯ ಅಧಿಕಾರಿಗಳು ಮತ್ತು ತಜ್ಞರ ಸಭೆ ಕರೆದಿದ್ದಾರೆ.

ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ಅಮರಾವತಿಯಲ್ಲಿ ಫೆಬ್ರುವರಿ ಆರಂಭದಿಂದಲೇ ರಾತ್ರಿ ಕರ್ಫ್ಯೂ ಹೇರಲಾಗಿದೆ. ಆದರೆ, ಹೊಸದಾಗಿ ಲಾಕ್‌ಡೌನ್ ಜಾರಿ ಗೊಳಿಸುವ ಉದ್ದೇಶ ಇಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಂಗ್ರೆಸ್ ಸೇರಲು ವರ್ತೂರು ತೀರ್ಮಾನ

ಕೋಲಾರ: ‘ಬೆಂಬಲಿಗರು ಹಾಗೂ ಕಾರ್ಯಕರ್ತರ ಒತ್ತಾಯದಂತೆ ಕಾಂಗ್ರೆಸ್ ಸೇರಲು ತೀರ್ಮಾನಿಸಿದ್ದು, ಈಗಾಗಲೇ ಆ ಪಕ್ಷದ ಮುಖಂಡರೊಂದಿಗೆ ಚರ್ಚಿಸಿದ್ದೇನೆ. ಸದ್ಯದಲ್ಲೇ ಅಂತಿಮ ನಿರ್ಧಾರವಾಗಲಿದೆ’ ಎಂದು ಮಾಜಿ ಸಚಿವ ವರ್ತೂರು ಪ್ರಕಾಶ್ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಬಿಜೆಪಿ ಕಂಡರೆ ನನಗೆ ಮೊದಲಿನಿಂದಲೂ ಆಗುವುದಿಲ್ಲ. ಜೆಡಿಎಸ್ ಸಹವಾಸ ಬೇಡ. ನನ್ನನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಕಾಂಗ್ರೆಸ್ ಮುಖಂಡರು ಒಪ್ಪದಿದ್ದರೆ ಹೊಲಿಗೆ ಯಂತ್ರದ ಗುರುತಿನಲ್ಲಿ ರಾಜಕೀಯ ಮುಂದುವರಿಸುತ್ತೇನೆ’ ಎಂದರು.

‘ವಿಧಾನಸಭೆ ಚುನಾವಣೆಗೆ 26 ತಿಂಗಳು ಬಾಕಿಯಿದೆ. ಯಾರ ಬಗ್ಗೆಯೂ ಹೆಚ್ಚು ಮಾತನಾಡುವುದಿಲ್ಲ. ಶಾಸಕನಾಗುವುದಷ್ಟೇ ನನ್ನ ಗುರಿ. ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ‘ನಮ್ಮ ಕಾಂಗ್ರೆಸ್’ ಪಕ್ಷದಿಂದ ಗೆಲ್ಲಲು ಸಾಧ್ಯವಾಗಲಿಲ್ಲ. ನನಗೆ 54 ವರ್ಷ ವಯಸ್ಸಾಗಿದ್ದು, ಒಂದಷ್ಟು ಕಾಲ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಲ್ಲಿ ಇರಬೇಕೆಂದು ಬಯಸಿದ್ದೇನೆ. ಜತೆಗೆ ಕಾರ್ಯಕರ್ತರ ಒತ್ತಾಯವೂ ಇದೆ’ ಎಂದರು.

‘ಸಿದ್ದರಾಮಯ್ಯ ನನ್ನ ರಾಜಕೀಯ ಗುರು. ಅವರ ಹಾದಿಯಲ್ಲೇ ಸಾಗುತ್ತೇನೆ. ಅಹಿಂದ ಸಮಾವೇಶಕ್ಕೆ ನನ್ನ ಬೆಂಬಲವಿದ್ದು, ಅವರು ಒಪ್ಪಿದರೆ ಕೋಲಾರ ಕ್ಷೇತ್ರದಲ್ಲೇ 2 ಲಕ್ಷಕ್ಕೂ ಹೆಚ್ಚು ಮಂದಿಯನ್ನು ಸೇರಿಸಿ ಸಮಾವೇಶ ನಡೆಸಲು ಸಿದ್ಧ’ ಎಂದು ಅವರು ಘೋಷಿಸಿದರು.

> ಗ್ರಾ.ಪಂ. ಚುನಾವಣೆಯಲ್ಲಿ ಜೆಡಿಎಸ್‌ನವರು ನೈತಿಕತೆ ಇಲ್ಲದೆ ಹಣ ಪ್ರಯೋಗ ಮಾಡಿ ವಿಫಲರಾಗಿದ್ದಾರೆ. ನಮ್ಮ ಸದಸ್ಯರು ಬಂಡೆಯ ರೀತಿ ಉಳಿದರೆ ಹೊರತು ಹಣಕ್ಕೆ ಮಾರಾಟವಾಗಿಲ್ಲ
> **ವರ್ತೂರು ಪ್ರಕಾಶ್,** ಮಾಜಿ ಸಚಿವ

ಅವಿರೋಧವಾಗಿ ಆಯ್ಕೆಯಾದ ಹಂಸವೇಣಿ ಮಂಜುನಾಥ್ ಹಾಗೂ ವಿ.ಗೀತಾ ಶಂಕರ್ ಅವರನ್ನು ಗ್ರಾಮ ಪಂಚಾಯಿತಿ ಸದಸ್ಯರಾದ ಎನ್‌ಕೆ.ಮಹೇಶ್ ಕುಮಾರ್, ಬೈರೇಗೌಡ, ನಾಗರಾಜ್, ಚೇತನ್, ಪ್ರಕಾಶ್ ಮತ್ತಿತರರು ಅಭಿನಂದಿಸಿದರು

ದೊಡ್ಡಜಾಲ ಗ್ರಾ.ಪಂ–ಅಧ್ಯಕ್ಷೆ, ಉಪಾಧ್ಯಕ್ಷೆ ಅವಿರೋಧ ಆಯ್ಕೆ

ಯಲಹಂಕ: ದೊಡ್ಡಜಾಲ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಹಂಸವೇಣಿ ಮಂಜುನಾಥ್ ಹಾಗೂ ಉಪಾಧ್ಯಕ್ಷರಾಗಿ ವಿ.ಗೀತಾ ಶಂಕರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಕ್ಕಾಗಿ ಸೋಮವಾರ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಬೇಗೂರು ವಾರ್ಡ್ ಸದಸ್ಯೆ ಹಂಸವೇಣಿ ಮತ್ತು ನವರತ್ನ ಅಗ್ರಹಾರ ವಾರ್ಡ್ ಸದಸ್ಯೆ ಗೀತಾ ಅವರಿಬ್ಬರು ಮಾತ್ರ ನಾಮಪತ್ರ ಸಲ್ಲಿಸಿದ್ದರು. ಅಧ್ಯಕ್ಷ ಸ್ಥಾನ ಬಿಸಿಎಂ-ಎ(ಮಹಿಳೆ) ಹಾಗೂ ಉಪಾಧ್ಯಕ್ಷ ಸ್ಥಾನ ಎಸ್.ಸಿ (ಮಹಿಳೆ) ವರ್ಗಕ್ಕೆ ಮೀಸಲಾಗಿತ್ತು.

ಗ್ರಾಮ ಪಂಚಾಯಿತಿ ಸದಸ್ಯರಾದ ಎನ್.ಕೆ.ಮಹೇಶ್ ಕುಮಾರ್, ಬೈರೇಗೌಡ, ನಾಗರಾಜ್, ಚೇತನ್, ಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

‘ಅಭಿವ್ಯಕ್ತಿ ಸ್ವಾತಂತ್ರ್ಯ ದಮನಕ್ಕೆ ಚೀನಾದ ಮಾದರಿ’

ಪರಿಸರ ಕಾರ್ಯಕರ್ತೆ ದಿಶಾ ರವಿ ಬಂಧನಕ್ಕೆ ಇತಿಹಾಸಕಾರ ರಾಮಚಂದ್ರ ಗುಹಾ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು:‘ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು (ಕೇಂದ್ರ ಸರ್ಕಾರ) ಚೀನಾ ಮಾದರಿಯನ್ನು ಅನುಸರಿಸುತ್ತಿದ್ದು, ತುರ್ತುಪರಿಸ್ಥಿತಿಯ ಬಳಿಕ ದೇಶ ಅತ್ಯಂತ ಕೆಟ್ಟ ಸನ್ನಿವೇಶವನ್ನು ಎದುರಿಸುತ್ತಿದೆ’ ಎಂದು ಇತಿಹಾಸಕಾರ ರಾಮಚಂದ್ರ ಗುಹಾ ಆತಂಕ ವ್ಯಕ್ತಪಡಿಸಿದರು.

ಪರಿಸರ ಕಾರ್ಯಕರ್ತೆ ದಿಶಾ ರವಿ ಬಂಧನವನ್ನು ವಿರೋಧಿಸಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಕೇಂದ್ರ ಸರ್ಕಾರದ ನಡೆ ಅತ್ಯಂತ ಕರಾಳವಾದುದು. ಭಾರತೀಯ ಸಮಾಜ ಎಷ್ಟು ಅಧಃಪತನಕ್ಕೆ ಹೋಗಿದೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ. ಒಬ್ಬ ಹೆಣ್ಣು ಮಗಳು ಪರಿಸರ ರಕ್ಷಣೆ ಮತ್ತು ರೈತರ ಹೋರಾಟಕ್ಕೆ ಬೆಂಬಲ ನೀಡಿ, ಸರ್ಕಾರವನ್ನು ವಿರೋಧಿಸಿದ ಕಾರಣಕ್ಕೆ ಆಕೆಯನ್ನು ಬಂಧಿಸಿ, ಹಿಂಸಿಸಲಾಗಿದೆ. ಈ ದೇಶದ ಯುವ ಜನರಿಗೆ ಗೃಹ ಸಚಿವರು ಇದೇ ಸಂದೇಶ ನೀಡಲು ಬಯಸಿದ್ದಾರೆ. ಇದು ಚೀನಾ ಮಾದರಿ’ ಎಂದು ಹೇಳಿದರು.

‘ಯುವತಿಯನ್ನು ಬಂಧಿಸಿ, ದೇಶ ದ್ರೋಹ ಪ್ರಕರಣ ದಾಖಲಿಸಿರುವುದು ವಸಾಹತು ಆಳ್ವಿಕೆಗಿಂತಲೂ ಹೇಯವಾದುದು. ಒಬ್ಬ ಯುವತಿ ತನ್ನ ಅಭಿಪ್ರಾಯ ವ್ಯಕ್ತಪಡಿಸುವಂತಿಲ್ಲವೇ? ಈ ಘಟನೆಯನ್ನು ಖಂಡಿಸಿ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆದಿರುವುದು ಸಂತೋಷ. ಸರ್ಕಾರ ತಕ್ಷಣವೇ ಯುವತಿಯನ್ನು ಬಿಡುಗಡೆ ಮಾಡಬೇಕು. ಇಂದು ಈ ಯುವತಿಗೆ ಆಗಿರುವುದು ಮುಂದೆ ಯಾರಿಗೆ ಬೇಕಾದರೂ ಆಗಬಹುದು. ನಿಮ್ಮ ಪಕ್ಕದಲ್ಲಿರುವವರಿಗೂ ಇದೇ ಗತಿ ಆಗಬಹುದು. ಇದು ಮಾನಸಿಕ ಕ್ಷೋಭೆಯ, ಭಯ ಹುಟ್ಟಿಸುವ ಮತ್ತು ಹಗೆ ಸಾಧಿಸುವ ಸರ್ಕಾರ’ ಎಂದು ಗುಹಾ ಕಿಡಿ ಕಾರಿದರು.

‘ದೇಶದಲ್ಲಿ ಬಿಜೆಪಿಯ ಹೆಸರಿನಲ್ಲಿ ಕಳ್ಳತನಕ್ಕೆ ಅವಕಾಶವಿದೆ. ಆದರೆ, ಪ್ರಜಾಪ್ರಭುತ್ವ, ಮಾನವ ಹಕ್ಕುಗಳು ಮತ್ತು ಪರಿಸರ ಸಮಸ್ಯೆಗಳ ಹೆಸರಿನಲ್ಲಿ ಶಾಂತಿಯುತವಾಗಿ ನಡೆಯುವ ಪ್ರತಿಭಟನೆಗಳು ಅಪರಾಧ’ ಎಂದರು.

ರೈತ ಮುಖಂಡ ಬಡಗಲಪುರ ನಾಗೇಂದ್ರ ಮಾತನಾಡಿ, ‘ದಿಶಾ ರವಿ ಎಲ್ಲೂ ಸಹ ಬಾಂಬ್ ಹಾಕಿಲ್ಲ. ಬಂದೂಕು ಹಿಡಿದಿಲ್ಲ. ದೇಶದ ಮಾಹಿತಿಯನ್ನು ಬೇರೆಡೆ ಸೋರಿಕೆಯೂ ಮಾಡಿಲ್ಲ. ಆದರೂ ಅವರನ್ನು ಉದ್ದೇಶಪೂರ್ವಕವಾಗಿ ಬಂಧಿಸುತ್ತಾರೆ ಎಂದರೆ ಏನರ್ಥ? ಈ ಬಂಧನದ ಮೂಲಕ ಕೇಂದ್ರ ಸರ್ಕಾರ ಪರೋಕ್ಷವಾಗಿ ಹೋರಾಟಗಾರರನ್ನು ಬೆದರಿಸಲು ಮುಂದಾಗಿದೆ’ ಎಂದು ಆರೋಪಿಸಿದರು.

ಶಾಸಕಿ ಸೌಮ್ಯಾ ರೆಡ್ಡಿ,‘ಪ್ರಶ್ನಿಸುವವರ ವಿರುದ್ಧ ಸರ್ಕಾರ ಹೇಗೆ ವರ್ತಿಸುತ್ತಿದೆ ಎಂಬುದಕ್ಕೆ ದಿಶಾ ಬಂಧನ ಸಾಕ್ಷಿ. ಯುವತಿಯನ್ನು ಏಕಾಏಕಿ ದೆಹಲಿಯಿಂದ ಬಂದು ಬಂಧಿಸುತ್ತಾರೆ ಎಂದರೆ ಎಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ‘ ಎಂದು ಪ್ರಶ್ನಿಸಿದರು.

300 ಕ್ಕೂ ಹೆಚ್ಚು ಪ್ರತಿಭಟನಕಾರರು ಭಾಗವಹಿಸಿದ್ದರು. ದಿಶಾ ಬಿಡುಗಡೆಗೆ ಒತ್ತಾಯಿಸಿ ಮನವಿ ಪತ್ರವೊಂದನ್ನು ಪೊಲೀಸ್ ಅಧಿಕಾರಿಗಳಿಗೆ ಹಸ್ತಾಂತರಿಸಿದರು.

ಮುಖ್ಯಾಂಶಗಳು

- ತುರ್ತು ಪರಿಸ್ಥಿತಿ ಬಳಿಕ ದೇಶದ ಕೆಟ್ಟ ಸ್ಥಿತಿ: ಗುಹಾ
- ಭಯ ಹುಟ್ಟಿಸುವ ಸರ್ಕಾರ– ಆರೋಪ

ಪರಿಸರ ಕಾರ್ಯಕರ್ತೆ ದಿಶಾ ರವಿ ಅವರ ಬಿಡುಗಡೆಗೆ ಒತ್ತಾಯಿಸಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ಇತಿಹಾಸಕಾರ ರಾಮಚಂದ್ರ ಗುಹಾ ಹಾಗೂ ಇತರರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಗೋಧ್ರಾ ಹತ್ಯಾಕಾಂಡ: 19 ವರ್ಷಗಳ ಬಳಿಕ ಪ್ರಮುಖ ಆರೋಪಿ ಬಂಧನ

ಅಹಮದಾಬಾದ್ (ಪಿಟಿಐ): ಗೋಧ್ರಾ ರೈಲು ಹತ್ಯಾಕಾಂಡಕ್ಕೆ ಸಂಬಂಧಿಸಿದಂತೆ 19 ವರ್ಷಗಳ ಬಳಿಕ ಪ್ರಮುಖ ಆರೋಪಿಯನ್ನು ಬಂಧಿಸಲಾಗಿದೆ.

ಗೋಧ್ರಾ ನಗರದ ರಫೀಕ್ ಹುಸೇನ್ ಭಾತುಕ್ ಬಂಧಿತ ಆರೋಪಿ. ಈತನೇ ಸಂಚು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಎಂದು ಪಂಚಮಹಲ್ ಪೊಲೀಸ್ ವರಿಷ್ಠಾಧಿಕಾರಿ ಲೀನಾ ಪಾಟೀಲ್ ತಿಳಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಭಾನುವಾರ ರಾತ್ರಿ ಕಾರ್ಯಾಚರಣೆ ನಡೆಸಿದ ಗೋಧ್ರಾ ಪೊಲೀಸರ ತಂಡ, ರೈಲ್ವೆ ನಿಲ್ದಾಣ ಬಳಿಯ ಸಿಗ್ನಲ್ ಫಾಲಿಯಾ ಪ್ರದೇಶದಲ್ಲಿ ಮನೆಯೊಂದರಲ್ಲಿದ್ದ ಭಾತುಕ್‌ನನ್ನು ಬಂಧಿಸಿತು. ಈತ ರೈಲು ಬೋಗಿಗಳಿಗೆ ಬೆಂಕಿ ಹಚ್ಚಲು ಪೆಟ್ರೋಲ್ ವ್ಯವಸ್ಥೆ ಮಾಡಿದ್ದ ಮತ್ತು ಗಲಭೆಗೂ ಪ್ರಚೋದನೆ ನೀಡಿದ್ದ. ತನಿಖೆ ಸಂದರ್ಭದಲ್ಲಿ ಈತನ ಹೆಸರು ಕಾಣಿಸಿಕೊಂಡ ತಕ್ಷಣ ದೆಹಲಿಗೆ ಪರಾರಿಯಾಗಿದ್ದ. ಈತನ ವಿರುದ್ಧ ಕೊಲೆ ಮತ್ತು ಗಲಭೆ ಸೃಷ್ಟಿಸಿದ ಆರೋಪಗಳನ್ನು ಹೊರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

2002ರ ಫೆಬ್ರುವರಿ 27ರಂದು ರೈಲಿಗೆ ಬೆಂಕಿ ಹಚ್ಚಿದ್ದರಿಂದ 59 ಮಂದಿ ಕರಸೇವಕರು ಸಜೀವ ದಹನವಾಗಿದ್ದರು. ಇದು ಗುಜರಾತ್ ಇತಿಹಾಸದಲ್ಲಿ ಭೀಕರ ಕೋಮುಗಲಭೆಗೆ ಕಾರಣವಾಗಿತ್ತು.

ಗೋಧ್ರಾ ರೈಲ್ವೆ ನಿಲ್ದಾಣದಲ್ಲಿ ಭಾತುಕ್ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ. ಬೋಗಿಗಳ ಮೇಲೆ ಕಲ್ಲು ತೂರಾಟ ನಡೆಸಿ ಪೆಟ್ರೋಲ್ ಸುರಿದಿದ್ದ. ಬಳಿಕ ಇತರ ಆರೋಪಿಗಳು ಬೆಂಕಿ ಹಚ್ಚಿದ್ದರು. ಗೋಧ್ರಾದಿಂದ ಪರಾರಿಯಾದ ಮೇಲೆ ದೆಹಲಿಯಲ್ಲಿ ಈತ ರೈಲ್ವೆ ನಿಲ್ದಾಣಗಳಲ್ಲಿ ಮತ್ತು ಕಟ್ಟಡ ನಿರ್ಮಾಣದ ಸ್ಥಳಗಳಲ್ಲಿ ಕೆಲಸ ಮಾಡುತ್ತಿದ್ದ ಎಂದು ಲೀನಾ ಪಾಟೀಲ್ ಮಾಹಿತಿ ನೀಡಿದ್ದಾರೆ.

ಈ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪ ಎದುರಿಸುತ್ತಿರುವ ಸಲೀಂ ಇಬ್ರಾಹಿಂ ಬಾದಾಮ್ ಅಕಾ ಸಲೀಂ ಪನ್ವಾಲಾ, ಶೌಕತ್ ಚರ್ಕಾ ಮತ್ತು ಅಬ್ದುಲ್‌ಮಜೀದ್ ಯೂಸೂಫ್ ಇನ್ನೂ ಪತ್ತೆಯಾಗಿಲ್ಲ. ಈ ಮೂವರು ಪಾಕಿಸ್ತಾನಕ್ಕೆ ಪರಾರಿಯಾಗಿದ್ದಾರೆ ಎನ್ನುವ ವರದಿಗಳಿವೆ ಎಂದು ಅವರು ತಿಳಿಸಿದ್ದಾರೆ.

ಫೆ. 19ರಂದು ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ

ಮತ್ತೆ ಹೋರಾಟಕ್ಕೆ ಸಜ್ಜಾದ ಕುರುಬರು

ಪ್ರಜಾವಾಣಿ ವಾರ್ತೆ

ತುಮಕೂರು: ಪರಿಶಿಷ್ಟ ಪಂಗಡದ ಮೀಸಲಾತಿಗೆ ಒತ್ತಾಯಿಸಿ ಪಾದಯಾತ್ರೆ, ಸಮಾವೇಶ ನಡೆಸಿದ ಕುರುಬ ಸಮುದಾಯದವರು ಈಗ ಮತ್ತೊಮ್ಮೆ ಹೋರಾಟಕ್ಕೆ ಸಜ್ಜಾಗಿದ್ದಾರೆ.

ಮೀಸಲಾತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಫೆ. 19ರಂದು ಬೆಂಗಳೂರಿನ ಮೌರ್ಯ ಹೋಟೆಲ್ ವೃತ್ತದ ಎದುರು ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಡಿ.ವೆಂಕಟೇಶಮೂರ್ತಿ ಇಲ್ಲಿ ಸೋಮವಾರ ತಿಳಿಸಿದರು.

ವೆಂಕಟೇಶ ಮೂರ್ತಿ

ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡದ ಮೀಸಲಾತಿಗೆ ಸೇರ್ಪಡೆ ಮಾಡಲು ಕುಲಶಾಸ್ತ್ರ ಅಧ್ಯಯನದ ವರದಿಯನ್ನು ಸರ್ಕಾರ ಕೂಡಲೇ ತರಿಸಿಕೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

ರಾಜ್ಯದಲ್ಲಿ ಈವರೆಗೆ ಜಿಲ್ಲಾ ಜಾತಿ ಪರಿಶೀಲನಾ ಸಮಿತಿಗಳು ಜಾತಿ ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡುತ್ತಿದ್ದವು. ಆದರೆ ನಾಗರಿಕ ಹಕ್ಕು ಜಾರಿ ನಿರ್ದೇಶನಾ ಲಯದಿಂದ ವರದಿ ಪಡೆದು ಜಾತಿ ಸಿಂಧುತ್ವ ಪ್ರಮಾಣ ಪತ್ರಗಳನ್ನು ನೀಡಬೇಕು ಎಂದು ಸರ್ಕಾರ ಹೊಸದಾಗಿ ಆದೇಶಿಸಿದೆ. ಕೊಡಗು ಹಾಗೂ ಕೆಲ ಜಿಲ್ಲೆಗಳಲ್ಲಿ ಕಾಡು ಕುರುಬ, ಜೇನು ಕುರುಬ ಸೇರಿದಂತೆ ಕುರುಬರ ಐದು ಪಂಗಡಗಳಿಗೆ ಪರಿಶಿಷ್ಟ ಪಂಗಡದ ಮೀಸಲಾತಿ ನೀಡಲಾಗುತ್ತಿದೆ. ಈ ಹೊಸ ಆದೇಶದಿಂದ ಸಮಸ್ಯೆಯಾಗಲಿದ್ದು, ಹಿಂದೆ ಇದ್ದ ನಿಯಮವನ್ನೇ ಅನುಸರಿಸಬೇಕು ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿದ್ದ ಎಚ್.ಕಾಂತರಾಜು ನೀಡಿರುವ ಜಾತಿ ಗಣತಿ ವರದಿಯನ್ನು ಕೂಡಲೇ ಬಿಡುಗಡೆ ಮಾಡಬೇಕು. ಕುಲಶಾಸ್ತ್ರ ಅಧ್ಯಯನ ನಡೆಸಿ, ಹಿಂದುಳಿದ ವರ್ಗಗಳ ಆಯೋಗದ ವರದಿ ಪಡೆಯದೆ ಮುಂದುವರಿದ ಜಾತಿಗಳನ್ನು 2ಎ ಮೀಸಲಾತಿ ಪಟ್ಟಿಗೆ ಸೇರಿಸಬಾರದು. ಕುರುಬರ ಅಭಿವೃದ್ಧಿ ಪ್ರಾಧಿಕಾರ ರಚನೆಮಾಡಿ ₹500 ಕೋಟಿ ಅನುದಾನ ನೀಡಬೇಕು ಎಂದು ಆಗ್ರಹಿಸಿ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದರು.

ಕುರುಬರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಆರ್.ಸುರೇಶ್, ಸಮುದಾಯದ ಮುಖಂಡರಾದ ಡಾ.ಎಂ.ಆರ್. ಹುಲಿನಾಯ್ಕರ್, ರಾಮಚಂದ್ರಪ್ಪ, ಭೀಮರಾಜು, ಚಿಕ್ಕವೆಂಕಟಪ್ಪ, ಕೆಂಪರಾಜು, ಪುಟ್ಟರಾಜು, ಶಂಕರ್ ಇದ್ದರು

ಬಿಹಾರದಲ್ಲಿ ಲಘು ಭೂಕಂಪ

ಪಟ್ನಾ (ಪಿಟಿಐ): ಬಿಹಾರದ ಕೆಲವು ಭಾಗಗಳಲ್ಲಿ ಸೋಮವಾರ ರಾತ್ರಿ ಕಡಿಮೆ ತೀವ್ರತೆಯ ಭೂಕಂಪ ಸಂಭವಿಸಿವೆ. ಆದರೆ, ಯಾವುದೇ ಹಾನಿ ಸಂಭವಿಸಿದ ವರದಿಯಾಗಿಲ್ಲ.

ರಿಕ್ಟರ್ ಮಾಪನದಲ್ಲಿ 3.5ರಷ್ಟು ದಾಖಲಾಗಿದೆ. ರಾತ್ರಿ 9.23ರ ಸುಮಾರಿಗೆ ಭೂಕಂಪ ಸಂಭವಿಸಿದ್ದು, ಪಟ್ನಾ ಸಮೀಪವೇ ಕೇಂದ್ರೀಕೃತವಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಘು ಭೂಕಂಪವಾಗಿದ್ದರಿಂದ ಬಹುತೇಕ ಮಂದಿಗೆ ಯಾವುದೇ ರೀತಿಯ ಅನುಭವವೂ ಆಗಿಲ್ಲ. ಆದರೆ, ಭೂಕಂಪದ ಸುದ್ದಿ ಹಬ್ಬುತ್ತಿದ್ದಂತೆ ಹಲವರು ಸಾಮಾಜಿಕ ಮಾಧ್ಯಮಗಳ ಮೂಲಕ ವಿಷಯವನ್ನು ಹಂಚಿಕೊಂಡಿದ್ದಾರೆ. ‘ಸುರಕ್ಷಿತವಾಗಿರಿ’ ಎನ್ನುವ ಸಂದೇಶಗಳನ್ನು ಕಳುಹಿಸಿದ್ದಾರೆ.

ಮೊಳಕಾಲ್ಮುರು ತಾಲ್ಲೂಕಿನ ಸಿದ್ದಯ್ಯನಕೋಟೆಯಲ್ಲಿ ಸೋಮವಾರ ನಡೆದ ಬಸವತತ್ವ ಸಮಾವೇಶದಲ್ಲಿ ಬೆಂಗಳೂರಿನ ಬಸವ ಸಮಿತಿ ಅಧ್ಯಕ್ಷರಾದ ಅರವಿಂದ ಜತ್ತಿ ಅವರಿಗೆ ಗುರುಕಾರುಣ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅರವಿಂದ ಜತ್ತಿಗೆ ಗುರುಕಾರುಣ್ಯ ಪ್ರಶಸ್ತಿ

ಸಿದ್ದಯ್ಯನಕೋಟೆ (ಮೊಳಕಾಲ್ಮುರು): ಬಸವಣ್ಣ ಅವರ ತತ್ವ ಮತ್ತು ಆದರ್ಶಗಳನ್ನು ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಸ್ಥಳೀಯ ಭಾಷೆಗೆ ಭಾಷಾಂತರ ಮಾಡುವ ಕೆಲಸವಾಗಬೇಕಿದೆ ಎಂದು ಇಳಕಲ್ ಚಿತ್ತರಗಿ ಸಂಸ್ಥಾನ ಮಠದ ಗುರುಮಹಾಂತ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸಿದ್ದಯ್ಯನ ಕೋಟೆ ವಿಜಯ ಮಹಾಂತೇಶ್ವರ ಶಾಖಾ ಮಠದಲ್ಲಿ ಸೋಮವಾರ ಬಸವತತ್ವ ಸಮಾವೇಶದ ನೇತೃತ್ವ ವಹಿಸಿ ಅವರು ಮಾತನಾಡಿದರು.

ಅರವಿಂದ ಜತ್ತಿ ಅವರು ಗುಜರಾತ್‌ನಲ್ಲಿ ಸ್ಥಳೀಯ ಭಾಷೆಗೆ ಬಸವಣ್ಣನವರ ತತ್ವ ಗಳನ್ನು ಭಾಷಾಂತರ ಮಾಡಿಸುವ ಮೂಲಕ ಜನರಿಗೆ ತಲುಪಿಸುವ ಕೆಲಸ ಮಾಡಿದರು. ಜತ್ತಿ ಅವರು ಇಂತಹ ಮಹತ್ತರ ಕಾರ್ಯವನ್ನು ಯಾವ ಪ್ರಚಾರ ಪಡೆಯದೇ ಸದ್ದಿಲ್ಲದೇ ಮಾಡಿರುವುದು ಶ್ಲಾಘನೀಯ ಎಂದರು.

ಮಠದ ಬಸವಲಿಂಗ ಸ್ವಾಮೀಜಿ, ಮತ್ತಿತರರು ಹಾಜರಿದ್ದರು.

ಕೃಷಿ ಕಾಯ್ದೆ: ರಾಜ್ಯದಿಂದ ನ್ಯಾಯಾಂಗ ನಿಂದನೆ

ಶಿರಾ: ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ಅನುಷ್ಠಾನ ಮಾಡುವ ಮೂಲಕ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ನ ಮಧ್ಯಂತರ ಆದೇಶ ಉಲ್ಲಂಘಿಸುವ ಮೂಲಕ ನ್ಯಾಯಾಂಗ ನಿಂದನೆ ಮಾಡುತ್ತಿದೆ ಎಂದು ಮಾಜಿ ಸಚಿವ ಟಿ.ಬಿ.ಜಯಚಂದ್ರ ಆರೋಪಿಸಿದರು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸುವಂತೆ ಒತ್ತಾಯಿಸಿ ರೈತರು 80 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಜೊತೆಗೆ ನ್ಯಾಯಾಲಯದ ಮೆಟ್ಟಿಲು ಹತ್ತಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ಈ ಬಗ್ಗೆ ದಾವೆ ನಡೆಯುತ್ತಿದೆ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜ.12 ರಂದು ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಮುಂದಿನ ಆದೇಶದವರೆಗೆ ಮೂರು ಕಾಯ್ದೆಗಳನ್ನು ಜಾರಿಗೊಳಿಸದಂತೆ ತಡೆಯಾಜ್ಞೆ ನೀಡಿದೆ. ಕೋರ್ಟ್ ತಡೆಯಾಜ್ಞೆ ಇದ್ದರೂ ರಾಜ್ಯ ಸರ್ಕಾರ ಕಾಯ್ದೆ ಜಾರಿಗೆ ಮುಂದಾಗುವ ಮೂಲಕ ನ್ಯಾಯಾಲಯದ ಆದೇಶಕ್ಕೆ ಕಿಂಚಿತ್ತು ಗೌರವ ನೀಡಿಲ್ಲ ಎಂದು ಟೀಕಿಸಿದರು.

‘ಕನಿಷ್ಠ ವೇತನ’ ನೀಡದ 998 ಪ್ರಕರಣಗಳಲ್ಲಿ ₹ 25.25 ಕೋಟಿ ಕ್ಲೈಮ್!

ಸರ್ಕಾರದಲ್ಲಿ 36 ಸಾವಿರ ನೌಕರರು ‘ಹೊರಗುತ್ತಿಗೆ’

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಕಾರ್ಮಿಕ ಇಲಾಖೆ ಸಂಗ್ರಹಿಸಿದ ದತ್ತಾಂಶಗಳ ಪ್ರಕಾರ, ಮಾನವ ಸಂಪನ್ಮೂಲ ಪೂರೈಸುವ 1,117 ಏಜೆನ್ಸಿಗಳ ಮೂಲಕ ನೇಮಕಗೊಂಡ 36,097 ಹೊರಗುತ್ತಿಗೆ ನೌಕರರು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದುಡಿಯುತ್ತಿದ್ದಾರೆ!

ಹೊರಗುತ್ತಿಗೆ ನೌಕರರ ಶೋಷಣೆ ಆರೋಪ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಲೋಕಾಯುಕ್ತ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ವಿಚಾರಣೆ ನಡೆಸುತ್ತಿದ್ದಾರೆ. ಲೋಕಾಯುಕ್ತರ ನಿರ್ದೇಶನದಂತೆ ಕಾರ್ಮಿಕ ಇಲಾಖೆ ಹೊರಗುತ್ತಿಗೆ ನೌಕರರ ಮಾಹಿತಿ ಸಂಗ್ರಹಿಸಿದೆ.

ಹೊರಗುತ್ತಿಗೆ ನೌಕರರ ದತ್ತಾಂಶ ಸಂಗ್ರಹ, ಸೇವಾ ಭದ್ರತೆಗೆ ಯಾವುದೇ ವ್ಯವಸ್ಥೆ ಇಲ್ಲದಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಲೋಕಾಯುಕ್ತರು, ‘ಇ- ಆಡಳಿತ ಇಲಾಖೆ ತಂತ್ರಾಂಶ ಅಭಿವೃದ್ಧಿಪಡಿಸಬೇಕು. ವೇತನ ಮತ್ತು ಸೇವಾ ಭದ್ರತೆ ಒದಗಿಸಲು ಮಾರ್ಗಸೂಚಿ ಹೊರಡಿಸಬೇಕು’ ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ್ದಾರೆ.

ವಿವಿಧ ಇಲಾಖೆಗಳು ಡಾಟಾ ಎಂಟ್ರಿ ಆಪರೇಟರ್, ಚಾಲಕರು, ಸಹಾಯಕರು ಸೇರಿದಂತೆ ‘ಸಿ’ ಮತ್ತು ‘ಡಿ’ ವೃಂದದ ಹುದ್ದೆಗಳಿಗೆ ಏಜೆನ್ಸಿಗಳ ಮೂಲಕ ಹೊರಗುತ್ತಿಗೆ ನೌಕರರನ್ನು ನೇಮಿಸಿಕೊಳ್ಳುತ್ತಿವೆ. ಆದರೆ, ಈ ಇಲಾಖೆಗಳು ನೌಕರರನ್ನು ಜೀತದಾಳುಗಳಂತೆ ದುಡಿಸಿಕೊಂಡರೆ, ಸರ್ಕಾರ ನಿಗದಿಪಡಿಸಿದ ಕನಿಷ್ಠ ವೇತನ ನೀಡದೆ ಏಜೆನ್ಸಿಗಳು ಶೋಷಿಸುತ್ತಿವೆ ಎಂಬ ಆರೋಪವನ್ನು ಲೋಕಾಯುಕ್ತರು ಗಂಭೀರವಾಗಿ ಪರಿಗಣಿಸಿದ್ದಾರೆ.

ಹೊರಗುತ್ತಿಗೆ ನೌಕರರ ದತ್ತಾಂಶಕ್ಕೆ ರಾಜ್ಯ ಸರ್ಕಾರ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಬೇಕು. ವೇತನ, ಸೇವಾ ಭದ್ರತೆ ನೀಡಲು ಮಾರ್ಗಸೂಚಿ ಹೊರಡಿಸಬೇಕು

ಪಿ. ವಿಶ್ವನಾಥ ಶೆಟ್ಟಿ, ಲೋಕಾಯುಕ್ತ ನ್ಯಾಯಮೂರ್ತಿ

ಹೊರಗುತ್ತಿಗೆ ನೌಕರರ ಕನಿಷ್ಠ ವೇತನ ಪಾವತಿ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಲೋಕಾಯುಕ್ತರು ನೀಡಿರುವ ಆದೇಶ ಪಾಲಿಸಲು ಅಗತ್ಯ ಕ್ರಮ.

ಅಕ್ರಂ ಪಾಷಾ, ಆಯುಕ್ತರು, ಕಾರ್ಮಿಕ ಇಲಾಖೆ

‘ವಿವಿಧ ಇಲಾಖೆಗಳಿಂದ ಹೊರಗುತ್ತಿಗೆ ನೌಕರರ ಮಾಹಿತಿ ಸಂಗ್ರಹಿಸಿದ ಸಂದರ್ಭದಲ್ಲಿ, ಕನಿಷ್ಠ ವೇತನ ನೀಡದ 998 ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದ್ದು, ₹ 25,25,30,382 ಕ್ಲೈಮ್ ಮೊತ್ತವನ್ನು ಏಜೆನ್ಸಿಗಳಿಂದ ವಸೂಲಿ ಮಾಡಿ ನೌಕರರಿಗೆ ಮರಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಉಪ ಕಾರ್ಮಿಕ ಆಯುಕ್ತರು ಮತ್ತು ಸಹಾಯಕ ಕಾರ್ಮಿಕ ಆಯುಕ್ತರು ಈ ಪ್ರಕರಣಗಳನ್ನು ಇತ್ಯರ್ಥಪಡಿಸಲಿದ್ದಾರೆ’ ಎಂದು ಕಾರ್ಮಿಕ ಇಲಾಖೆ ಮೂಲಗಳು ತಿಳಿಸಿವೆ.

ಮಂಗಳೂರಿನ ಸರ್ಕೀಟ್ ಹೌಸ್‌ನಲ್ಲಿ ಹೊರಗುತ್ತಿಗೆ ನೌಕರರಿಗೆ ಕಡಿಮೆ ಸಂಬಳ ನೀಡುತ್ತಿರುವ ಕುರಿತ ಪ್ರಕರಣದಲ್ಲಿ ಇಡೀ ರಾಜ್ಯಕ್ಕೆ ಅನ್ವಯಿಸುವಂತೆ, ಮುಖ್ಯ ಕಾರ್ಯದರ್ಶಿ, ಡಿಪಿಎಆರ್ ಕಾರ್ಯದರ್ಶಿಯನ್ನು ಪ್ರತಿವಾದಿಗಳಾಗಿ ಮಾಡಿ ಲೋಕಾಯುಕ್ತರು ಪ್ರಕರಣ ದಾಖಲಿಸಿಕೊಂಡಿದ್ದರು. ವಿಚಾರಣೆ ಸಂದರ್ಭದಲ್ಲಿ, ‘ಇಲಾಖೆಗಳು ಮತ್ತು ಅವುಗಳ ಅಧೀನದಲ್ಲಿರುವ ನಿಗಮ ಮಂಡಳಿ, ಪ್ರಾಧಿಕಾರಗಳಲ್ಲಿರುವ ಹೊರಗುತ್ತಿಗೆ ಕಾರ್ಮಿಕರಿಗೆ ಸಂಬಂಧಿಸಿದಂತೆ ದತ್ತಾಂಶಗಳನ್ನು ಸಿದ್ಧಪಡಿಸಬೇಕು. ಕಾರ್ಮಿಕ ಕಾಯ್ದೆಯಂತೆ ಕನಿಷ್ಠ ವೇತನ ನೀಡಲಾಗುತ್ತಿದೆಯೇ ಎಂದು ಪರಿಶೀಲಿಸಿ, ನೀಡದ ಪ್ರಕರಣಗಳಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಕಾರ್ಮಿಕ ಇಲಾಖೆಗೆ ನಿರ್ದೇಶನ ನೀಡಿದ್ದಾರೆ.

‘ಗುತ್ತಿಗೆ ಕಾರ್ಮಿಕ ಕಾಯ್ದೆ ಅನ್ವಯ 20 ಕ್ಕೂ ಹೆಚ್ಚು ಕಾರ್ಮಿಕರನ್ನು ನೇಮಿಸಿಕೊಳ್ಳುವ ಸಂಸ್ಥೆಗಳು ನಮ್ಮಲ್ಲಿ ನೋಂದಣಿ ಮಾಡಿಕೊಂಡು, ಪರವಾನಗಿ ಪಡೆಯುವ ಅಗತ್ಯವಿಲ್ಲ. ಹೀಗಾಗಿ, ಅಂಥ ಕಡೆಗಳಲ್ಲಿರುವ ನೌಕರರ ದತ್ತಾಂಶ ಲಭ್ಯವಿಲ್ಲ. ಆದರೂ 20ಕ್ಕಿಂತ ಕಡಿಮೆ ಹೊರಗುತ್ತಿಗೆ ನೌಕರರಿರುವ ಇಲಾಖೆಗಳಿಂದಲೂ ಮಾಹಿತಿ ಸಂಗ್ರಹಿಸಿದ್ದೇವೆ’ ಎಂದು ಕಾರ್ಮಿಕ ಇಲಾಖೆಯ ಜಂಟಿ ಆಯುಕ್ತ ರವಿಕುಮಾರ್ ತಿಳಿಸಿದರು.

‘ಹೊರ ಗುತ್ತಿಗೆ ನೌಕರರಿಗೂ ಖಜಾನೆ ಮೂಲಕ ವೇತನ ಪಾವತಿಸಲು ಖಜಾನೆ ಮತ್ತು ಆರ್ಥಿಕ ಇಲಾಖೆ ಕ್ರಮ ತೆಗೆದುಕೊಳ್ಳಬೇಕು. ನೌಕರರ ವೇತನ ಪಾವತಿ ಬಗ್ಗೆ ರ‍್ಯಾಂಡಮ್ ಆಗಿ ಪರಿಶೀಲಿಸಬೇಕು. ಕನಿಷ್ಠ ವೇತನ ನೀಡದ ಏಜೆನ್ಸಿಗಳ ವಿರುದ್ಧ ಕ್ಲೈಮ್ ಪ್ರಕರಣ ದಾಖಲಿಸಿಕೊಳ್ಳಬೇಕು. ಉದ್ಯೋಗ ದಾತರು ಮತ್ತು ಏಜೆನ್ಸಿಗಳು ಒಡಂಬಡಿಕೆ ಮಾಡಿಕೊಳ್ಳಬೇಕು. ಅದನ್ನು ಉಲ್ಲಂಘಿಸಿದ ಏಜೆನ್ಸಿಗಳನ್ನು ತೆಗೆದು ಹಾಕಬೇಕು. ಕಪ್ಪುಪಟ್ಟಿಗೂ ಸೇರಿಸಲು ಕ್ರಮ ತೆಗೆದುಕೊಳ್ಳಬೇಕು ಎಂದೂ ಲೋಕಾಯುಕ್ತರು ಸೂಚಿಸಿದ್ದಾರೆ’ ಎಂದೂ ಹೇಳಿದರು.

‘ಭವಿಷ್ಯ ನಿಧಿ (ಪಿಎಫ್) ಮತ್ತು ನೌಕರರ ವೈದ್ಯಕೀಯ ವಿಮೆ (ಇಎಸ್‌ಐ) ಪಾವತಿ ವಿಷಯ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಹೀಗಾಗಿ, ಪಾವತಿಸದ ವಿಷಯ ಗಮನಕ್ಕೆ ಬಂದರೆ ಕೇಂದ್ರ ಸರ್ಕಾರದ ಸಂಬಂಧಿಸಿದ ಇಲಾಖೆಗೆ ಮಾಹಿತಿ ನೀಡಬೇಕು. ಕಾರ್ಮಿಕ ಇಲಾಖೆಯನ್ನು ಬಲಪಡಿಸಲು, ಖಾಲಿ ಹುದ್ದೆಗಳ ಭರ್ತಿಗೆ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಲೋಕಾಯುಕ್ತರು ಸೂಚಿಸಿದ್ದಾರೆ’ ಎಂದರು.

ಸಮಗ್ರ ವರದಿಗೆ ಸಮಿತಿ ರಚನೆ

ಲೋಕಾಯುಕ್ತರ ನಿರ್ದೇಶನದಂತೆ, ಹೊರಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಪಾವತಿಸುವ ವೇತನ, ಇಎಸ್‌ಐ, ಪಿಎಫ್ ಮತ್ತು ಇತರ ವಿವರಗಳನ್ನು ಒಳಗೊಂಡ ಸಮಗ್ರ ವರದಿಯನ್ನು ಸಲ್ಲಿಸಲು ಕಾರ್ಮಿಕ ಇಲಾಖೆಯ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಾಜ್ಯ ಸರ್ಕಾರ ರಚಿಸಿದೆ. ಸಮಿತಿಗೆ ಹೆಚ್ಚುವರಿ ಕಾರ್ಮಿಕ ಆಯುಕ್ತ ಸದಸ್ಯ, ಜಂಟಿ ಕಾರ್ಮಿಕ ಆಯುಕ್ತ ಸದಸ್ಯ ಕಾರ್ಯದರ್ಶಿ. ಈ ಸಮಿತಿ ಸರ್ಕಾರ ಮತ್ತು ಲೋಕಾಯುಕ್ತರಿಗೆ ವರದಿ ಸಲ್ಲಿಸುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ಸುದ್ದಿ 2 ನಿಮಿಷ

ಮಠ ರಕ್ತ ಸಂಬಂಧದಿಂದ ಮುಕ್ತ

ಚಿತ್ರದುರ್ಗ: ಮುರುಘಾ ಮಠವನ್ನು ರಕ್ತ ಸಂಬಂಧದಿಂದ ಮುಕ್ತಗೊಳಿಸಲು ನಿರ್ಣಯ ಕೈಗೊಳ್ಳಲಾಗಿದೆ. ಮಠದ ಘನತೆ ಮತ್ತು ಗೌರವ ಕಾಪಾಡುವ ಉದ್ದೇಶದಿಂದ ಹತ್ತು ಜನರು ರಾಜೀನಾಮೆ ಸಲ್ಲಿಸಿದ್ದಾರೆ ಎಂದು ಶಿವಮೂರ್ತಿ ಮುರುಘಾ ಶರಣರು ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ನಾಲ್ಕು ತಿಂಗಳ ಹಿಂದೆ ಮಠಕ್ಕೆ ಸಂಬಂಧಿಸಿದಂತೆ ವದಂತಿಯೊಂದು ಹಬ್ಬಿತ್ತು. ಸಣ್ಣ ತಪ್ಪೊಂದು ದೊಡ್ಡ ಅಪರಾಧಕ್ಕೆ ಅವಕಾಶ ಆಗಬಾರದು ಎಂಬ ಉದ್ದೇಶದಿಂದ ಶಿಸ್ತುಕ್ರಮ ಜರುಗಿಸಲಾಗಿದೆ. ಮಠಕ್ಕೆ, ಶರಣರಿಗೆ ಸಾಮಾಜಿಕ ಬದ್ಧತೆ ಇದೆ. ಇದರ ಆಧಾರದ ಮೇರೆಗೆ ಮಠ ಕಟ್ಟಲಾಗುತ್ತಿದೆ’ ಎಂದು ಹೇಳಿದರು.

‘ಮಠದಲ್ಲಿ ಸಾವಿರಾರು ಜನರು ಕಾರ್ಯನಿರ್ವಹಿಸುತ್ತಿದ್ದಾರೆ. ಒಬ್ಬೊಬ್ಬರ ಸ್ವಭಾವ ಭಿನ್ನವಾಗಿರುತ್ತದೆ. ಇತಿ–ಮಿತಿ ಮೀರಿ ನಡೆದುಕೊಳ್ಳುವ ವ್ಯಕ್ತಿಗಳ ವಿರುದ್ಧ ಕ್ರಮ ಕೈಗೊಳ್ಳುವುದು ಅನಿವಾರ್ಯ. ಯಾವುದೇ ಒತ್ತಡಗಳಿಗೂ ಮಣಿಯುವುದಿಲ್ಲ’ ಎಂದು ಮಾಹಿತಿ ನೀಡಿದರು.

ಪ್ರೌಢ ಶಾಲೆಗಳ ಎಸ್‌ಡಿಎಂಸಿಗಳಿಗೆ ಶಾಸಕರ ಬದಲು ಪಾಲಕರೇ ಅಧ್ಯಕ್ಷರು

ಕಲಬುರ್ಗಿ: ರಾಜ್ಯದ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ‘ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ)’ಗಳಿಗೆ ಇನ್ನು ಮುಂದೆ ಶಾಸಕರ ಬದಲಾಗಿ, ಆಯಾ ಶಾಲೆಗಳ ಮಕ್ಕಳ ಪಾಲಕರೇ ಅಧ್ಯಕ್ಷರಾಗಲಿದ್ದಾರೆ.

ಈ ಕುರಿತು ಶಿಕ್ಷಣ ಇಲಾಖೆ ಈಚೆಗೆ ಸುತ್ತೋಲೆ ಹೊರಡಿಸಿದೆ.

‘ಎಸ್‌ಡಿಎಂಸಿಗಳಿಗೆ ಆಯಾ ಕ್ಷೇತ್ರದ ಶಾಸಕರೇ ಅಧ್ಯಕ್ಷರಾಗಬೇಕು ಎಂಬ ನಿಯಮ ಶಾಲಾಭಿವೃದ್ಧಿ ಹಾಗೂ ಆಡಳಿತ ವ್ಯವಸ್ಥೆಗೆ ಪೂರಕವಲ್ಲದ ಕಾರಣ ಬದಲಿಸಲಾಗಿದೆ. ಇನ್ನು ಮುಂದೆ ಆಯಾ ಪ್ರೌಢ ಶಾಲೆ, ಕಾಲೇಜುಗಳಲ್ಲಿ ಓದುತ್ತಿರುವ ಮಕ್ಕಳ ಪಾಲಕರಲ್ಲಿ ಒಬ್ಬರನ್ನು ಅಧ್ಯಕ್ಷರಾಗಿ, ಒಬ್ಬರನ್ನು ಕಾರ್ಯದರ್ಶಿ ಆಗಿ ನೇಮಕ ಮಾಡಲಾಗುವುದು. ಉಳಿದಂತೆ ಸದಸ್ಯರು ಹಾಗೂ ಮುಖ್ಯಶಿಕ್ಷಕರು ಸಮಿತಿಯಲ್ಲಿ ಇರುತ್ತಾರೆ. ಪ್ರಾಥಮಿಕ ಶಾಲೆಗಳಿಗೆ ಅನುಸರಿಸುತ್ತಿರುವ ನಿಯಮಗಳನ್ನೇ ಇನ್ನು ಮುಂದೆ ಪ್ರೌಢಶಾಲೆಗಳು, ಪದವಿ ಪೂರ್ವ ಕಾಲೇಜುಗಳ ಎಸ್‌ಡಿಎಂಸಿಗಳಿಗೂ ಅನ್ವಯಿಸಲಾಗುವುದು’ ಎಂದು ಕಲಬುರ್ಗಿ ಡಿಡಿಪಿಐ ಕಚೇರಿ ಮೂಲಗಳು ತಿಳಿಸಿವೆ.

ಕೃಷಿ ಇಲಾಖೆ ರಾಯಭಾರಿ ದರ್ಶನ್

ದರ್ಶನ್

ಬೆಂಗಳೂರು: ರೈತರ ಹಿತಕ್ಕಾಗಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳ ಪ್ರಚಾರಕ್ಕಾಗಿ ಚಿತ್ರನಟ ದರ್ಶನ್ ಅವರನ್ನು ಕೃಷಿ ಇಲಾಖೆಯ ರಾಯಭಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

ಸಂಭಾವನೆ ಪಡೆಯದೇ ರಾಯಭಾರಿಯಾಗಿ ಕಾರ್ಯ ನಿರ್ವಹಿಸಲು ದರ್ಶನ್ ಒಪ್ಪಿಕೊಂಡಿದ್ದಾರೆ ಎಂದು ಕೃಷಿ ಇಲಾಖೆ ಪ್ರಕಟಣೆ ತಿಳಿಸಿದೆ.

‘ಬಿಪಿಎಲ್ ನಿಯಮ ಬದಲಿಲ್ಲ’

ಒಂದನೇ ಪುಟದಿಂದ

‘ನೀವು ₹2000 ಕ್ಕೆ ಟಿವಿ ಸೆಟ್ ಖರೀದಿಸಬಹುದು. ಇದರ ಆಧಾರದಲ್ಲಿ ಬಿಪಿಎಲ್ ಕಾರ್ಡ್ ರದ್ದು ಮಾಡಿದರೆ, ಬಡವರು ಎಲ್ಲಿಗೆ ಹೋಗಬೇಕು. ಬಿಜೆಪಿಯ ಬಡವರ ವಿರೋಧಿ ನೀತಿಗೆ ಇದು ನಿದರ್ಶನ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿಪಿಎಲ್ ಕಾರ್ಡ್‌ಗೆ ಯಾರು ಅರ್ಹರಲ್ಲ: 2017 ರ ಮಾರ್ಚ್‌ನಲ್ಲಿ ಹೊರಡಿಸಿದ ಆದೇಶದ ಪ್ರಕಾರ, ಬಿಪಿಎಲ್ ಕಾರ್ಡ್ ಪಡೆಯಲು ಅರ್ಹರಲ್ಲದ ಕುಟುಂಬಗಳ ಮಾನದಂಡ–

- ಸರ್ಕಾರ, ಸರ್ಕಾರದಿಂದ ಅನುದಾನ ಪಡೆಯುವ ಸಂಸ್ಥೆಗಳು, ಸರ್ಕಾರಿ ಪ್ರಾಯೋಜಿತ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ನಿಗಮ–ಮಂಡಳಿಗಳ ಕಾಯಂ ನೌಕರರು
- ಆದಾಯ ತೆರಿಗೆ, ವೃತ್ತಿ ತೆರಿಗೆ, ಸೇವಾ ತೆರಿಗೆ ಪಾವತಿಸುವ ಕುಟುಂಬಗಳು
- ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು. ನಗರ ಪ್ರದೇಶಗಳಲ್ಲಿ 1,000 ಚದರಡಿಗಿಂತಲೂ ಹೆಚ್ಚು ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು
- ಜೀವನೋಪಾಯಕ್ಕಾಗಿ ಸ್ವಂತವಾಗಿ ಓಡಿಸುವ ವಾಣಿಜ್ಯ ವಾಹನಗಳಾದ ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿರುವ ಕುಟುಂಬಗಳನ್ನು ಬಿಟ್ಟು, ನಾಲ್ಕು ಚಕ್ರದ ವಾಹನ ಹೊಂದಿರುವ ಕುಟುಂಬಗಳು
- ತಿಂಗಳಿಗೆ 150 ಯುನಿಟ್‌ಗಳಿಗಿಂತಲೂ ಹೆಚ್ಚಿನ ವಿದ್ಯುತ್ ಬಳಕೆ ಮಾಡುವ ಕುಟುಂಬಗಳು
- ವಾರ್ಷಿಕ ಆದಾಯ ₹1.20 ಲಕ್ಷಕ್ಕೂ ಅಧಿಕ ಆದಾಯ ಹೊಂದಿರುವ ಕುಟುಂಬಗಳು

‘ಯಡಿಯೂರಪ್ಪ ಕುಟುಂಬದವರೇ ಹಾವು, ಚೇಳು’

ಪ್ರಜಾವಾಣಿ ವಾರ್ತೆ

ವಿಜಯಪುರ: ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಮನೆಯವರೇ ಹಾವು, ಚೇಳಾಗಿ ತೊಂದರೆ ನೀಡುತ್ತಿದ್ದಾರೆ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ವಿಜಯೇಂದ್ರ ಹೇಳಿಕೆಗೆ ತಿರುಗೇಟು ನೀಡಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವಿಜಯೇಂದ್ರ ಆಡಳಿತದಲ್ಲಿ ಹಸ್ತಕ್ಷೇಪ ಮಾಡುತ್ತ, ಮುಖ್ಯಮಂತ್ರಿಗಳು ಮುಕ್ತವಾಗಿ ಕೆಲಸ ಮಾಡಲು ಬಿಡುತ್ತಿಲ್ಲ. ಸಿ.ಎಂ ಹೆಸರು ಕೆಡಿಸುತ್ತಿರುವವರು ಅವರ ಕುಟುಂಬದವರೇ ಹೊರತು ಹೊರಗಿನವರಲ್ಲ’ ಎಂದು ಟೀಕಿಸಿದರು.

‘ವಿಜಯೇಂದ್ರನ ಕೈಕಾಲು ಒತ್ತುವವರಿಗೆ, ರಾತ್ರಿ ವ್ಯವಸ್ಥೆ ಮಾಡುವ ಚೇಲಾಗಳಿಗೆ ನಿಗಮ, ಮಂಡಳಿ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಪಕ್ಷದ ನಿಷ್ಠಾವಂತರನ್ನು ಕಡೆಗಣಿಸಲಾಗಿದೆ’ ಎಂದು ಆರೋಪಿಸಿದರು.

‘ಪಾಪ, ಯಡಿಯೂರಪ್ಪನವರಿಗೆ ವಯಸ್ಸಾಗಿದೆ. ಅವರಿಗೆ ಏನೂ ತಿಳಿಯುತ್ತಿಲ್ಲ. ವಿಜಯೇಂದ್ರ ಮತ್ತು ಕುಟುಂಬದವರು ಮುಖ್ಯಮಂತ್ರಿ ಅಧಿಕೃತ ನಿವಾಸ ಕಾವೇರಿಯಲ್ಲಿ ಕುಳಿತು ವರ್ಗಾವಣೆ ದಂಧೆ, ವಸೂಲಿ ಕೆಲಸ ಮಾಡಿ ದುರುಪಯೋಗ ಪಡೆಸಿಕೊಳ್ಳುತ್ತಿದ್ದಾರೆ’ ಎಂದರು.

ಬಸನಗೌಡ ಪಾಟೀಲ ಯತ್ನಾಳ

ಯಡಿಯೂರಪ್ಪ ಕುಟುಂಬ ಇತ್ತೀಚೆಗೆ ಮಾರಿಷಸ್‌ಗೆ ವಿಶೇಷ ವಿಮಾನ ತೆಗೆದುಕೊಂಡು ಹೋಗಿದ್ದು ಏಕೆ? ಅಲ್ಲಿ ಇವರದೇನು ಹಣದ ವ್ಯವಹಾರ ನಡೆಯುತ್ತಿದೆ? ಎಂಬುದು ರಾಜ್ಯದ ಜನತೆಗೆ ತಿಳಿಯಬೇಕಾಗಿದೆ ಎಂದು ಆಗ್ರಹಿಸಿದರು.

‘ತಮಗೆ ಬೇಡವಾದವರ ವಿರುದ್ಧ ಅಪಪ್ರಚಾರ ನಡೆಸಲು ವಿಜಯೇಂದ್ರ ಬಳಿ ನಕಲಿ ಫೇಸ್‌ಬುಕ್ ಅಕೌಂಟ್, ನಕಲಿ ಸಿಡಿ ತಯಾರಿಸುವ ದೊಡ್ಡ ಕೇಂದ್ರವೇ ಇದೆ’ ಎಂದು ದೂರಿದರು.

ಮರಳಿ ಭದ್ರತೆ: ಶಾಸಕ ಯತ್ನಾಳ ಅವರಿಗೆ ನೀಡಲಾಗಿದ್ದ ಭದ್ರತೆಯನ್ನು ತಿಂಗಳ ಹಿಂದೆ ಹಿಂಪಡೆದಿದ್ದ ಸರ್ಕಾರ, ಇದೀಗ ಮರಳಿ ಭದ್ರತೆಯನ್ನು ಕಲ್ಪಿಸಿದೆ.

‘ನನಗೆ ಜೀವ ಬೆದರಿಕೆ ಇರುವುದರಿಂದ ಪೊಲೀಸರು ಭದ್ರತೆಯನ್ನು ನೀಡಿದ್ದರು. ಆದರೆ, ದುರುದ್ದೇಶದಿಂದ ಭದ್ರತೆಯನ್ನು ಹಿಂಪಡೆಯಲಾಗಿತ್ತು. ಆದರೆ, ವಾಸ್ತವದ ಅರಿವಿರುವುದರಿಂದ ಪೊಲೀಸರು ಯಾರ ಮಾತನ್ನು ಕೇಳದೇ ಮರಳಿ ಭದ್ರತೆ ಕಲ್ಪಿಸಿದ್ದಾರೆ’ ಎಂದು ಯತ್ನಾಳ ಹೇಳಿದರು.

‘ಟೀಕೆಯ ಪರಿಣಾಮ ಯತ್ನಾಳಗೆ ಮುಂದೆ ಗೊತ್ತಾಗಲಿದೆ’

ಡಾ.ಶಿವರಾಜ ಪಾಟೀಲ

ರಾಯಚೂರು: ‘ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಸರ್ಕಾರದ ವಿರುದ್ಧ ಹೀಗೆಯೇ ಮಾತನಾಡುತ್ತಿದ್ದರೆ ಅದರ ಪರಿಣಾಮ ಏನು ಎಂಬುದು ಅವರಿಗೆ ಮುಂದಿನ ದಿನಗಳಲ್ಲಿ ಗೊತ್ತಾಗುತ್ತದೆ’ ಎಂದು ಶಾಸಕ ಡಾ.ಶಿವರಾಜ ಪಾಟೀಲ ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಯಾವ ಶಾಸಕರಿಗೂ ಸರ್ಕಾರದ ಬಗ್ಗೆ ಬೇಸರ ಆಗಿಲ್ಲ. ಒಂದು ವೇಳೆ ಬೇಸರ ಆಗಿದ್ದರೆ, ಶಾಸಕರೇ ಹೇಳಿಕೊಳ್ಳುತ್ತಿದ್ದರು’ ಎಂದರು.

ರಾಜೀನಾಮೆ ನೀಡಿ ರಾಜ್ಯದ ಮಾನ ಉಳಿಸಿ– ಸುರ್ಜೇವಾಲಾ

ಬೆಂಗಳೂರು: ‘ಪ್ರತಿದಿನ ನಿಮ್ಮ ಸರ್ಕಾರದ ವಿರುದ್ಧ ಹಲವು ಆರೋಪಗಳು ಕೇಳಿಬರುತ್ತಲೇ ಇವೆ. ನಿಮಗೆ ರಾಜ್ಯದ ಹಿತಾಸಕ್ತಿಯ ಕುರಿತು ಕಾಳಜಿ ಇದ್ದರೆ, ದಯಮಾಡಿ ರಾಜೀನಾಮೆ ನೀಡಿ, ರಾಜ್ಯದ ಮಾನ ಉಳಿಸಿ’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಒತ್ತಾಯಿಸಿದ್ದಾರೆ.

ಟ್ವೀಟ್ ಮಾಡಿರುವ ಅವರು, ‘ಇದೀಗ ನಿಮ್ಮದೇ ಪಕ್ಷದ ಶಾಸಕ (ಬಸನಗೌಡ ಪಾಟೀಲ ಯತ್ನಾಳ್) ಐಎಎಸ್ ಅಧಿಕಾರಿಗಳ ವರ್ಗಾವಣೆಯಲ್ಲಿ ನೂರಾರು ಕೋಟಿಯ ಹೋಲ್ ಸೇಲ್ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದ್ದಾರೆ. ಹೀಗಿದ್ದೂ ನೀವು ಆ ಹುದ್ದೆಯಲ್ಲಿ ಮುಂದುವರಿಯುವುದು ಸರಿಯಲ್ಲ’ ಎಂದೂ ಅವರು ಹೇಳಿದ್ದಾರೆ.

ಕೋವಿಡ್ ಲಸಿಕೆ:10,060 ಮಂದಿಗೆ ಎರಡನೇ ಡೋಸ್

ಬೆಂಗಳೂರು: ರಾಜ್ಯದ 30 ಜಿಲ್ಲೆಗಳಲ್ಲೂ ಕೋವಿಡ್ ಲಸಿಕೆಯ ಎರಡನೇ ಡೋಸ್ ವಿತರಣೆ ಸೋಮವಾರ ಆರಂಭಗೊಂಡಿದ್ದು, ನಿಗದಿ ಪಡಿಸಿದ್ದ ಫಲಾನುಭವಿಗಳಲ್ಲಿ 10,060 ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ.

ಕಳೆದ ಜ.16ರಂದು ರಾಜ್ಯದ 243 ಕೇಂದ್ರಗಳಲ್ಲಿ ಲಸಿಕೆ ವಿತರಣೆಗೆ ಚಾಲನೆ ನೀಡಲಾಗಿತ್ತು. ಅಂದು 13 ಸಾವಿರ ಮಂದಿ ಹಾಜರಾಗಿ ಲಸಿಕೆ ಪಡೆದುಕೊಂಡಿದ್ದರು. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದಲ್ಲಿ ಇದೀಗ ಎರಡನೇ ಡೋಸ್ ಪ್ರಾರಂಭಿಸಲಾಗಿದೆ.

ವಿಜಯಪುರ (1,718), ಕೊಡಗು (1,145), ಬೆಂಗಳೂರು ನಗರ (961) ಮಂಡ್ಯ (932) ಜಿಲ್ಲೆಗಳಲ್ಲಿ ಹೆಚ್ಚು ಮಂದಿ ಎರಡನೇ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ. ಶಿವಮೊಗ್ಗ (77), ಬೀದರ್ (26) ಜಿಲ್ಲೆಗಳಲ್ಲಿ ಕಡಿಮೆ ಜನ ಲಸಿಕೆಗೆ ಆಸಕ್ತಿ ತೋರಿದ್ದು, ಬೆಳಗಾವಿಯಲ್ಲಿ ಒಬ್ಬರೂ ಲಸಿಕೆ ಹಾಕಿಸಿಕೊಂಡಿಲ್ಲ.

‘ಮೀಸಲಾತಿ ಹೋರಾಟ ಸಂಘರ್ಷಕ್ಕೆ ನಾಂದಿ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ರಾಜ್ಯದಲ್ಲಿ ಪ್ರಸ್ತುತ ನಡೆಯುತ್ತಿರುವ ಮೀಸಲಾತಿ ಬೇಡಿಕೆ ಹೋರಾಟಗಳು ಭವಿಷ್ಯದಲ್ಲಿ ಜಾತಿಗಳ ಮಧ್ಯೆ ಸಂಘರ್ಷಕ್ಕೆ ದಾರಿಯಾಗಬಹುದು’ ಎಂದು ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಎಚ್ಚರಿಸಿದರು.

‘ಮೀಸಲಾತಿಯ ವಾಸ್ತವಾಂಶ ಅಧಿಕಾರದಲ್ಲಿ ಇರುವ ಸರ್ಕಾರಕ್ಕೇ ಅರ್ಥವಾಗಿಲ್ಲ. ಅಂಬೇಡ್ಕರ್ ತಲತಲಾಂತರದಿಂದ ಅಪಮಾನ, ತುಳಿತಕ್ಕೆ ಒಳಗಾದವರಿಗೆ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ನೆರವಾಗಲು ಮೀಸಲಾತಿ ಬೇಕೆಂದರು. ಇಂದು ಸರ್ಕಾರದ ಸಚಿವರು, ಶಾಸಕರೇ ತಮ್ಮ ಜಾತಿಗಳ ಪರ ಬೀದಿಗಿಳಿದು ಹೋರಾಟ ನಡೆಸುತ್ತಿದ್ದಾರೆ. ಸಂಪುಟ ಸಭೆಯಲ್ಲೇ ನಿರ್ಧರಿಸಬಹುದಾದ ವಿಷಯವನ್ನು ಬೀದಿಗೆ ತಂದು, ಮುಗ್ಧ ಸ್ವಾಮೀಜಿಗಳನ್ನೂ ಬಿಸಿಲಲ್ಲಿ ನೂರಾರು ಕಿ.ಮೀ. ನಡೆಸುತ್ತಿದ್ದಾರೆ’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

‘ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಗೊಂದಲದ ಹೇಳಿಕೆಗಳ ಮೂಲಕ ಜನರ ದಾರಿ ತಪ್ಪಿಸುತ್ತಿದ್ದಾರೆ. ಇಂತಹ ವಿಷಯಗಳ ಕುರಿತು ಸದನದಲ್ಲೂ ಗಂಭೀರ ಚರ್ಚೆಯಾಗುತ್ತಿಲ್ಲ. ಬಿಜೆಪಿ ಸರ್ಕಾರಕ್ಕೆ ಸದನವೂ ಲೆಕ್ಕಕ್ಕಿಲ್ಲ’ ಎಂದು ದೂರಿದರು.

ರಾಜ್ಯದಲ್ಲಿ ಕುಟುಂಬ ಸರ್ಕಾರ: ‘ಬಿಜೆಪಿಯ ಕೇಂದ್ರ ನಾಯಕರೊಬ್ಬರು ಕರ್ನಾಟಕದಲ್ಲಿರುವುದು ಬಿಜೆಪಿ ಸರ್ಕಾರವಲ್ಲ, ಅದು ಯಡಿಯೂರಪ್ಪ ಕುಟುಂಬದ ಸರ್ಕಾರ ಎಂದು ಟೀಕಿಸಿದ್ದಾರೆ. ಅದು ನಿಜವೆಂದು ಭಾಸವಾಗುತ್ತಿದೆ. ಮುಖ್ಯಮಂತ್ರಿ ಜನರ ಮಧ್ಯೆ ಇಲ್ಲ. ಹಾವು, ಚೇಳುಗಳ ಮಧ್ಯೆ ಇದ್ದಾರೆ ಎನ್ನುವುದನ್ನು ವಿಜಯೇಂದ್ರ ಅವರೇ ಒಪ್ಪಿಕೊಂಡಿದ್ದಾರೆ’ ಎಂದು ಹೇಳಿದರು.

ದೇಣಿಗೆ ನೀಡದ ಮನೆಗಳಿಗೆ ಮಾರ್ಕ್!



ಕುಮಾರಸ್ವಾಮಿ

‘ರಾಮಮಂದಿರ ನಿರ್ಮಾಣಕ್ಕಾಗಿ ಸಂಗ್ರಹಿಸುತ್ತಿರುವ ದೇಣಿಗೆಯಲ್ಲೂ ವರ್ಗೀಕರಣ ಕೆಲಸ ನಡೆಯುತ್ತಿದೆ. ದೇಣಿಗೆ ನೀಡದ ಮನೆಗಳ ಮುಂದೆ ಮಾರ್ಕ್ ಹಾಕಲಾಗುತ್ತಿದೆ. ಆ ಮೂಲಕ ಆರ್‌ಎಸ್‌ಎಸ್ ಹಿಟ್ಲರನ ನಾಜಿ ವಾದವನ್ನು ದೇಶದಲ್ಲಿ ಅನುಷ್ಠಾನಗೊಳಿಸುತ್ತಿದೆ. ಈ ಬೆಳವಣಿಗೆ ಮುಂದೆ ಹೊಸದೊಂದು ಸಂಘರ್ಷಕ್ಕೆ ನಾಂದಿಯಾಗಬಹುದು’ ಎಂದು ಕಳವಳ ವ್ಯಕ್ತಪಡಿಸಿದರು.

3 ತಿಂಗಳು ಕರು ಸಾಕಿ ನಂತರ ಗೋಶಾಲೆಗೆ ಬಿಡಿ: ಚವಾಣ್

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಹಸು, ಎಮ್ಮೆ ಕರುಗಳನ್ನು ಗೋಶಾಲೆ ಮುಂದೆ ಬಿಟ್ಟುಹೋಗುತ್ತಿರುವ ಮಾಹಿತಿ ಇದೆ. ರೈತರು ಕಡ್ಡಾಯವಾಗಿ 3 ತಿಂಗಳವರೆಗೆ ಕರುಗಳನ್ನು ಸಾಕಿ, ನಂತರ ಗೋಶಾಲೆಗಳಿಗೆ ಬಿಡಬೇಕು’ ಎಂದು ಪಶುಸಂಗೋಪನಾ ಸಚಿವ ಪ್ರಭು ಚವಾಣ್ ಸೋಮವಾರ ಇಲ್ಲಿ ಹೇಳಿದರು.

‘ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ ಜಾರಿಯಾದ ನಂತರ ಕರುಗಳನ್ನು ಮಾರಾಟ ಮಾಡುವಂತಿಲ್ಲ. ಗಂಡು ಕರುವಾಗಿರಲಿ, ಹೆಣ್ಣು ಕರುವಾಗಿರಲಿ, ರೈತರು ಅವುಗಳನ್ನು ನಿಗದಿತ ಅವಧಿವರೆಗೆ ತಾಯಿಯೊಂದಿಗೆ ಬೆಳೆಯಲು ಬಿಡಬೇಕು. ಈ ಬಗ್ಗೆ ಅಧಿಕಾರಿಗಳು ರೈತರ ಮನವೊಲಿಸಬೇಕು’ ಎಂದರು.

ಪ್ರಭು ಚವಾಣ್

‘ಒತ್ತುವರಿಯಾಗಿರುವ ಗೋಮಾಳಗಳನ್ನು ತಕ್ಷಣವೇ ಬಿಡಿಸಿಕೊಳ್ಳಬೇಕು. ಕಲ್ಲು ಗಣಿಗಾರಿಕೆ ನಡೆಯುತ್ತಿರುವ ಮಾಹಿತಿ ಇದೆ. ಜಿಲ್ಲಾಧಿಕಾರಿಗಳು ತಹಶೀಲ್ದಾರ್ ಸಭೆ ನಡೆಸಿ ಗೋಮಾಳ ಬಿಡಿಸಿಕೊಳ್ಳಲು ಸೂಚನೆ ನೀಡಬೇಕು’ ಎಂದು ತಾಕೀತು ಮಾಡಿದರು.

‘ಕಾಯ್ದೆ ಜಾರಿ ನಂತರ ಆಡು, ಕುರಿ, ಕೋಳಿ ಮಾಂಸಕ್ಕೆ ಅಪಾರ ಬೇಡಿಕೆ ಬಂದಿದೆ. ಆಡು, ಕುರಿ ಸಾಕಣೆಗೆ ಪ್ರೋತ್ಸಾಹ ನೀಡಬೇಕು’ ಎಂದರು.

ಒಬಿಸಿ ಸೇರ್ಪಡೆಗೆ ಕುಂಚಿಟಿಗರ ಒತ್ತಾಯ

ಪ್ರಜಾವಾಣಿ ವಾರ್ತೆ

ಶಿರಾ: ಕುಂಚಿಟಿಗ ಸಮಾಜದ ಕುಲಶಾಸ್ತ್ರ ಅಧ್ಯಯನದ ವರದಿಯನ್ನು ಸಂಪುಟ ಸಭೆಯಲ್ಲಿ ಯಥಾವತ್ತಾಗಿ ಮಂಡಿಸಿ, ಕುಂಚಿಟಿಗ ಸಮಾಜವನ್ನು ಹಿಂದುಳಿದ ವರ್ಗಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಹೊಸದುರ್ಗದ ಕುಂಚಿಟಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶಾಂತವೀರ ಸ್ವಾಮೀಜಿ ಒತ್ತಾಯಿಸಿದ್ದಾರೆ.

ಚಿಕ್ಕನಹಳ್ಳಿ ಗ್ರಾಮದಲ್ಲಿ ಸೋಮವಾರ ನಡೆದ ಜವಲಿಂಗೇಶ್ವರ ಸ್ವಾಮಿ ದೇವಸ್ಥಾನದ ಕಳಸ ಪ್ರತಿಷ್ಠಾಪನೆ ಹಾಗೂ ಧಾರ್ಮಿಕ ಜಾಗೃತಿ ಸಭೆಯ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಚುನಾವಣೆ ಸಮಯದಲ್ಲಿ ಘೋಷಣೆ ಮಾಡಿದಂತೆ ಕುಂಚಿಟಿಗರನ್ನು ಹಿಂದುಳಿದ ವರ್ಗಕ್ಕೆ (ಒಬಿಸಿ) ಸೇರಿಸಲು ಕ್ರಮ ತೆಗೆದುಕೊಳ್ಳಬೇಕು ಎಂದು ಅವರು ಆಗ್ರಹಿಸಿದರು.

ಕೇಂದ್ರ ಸರ್ಕಾರಕ್ಕೆ ವರದಿ ಕಳುಹಿಸಿ ಜನಾಂಗಕ್ಕೆ ಒಬಿಸಿ ಸೌಲಭ್ಯ ದೊರಕಿಸಿಕೊಡುವ ಮೂಲಕ ಕೊಟ್ಟ ಮಾತನ್ನು ಯಡಿಯೂರಪ್ಪನವರು ಉಳಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು.

‘ಕುಂಚಿಟಿಗ ಸಮಾಜಕ್ಕೆ ಕೇಂದ್ರದಲ್ಲಿ ಒಬಿಸಿ ಮೀಸಲಾತಿ ನೀಡುವಂತೆ ಹಲವು ವರ್ಷಗಳಿಂದ ಹೋರಾಟ ನಡೆಸಲಾಗುತ್ತಿದೆ. ಕುಲಶಾಸ್ತ್ರ ಅಧ್ಯಯನ ವರದಿ ಬಂದಿದ್ದು ತಕ್ಷಣ ಕುಂಚಿಟಿಗರಿಗೆ ಒಬಿಸಿ ಮೀಸಲಾತಿ ನೀಡಬೇಕು’ ಎಂದು ಮಾಜಿ ಸಚಿವ ಟಿ.ಬಿ.ಜಯಚಂದ್ರ ಒತ್ತಾಯಿಸಿದರು.

ಶಿರಾ ತಾಲ್ಲೂಕಿನ ಚಿಕ್ಕನಹಳ್ಳಿ ಗ್ರಾಮದಲ್ಲಿ ಸೋಮವಾರ ನಡೆದ ಜವಲಿಂಗೇಶ್ವರ ಸ್ವಾಮಿ ದೇವಸ್ಥಾನದ ಕಳಸ ಪ್ರತಿಷ್ಠಾಪನೆ ಹಾಗೂ ಧಾರ್ಮಿಕ ಜಾಗೃತಿ ಕಾರ್ಯಕ್ರಮದಲ್ಲಿ ಶಾಂತವೀರ ಸ್ವಾಮೀಜಿ, ಮಾಜಿ ಸಚಿವ ಟಿ.ಬಿ.ಜಯಚಂದ್ರ, ಸುರೇಶ್ ಬಾಬು, ಕೆ.ಎಲ್‌.ಮಹದೇವಪ್ಪ ಇದ್ದರು.

ಬಿಸಿಲು ಲೆಕ್ಕಿಸದೇ ಉರುಳಿದ ಕಾಡುಗೊಲ್ಲ ಸಮುದಾಯದವರು

ಎಸ್‌ಟಿ ಮೀಸಲಾತಿಗೆ ಒತ್ತಾಯ: ಉರುಳುಸೇವೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಕಾಡುಗೊಲ್ಲ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ರಾಜ್ಯ ಕಾಡುಗೊಲ್ಲರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರು ಸೋಮವಾರ ‘ಉರುಳು ಸೇವೆ’ಯೊಂದಿಗೆ ಪ್ರತಿಭಟನೆ ನಡೆಸಿದರು.

ಪರಿಶಿಷ್ಟ ಪಂಗಡಕ್ಕೆ ಸೇರಲು ಎಲ್ಲ ಅರ್ಹತೆ ಇದ್ದರೂ ಸಮುದಾಯವನ್ನು ವಂಚಿಸಲಾಗುತ್ತಿದೆ. ಇನ್ನಾದರೂ ಎಸ್‌ಟಿ ಮೀಸಲಾತಿ ಸೌಲಭ್ಯ ದೊರಕಿಸಿಕೊಡಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೆಚ್ಚುವರಿ ಜಿಲ್ಲಾಧಿಕಾರಿ ಬಾಲಕೃಷ್ಣ ಮೂಲಕ ಮನವಿ ರವಾನಿಸಲಾಯಿತು.

ಹಳೆಯ ದಿರಿಸು ತೊಟ್ಟು, ತಲೆಯ ಮೇಲೆ ಟವೆಲ್ ಸುತ್ತಿಕೊಂಡಿದ್ದ ಅನೇಕರು ಉರಿ ಬಿಸಿಲು, ಸುಡುವ ಕಾಂಕ್ರೀಟ್ ರಸ್ತೆಯನ್ನು ಲೆಕ್ಕಿಸದೆ ಉರುಳುಸೇವೆ ಮಾಡಿದರು. ಪ್ರವಾಸಿ ಮಂದಿರದಿಂದ ಆರಂಭವಾದ ಉರುಳುಸೇವೆ ಜಿಲ್ಲಾಧಿಕಾರಿ ಕಚೇರಿ ತಲುಪಿತು. ಮಾರ್ಗ ಮಧ್ಯೆ ‘ಜೈ ಜುಂಜಪ್ಪ, ಜೈ ಕಾಟಪ್ಪ, ಜೈ ಕಾಡುಗೊಲ್ಲ’ ಎಂದು ಘೋಷಣೆ ಕೂಗಿದರು.

ಸಮುದಾಯಕ್ಕೆ ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂದು ಧಿಕ್ಕಾರ ಕೂಗಿದರು. ಕಚೇರಿ ಆವರಣದೊಳಗೆ ಹೋಗಲು ಯತ್ನಿಸಿದಾಗ ಪೊಲೀಸರು ಬ್ಯಾರಿಕೇಡ್‌ಗಳನ್ನು ಅಡ್ಡ ಇಟ್ಟು ತಡೆದರು. ಇದರಿಂದ ಕೆಲಕಾಲ ಮಾತಿನ ಚಕಮಕಿ ನಡೆಯಿತು. ಜಿಲ್ಲಾಧಿಕಾರಿ ಬರುವವರೆಗೂ ಕದಲುವುದಿಲ್ಲ ಎಂದು ಪಟ್ಟುಹಿಡಿದರು. ಕೊನೆಗೆ ಹೆಚ್ಚುವರಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಕಾಡುಗೊಲ್ಲರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ. ಶಿವು ಯಾದವ್, ಮುಖಂಡರಾದ ಮಂಜಪ್ಪ, ದುಮ್ಮಿ ಗೊಲ್ಲರಹಟ್ಟಿ ಚಿತ್ತಪ್ಪ, ನಾಗಶೇಖರ್, ಲಕ್ಷ್ಮೀಕಾಂತ್, ಭರಮಸಾಗರ ಗೊಲ್ಲರಹಟ್ಟಿ ರಾಜಪ್ಪ, ತಿಮ್ಮಣ್ಣ, ಮಹೇಶ್, ಚಿತ್ರಹಳ್ಳಿ ಕಾಟಲಿಂಗಪ್ಪ, ರಮೇಶ್, ಜಾಲಿಕಟ್ಟೆ ಜಗದೀಶ್, ರಾಜ್‌ಕುಮಾರ್, ಸಂಪತ್‌ಕುಮಾರ್, ಎಸ್. ತಿಮ್ಮಯ್ಯ, ಮಂಜುನಾಥ್, ಕುಣಿಗಲ್ ನಾಗಣ್ಣ ಉರುಳುಸೇವೆ ಮಾಡಿದರು.

ಮುಖ್ಯಾಂಶಗಳು

- ಸಮುದಾಯ ಶೈಕ್ಷಣಿಕ, ಆರ್ಥಿಕ, ರಾಜಕೀಯವಾಗಿ ಹಿಂದುಳಿದಿದೆ
- ಮೀಸಲಾತಿ ಸೌಲಭ್ಯದಿಂದ ಮಾತ್ರ ಸಮುದಾಯದ ಅಭಿವೃದ್ಧಿ
- ಸಂಸತ್ ಭವನದ ಮುಂದೆ ಹೋರಾಡಲು ಹಿಂಜರಿಯುವುದಿಲ್ಲ

ಕಾಡುಗೊಲ್ಲ ಸಮುದಾಯಕ್ಕೆ ಪರಿಶಿಷ್ಟ ಪಂಗಡದ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿ ಕಾಡುಗೊಲ್ಲ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರು, ಸಮುದಾಯದವರು ಚಿತ್ರದುರ್ಗದಲ್ಲಿ ಸೋಮವಾರ ಉರುಳುಸೇವೆ ಮೂಲಕ ಪ್ರತಿಭಟನೆ ನಡೆಸಿದರು

ವಿಧಾನಸೌಧ ಮುತ್ತಿಗೆ: ಎಚ್ಚರಿಕೆ

ಕಾಡುಗೊಲ್ಲರ ಆಚಾರ, ವಿಚಾರ ಎಲ್ಲವೂ ಬುಡಕಟ್ಟು ಸಂಸ್ಕೃತಿಯುಳ್ಳ ಪರಿಶಿಷ್ಟ ಪಂಗಡದವರಂತೆಯೇ ಇವೆ. ಇದನ್ನು ಮನಗಂಡು ಎಸ್‌ಟಿ ಮೀಸಲಾತಿ ಕಲ್ಪಿಸದಿದ್ದರೆ ವಿಧಾನಸೌಧ ಮುತ್ತಿಗೆಗೂ ಯತ್ನಿಸುತ್ತೇವೆ ಎಂದು ಸಂಘದ ಅಧ್ಯಕ್ಷ ಸಿ. ಶಿವು ಯಾದವ್ ಎಚ್ಚರಿಕೆ ನೀಡಿದರು.

‘ಕೇಂದ್ರ ಸರ್ಕಾರ ಕಾಡುಗೊಲ್ಲರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಮೀನಾಮೇಷ ಎಣಿಸುತ್ತಿದೆ. ಇದು ನಮ್ಮ ಆರಂಭಿಕ ಹೋರಾಟ. ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ತೀವ್ರಸ್ವರೂಪದ ಹೋರಾಟ ನಡೆಯಲಿದೆ’ ಎಂದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ಧರಣಿ

ಅಪಘಾತ: ಸಿಐಡಿ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಧಾರವಾಡ: ಅಂಕೋಲಾ ತಾಲ್ಲೂಕಿನ ಮಾಸ್ತಿಕಟ್ಟೆ ಬಳಿ ಕೃಷಿ ವಿಶ್ವವಿದ್ಯಾಲಯದ ಮಹಿಳಾ ಉದ್ಯೋಗಿಗಳು ಅಪಘಾತದಲ್ಲಿ ಮೃತಪಟ್ಟಿರುವ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿ ವಿಶ್ವ ಹಿಂದೂ ಪರಿಷತ್ ಪದಾಧಿಕಾರಿಗಳು ಸೋಮವಾರ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ಧರಣಿ ನಡೆಸಿದರು.

ವಿವಿಯ ಮಹಿಳಾ ಸಿಬ್ಬಂದಿ ಮೇಘಾ ಸಿಂಗನಾಥ ಮತ್ತು ರೇಖಾ ಕೊಕಟನೂರ ಎಂಬುವವರು ಅಪಘಾತದಲ್ಲಿ ಮೃತಪಟ್ಟಿದ್ದರು. ವಿಶ್ವವಿದ್ಯಾಲಯದ ಕುಲಪತಿ ಡಾ. ಎಂ.ಬಿ. ಚಟ್ಟಿ ಅವರ ಆಪ್ತ ಸಹಾಯಕ ಮನ್ಸೂರ್ ಮುಲ್ಲಾ ತಮ್ಮ ಕಾರಿನಲ್ಲಿ ಈ ಉದ್ಯೋಗಿಗಳನ್ನು ಬೆದರಿಸಿ ಕರೆದುಕೊಂಡು ಹೋಗಿದ್ದರು ಎಂಬ ಸಂಶಯವಿದೆ ಎಂದು ಧರಣಿ ನಿರತರು ದೂರಿದರು.

ಮನ್ಸೂರ್ ಮುಲ್ಲಾ ಅವರೊಂದಿಗೆ ಇಬ್ಬರೂ ಹೆಣ್ಣು ಮಕ್ಕಳು ತಮ್ಮ ಪಾಲಕರಿಗೆ ಬಾಗಲಕೋಟೆ ಕೃಷಿ ವಿ.ವಿ.ಯಲ್ಲಿ ಕೆಲಸವಿದೆ ಎಂದು ಸುಳ್ಳು ಹೇಳಿ ಹೋಗಿದ್ದರು. ಆದರೆ, ಗೋವಾದಿಂದ ಮರಳುವಾಗ ಅಂಕೋಲಾ ಬಳಿ ಅಪಘಾತದಲ್ಲಿ ಮೃತಪಟ್ಟಿರುವುದು ಮನೆಯವರಿಗೂ ಆತಂಕ ಮೂಡಿಸಿದೆ ಎಂದರು.

ಅಪಘಾತದ ಹಿಂದಿನ ದಿನ ಕುಲಪತಿ ಎಂ.ಬಿ. ಚಟ್ಟಿ ಅವರು ದೆಹಲಿಯಿಂದ ಗೋವಾಕ್ಕೆ ಬಂದಿರುವ ಶಂಕೆ ಇದೆ. ಇದು ತನಿಖೆಯಿಂದ ಹೊರಬರಲಿದ್ದು, ಕುಲಪತಿ ಆಪ್ತ ಕಾರ್ಯದರ್ಶಿ ಮನ್ಸೂರ್ ಮುಲ್ಲಾ ಯಾವ ಉದ್ದೇಶದಿಂದ ವಿ.ವಿ.ಯ ಕಾರು ಬಳಕೆ ಮಾಡಲಿಲ್ಲ ಎಂಬ ಸಂಶಯ ಕಾಡುತ್ತಿದೆ. ಮೃತಪಟ್ಟಿರುವ ಮಹಿಳೆಯರ ಕುಟುಂಬ ಸದಸ್ಯರಿಗೆ ಪರಿಹಾರಾರ್ಥವಾಗಿ ವಿ.ವಿ.ಯಲ್ಲಿ ಉದ್ಯೋಗ ನೀಡಬೇಕು. ಮುಲ್ಲಾ ಅವರನ್ನು ಕೂಡಲೇ ವಜಾಗೊಳಿಸಬೇಕು ಎಂದು ಆಗ್ರಹಿಸಿದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗ ದಳದ ಕಾರ್ಯಕರ್ತರು ಇತ್ತೀಚೆಗೆ ಅಂಕೋಲಾ ತಾಲ್ಲೂಕಿನ ಮಾಸ್ತಿಕಟ್ಟೆ ಬಳಿ ಕೃಷಿ ವಿಶ್ವವಿದ್ಯಾಲಯದ ಮಹಿಳಾ ಉದ್ಯೋಗಿಗಳು ಅಪಘಾತದಲ್ಲಿ ಮೃತಪಟ್ಟಿರುವ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿ ಧರಣಿ ನಡೆಸಿದರು.

‘ಕೃಷಿ ವಿ.ವಿ ವಾಹನವಲ್ಲ’

ಈ ಕುರಿತು ಪ್ರತಿಕ್ರಿಯಿಸಿದ ವಿಶ್ವವಿದ್ಯಾಲಯದ ಕುಲಪತಿ ಡಾ. ಎಂ.ಬಿ. ಚಟ್ಟಿ, ‘ನನ್ನ ಆಪ್ತ ಸಹಾಯಕ ಮನ್ಸೂರ್ ಮುಲ್ಲಾ ಹಾಗೂ ಇಬ್ಬರು ಮಹಿಳಾ ಸಿಬ್ಬಂದಿ ಅನ್ಯ ಕಾರ್ಯದ ಮೇರೆಗೆ ಗೋವಾಕ್ಕೆ ಹೋಗಿದ್ದರು. ವಿಶ್ವವಿದ್ಯಾಲಯದ ವಾಹನ ತೆಗೆದುಕೊಂಡು ಹೋಗಿರಲಿಲ್ಲ. ಅಪಘಾತ ಸಂಭವಿಸಿದ ದಿನ ಕಾರ್ಯದ ಮೇರೆಗೆ ನಾನು ಕೇರಳಕ್ಕೆ ಹೋಗಿದ್ದೆ’ ಎಂದು ಹೇಳಿದರು.

ನಿಧನ ವಾರ್ತೆ

ಬಸವರಾಜ ಆಕಳವಾಡಿ

ಕೊಪ್ಪಳ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಬಸವರಾಜ ಆಕಳವಾಡಿ (70) ಸೋಮವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು, ಪುತ್ರ ಹಾಗೂ ಅಳಿಯ ವಾರ್ತಾ ಇಲಾಖೆಯ ಧಾರವಾಡ ಜಿಲ್ಲಾ ಸಹಾಯಕ ನಿರ್ದೇಶಕ ಮಂಜುನಾಥ ಡೊಳ್ಳಿನ ಇದ್ದಾರೆ.

ಅವರು ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಬೇನಾಳ (ಆರ್.ಎಸ್) ಗ್ರಾಮದವರು. ಅಲ್ಲೇ ಸೋಮವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

ಕೊಪ್ಪಳ ನೂತನ ಜಿಲ್ಲೆಯಾದ ನಂತರ ಇಲ್ಲಿಯೇ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದರು. ಜಿಲ್ಲೆಯ ಸಾಂಸ್ಕೃತಿಕ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದ ಇವರು ತಿರುಳ್ಗನ್ನಡ ಲೇಖಕರ ಸಂಘದ ಸ್ಥಾಪಕರಲ್ಲಿ ಒಬ್ಬರಾಗಿದ್ದರು. ಕರ್ನಾಟಕ ಜಾನಪದ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರೂ ಆಗಿದ್ದರು.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ವಿಪತ್ತು ನಿಧಿ ಅಡಿ 12 ರಾಜ್ಯಗಳಿಗೆ 5 ವರ್ಷಗಳಿಗೆ ₹1,200 ಕೋಟಿ ನಿಗದಿ

ಬರ ಅಧ್ಯಯನಕ್ಕಾಗಿ ರಾಜ್ಯಕ್ಕೆ ₹100 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರ ಕುರಿತು ಸಮಗ್ರ ಅಧ್ಯಯನ ಮತ್ತು ಅದರ ಉಪಶಮನಕ್ಕಾಗಿ ಕಾರ್ಯತಂತ್ರ ರೂಪಿಸಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ವಿಪತ್ತು ನಿಧಿ ಅಡಿಯಲ್ಲಿ 12 ರಾಜ್ಯಗಳಿಗೆ ಐದು ವರ್ಷಗಳ ಅವಧಿಗೆ ₹1,200 ಕೋಟಿ ನಿಗದಿ ಮಾಡಿದ್ದು, ಕರ್ನಾಟಕಕ್ಕೆ ₹100 ಕೋಟಿ ಸಿಗಲಿದೆ.

ದೇಶದಲ್ಲಿ ಪದೇ ಪದೇ ಬರಗಾಲಕ್ಕೆ ತುತ್ತಾಗುವ ಎರಡನೇ ರಾಜ್ಯ ಕರ್ನಾಟಕವಾಗಿದೆ. ಅತಿ ಹೆಚ್ಚು ಜಿಲ್ಲೆಗಳು ಬರಪೀಡಿತವಾಗುವ ಕಾರಣದಿಂದಾಗಿ ಈ ಪ್ರದೇಶಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳು, ಕುಡಿಯುವ ನೀರು, ಕೃಷಿ ಪದ್ಧತಿ, ಜಾನುವಾರುಗಳ ಸಂರಕ್ಷಣೆ ಮತ್ತು ಉದ್ಯೋಗಾವಕಾಶಗಳು ಸೇರಿದಂತೆ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ಅಧ್ಯಯನ ನಡೆಸಬೇಕಾಗಿದೆ.

ಈ ಅಧ್ಯಯನಕ್ಕೆ ವರ್ಷಕ್ಕೆ ತಲಾ ₹20 ಕೋಟಿಯಂತೆ ಒಟ್ಟು ₹100 ಕೋಟಿ ಸಿಗಲಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಬರ, ಪ್ರವಾಹ ಸೇರಿದಂತೆ ಯಾವುದೇ ನೈಸರ್ಗಿಕ ವಿಕೋಪ ಸಂಭವಿಸಿದ ನಂತರ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವುದು ಇಲ್ಲಿಯವರೆಗೆ ನಡೆದುಕೊಂಡು ಬಂದಿದ್ದ ಪದ್ಧತಿ. ಇನ್ನು ಮುಂದೆ ವಿಕೋಪ ಸಂಭವಿಸುವುದಕ್ಕೂ ಮೊದಲೇ ಅದಕ್ಕಾಗಿ ಸಜ್ಜಾಗಿ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಕೇಂದ್ರ ಸರ್ಕಾರ ಆದ್ಯತೆ ನೀಡಿದೆ. ಇದರಲ್ಲಿ ಮುಖ್ಯವಾಗಿ ಸಿದ್ಧತೆ, ಸಿಬ್ಬಂದಿಗೆ ಸಾಮರ್ಥ್ಯವನ್ನು ಹೆಚ್ಚಿಸಲು ಅಗತ್ಯ ತರಬೇತಿ ನೀಡಲಾಗುವುದು ಎಂದು ಹೆಸರು ಹೇಳಲು ಬಯಸದ ಅಧಿಕಾರಿಯೊಬ್ಬರು ತಿಳಿಸಿದರು.

ಮುಖ್ಯಾಂಶಗಳು

- ಪದೇ ಪದೇ ಬರಗಾಲಕ್ಕೆ ತುತ್ತಾಗುವ ಎರಡನೇ ರಾಜ್ಯ ಕರ್ನಾಟಕ
- ಬೆಂಗಳೂರಿನಲ್ಲಿ ಮಳೆಯಿಂದ ಉಂಟಾಗುವ ಪ್ರವಾಹ ತಡೆಯಲು ಅನುದಾನ ಮೀಸಲು

ಬಿಬಿಎಂಪಿಗೆ ₹250 ಕೋಟಿ

ಬಿಬಿಎಂಪಿ ವ್ಯಾಪ್ತಿಯಲ್ಲಿ ವಿಕೋಪಗಳ ತಡೆಗೆ ಉಪಶಮನ ನಿಧಿಯಾಗಿ ಎನ್‌ಡಿಆರ್‌ಎಫ್ ₹250 ಕೋಟಿ ನೀಡಿದೆ. ಬೆಂಗಳೂರಿನಲ್ಲಿ ಮಳೆಯಿಂದ ಉಂಟಾಗುವ ಪ್ರವಾಹ ಮತ್ತು ಇತರ ದುರಂತಗಳ ತಡೆಯುವ ಕಾರ್ಯಗಳಿಗೆ ಇದನ್ನು ಬಳಸಬಹುದು. ವಿಶೇಷವಾಗಿ ಈ ಕಾರ್ಯದಲ್ಲಿ ತೊಡಗುವ ಸಿಬ್ಬಂದಿಗೆ ತರಬೇತಿ ನೀಡಲಾಗುತ್ತದೆ.

ನಷ್ಟ ಪರಿಹಾರ ಕೊಡುವಂತಿಲ್ಲ ?

ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಮೂಲಕ ಬಿಡುಗಡೆ ಮಾಡುವ ಹಣದಲ್ಲಿ ಸಂತ್ರಸ್ತರಾದವರಿಗೆ ನೇರವಾಗಿ ಪರಿಹಾರ ನಗದು ರೂಪದಲ್ಲಿ ಹಂಚುವುದಕ್ಕೆ ಸಾಧ್ಯವಿಲ್ಲ ಎಂಬ ಹೊಸ ನೀತಿಯನ್ನು ಕೇಂದ್ರ ಸರ್ಕಾರ ರೂಪಿಸಿದೆ.

ವಿಪತ್ತು ಪರಿಹಾರ ನಿಧಿಯಡಿ ಬಿಡುಗಡೆ ಮಾಡುವ ಒಟ್ಟು ಹಣದಲ್ಲಿ ಶೇ 40ರಷ್ಟು ಮೊತ್ತ ರಕ್ಷಣೆ ಮತ್ತು ತುರ್ತು ಪರಿಹಾರ ಕಾಮಗಾರಿಗಳಿಗೆ, ಶೇ 30ರಷ್ಟು ಮೊತ್ತ ಪುನರ್ ನಿರ್ಮಾಣಕ್ಕೆ, ಶೇ 10ರಷ್ಟು ಸಾಮರ್ಥ್ಯಾಭಿವೃದ್ಧಿ ಮತ್ತು ಶೇ 20ರಷ್ಟು ಮೊತ್ತ ಉಪಶಮನಕ್ಕೆ ಬಳಸಲಾಗುವುದು ಎಂದು ಹೆಸರು ಬಹಿರಂಗಪಡಿಸಲು ಬಯಸದ ಕಂದಾಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಈ ಕ್ರಮದಿಂದಾಗಿ, ಪ್ರಾಕೃತಿಕ ದುರಂತ ನಿಭಾಯಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬಿಡುಗಡೆ ಮಾಡುವ ಹಣ ಪರಿಹಾರದ ಹೆಸರಿನಲ್ಲಿ ಅನ್ಯರ ಪಾಲಾಗುವುದು ಇನ್ನು ಮುಂದೆ ಸಾಧ್ಯವಿಲ್ಲ. ಆದರೆ, ಮನೆಗಳು ಬಿದ್ದು ಹೋದರೆ ಅದಕ್ಕೆ ನೀಡುವ ಪರಿಹಾರದ ಮೊತ್ತ ಮತ್ತು ಬೆಳೆ ನಷ್ಟದ ಪರಿಹಾರದ ಮೊತ್ತ ಪ್ರಮಾಣ ಹೆಚ್ಚಾಗಲಿದೆ ಎಂದೂ ಅವರು ಹೇಳಿದರು.

ಬರ ಪ್ರದೇಶದ ಅಧ್ಯಯನದ ಮೊತ್ತವನ್ನು ಬಿಟ್ಟು ಎಸ್‌ಡಿಆರ್‌ಎಫ್ (ಸ್ಟೇಟ್ ಡಿಸಾಸ್ಟರ್ ರಿಸ್ಕ್ ಮ್ಯಾನೇಜ್‌ಮೆಂಟ್ ಫಂಡ್) ಅಡಿ ರಾಜ್ಯಕ್ಕೆ ₹1,054 ಕೋಟಿ ಕಳೆದ ಮಾರ್ಚ್‌ನಲ್ಲಿ ಬಿಡುಗಡೆ ಆಗಿದೆ. ಹಿಂದೆ ರಾಜ್ಯಕ್ಕೆ ಈ ಬಾಬ್ತಿನಲ್ಲಿ ₹300 ಕೋಟಿ ನೀಡಲಾಗುತ್ತಿತ್ತು ಎಂದರು.

ಬಿಳಿಮಲೆ, ಸಂಧ್ಯಾಪೈ ಸೇರಿ ಆರು ಜನರಿಗೆ ಮಾಸ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ವತಿಯಿಂದ ನೀಡಲಾಗುವ ಈ ಸಾಲಿನ 'ಮಾಸ್ತಿ ಪ್ರಶಸ್ತಿ'ಗೆ ಆರು ಮಂದಿ ಸಾಧಕರನ್ನು ಆಯ್ಕೆ ಮಾಡಲಾಗಿದೆ.

ಪುರಸ್ಕೃತರು: ಲೇಖಕಿ ಹಾಗೂ 'ತರಂಗ' ವಾರಪತ್ರಿಕೆ ವ್ಯವಸ್ಥಾಪಕ ಸಂಪಾದಕಿ ಸಂಧ್ಯಾ ಎಸ್.ಪೈ (ಶಿಶು ಸಾಹಿತ್ಯ), ವಿಮರ್ಶಕ ಎಸ್. ಆರ್.ವಿಜಯಶಂಕರ (ವಿಮರ್ಶೆ), ಪುರುಷೋತ್ತಮ ಬಿಳಿಮಲೆ (ಸಂಶೋಧನೆ), ಕವಿ ಸುಬ್ರಾಯ ಚೊಕ್ಕಾಡಿ (ಕಾವ್ಯ), ಕಥೆಗಾರ ಕೇಶವರೆಡ್ಡಿ ಹಂದ್ರಾಳ (ಕಥೆ) ಹಾಗೂ ಸಾಹಿತಿ ಸ.ರಘುನಾಥ (ಸೃಜನಶೀಲ).

ಪ್ರಶಸ್ತಿಗಳು ತಲಾ ₹25 ಸಾವಿರ ನಗದು, ಮಾಸ್ತಿ ಪ್ರಶಸ್ತಿ ಫಲಕ ಹಾಗೂ ಸನ್ಮಾನ ಒಳಗೊಂಡಿವೆ.

ಮಾರ್ಚ್ 27ರಂದು ಬೆಂಗಳೂರಿನ ಭಾರತೀಯ ವಿದ್ಯಾಭವನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ' ಎಂದು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್‌ನ ಅಧ್ಯಕ್ಷ ಮಾವಿನಕೆರೆ ರಂಗನಾಥನ್ ತಿಳಿಸಿದ್ದಾರೆ.

ಎಸ್.ಆರ್. ವಿಜಯಶಂಕರ

ಪುರುಷೋತ್ತಮ ಬಿಳಿಮಲೆ

ಸುಬ್ರಾಯ ಚೊಕ್ಕಾಡಿ


ಕೇಶವರೆಡ್ಡಿ ಹಂದ್ರಾಳ


ಸ.ರಘುನಾಥ

ಸಂಧ್ಯಾ ಎಸ್. ಪೈ

ಪೂರ್ಣ ಪ್ರಮಾಣದ ತರಗತಿ: ಇಂದು ಸಲಹಾ ಸಮಿತಿ ಸಭೆ

ಪ್ರಜಾವಾಣಿ ವಾರ್ತೆ

ತಿ.ನರಸೀಪುರ: 'ವಿದ್ಯಾಗಮ ತರಗತಿಗಳನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸುವಂತೆ ಪೋಷಕರಿಂದ ನಿರಂತರ ಒತ್ತಡ ಬರುತ್ತಿದೆ. ಮಂಗಳವಾರ ತಾಂತ್ರಿಕ ಸಲಹಾ ಸಮಿತಿ, ಆರೋಗ್ಯ ಇಲಾಖೆಯೊಂದಿಗೆ ಸಭೆ ನಡೆಸಿ ಪೂರ್ಣ ಪ್ರಮಾಣದಲ್ಲಿ ಆರಂಭಿಸುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತದೆ' ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ಕೆಲ ಖಾಸಗಿ ಶಾಲೆಗಳು ವಿದ್ಯಾಗಮ ತರಗತಿಗಳನ್ನು ಪೂರ್ಣವಾಗಿ ನಡೆಸುತ್ತಿರುವ ಹಾಗೂ 1ರಿಂದ 5 ನೇ ತರಗತಿ ಆರಂಭಿಸಿರುವ ದೂರುಗಳ ಬಗ್ಗೆ ಪ್ರತಿಕ್ರಿಯಿಸಿ, 'ಯಾವುದೇ ಕಾರಣಕ್ಕೂ ಸರ್ಕಾರದ ನಿರ್ದೇಶನವಿಲ್ಲದೇ ತರಗತಿಗಳು ಆರಂಭವಾಗಬಾರದು. ಇದೇ ರೀತಿ ಆರಂಭಿಸಲು ಹೋಗಿ ಮುಳಬಾಗಿಲು ತಾಲ್ಲೂಕಿನಲ್ಲಿ ಅವಘಡ ನಡೆದಿದೆ. ಈಗ ಆ ಶಾಲೆಯ ಮಾನ್ಯತೆ ರದ್ದತಿಗೆ ಚಿಂತನೆ ನಡೆದಿದೆ' ಎಂದರು.

ಸುರೇಶ್ ಕುಮಾರ್

'ಅಜೀಂ ಪ್ರೇಮ್‌ಜೀ ವಿಶ್ವವಿದ್ಯಾಲಯದಿಂದ ಸಮೀಕ್ಷಾ ವರದಿ ಬಂದಿದೆ. ಕಲಿಕೆಯಿಂದ ವಿಮುಖವಾಗುತ್ತಿರುವ ಮಕ್ಕಳ ಸಮೀಕ್ಷೆ ನಡೆಸಲಾಗಿದೆ. ಶಾಲೆ ಇಲ್ಲದ ಕಾರಣ ಬಾಲ ಕಾರ್ಮಿಕ ಹಾಗೂ ಬಾಲ್ಯವಿವಾಹ ಪ್ರಕರಣ ಹೆಚ್ಚಾಗಿವೆ. ಈ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಜತೆ ಪ್ರತಿ ತಾಲ್ಲೂಕಿನಲ್ಲಿ ಸಮೀಕ್ಷೆ ನಡೆಸಲಾಗುವುದು' ಎಂದರು.

'ಮಾರ್ಚ್ ಅಂತ್ಯಕ್ಕೆ ಎಲ್ಲ ಶಾಲೆಗಳಿಗೆ ನೀರು, ಶೌಚಾಲಯ:ಎಲ್‌.ಕೆ. ಅತೀಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿರುವ ಎಲ್ಲ 42,015 ಸರ್ಕಾರಿ ಶಾಲೆಗಳಿಗೆ ಮಾರ್ಚ್ ಅಂತ್ಯದ ವೇಳೆಗೆ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಕಲ್ಪಿಸಲು ಈಗಾಗಲೇ ತುರ್ತು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ (ಆರ್‌ಡಿಪಿಆರ್) ಇಲಾಖೆ ಪ್ರಧಾನ ಕಾರ್ಯದರ್ಶಿ ಎಲ್.ಕೆ. ಅತೀಕ್ ತಿಳಿಸಿದರು.

'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ಎರಡು ವರ್ಷಗಳಿಂದ ಮಹಾತ್ಮಾಗಾಂಧಿ ಉದ್ಯೋಗ ಖಾತ್ರಿ (ನರೇಗಾ) ಯೋಜನೆಯಡಿ ಪ್ರತಿ ಶಾಲೆಯಲ್ಲಿ ಆವರಣ ಗೋಡೆ, ಶೌಚಾಲಯ ನಿರ್ಮಾಣ ಸೇರಿದಂತೆ ಮೂಲಸೌಲಭ್ಯ ಒದಗಿಸಲಾಗುತ್ತಿದೆ. ಇದೀಗ, ಕೊಳವೆ ಮೂಲಕ ಶಾಲೆಗಳು, ಅಂಗನವಾಡಿಗಳು ಮತ್ತು ಆಶ್ರಮ ಶಾಲೆಗಳಿಗೆ ನೀರು ಒದಗಿಸುವ 100 ದಿನಗಳ ಅಭಿಯಾನದಡಿ ತ್ವರಿತಗತಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ' ಎಂದು ವಿವರಿಸಿದರು.


ಎಲ್‌.ಕೆ. ಅತೀಕ್

'ಗ್ರಾಮೀಣ ಭಾಗದ ಒಟ್ಟು ಶಾಲೆಗಳ ಪೈಕಿ, 24,040 ಶಾಲೆಗಳಲ್ಲಿ ಅಡುಗೆಕೋಣೆ ಮತ್ತು ಶೌಚಾಲಯಕ್ಕೆ ನೀರಿನ ವ್ಯವಸ್ಥೆ ಇದೆ. 17,374 ಶಾಲೆಗಳಲ್ಲಿ ಈ ವ್ಯವಸ್ಥೆ ಒದಗಿಸಬೇಕಿದೆ. ಅದರಲ್ಲಿ 17,051 ಶಾಲೆಗಳಿಗೆ ₹ 42.48 ಕೋಟಿ ವೆಚ್ಚದಲ್ಲಿ ಅಂದಾಜು ಪಟ್ಟಿ ಸಿದ್ಧಪಡಿಸಲಾಗಿದ್ದು, 16,433 ಶಾಲೆಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಅಷ್ಟೇ ಅಲ್ಲದೆ, 16,106 ಕಾಮಗಾರಿಗೆ ಕಾರ್ಯಾದೇಶ ಕೂಡಾ ನೀಡಲಾಗಿದೆ. 8,878 ಶಾಲೆಗಳಲ್ಲಿ ಕಾಮಗಾರಿಪೂರ್ಣಗೊಂಡಿದೆ. ಉಳಿದ ಶಾಲೆಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ' ಎಂದರು.

'ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು 53,901 ಅಂಗನವಾಡಿಗಳಿವೆ. ಈ ಪೈಕಿ, 20,491 ಅಂಗನವಾಡಿಗಳಲ್ಲಿ ನೀರಿನ ವ್ಯವಸ್ಥೆ ಇದೆ. ಉಳಿದ 32,779 ವ್ಯವಸ್ಥೆ ಮಾಡಬೇಕಿದೆ. ಆ ಪೈಕಿ 31,057ಕ್ಕೆ ₹ 56.51 ಕೋಟಿ ವೆಚ್ಚದಲ್ಲಿ ಅಂದಾಜು ಪಟ್ಟಿ ತಯಾರಿಸಿದ್ದು, 30,550ಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. 29,265ಕ್ಕೆ ಕಾರ್ಯಾದೇಶ ನೀಡಲಾಗಿದ್ದು, ಅವುಗಳಲ್ಲಿ 17, 640ರ ಕೆಲಸ ಮಗಿದಿದೆ. ಉಳಿದ ಅಂಗನವಾಡಿಗಳಲ್ಲಿಯೂ ಶೀಘ್ರ ಕಾಮಗಾರಿ ಮುಗಿಯಲಿದೆ' ಎಂದೂ ಅವರು ಹೇಳಿದರು.

'ಪ್ರತಿ ಶಾಲೆಗಳಿಗೆ ತಲಾ ₹ 16 ಸಾವಿರ ವೆಚ್ಚದಲ್ಲಿ ಮೂರು ಕಡೆಗಳಲ್ಲಿ, ಅಂದರೆ ಅಡುಗೆಕೋಣೆ, ಕೈತೊಳೆಯಲು ಮತ್ತು ಶೌಚಾಲಯಕ್ಕೆ ನೀರಿನ ಸಂಪರ್ಕ ಕಲ್ಪಿಸಲಾಗುತ್ತಿದೆ. ನೀರು ಪೂರೈಕೆ ವ್ಯವಸ್ಥೆ ಇರುವ ಶಾಲೆಗಳಲ್ಲಿ ಈ ಸಂಪರ್ಕ ಒದಗಿಸಲಾಗುತ್ತಿದೆ. ಕೊಳವೆ ಬಾವಿ ಕೊರೆದು ನೀರು ಪೂರೈಸಲು ಇಲಾಖೆಯಡಿ ಅವಕಾಶ ಇಲ್ಲ. ಹೀಗಾಗಿ, ನೀರು ಪೂರೈಕೆ ಇಲ್ಲದ ಕಡೆಗಳಲ್ಲಿ ಸ್ಥಳೀಯವಾಗಿ ಲಭ್ಯ ಯೋಜನೆಗಳಲ್ಲಿ ಸಂಪರ್ಕ ಪಡೆದುಕೊಳ್ಳುವಂತೆ ಸೂಚನೆ ನೀಡಿದ್ದೇವೆ' ಎಂದರು.

'ನಮ್ಮ ಮಾಹಿತಿ ಪ್ರಕಾರ ಸುಮಾರು 2,500 ಶಾಲೆಗಳಲ್ಲಿ ಶೌಚಾಲಯಗಳಿಲ್ಲ. ಆದರೆ, ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ. ಎಂ.ಆರ್. ದೊರೆಸ್ವಾಮಿ ಅವರು 16 ಸಾವಿರ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲ ಎಂದು ತಿಳಿಸಿದ್ದಾರೆ. ಹೀಗಾಗಿ, ಶೌಚಾಲಯ ಇಲ್ಲದ ಕಡೆ ನರೇಗಾ ಯೋಜನೆಯಡಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ' ಎಂದೂ ಅವರು ಹೇಳಿದರು.

'ಶಿಕ್ಷಣ ಸಚಿವರಿಗೆ ಈ ಎಲ್ಲ ಮಾಹಿತಿಯನ್ನು ಈಗಾಗಲೇ ನೀಡಲಾಗಿದೆ' ಎಂದು ಅವರು, 'ಶೌಚಾಲಯಗಳನ್ನು ಸ್ವಚ್ಛ ಮಾಡುವ ಜೊತೆಗೆ, ನಿರ್ವಹಿಸುವ ಕೆಲಸವನ್ನು ಶಿಕ್ಷಣ ಇಲಾಖೆ ಮಾಡಬೇಕು' ಎಂದೂ ಸಲಹೆ ನೀಡಿದರು.

ಸ್ವಾಮಿನಾಥ ಗೋಪಾಲ್ ರಾವ್, ಜಗದೀಶ್‌ಗೆ ಮಾನಸ ಪ್ರಶಸ್ತಿ

ಶಿವಮೊಗ್ಗ: ಇಲ್ಲಿನ ಮಾನಸ ಟ್ರಸ್ಟ್ ಡಾ.ಕಟೀಲ್ ಅಶೋಕ್ ಪೈ ಸ್ಮರಣಾರ್ಥ ನೀಡುವ ಮಾನಸ ರಾಷ್ಟ್ರೀಯ ಪ್ರಶಸ್ತಿಗೆ ಬೆಂಗಳೂರಿನ ಮನೋವೈದ್ಯ ಡಾ.ಸ್ವಾಮಿನಾಥ ಗೋಪಾಲರಾವ್, ನಿಮ್ಹಾನ್ಸ್ ಪ್ರಾಧ್ಯಾಪಕ ಡಾ.ಜಗದೀಶ್ ತೀರ್ಥಹಳ್ಳಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ತಲಾ ₹ 75 ಸಾವಿರ ನಗದು, ಫಲಕ ಒಳಗೊಂಡಿದೆ. ಜಿಲ್ಲಾ ಸರ್ಕಾರಿ ನೌಕರರ ಭವನದಲ್ಲಿ ಫೆ.20ರಂದು ಸಂಜೆ 5.30ಕ್ಕೆ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಪುರಸ್ಕರಿಸಲಾಗುವುದು. ಬರಹಗಾರ ಜಯಂತ್ ಕಾಯ್ಕಿಣಿ ಕಾರ್ಯಕ್ರಮ ಉದ್ಘಾಟಿಸುವರು ಎಂದು ಟ್ರಸ್ಟ್ ನಿರ್ದೇಶಕ ಡಾ.ರಾಜೇಂದ್ರ ಚೆನ್ನಿ ಮಾಹಿತಿ ನೀಡಿದ್ದಾರೆ.

ಸ್ವಾಮಿನಾಥ

ಜಗದೀಶ್

ಪ್ರಾಧಿಕಾರಗಳ ಬಡಾವಣೆ: ಪತ್ರಕರ್ತರಿಗೂ ಕೋಟಾ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು ರಚಿಸುವ ಬಡಾವಣೆಗಳಲ್ಲಿ ಪತ್ರಕರ್ತರಿಗೆ ನಿವೇಶನಗಳನ್ನು ಮೀಸಲಿಡುವ ಸಂಬಂಧ ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಈ ಹಿಂದೆ ಪತ್ರಕರ್ತರ ವಿವಿಧ ಸಂಘಟನೆಗಳು ಬೇಡಿಕೆ ಇಟ್ಟ ಹಿನ್ನೆಲೆಯಲ್ಲಿ ನಿವೇಶನಗಳನ್ನು ಮೀಸಲಿಡುವುದಾಗಿ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಭರವಸೆ ನೀಡಿದ್ದರು.

ಆದರೆ, ಪತ್ರಕರ್ತರಿಗೆ ನಿವೇಶನ ಮೀಸಲು ನೀಡುವುದಕ್ಕೆ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದರು. ಸಚಿವ ಭೈರತಿ ಬಸವರಾಜ್ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಜತೆ ಮಾತನಾಡಿ, ಆದೇಶ ಮಾಡಿಸುವ ಮೂಲಕ ವಾಗ್ದಾನ ಈಡೇರಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಕಲೆ, ಕ್ರೀಡೆ, ವಿಜ್ಞಾನ ಮತ್ತು ಇತರ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದವರ ಪಟ್ಟಿಯಲ್ಲಿ ಪತ್ರಕರ್ತರನ್ನು ಸೇರಿಸಲಾಗಿದ್ದು, ಈ ಕೋಟಾದಲ್ಲಿ ಒಟ್ಟು ಶೇ 5 ರಷ್ಟು ಮೀಸಲು ನೀಡಲಾಗಿದೆ.

ಕಾರ್ಣಿಕೋತ್ಸವಕ್ಕೆ ಕೆಲ ನಿರ್ಬಂಧ

ಬಳ್ಳಾರಿ: ಹೂವಿನಹಡಗಲಿ ತಾಲ್ಲೂಕಿನ ಮೈಲಾರಲಿಂಗೇಶ್ವರ ವಾರ್ಷಿಕ ಕಾರ್ಣಿಕೋತ್ಸವಕ್ಕೆ ಮೈಲಾರ ಗ್ರಾಮಸ್ಥರನ್ನು ಹೊರತುಪಡಿಸಿ ಹೊರಗಿನ ಭಕ್ತರಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಾರ್ಗಸೂಚಿ ಅನ್ವಯಯವೇ ಫೆ.19 ರಿಂದ ಮಾ.2ರವರೆಗೆ ಜಾತ್ರೆ ಮತ್ತು ಕಾರ್ಣಿಕೋತ್ಸವ ಹಮ್ಮಿಕೊಳ್ಳಲು ನಗರದಲ್ಲಿ ಜಿಲ್ಲಾಧಿಕಾರಿ ಪವನ್‌ಕುಮಾರ್ ಮಲಪಾಟಿ ನೇತೃತ್ವದಲ್ಲಿ ಸೋಮವಾರ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು.

ಸಿಗದ ಪರಿಹಾರ: ಲೋಕಾಯುಕ್ತ ನೋಟಿಸ್

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಬೆಂಗಳೂರು: ಕೋವಿಡ್ ನಿಯಂತ್ರಣ ಕರ್ತವ್ಯದಲ್ಲಿ ಭಾಗಿಯಾಗಿ ಮೃತಪಟ್ಟ ಕೋವಿಡ್ ಸೇನಾನಿಗಳ ಕುಟುಂಬಗಳಿಗೆ ವಿಮಾ ಪರಿಹಾರ ಪಾವತಿಯಾಗದ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಲೋಕಾಯುಕ್ತ ನ್ಯಾಯಮೂರ್ತಿ, ಸರ್ಕಾರಕ್ಕೆ ನೋಟಿಸ್ ನೀಡಲು ಆದೇಶಿಸಿದ್ದಾರೆ.

'ಸೇನಾನಿಗಳ ಕುಟುಂಬ ಅನಾಥ' ಎಂಬ ಶೀರ್ಷಿಕೆಯಡಿ ಫೆ.11ರಂದು 'ಪ್ರಜಾವಾಣಿ' ಪ್ರಕಟಿಸಿದ ವರದಿ ಆಧರಿಸಿ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತ ನ್ಯಾಯಮೂರ್ತಿ ಪಿ. ವಿಶ್ವನಾಥಶೆಟ್ಟಿ ಅವರು, ಸರ್ಕಾರದ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ, ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಬಿಬಿಎಂಪಿ ಆಯುಕ್ತರು ಸೇರಿ 11 ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಲು ಆದೇಶಿಸಿದ್ದಾರೆ.

'ಮೃತಪಟ್ಟ ಕೋವಿಡ್ ಸೇನಾನಿ ಕುಟುಂಬದವರು ಊಟಕ್ಕೂ ತೊಂದರೆ ಅನುಭವಿಸುತ್ತಿದ್ದಾರೆ ಎಂಬುದನ್ನು 'ಪ್ರಜಾವಾಣಿ' ವರದಿ ವಿವರಿಸಿದೆ. ಅವರ ಕುಟುಂಬ ಸದಸ್ಯರ ಅಹವಾಲುಗಳನ್ನು ಆಲಿಸಬೇಕು. ಕೂಡಲೇ ಸಮಸ್ಯೆ ಸರಿಪಡಿಸಬೇಕು. ಈ ಸಂಬಂಧ ಮೂರು ವಾರದೊಳಗೆ ವರದಿ ಸಲ್ಲಿಸಬೇಕು' ಎಂದು ಅವರು ನಿರ್ದೇಶನ ನೀಡಿದ್ದಾರೆ.

'ಆರೋಗ್ಯ ಕಾರ್ಯಕರ್ತರು, ಪೊಲೀಸ್, ನಗರ ಸ್ಥಳೀಯ ಸಂಸ್ಥೆಗಳ ನೌಕರರು, ಆಶಾ ಕಾರ್ಯಕರ್ತೆ ಸೇರಿ ಕರ್ತವ್ಯ ನಿರ್ವಹಣೆ ವೇಳೆ ಕೋವಿಡ್ ತಗುಲಿ ಮೃತಪಟ್ಟವರು ಎಷ್ಟು ಎಂಬ ವಿವರ ಸಲ್ಲಿಸಬೇಕು. ಎಷ್ಟು ಕುಟುಂಬಗಳಿಗೆ ₹30 ಲಕ್ಷ ವಿಮಾ ಪರಿಹಾರ ನೀಡಲಾಗಿದೆ, ಇನ್ನೂ ಎಷ್ಟು ಮಂದಿಗೆ ಪರಿಹಾರ ನೀಡುವುದು ಬಾಕಿ ಇದೆ, ಅದಕ್ಕೆ ಕಾರಣಗಳೇನು ಎಂಬುದರ ಮಾಹಿತಿ ಒದಗಿಸಬೇಕು' ಎಂದು ಸೂಚಿಸಿದ್ದಾರೆ.

'ಕೋವಿಡ್ ನಿಯಂತ್ರಣಕ್ಕೆ ಮುಂದೆ ನಿಂತು ಪ್ರಾಣ ಕಳೆದುಕೊಂಡವರ ಕುಟುಂಬದವರ ರಕ್ಷಣೆಯ ಜವಾಬ್ದಾರಿ ಸರ್ಕಾರದ್ದೆ ಆಗಿದೆ. ಅವರು ಯಾವುದೇ ಕಾರಣಕ್ಕೂ ತೊಂದರೆಗೆ ಸಿಲುಕದಂತೆ ನೋಡಿಕೊಳ್ಳಬೇಕು. ಈ ಸಂಬಂಧ ಸುಪ್ರೀಂ ಕೋರ್ಟ್ ಆದೇಶವೂ ಇದೆ' ಎಂದು ಅವರು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಕೋವಿಡ್ ತಡೆಯಲು ಮುಂದಿನ ಸಾಲಿನಲ್ಲಿ ನಿಂತುಕೆಲಸ ಮಾಡಿರುವರ ಕುಟುಂಬಗಳನ್ನು ಅಲೆದಾಡಿಸದೆ ಕೂಡಲೇ ವಿಮಾ ಪರಿಹಾರ ಪಾವತಿಸಬೇಕು ಎಂದು ಸೂಚನೆ ನೀಡಿದ್ದಾರೆ.

ವೀರಶೈವ ಮಹಾಸಭಾಕ್ಕೆ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸಭಾದ 11 ಜಿಲ್ಲಾ ಘಟಕ ಮತ್ತು 31 ತಾಲ್ಲೂಕು ಘಟಕಗಳಿಗೆ ಪದಾಧಿಕಾರಿಗಳ ಆಯ್ಕೆಗೆ ಶನಿವಾರ ಚುನಾವಣೆ ನಡೆಯಿತು.

11 ಜಿಲ್ಲೆಗಳ ಪೈಕಿ, ಆರು ಜಿಲ್ಲೆಗಳ ಘಟಕಗಳ (ಚಿಕ್ಕಮಗಳೂರು, ಕೊಡಗು, ಹಾವೇರಿ, ರಾಯಚೂರು, ಯಾದಗಿರಿ ಮತ್ತು ಬಾಗಲಕೋಟೆ) ಎಲ್ಲ ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆದಿದೆ.

ಮಂಡ್ಯ ಮತ್ತು ಬಳ್ಳಾರಿ ಜಿಲ್ಲೆಗಳ ಅಧ್ಯಕ್ಷ ಸ್ಥಾನ ಮತ್ತು ಕಾರ್ಯನಿರ್ವಾಹಕ ಸದಸ್ಯರ (ಮಹಿಳಾ ಮತ್ತು ಸಾಮಾನ್ಯ ಸೇರಿ) 30 ಸ್ಥಾನಗಳಿಗೆ ಮತ್ತು ಚಾಮರಾಜನಗರ ಜಿಲ್ಲಾ ಅಧ್ಯಕ್ಷ ಮತ್ತು 20 ಸ್ಥಾನಗಳಿಗೆ ಚುನಾವಣೆ ನಡೆದಿದೆ. ವಿಜಯಪುರ ಮತ್ತು ಚಿತ್ರದುರ್ಗ ಜಿಲ್ಲೆಗಳ ಅಧ್ಯಕ್ಷ ಸ್ಥಾನಕ್ಕೆ ಮಾತ್ರ ಚುನಾವಣೆ ನಡೆದಿದೆ.

ಒಟ್ಟು 116 ಸಾಮಾನ್ಯ ಜಿಲ್ಲಾ ಕಾರ್ಯನಿರ್ವಾಹಕ ಸಮಿತಿ ಸದಸ್ಯರು ಮತ್ತು 107 ಮಹಿಳಾ ಸದಸ್ಯರು ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯಾಗಿದ್ದ ಎಚ್.ಎಂ. ರೇಣುಕ ಪ್ರಸನ್ನ ತಿಳಿಸಿದ್ದಾರೆ.

31 ತಾಲ್ಲೂಕು ಘಟಕಗಳ ಪೈಕಿ 27 ತಾಲ್ಲೂಕುಗಳಿಗೆ ಅವಿರೋಧ ಆಯ್ಕೆ ನಡೆದಿದೆ.

ಮಂಡ್ಯ, ಮಧುಗಿರಿ, ಆಳಂದ ಮತ್ತು ಬಾಗಲಕೋಟೆ ತಾಲ್ಲೂಕು ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಮಾತ್ರ ಚುನಾವಣೆ ನಡೆದಿದೆ. 345 ಸಾಮಾನ್ಯ ತಾಲ್ಲೂಕು ಕಾರ್ಯನಿರ್ವಾಹಕ ಸಮಿತಿ ಸದಸ್ಯರು ಹಾಗೂ 180 ಮಹಿಳಾ ಸದಸ್ಯರು ಆಯ್ಕೆಯಾಗಿದ್ದಾರೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಜಿಲ್ಲಾ ಘಟಕಗಳ ಅಧ್ಯಕ್ಷರು: ಚಾನಾಳ್ ಶೇಖರ್ (ಬಳ್ಳಾರಿ), ಸುಬ್ರಹ್ಮಣ್ಯ ಎಂ. (ಮಂಡ್ಯ), ನಂದೀಶಕುಮಾರ ಮೂಡ್ಲುಪುರ (ಚಾಮರಾಜನಗರ), ಮಹಡಿ ಶಿವಮೂರ್ತಿ (ಚಿತ್ರದುರ್ಗ), ವೀರಭದ್ರಪ್ಪ ಚ. ನಾಗಠಾಣ (ವಿಜಯಪುರ), ಎಚ್.ಎಂ. ಲೋಕೇಶ್ (ಚಿಕ್ಕಮಗಳೂರು), ಎಚ್.ವಿ. ಶಿವಪ್ಪ (ಕೊಡಗು), ಚಂದ್ರಶೇಖರ ಪಾಟೀಲ ಮಿರ್ಜಾಪುರ (ರಾಯಚೂರು), ಜಿ.ಎನ್. ಪಾಟೀಲ (ಬಾಗಲಕೋಟೆ), ಸೋಮಶೇಖರ ನಿಂಗಪ್ಪ ಮಣ್ಣೂರ್ (ಯಾದಗಿರಿ), ಮಹಾಂತೇಶ ಶಿವರುದ್ರಪ್ಪ ಕೋರಿಶೆಟ್ಟರ (ಹಾವೇರಿ).

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ
(ಅಪಘಾತ ಮುಕ್ತ ರಾಜ್ಯಕ್ಕಾಗಿ ಶ್ರಮಿಸೋಣ)

32ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸ - 2021
"ರಸ್ತೆ ಸುರಕ್ಷತೆ ಜೀವದ ರಕ್ಷೆ"

ಪಾಲಿಸದಿದ್ದರೆ ಸಂಚಾರಿ ನಿಯಮಗಳನ್ನು
ಕಟ್ಟಬೇಕು ಭಾರೀ ದಂಡವನ್ನು ...

ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಭಾರತದಲ್ಲಿ ರಸ್ತೆ ಅಪಘಾತದಲ್ಲಿ ಮರಣ ಹೊಂದುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇದು ದೊಡ್ಡ ಆತಂಕಕ್ಕೆ ಕಾರಣವಾಗಿದೆ.
ರಸ್ತೆ ಸುರಕ್ಷತೆ ಹಾಗೂ ಸಂಚಾರಿ ನಿಯಮಗಳನ್ನು ಅರಿತು ಅದನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಪ್ರತಿಯೊಬ್ಬ ವಾಹನ ಚಾಲಕರ ಆದ್ಯ ಕರ್ತವ್ಯ.
ಅಪಘಾತ ತಪ್ಪಿಸಿ ನಿಮ್ಮ ಜೀವವನ್ನು ಕಾಪಾಡಿಕೊಳ್ಳಿ – ಇತರರ ಜೀವವನ್ನು ಕಾಪಾಡಿ.

ಅಪಘಾತವಾದಂತಹ ಸಂದರ್ಭಗಳಲ್ಲಿ ಸ್ವಯಂ ಪ್ರೇರಿತರಾಗಿ ನೆರವನ್ನು (ಜೀವ ರಕ್ಷಕ) ನೀಡುವವರ ವೈಯಕ್ತಿಕ ವಿವರಗಳನ್ನು ಬಹಿರಂಗ ಪಡಿಸುವಂತೆ ಯಾರೂ ಒತ್ತಾಯಿಸುವಂತಿಲ್ಲ. ಆದ್ದರಿಂದ ಈ ಬಗ್ಗೆ ಹಿಂಜರಿಕೆ ಅಗತ್ಯವಿಲ್ಲ

ಸರಕು ಸಾಗಣೆ ವಾಹನಗಳಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಪ್ರಯಾಣಿಕರನ್ನು ಸಾಗಿಸುವುದು ಶಿಕ್ಷಾರ್ಹ ಅಪರಾಧ

ಮಾನ್ಯ ಉಪಮುಖ್ಯಮಂತ್ರಿಗಳು, ಸಾರಿಗೆ ಸಚಿವರಾದ ಶ್ರೀ ಲಕ್ಷ್ಮಣ ಸವದಿ ಅವರು ಪರಿಸರ ಸ್ನೇಹಿ ಎಲೆಕ್ಟ್ರಿಕ್ ಆಟೋಗಳಿಗೆ ಚಾಲನೆ ನೀಡುತ್ತಿರುವುದು.

ಸುರಕ್ಷಿತ ಚಾಲನೆಗಾಗಿ

- ರಸ್ತೆ ಬಳಕೆದಾರರಿಗೆ ಜಾಗೃತಿ, ಶಿಕ್ಷಣ ಮತ್ತು ತರಬೇತಿ ನೀಡುವುದು
- ಸುರಕ್ಷತೆ ಮತ್ತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವುದು
- ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತೆ ಬಗ್ಗೆ ಶಿಕ್ಷಣ ನೀಡುವುದು

- ಕುಡಿದು ವಾಹನ ಚಲಾಯಿಸಬೇಡಿ.
- ಸೀಟ್ ಬೆಲ್ಟ್ ಧರಿಸಲು ಮರೆಯಬೇಡಿ.
- ವಾಹನಗಳ ಮಧ್ಯೆ ಸುರಕ್ಷಿತ ಅಂತರವನ್ನು ಕಾಯ್ದುಕೊಳ್ಳಿ
- ವೇಗದ ಮಿತಿಯಲ್ಲಿ ವಾಹನ ಚಲಾಯಿಸಿ.
- ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ ನಂತರ ಚಲಿಸಿ (BIS ಅನುಮೋದಿತ ಹೆಲ್ಮೆಟ್ ಧರಿಸಿ)
- ವಾಹನ ಚಲಾಯಿಸುವಾಗ ಮೊಬೈಲ್ ಬಳಸಬೇಡಿ.
- ಅರೆ ನಿದ್ರಾವಸ್ಥೆಯಲ್ಲಿ ಎಂದೂ ವಾಹನ ಚಲಾಯಿಸಬೇಡಿ.
- ರಸ್ತೆಯಲ್ಲಿರುವ ಸಿಗ್ನಲ್ ದೀಪಗಳಿಗೆ ಪ್ರಾಮುಖ್ಯತೆ ಕೊಡಿ.
- ರಸ್ತೆ ಮೇಲಿನ ಗಮನಕ್ಕೆ ಭಂಗ ಬರದಂತೆ ವಾಹನ ಚಲಾಯಿಸಿ.

ಮೋಟಾರ್ ವಾಹನ ಕಾಯ್ದೆ ಅಡಿ ಉಲ್ಲಂಘನಾ ಪ್ರಕರಣಗಳು	ದಂಡದ ಮೊತ್ತ (ರೂ. ಗಳಲ್ಲಿ)
ಹೆಲ್ಮೆಟ್ ಧರಿಸದ ಚಾಲನೆಗೆ	500.00
ಸೀಟ್‌ಬೆಲ್ಟ್ ಧರಿಸದ ವಾಹನ ಚಾಲನೆಗೆ	500.00
ಅಪಾಯಕಾರಿ ರೀತಿಯಲ್ಲಿ ವಾಹನ ಚಾಲನೆಗೆ (ಮೊದಲ ಪ್ರಕರಣದಲ್ಲಿ)	
ದ್ವಿಚಕ್ರ/ತ್ರಿಚಕ್ರ ವಾಹನಗಳಿಗೆ	1500.00
ಲಘು ಮೋಟಾರು ವಾಹನಗಳಿಗೆ	3000.00
ಇತರೆ ವಾಹನಗಳಿಗೆ	5000.00
ಅತಿವೇಗದ ಚಾಲನೆ	
ದ್ವಿಚಕ್ರ/ತ್ರಿಚಕ್ರ/ಲಘು ಮೋಟಾರು ವಾಹನಗಳಿಗೆ	1000.00
ಇತರೆ ವಾಹನಗಳಿಗೆ	2000.00
ವಿಮಾ ರಹಿತ ವಾಹನಗಳ ಚಾಲನೆ	
ದ್ವಿಚಕ್ರ/ತ್ರಿಚಕ್ರ ವಾಹನಗಳಿಗೆ	1000.00
ಲಘು ಮೋಟಾರು ವಾಹನಗಳಿಗೆ	2000.00
ಇತರೆ ವಾಹನಗಳಿಗೆ	4000.00

* ಮೋಟಾರು ವಾಹನ ಕಾಯ್ದೆ- 1988 ರ ಪ್ರಕಾರ ನಿಯಮ ಉಲ್ಲಂಘಿಸುವುದು ಅಪರಾಧ.

ದೇಶದ ಕಾಡು, ವನ್ಯ ಜೀವಿ ನದಿಗಳು ಸೇರಿ ಪರಿಸರ ಉಳಿಸುವುದು. ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಅಂಜುಂ ಪರ್ವೇಜ್ ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ ಸಾರಿಗೆ ಇಲಾಖೆ

ಎನ್. ಶಿವಕುಮಾರ್ ಭಾ.ಪೊ.ಸೇ
ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ

ಜೆ. ಜ್ಞಾನೇಂದ್ರ ಕುಮಾರ್
ಅಪರ ಆಯುಕ್ತರು, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಭೌಗೋಳಿಕ ದತ್ತಾಂಶ ನಿಯಂತ್ರಣ ಮುಕ್ತ

ಮುಖ್ಯಾಂಶಗಳು

- ನೀತಿ ಸಡಿಲಗೊಳಿಸಿದ ಕೇಂದ್ರ ಸರ್ಕಾರ
- ರೈತರಿಗೆ ಅನುಕೂಲ– ಮೋದಿ
- ತಂತ್ರಜ್ಞಾನ ಅಭಿವೃದ್ಧಿಗೆ ಪೂರಕ

ನವದೆಹಲಿ (ಪಿಟಿಐ): ಭೌಗೋಳಿಕ ದತ್ತಾಂಶ ಸಂಗ್ರಹಣೆಗೆ ಸಂಬಂಧಿಸಿದ ನೀತಿಯನ್ನು ಸಡಿಲಗೊಳಿಸಿರುವುದಾಗಿ ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ. ಇದರಿಂದಾಗಿ ಈ ಕ್ಷೇತ್ರದಲ್ಲಿ ಹೊಸ ಪ್ರಯೋಗಗಳಿಗೆ ಅವಕಾಶ ಹೆಚ್ಚಿದಂತಾಗುವುದಲ್ಲದೆ, ಖಾಸಗಿ ಕ್ಷೇತ್ರ ಮತ್ತು ಸರ್ಕಾರಕ್ಕೆ ಸಮಾನ ಅವಕಾಶಗಳು ಲಭ್ಯವಾಗಲಿವೆ ಎಂದು ಹೇಳಿದೆ.

‘ಹೊಸ ಮಾರ್ಗಸೂಚಿಯ ಪ್ರಕಾರ ಈ ಕ್ಷೇತ್ರವನ್ನು ನಿಯಂತ್ರಣಮುಕ್ತಗೊಳಿಸಲಾಗಿದೆ. ಇನ್ನು ನಕ್ಷೆಯೂ ಸೇರಿದಂತೆ ಭೌಗೋಳಿಕ ದತ್ತಾಂಶಗಳನ್ನು ಪಡೆಯಲು ಅನುಮೋದನೆ, ಭದ್ರತಾ ಅನುಮತಿ, ಪರವಾನಗಿ ಮುಂತಾದವುಗಳ ಅಗತ್ಯ ಇರುವುದಿಲ್ಲ’ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಕಾರ್ಯದರ್ಶಿ ಆಶುತೋಷ್ ಶರ್ಮಾ ತಿಳಿಸಿದ್ದಾರೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಪ್ರಧಾನಿ ನರೇಂದ್ರ ಮೋದಿ, ‘...ನೀತಿಗಳನ್ನು ಉದಾರಗೊಳಿಸಿರುವುದು ಆತ್ಮನಿರ್ಭರ ಭಾರತ ನಿರ್ಮಾಣದ ದಿಕ್ಕಿನಲ್ಲಿ ಅತ್ಯಂತ ಮಹತ್ವದ ಹೆಜ್ಜೆಯಾಗಿದೆ. ನಾವೀನ್ಯತೆಯೊಂದಿಗೆ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಮುಂದಾಗುವ ರೈತರು, ನವೋದ್ಯಮಿಗಳು, ಖಾಸಗಿ ಹಾಗೂ ಸರ್ಕಾರಿ ಕ್ಷೇತ್ರದ ಸಂಶೋಧನಾ ಸಂಸ್ಥೆಗಳಿಗೆ ಈ ಸುಧಾರಣೆಗಳಿಂದ ಲಾಭವಾಗಲಿದೆ ಎಂದಿದ್ದಾರೆ.

‘ಭೌಗೋಳಿಕ ದತ್ತಾಂಶ ಹಾಗೂ ರಿಮೋಟ್ ಸೆನ್ಸಿಂಗ್ ಡೇಟಾದ ಸಮರ್ಥ ಬಳಕೆಯಿಂದ ದೇಶದ ರೈತರಿಗೂ ಸಹಾಯವಾಗಲಿದೆ. ಇದನ್ನು ನಿಯಂತ್ರಣದಿಂದ ಮುಕ್ತಗೊಳಿಸಿದ್ದರಿಂದ ಹೊಸ ತಂತ್ರಜ್ಞಾನಗಳು ಅಭಿವೃದ್ಧಿ ಆಗಲಿವೆ. ಇದರಿಂದ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಕ್ಷೇತ್ರಗಳು ಅಭಿವೃದ್ಧಿ ಕಾಣಲಿವೆ’ ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

‘ಮ್ಯಾಪ್‌ಗಳ ಲಭ್ಯತೆಯ ಕೊರತೆಯಿಂದಾಗಿ ಹಿನ್ನಡೆ ಅನುಭವಿಸುತ್ತಿರುವ ಅನೇಕ ಕ್ಷೇತ್ರಗಳಿಗೆ, ಈ ಬದಲಾವಣೆಯಿಂದ ಹೆಚ್ಚಿನ ಲಾಭವಾಗಲಿದೆ. ಮ್ಯಾಪ್ ತಯಾರಿಸುವ ಅಧಿಕೃತ ಸಂಸ್ಥೆಯಾಗಿರುವ ‘ಸರ್ವೆ ಆಫ್ ಇಂಡಿಯಾ’ ಸಹ ತನ್ನ ಕೆಲಸಕ್ಕಾಗಿ ಪರವಾನಗಿ ಪಡೆಯಬೇಕಾದಂಥ ಸ್ಥಿತಿ ಈವರೆಗೆ ಅಸ್ತಿತ್ವದಲ್ಲಿತ್ತು. ಇದರಿಂದಾಗಿ ಎಲ್ಲಾ ಕೆಲಸಕಾರ್ಯಗಳಲ್ಲಿ 3ರಿಂದ 6 ತಿಂಗಳ ವಿಳಂಬವಾಗುತ್ತಿತ್ತು. ಇನ್ನು ಮುಂದೆ ಈ ಸಮಸ್ಯೆ ಇರುವುದಿಲ್ಲ’ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಹರ್ಷವರ್ಧನ್ ಮಾಧ್ಯಮಗೋಷ್ಠಿಯಲ್ಲಿ ಹೇಳಿದ್ದಾರೆ.

ಗೋಪ್ಯತಾ ನೀತಿ ಪರಿಷ್ಕರಣೆ: ಕೇಂದ್ರ, ವಾಟ್ಸ್‌ಆ್ಯಪ್‌ಗೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ಭಾರತೀಯ ಬಳಕೆದಾರರಿಗೆ ಅನ್ವಯಿಸಿ ಗೋಪ್ಯತಾ ನೀತಿ ಪರಿಷ್ಕರಣೆಗೆ ಸಂಬಂಧಿಸಿದಂತೆ ವಾಟ್ಸ್‌ಆ್ಯಪ್ ಜಾಲತಾಣ ಮತ್ತು ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ಜಾರಿ ಮಾಡಿದೆ.

ಯೂರೋಪಿಯನ್ ಬಳಕೆದಾರರಿಗೆ ಹೋಲಿಸಿದರೆ ಗೋಪ್ಯತಾ ನಿಯಮಗಳು ಭಾರತೀಯ ಬಳಕೆದಾರರಿಗೆ ಭಿನ್ನವಾಗಿವೆ. ನಾಗರಿಕರ ಹಿತರಕ್ಷಿಸುವುದು ನ್ಯಾಯಾಂಗದ ಹೊಣೆ ಎಂದು ಕೋರಿ ಸಲ್ಲಿಸಿದ್ದ ಅರ್ಜಿ ಸಂಬಂಧ ನೋಟಿಸ್ ಜಾರಿ ಆಗಿದೆ.

‘ಬಳಕೆದಾರರಲ್ಲಿ ಖಾಸಗಿತನ ಕಳೆದುಕೊಳ್ಳುವ ಆತಂಕ ಶುರುವಾಗಿದೆ. ಈ ಹಿನ್ನೆಲೆಯಲ್ಲಿ ಅವರನ್ನು ರಕ್ಷಿಸುವುದು ನ್ಯಾಯಾಂಗದ ಹೊಣೆ’ ಎಂದು ಮುಖ್ಯನ್ಯಾಯಮೂರ್ತಿ ಎಸ್.ಎ.ಬೊಬಡೆ ನೇತೃತ್ವದ ಪೀಠವು ಅಭಿಪ್ರಾಯಪಟ್ಟಿತು.

ಯೂರೋಪ್‌ನಲ್ಲಿ ವಿಶೇಷ ಡಾಟಾ ರಕ್ಷಣೆ ಕಾಯ್ದೆ ಇದೆ. ಭಾರತದಲ್ಲಿ ಇಲ್ಲ’ ಎಂಬ ವಾಟ್ಸ್‌ಆ್ಯಪ್ ಪ್ರತಿನಿಧಿಸಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಹೇಳಿದರು. ‘ಜನರು ಹಣಕ್ಕಿಂತಲೂ ಖಾಸಗಿತನವನ್ನು ಹೆಚ್ಚು ಗೌರವಿಸುತ್ತಾರೆ’ ಎಂದು ಪೀಠ ಹೇಳಿತು.

ಫೇಸ್‌ಬುಕ್ ಮಾಲೀಕತ್ವದ ವಾಟ್ಸ್‌ಆ್ಯಪ್ ಸಾಮಾಜಿಕ ಜಾಲತಾಣ ಹಾಗೂ ಕೇಂದ್ರಕ್ಕೆ ನೋಟಿಸ್ ಅನ್ನು ಜಾರಿ ಮಾಡಿತು. 2017ರಿಂದ ಬಾಕಿ ಇದ್ದ ಅರ್ಜಿಗೆ ಸಂಬಂಧಿಸಿದ ಕರ್ಮಣ್ಯಸಿಂಗ್ ಸರೀನ್ ಅವರು ಮಧ್ಯಂತರ ಅರ್ಜಿ ಸಲ್ಲಿಸಿದ್ದರು.

ಬಡವರಿಗೆ ₹5ಕ್ಕೆ ಊಟ: ಮಮತಾ ಚಾಲನೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ವಿಧಾನಸಭಾ ಚುನಾವಣೆ ಸನಿಹದಲ್ಲಿರುವಾಗಲೇ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬಡವರಿಗೆ ಅತಿ ಕಡಿಮೆ ವೆಚ್ಚದಲ್ಲಿ ಅಂದರೆ, ಕೇವಲ ₹5ಕ್ಕೆ ಊಟ ನೀಡುವ ‘ಮಾ’ ಯೋಜನೆಗೆ ಸೋಮವಾರ ವಿಡಿಯೊ ಕಾರ್ಯಕ್ರಮದ ಮೂಲಕ ಚಾಲನೆ ನೀಡಿದರು.

ಒಂದು ಪ್ಲೇಟ್ ಅನ್ನ, ದಾಲ್, ತರಕಾರಿ ಮತ್ತು ಮೊಟ್ಟೆಯ ಕರಿಯನ್ನು ₹5ಕ್ಕೆ ನೀಡಲಾಗುವುದು. ಪ್ರತಿ ಪ್ಲೇಟ್ ಊಟಕ್ಕೆ ರಾಜ್ಯ ಸರ್ಕಾರ ₹15 ಸಬ್ಸಿಡಿ ಮೊತ್ತವನ್ನು ಭರಿಸಲಿದೆ ಎಂದರು.

ಕೇರಳ ಪತ್ರಕರ್ತನಿಗೆ 5 ದಿನಗಳ ಜಾಮೀನು

ನವದೆಹಲಿ: ಕಳೆದ ವರ್ಷ ಅಕ್ಟೋಬರ್‌ನಲ್ಲಿ ಉತ್ತರ ಪ್ರದೇಶದ ಹಾಥರಸ್‌ಗೆ ತೆರಳುತ್ತಿದ್ದಾಗ ಬಂಧನಕ್ಕೆ ಒಳಗಾಗಿದ್ದ ಕೇರಳ ಮೂಲದ ಪತ್ರಕರ್ತ ಸಿದ್ದಿಕ್ ಕಪ್ಪನ್ ಅವರಿಗೆ ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ನೀಡಿದೆ.

ಕೇರಳದಲ್ಲಿರುವ ಅನಾರೋಗ್ಯ ಪೀಡಿತ ತಾಯಿಯನ್ನು ಭೇಟಿಯಾಗಲು ಕಪ್ಪನ್ ಅವರಿಗೆ ಐದು ದಿನಗಳ ಅವಕಾಶ ನೀಡಿ ಸುಪ್ರೀಂ ಕೋರ್ಟ್ ಸೋಮವಾರ ಆದೇಶ ಹೊರಡಿಸಿದೆ.

ತಮ್ಮ ತಾಯಿ, ಸಂಬಂಧಿಗಳು ಮತ್ತು ವೈದ್ಯರನ್ನಷ್ಟೇ ಭೇಟಿಯಾಗಲು ಕಪ್ಪನ್ ಅವರಿಗೆ ಅನುಮತಿ ನೀಡಲಾಗಿದೆ. ಸಾರ್ವಜನಿಕರು, ಸಾಮಾಜಿಕ ಮಾಧ್ಯಮಗಳು ಹಾಗೂ ಮಾಧ್ಯಮಗಳಿಗೆ ಯಾವುದೇ ರೀತಿಯ ಹೇಳಿಕೆಗಳನ್ನು ನೀಡಲು ಅವರಿಗೆ ಅವಕಾಶವನ್ನು ನಿರಾಕರಿಸಲಾಗಿದೆ.

ಉತ್ತರ ಪ್ರದೇಶ ಪೊಲೀಸರ ಬೆಂಗಾವಲಿನಲ್ಲಿ ಕಪ್ಪನ್ ಅವರು ಕೇರಳಕ್ಕೆ ತೆರಳಬೇಕು ಆದೇಶಿಸಲಾಗಿದೆ.

ಖ್ವಾಜಾ ಮೊಯಿನುದ್ದೀನ್ ಚಿಸ್ತಿ ಅವರ 809ನೇ ಉರುಸ್ ಸಂದರ್ಭದಲ್ಲಿ ಅಜ್ಮೇರ್ ಷರೀಫ್ ದರ್ಗಾಕ್ಕೆ ಸಮರ್ಪಿಸಲು ಕೇಂದ್ರ ಸಚಿವ ಮುಖ್ತಾರ್ ಅಬ್ಬಾಸ್ ನಖ್ವಿ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಸೋಮವಾರ ಚಾದರ ನೀಡಿದರು –ಪಿಟಿಐ ಚಿತ್ರ

ನಿವೃತ್ತ ನ್ಯಾಯಮೂರ್ತಿ ಪಿ.ಬಿ.ಸಾವಂತ್ ನಿಧನ

ಪ್ರಜಾವಾಣಿ ವಾರ್ತೆ

ಮುಂಬೈ: ನಿವೃತ್ತ ನ್ಯಾಯಮೂರ್ತಿ ಪಿ.ಬಿ. ಸಾವಂತ್ (91) ಸೋಮವಾರ ಇಲ್ಲಿ ಹೃದಯಾಘಾತದಿಂದ ನಿಧನರಾದರು. ಇವರಿಗೆ ಪತ್ನಿ ಜಯಶ್ರೀ, ಇಬ್ಬರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ.

ಜೂನ್ 30, 1930ರಲ್ಲಿ ಜನಿಸಿದ್ದ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಬಿ.ಎ (ವಿಶೇಷ) ಆನರ್ಸ್ ಪದವಿ, ಬಳಿಕ ಬಾಂಬೆ ವಿಶ್ವವಿದ್ಯಾಲಯದಲ್ಲಿ ಎಲ್.ಎಲ್.ಬಿ ಶಿಕ್ಷಣ ಪಡೆದಿದ್ದರು. ಬಾಂಬೆ ಹೈಕೋರ್ಟ್‌ನಲ್ಲಿಯೇ ವಕೀಲಿ ವೃತ್ತಿ ಆರಂಭಿಸಿದ್ದರು.

ಬಾಂಬೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿದ್ದರು. ಭಾರತೀಯ ಪತ್ರಿಕಾ ಮಂಡಳಿ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಪುಣೆಯ ಶನಿವಾರವಾಡಾದಲ್ಲಿ 2017ರಲ್ಲಿ ನಡೆದಿದ್ದ ಎಲ್ಗಾರ್ ಪರಿಷದ್ ಅಧ್ಯಕ್ಷತೆಯನ್ನು ವಹಿಸಿದ್ದರು. ನ್ಯಾಯಾಂಗದ ಸಿವಿಲ್, ಕ್ರಿಮಿನಲ್, ಕೈಗಾರಿಕಾ, ಸೇವಾ ಚುನಾವಣೆ, ಸಂವಿಧಾನ, ಕೋ–ಆಪರೇಟಿವ್ ವಿಭಾಗಗಳಲ್ಲಿ ಸೇವೆ ಸಲ್ಲಿಸಿದ್ದರು. ಬಾಂಬೆಯ ನ್ಯೂ ಲಾ ಕಾಲೇಜಿನಲ್ಲಿ ಒಂದು ವರ್ಷ ಪ್ರಾಧ್ಯಾಪಕರಾಗಿದ್ದರು.

1973ರಲ್ಲಿ ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದು, 1982ರ ಏರ್ ಇಂಡಿಯಾ ವಿಮಾನ ಅಪಘಾತ ಪ್ರಕರಣ ಸೇರಿ ಹಲವು ಪ್ರಕರಣಗಳ ವಿಚಾರಣೆ ನಡೆಸಿದ್ದರು. 1989ರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2002ರ ಗುಜರಾತ್ ಗಲಭೆಯ ವಿಚಾರಣಾ ತಂಡದಲ್ಲೂ ಇದ್ದರು.



ಕ್ಷೇಮ ಕುಶಲ

ಊಟಕ್ಕೆ
ಮೊದಲಿರಬೇಕು,
ಸ್ನಾನಕ್ಕೆ
ಕೊನೆಗಿರಬೇಕು.
– ಗಾದೆ

ಸಾಂದರ್ಭಿಕ ಚಿತ್ರ

ಶರೀರಸ್ವಾಸ್ಥ್ಯಕ್ಕೆ ಆಧಾರಸ್ತಂಭಗಳಾಗಿ ನಮ್ಮ ಮಹರ್ಷಿಗಳು ಎಣಿಸಿರುವುದು ಸುಲಭವಾಗಿರುವ ಮೂರು ಸಂಗತಿಗಳು. ಅವೇ: ಯುಕ್ತವಾದ ಆಹಾರ, ರಾತ್ರಿವೇಳೆಯ ನೆಮ್ಮದಿಯ ನಿದ್ರೆ ಮತ್ತು ಅಧ್ಯಾತ್ಮಾಭಿಮುಖವಾಗಿರುವ ಸಾತ್ತ್ವಿಕಜೀವನ. ಈ ಪಟ್ಟಿಗೆ ವ್ಯಾಯಾಮವನ್ನೂ ಸೇರಿಸಬಹುದು.

ಆರೋಗ್ಯದ ಆಧಾರಸ್ತಂಭಗಳು

ಡಾ. ಜಿ. ಎಲ್. ಕೃಷ್ಣ

ಆರೋಗ್ಯವನ್ನು ಕಾಪಾಡಿಕೊಳ್ಳುವುದು ಹೇಗೆ? ಸ್ವಾಸ್ಥ್ಯವರ್ಧನೆಗೆ ಉಪಾಯಗಳೇನು? - ಈ ಬಗ್ಗೆ ಆಯುರ್ವೇದಶಾಸ್ತ್ರಕಾರರಾದ ಮಹರ್ಷಿಗಳು ಬಹಳ ಉಪಯುಕ್ತವಾದ ಸಲಹೆಗಳನ್ನಿತ್ತಿದ್ದಾರೆ. ಈ ಸಲಹೆಗಳು ಆ ಋಷಿಗಳ ದೀರ್ಘಕಾಲದ ಪರೀಕ್ಷಣ-ನಿರೀಕ್ಷಣಗಳ ಫಲಗಳಾಗಿರುವುದರಿಂದ ಈ ಕಾಲದಲ್ಲೂ ಉಪಾದೇಯವಾಗಿವೆ.

ದೊಡ್ಡಬಗೆಯಲ್ಲಿ ಮಾನವಜೀವನಕ್ಕೆ ಒದಗಿಬರುವ ಹಲವು ಸಂಗತಿಗಳು ಸುಲಭವಾಗಿ ದೊರೆಯುವಂತಹವುಗಳು. ಹೆಚ್ಚಿನ ಖರ್ಚಿಲ್ಲದೆ, ಹೆಚ್ಚಿನ ಆಯಾಸವೂ ಇಲ್ಲದೆ, ಲಭಿಸುವ ಈ ವಸ್ತುಗಳು ಪ್ರಕೃತಿಗಿರುವ ಜೀವಕಾರುಣ್ಯದ ದ್ಯೋತಕಗಳಾಗಿವೆ. ಪ್ರಕೃತಿಕಾರುಣ್ಯದ ಯುಕ್ತವಾದ ಬಳಕೆಯೇ ನಮ್ಮ ಯೋಗಕ್ಷೇಮಗಳಿಗೆ ನಿಜವಾದ ಸಾಧನ.

ಶರೀರಸ್ವಾಸ್ಥ್ಯಕ್ಕೆ ಆಧಾರಸ್ತಂಭಗಳಾಗಿ ನಮ್ಮ ಮಹರ್ಷಿಗಳು ಎಣಿಸಿರುವುದು ಅಂತಹ ಸುಲಭವಾಗಿರುವ ಮೂರು ಸಂಗತಿಗಳನ್ನು. ಯುಕ್ತವಾದ ಆಹಾರ, ರಾತ್ರಿವೇಳೆಯ ನೆಮ್ಮದಿಯ ನಿದ್ರೆ ಮತ್ತು ಅಧ್ಯಾತ್ಮಾಭಿಮುಖವಾಗಿರುವ ಸಾತ್ತ್ವಿಕಜೀವನ - ಇವುಗಳೇ ಆ ಮೂರು ಸ್ತಂಭಗಳು. ಹೆಚ್ಚಿನ ಶರೀರಾಯಸವಿಲ್ಲದ ಈಗಿನ ಜೀವನಕ್ರಮವನ್ನು ಪರಿಗಣಿಸಿ ಆಯುರ್ವೇದದ ಮನೀಷಿಯೊಬ್ಬರು ಈ ಪಟ್ಟಿಗೆ ವ್ಯಾಯಾಮ ಎಂಬ ನಾಲ್ಕನೆಯ ಸ್ತಂಭವೊಂದನ್ನು ಜೋಡಿಸಿದ್ದಾರೆ.

ಆಹಾರ: ಬಹುಕಾಲದ ಬಳಕೆಯಿಂದ ಶರೀರದ ಬಲಪುಷ್ಟಿಗಳಿಗೆ ಪೂರಕವೆಂದು ಸಿದ್ಧವಾದ ಆಹಾರಪದಾರ್ಥಗಳನ್ನೇ ಬಳಸುವುದು ಉತ್ತಮ. ವಿದೇಶಗಳಲ್ಲಿ ಜನಪ್ರಿಯವಾಗಿವೆಯೆಂಬುದರ ಕಾರಣದಿಂದಲೋ ಅಲ್ಪಕಾಲದ ಪರೀಕ್ಷಣಗಳಿಂದಲೋ ಅಥವಾ ಅಬ್ಬರದ ಪ್ರಚಾರದಿಂದಲೋ ಯಾವುದೇ ಆಹಾರಪದಾರ್ಥಕ್ಕೆ ಉಪಾದೇಯತ್ವ ಬರಲಾರದು. ಉಪ್ಪಿಟ್ಟು-ಅವಲಕ್ಕಿಗಳ ಜಾಗವನ್ನು ಬ್ರೆಡ್-ಸ್ಕೋನ್‌ಗಳು ಭರಿಸಲಾರವು. ನಮ್ಮ ಸಾಂಪ್ರದಾಯಿಕ ಆಹಾರಗಳ ಬಳಕೆ ಸ್ವಾಸ್ಥ್ಯರಕ್ಷಣೆಗೆ ತೀರಾ ಆವಶ್ಯಕ. ಅಂತಹ ಆಹಾರಗಳನ್ನಾದರೂ ತಾಜಾಪದಾರ್ಥಗಳಿಂದ ತಯಾರಿಸಿ ಬಿಸಿಯಾಗಿರುವಗಲೇ ಸಮಾಧಾನಚಿತ್ತದಿಂದ ಮಿತಪ್ರಮಾಣದಲ್ಲಿ ತಿನ್ನುವುದು ಒಳ್ಳೆಯದು. ಅಕ್ಕಿ-ಬೇಳೆಯಂತಹ ಧಾನ್ಯಗಳು, ಮೂಲಂಗಿ-ಪಡವಲದಂತಹ ತರಕಾರಿಗಳು, ಒಳ್ಳೆಯ ಮಾಂಸ ಮತ್ತು ಮಿತಪ್ರಮಾಣದ ಸಾಂಬಾರುಪದಾರ್ಥಗಳು ಥಾಲಿಯಲ್ಲಿ ಸೇರಿರಬೇಕು. ಉಪ್ಪನ್ನು ಆದಷ್ಟು ಮಿತವಾಗಿ ಬಳಸಬೇಕು. ಊಟದ ಜೊತೆಯಲ್ಲಿ ಸ್ವಲ್ಪ ಹಸುವಿನ ತುಪ್ಪ ಹಾಗೂ ಊಟದ ಕೊನೆಯಲ್ಲಿ ಮಜ್ಜಿಗೆ ಮತ್ತು ಹಣ್ಣುಗಳ ಸೇವನೆ ರೂಢಿಯಾಗಬೇಕು. ಕಾದಾರಿದ ನೀರಿನ ಬಳಕೆ ಉತ್ತಮ.

ನಿದ್ರೆ: ರಾತ್ರಿಯ ತಂಪಾದ ನಿದ್ರೆಯ ಸುಖವನ್ನು ಕೊಂಡಾಡದ ಮಹಾಕವಿಯಿಲ್ಲ. ತಮ್ಮ ನಾಟಕವೊಂದರಲ್ಲಿ ಕುವೆಂಪುರವರು ನಿದ್ರೆಯನ್ನು ಹೀಗೆ ಸ್ತುತಿಸಿದ್ದಾರೆ:

ಎಂತು ಮಲಗಿಹನು! ನಿದ್ದೆಯವನನು
ಶಾಂತಿಸಾಗರದೊಳದ್ದಿಹಳು. ಎಲೆ ನಿದ್ದೆ, ಎನಿತು ಮೃದು
ಮಧುರಳೌ ನೀನು. ಸಮತೆಯೀಯುವೆ ಜಗದ
ಜೀವಿಗಳಿಗೆಲ್ಲ. ನಿನ್ನ ಗಾಢಾಲಿಂಗನದೊಳೆಲ್ಲರೂ ಒಂದೆ.
ಜಗದೆನಿತು ಬಳಲಿಕೆಯ, ಕೋಟಲೆಯ ನುಂಗುತಿಹೆ ನೀನು!

'ಜಗದ ಬಳಲಿಕೆಯ, ಕೋಟಲೆಯ ನುಂಗುತಿಹ' ನಿದ್ದೆಯ ವಿಷಯದಲ್ಲೂ ಒಂದು ಎಚ್ಚರಿಕೆ ಅಗತ್ಯ. ಹೊರಗಿನ ಗಡಿಯಾರದ ರೀತಿಯಲ್ಲೇ ಶರೀರದ ಒಳಗೂ ಬಯೊಲಾಜಿಕಲ್ ಕ್ಲಾಕ್ ಎಂಬ ಗಡಿಯಾರವುಂಟು. ಈ ಬಯೊಲಾಜಿಕಲ್ ಕ್ಲಾಕ್ ಸೂರ್ಯನ ಬೆಳಕಿಗೆ ಸ್ಪಂದಿಸುತ್ತ ಕಾರ್ಯನಿರ್ವಹಿಸುತ್ತಿರುತ್ತದೆ. ಹಗಲಿನಲ್ಲಿ ಕೆಲಸ, ರಾತ್ರಿಯಲ್ಲಿ ನಿದ್ರೆ - ಇದು ಪ್ರಕೃತಿನಿಯಮ. ದೀರ್ಘಕಾಲ ಈ ನಿಯಮ ಏರುಪೇರಾದಾಗ ಬಯೊಲಾಜಿಕಲ್ ಕ್ಲಾಕ್ ತನ್ನ ಲಯವನ್ನು ಕಳೆದುಕೊಂಡು ಅನೇಕ ರೋಗಗಳಿಗೆ ಆಸ್ಪದವಾಗುತ್ತದೆ. ಹಾಗಾಗಿ ಚಿಕ್ಕಮಕ್ಕಳು ಹಾಗೂ ವಯೋವೃದ್ಧರನ್ನುಳಿದು ಸಾಮಾನ್ಯವಾಗಿ ಆರೋಗ್ಯವಂತರೆಲ್ಲರಿಗೂ ಹಗಲುನಿದ್ರೆ ಅಷ್ಟೇನೂ ಒಳ್ಳೆಯದಲ್ಲ.

ವ್ಯಾಯಾಮ: ಪ್ರತಿದಿನವೂ ಮುಕ್ಕಾಲುಗಂಟೆಯಷ್ಟು ಕಾಲವನ್ನಾದರೂ ವ್ಯಾಯಾಮಕ್ಕೆ ಮೀಸಲಿಡಬೇಕು. ಗಾಳಿಬೆಳಕು ಸಮೃದ್ಧವಾಗಿರುವ ಉದ್ಯಾನಗಳಲ್ಲಿ ಓಡುವುದು ಅಥವಾ ವೇಗವಾಗಿ ನಡೆಯುವುದು ಶರೀರದ ಎಲ್ಲಾ ಪ್ರಾಕೃತಕ್ರಿಯೆಗಳಿಗೆ ಸಹಕಾರಿ. ಜೀರ್ಣಕ್ರಿಯೆಯನ್ನು ಸರಿಯಾಗಿಸುವುದರಿಂದ ಹಿಡಿದು ಮನಸ್ಸಿಗೆ ಉಲ್ಲಾಸವನ್ನೀಯುವ ತನಕ ವ್ಯಾಯಾಮದ ಸತ್ಪ್ರಭಾವದ ವ್ಯಾಪ್ತಿಯಿದೆ. ತೀರಾ ಈಚಿನ ಸಂಶೋಧನೆಯೊಂದು ವಾಯುವಿಹಾರ ಸೃಜನಶೀಲತೆಯನ್ನೂ ಹೆಚ್ಚಿಸುತ್ತದೆಯೆಂಬ ಸತ್ಯವನ್ನು ಕಾಣಿಸಿದೆ!

ಸಾತ್ತ್ವಿಕ ಜೀವನ: ಮಾನಸಿಕ ಸ್ವಾಸ್ಥ್ಯಕ್ಕೆ ಅತ್ಯಗತ್ಯವಾದದ್ದು ಸಾತ್ತ್ವಿಕ ಜೀವನ. ಸುಖ ಯಾರಿಗೆ ಬೇಡ? ಕೂಡಿದ ಮಟ್ಟಿಗೂ ಸಾತ್ತ್ವಿಕಸುಖಗಳನ್ನೇ ಆಶ್ರಯಿಸುವುದು ತನುಮನಗಳೆರಡಕ್ಕೂ ಒಳ್ಳೆಯದು. ಸ್ವಕರ್ಮದಲ್ಲಿ ತಲ್ಲೀನತೆ, ಸಂಗೀತ-ಸಾಹಿತ್ಯಾದಿ ಕಲೋಪಾಸನೆ, ಸಜ್ಜನ ಸಹವಾಸ - ಇವುಗಳು ಸಾತ್ತ್ವಿಕ ಜೀವನದ ಮುಖ್ಯಾಂಶಗಳು. ಜಪ-ಧ್ಯಾನಾದಿಗಳ ಮೂಲಕ ಸಾಧಿಸುವ ಅಧ್ಯಾತ್ಮಚಿಂತನೆಯನ್ನಂತೂ ಆರ್ಷಸಂಹಿತೆಗಳೇ ಅಲ್ಲದೇ ಈ ಹೊತ್ತಿನ ವೈದ್ಯಕೀಯ ಸಂಶೋಧನೆಗಳೂ ಕೊಂಡಾಡುತ್ತವೆ. ಇಂತಹ ಸಾತ್ತ್ವಿಕ ಜೀವನವನ್ನು ಆಯುರ್ವೇದ ಸದ್ವೃತ್ತ, ಬ್ರಹ್ಮಚರ್ಯ ಎಂದೆಲ್ಲಾ ಪ್ರಶಂಸಿಸಿದೆ.

ಕೆಲವು ಬಗೆಯ ಸುಖಗಳು ಪರಿಣಾಮದಲ್ಲಿ ದುಃಖವನ್ನೇ ತರುವುದರಿಂದ ಅವು ಮಾತ್ರ ವರ್ಜ್ಯ. ಜಿಹ್ವಾಲೋಲುಪತೆ, ಅತಿಯಾದ ಲೈಂಗಿಕಕಾಮನೆಗಳು ದೇಹಮನಸ್ಸುಗಳ ಮೇಲೆ ಬೇಡದ ಒತ್ತಡವನ್ನು ಹೇರಿ ಆರೋಗ್ಯಕ್ಕೆ ಮಾರಕವಾಗುತ್ತವೆ. ಅಂತೆಯೇ ಮಾದಕದ್ರವ್ಯ ಸೇವನೆಯಂತಹ ದುಶ್ಚಟಗಳು ಸುಖಾಭಾಸವನ್ನು ಕಾಣಿಸಿ ನರಕದ ಕೂಪಕ್ಕೇ ತಳ್ಳಿಬಿಡುತ್ತವೆ. ಅಂತಹ ರಾಜಸ-ತಾಮಸ ಪ್ರವೃತ್ತಿಗಳು ಮಾತ್ರ ವರ್ಜ್ಯ.

ಅಂತೂ, ಆಹಾರ, ನಿದ್ರೆ, ವ್ಯಾಯಾಮ, ಮತ್ತು ಸಾತ್ತ್ವಿಕತೆಗಳು ನಮ್ಮ ಆರೋಗ್ಯದ ಆಧಾರಸ್ತಂಭಗಳೆಂಬುದನ್ನರಿತೆವು. ಈ ವಿಷಯದಲ್ಲಿ ಆಯುರ್ವೇದದ ಶ್ಲೋಕವೊಂದನ್ನು ನೆನಪಿಡಬಹುದು:

ಆಹಾರ-ನಿದ್ರಾ-ವ್ಯಾಯಾಮ-ಬ್ರಹ್ಮಚರ್ಯೈಃ ಸುಯೋಜಿತೈಃ |
ಶರೀರಂ ಧಾರ್ಯತೇ ನಿತ್ಯಮ್ ಆಗಾರಮಿವ ಧಾರಣೈಃ ||

(ಲೇಖಕರು ಆಯುರ್ವೇದ ವೈದ್ಯ)

ಆರೋಗ್ಯಕ್ಕಾಗಿ ವ್ಯಾಯಾಮ

ನಿಯಮಿತ ವ್ಯಾಯಾಮವೆಂಬುದು ಆಯ್ಕೆಯಲ್ಲ; ಶರೀರದ ನಿರ್ವಹಣೆಯ ಕಡ್ಡಾಯ ಅಂಶ. 'ಎಂತಹ ವ್ಯಾಯಾಮ ಮಾಡಬೇಕು' ಎಂಬುದು ಮಾತ್ರ ವೈಯಕ್ತಿಕ ಆಯ್ಕೆ



ಸಾಂದರ್ಭಿಕ ಚಿತ್ರ

ಡಾ. ಕಿರಣ್ ವಿ. ಎಸ್.

ಆರೋಗ್ಯದ ಪರಿಕಲ್ಪನೆ ನಮ್ಮೆಲ್ಲರಲ್ಲೂ ವಿಭಿನ್ನವಾಗಿ ಇದ್ದೀತು. ವಿಶ್ವ ಆರೋಗ್ಯ ಸಂಸ್ಥೆ 'ಆರೋಗ್ಯವೆಂಬುದು ಸಂಪೂರ್ಣ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮದ ಸ್ಥಿತಿ; ಅದು ಕೇವಲ ಕಾಯಿಲೆಯ ಅಥವಾ ಶರೀರ ದೌರ್ಬಲ್ಯದ ಅನುಪಸ್ಥಿತಿ ಅಲ್ಲ' ಎಂದು ವ್ಯಾಖ್ಯಾನ ಮಾಡಿದೆ. ಕಾಯಿಲೆಗಳ ನಿರ್ವಹಣೆ ಮಾಡುವ ಆಸ್ಪತ್ರೆಗಳು ನಮ್ಮನ್ನು ಆರೋಗ್ಯದತ್ತ ಒಂದು ಹೆಜ್ಜೆ ಮುನ್ನಡೆಸಬಲ್ಲವೇ ಹೊರತು, ಸಮಗ್ರ ಆರೋಗ್ಯವನ್ನು ನೀಡಲಾರವು. ಪರಿಪೂರ್ಣ ಆರೋಗ್ಯ ವೈಯಕ್ತಿಕ ಮತ್ತು ಸಾಮಾಜಿಕ ಜವಾಬ್ದಾರಿ. ಪ್ರಜೆಗಳ ಆರೋಗ್ಯ ನಿರ್ವಹಣೆಯ ಹೆಸರಿನಲ್ಲಿ ವೆಚ್ಚ ಮಾಡುವ ಪ್ರಪಂಚದ ಬಹುತೇಕ ದೇಶಗಳು ಆರೋಗ್ಯದ ಅಧಿಕೃತ ವ್ಯಾಖ್ಯಾನದತ್ತ ಗಮನ ಹರಿಸಿದಂತಿಲ್ಲ.

ದೈಹಿಕ ಆರೋಗ್ಯ ವೈಯಕ್ತಿಕ ಹೊಣೆಗಾರಿಕೆ. ಜೀವಿಗಳ ದೇಹವೆಂಬುದು ನಿಸರ್ಗ ವಿನ್ಯಾಸಗೊಳಿಸಿದ ಯಂತ್ರ. ಪ್ರಪಂಚದ ಬಹುತೇಕ ಮಾನವನಿರ್ಮಿತ ಯಂತ್ರಗಳು ಪ್ರಾಣಿಗಳ ವಿವಿಧ ಅಂಗಗಳ ಕಾರ್ಯದ ವಿಸ್ತರಣೆಯ ಮೂಲತತ್ತ್ವವನ್ನೇ ಹೊಂದಿವೆ. ಕೃತಕ ಯಂತ್ರಗಳ ಸಮಯಾನುಸಾರ ನಿರ್ವಹಣೆ ಹೇಗೆ ಮುಖ್ಯವೋ, ಶರೀರವೆಂಬ ಸಹಜಯಂತ್ರದ ನಿರ್ವಹಣೆಯೂ ಅಷ್ಟೇ ಮುಖ್ಯ. ಈ ನಿಟ್ಟಿನಲ್ಲಿ ವ್ಯಾಯಾಮದ ಪಾತ್ರ ಪ್ರಮುಖವಾದದ್ದು.

ವ್ಯಾಯಾಮದ ಬಗ್ಗೆ ಸಾಕಷ್ಟು ತಪ್ಪು ಕಲ್ಪನೆಗಳಿವೆ. ನಿಶ್ಚಿತ ಉದ್ದೇಶಗಳಿಗಾಗಿ ಹಲವರು ವ್ಯಾಯಾಮ ಮಾಡಲು ಆರಂಭಿಸುತ್ತಾರೆ. ಅಂತಹ ಉದ್ದೇಶ ಫಲಿಸದಿದ್ದರೆ ವ್ಯಾಯಾಮವನ್ನು ಹಳಿಯುತ್ತಾರೆ! ನಿಯಮಿತ ವ್ಯಾಯಾಮವೆಂಬುದು ಆಯ್ಕೆಯಲ್ಲ; ಶರೀರದ ನಿರ್ವಹಣೆಯ ಕಡ್ಡಾಯ ಅಂಶ. 'ಎಂತಹ ವ್ಯಾಯಾಮ ಮಾಡಬೇಕು' ಎಂಬುದು ಮಾತ್ರ ವೈಯಕ್ತಿಕ ಆಯ್ಕೆ. ಆಧುನಿಕ ಬದುಕು ಯಂತ್ರಗಳ ಮೇಲೆ ಅವಲಂಬಿತವಾದಷ್ಟೂ ಶರೀರದ ಪಾಲಿಗೆ ವ್ಯಾಯಾಮದ ಮಹತ್ವ ಅಧಿಕವಾಗುತ್ತಿದೆ.

ವ್ಯಾಯಾಮ ಆರೋಗ್ಯದ ಸಮಗ್ರ ನಿರ್ವಹಣೆಗೆ ನೆರವಾಗುತ್ತದೆ. ಮೂಳೆಗಳ, ಕೀಲುಗಳ, ಸ್ನಾಯುಗಳ ಸರಾಗ ಚಲನೆಗೆ, ಅವುಗಳಿಗೆ ಹಾನಿಯಾಗದಂತೆ ಕಾಪಾಡುವುದಕ್ಕೆ ನಿಯಮಿತ ವ್ಯಾಯಾಮ ಸಹಾಯಕಾರಿ. ವ್ಯಾಯಾಮದಿಂದ ದೀರ್ಘಕಾಲೀನ ಪ್ರಯೋಜನಗಳಿವೆ. ವೃದ್ಧಾಪ್ಯದಲ್ಲಿ ಕಾಡುವ ಕೀಲುನೋವುಗಳು, ಬೆನ್ನುನೋವು, ಬೊಜ್ಜು, ನಿಶ್ಶಕ್ತಿ, ಮೂಳೆಗಳ ಸವೆತ, ನಿದ್ರಾಹೀನತೆ ಮುಂತಾದವು ಬಹಳ ಕಾಲದಿಂದ ನಿಯಮಿತ ವ್ಯಾಯಾಮ ಮಾಡುವವರಲ್ಲಿ ಕಾಣುವ ಸಂಭವ ಕಡಿಮೆ. ಅಲ್ಲದೇ, ಹೃದ್ರೋಗ, ಮಧುಮೇಹ, ರಕ್ಷಕಶಕ್ತಿಯ ನ್ಯೂನತೆ, ಕೆಲವು ಬಗೆಯ ಕ್ಯಾನ್ಸರ್‌ಗಳು, ಖಿನ್ನತೆ ಮುಂತಾದ ಕೆಲವು ಅಸೌಖ್ಯಗಳು ಬಾರದಂತೆ ನಿಯಮಿತ ವ್ಯಾಯಾಮ ತಡೆಯಬಲ್ಲದು.

ವ್ಯಾಯಾಮ ಹೇಗಿರಬೇಕು?

ಸಲಕರಣೆಗಳನ್ನು ಉಪಯೋಗಿಸಿ, ಜಿಮ್‌ಗಳಿಗೆ ನೋಂದಾಯಿಸಿ ವ್ಯಾಯಾಮ ಮಾಡಬೇಕೆನ್ನುವುದು ಕಡ್ಡಾಯವಲ್ಲ. ಶರೀರಕ್ಕೆ ವಿಪರೀತ ತ್ರಾಸ ನೀಡಿ, ಬೆವರು ಬಸಿದು ಮಾಡುವ ವ್ಯಾಯಾಮ ಮಾತ್ರ ಫಲಕಾರಿಯೆಂದೂ ಇಲ್ಲ. ವ್ಯಾಯಾಮದ ಪ್ರಕ್ರಿಯೆಯಲ್ಲಿ ಮುಖ್ಯವಾದದ್ದು ಎಷ್ಟು ನಿಯಮಿತವಾಗಿ, ರೂಢಿ ತಪ್ಪದಂತೆ, ನಿಧಾನವಾಗಿ ಪ್ರಮಾಣವನ್ನು ವೃದ್ಧಿಸುತ್ತಾ ಮಾಡುತ್ತೇವೆ ಎಂಬುದು. ಸರಳವಾದ ದೀರ್ಘ ಶ್ವಾಸದೊಡನೆ ಮಾಡುವ ಚುರುಕು ನಡಿಗೆ, ಯೋಗ ಮತ್ತು ಪ್ರಾಣಾಯಾಮ, ಈಜು, ಬೈಸಿಕಲ್ ಸವಾರಿ, ಸೂರ್ಯನಮಸ್ಕಾರ, ಶಾಸ್ತ್ರೀಯ ನೃತ್ಯ – ಇಂತಹ ಯಾವುದಾದರೂ ಆಗಬಹುದು. ಆಗಾಗ್ಗೆ ಬದಲಿಸುತ್ತಾ ವಿವಿಧ ಬಗೆಯ ವ್ಯಾಯಾಮಶೈಲಿಗಳನ್ನು ರೂಢಿಸಿಕೊಳ್ಳಬಹುದು. ನಿಯಮಿತ ವ್ಯಾಯಾಮ ಸಾಧ್ಯವಿಲ್ಲ ಎನ್ನುವವರು ದಿನನಿತ್ಯದ ಜೀವನ ಶೈಲಿಯನ್ನೇ ಮಾರ್ಪಾಡು ಮಾಡಿಕೊಳ್ಳಬಹುದು. ಬಸ್ಸಿನ ಪಯಣಿಗರು ಒಂದೆರಡು ಹಂತ ಮುನ್ನವೇ ಇಳಿದು ಅಲ್ಲಿಂದ ಗಮ್ಯಕ್ಕೆ ನಡೆಯುವುದು, ಸ್ವಂತ ವಾಹನಸಂಚಾರಿಗಳು ಹದಿನೈದು ನಿಮಿಷ ಮೊದಲೇ ಕಚೇರಿಗೆ ತಲುಪಿ, ಸ್ವಲ್ಪ ಬಳಸು ಮಾರ್ಗದಲ್ಲಿ ನಡೆದು ಕೆಲಸಕ್ಕೆ ತಲುಪುವುದು, ಲಿಫ್ಟ್ ಬದಲಿಗೆ ಮೆಟ್ಟಿಲನ್ನೋ, ಇಳಿಜಾರನ್ನೋ ಬಳಸುವುದು; ಕಚೇರಿಯಲ್ಲಿ ಸಮಯ ದೊರೆತಾಗ ಒಂದು ಸುತ್ತು ನಡೆದು ಬರುವುದು, ಮನೆಯ ಸುತ್ತಮುತ್ತಲ ಅಂಗಡಿಗಳಿಂದ ಆವಶ್ಯಕ ವಸ್ತುಗಳನ್ನು ತರಲು ವಾಹನದ ಬದಲಿಗೆ ನಡೆದು ಹೋಗುವುದು – ಈ ರೀತಿಯ ಪ್ರಯತ್ನಗಳನ್ನೂ ಮಾಡಬಹುದು. ಇವೆಲ್ಲಾ ನಿಯಮಿತ ಸಮಯಕ್ಕೆ ಮಾಡುವ ಕ್ಲುಪ್ತ ವ್ಯಾಯಾಮದಷ್ಟು ಪ್ರಯೋಜನಕಾರಿ ಅಲ್ಲದಿದ್ದರೂ, ನಿಷ್ಕ್ರಿಯತೆಗಿಂತ ಹಲವಾರು ಪಟ್ಟು ಉತ್ತಮ. ಮುಂದೆ ವ್ಯಾಯಾಮ ಪದ್ಧತಿಯನ್ನು ಬಳಸಿಕೊಳ್ಳುವ ಸ್ಫೂರ್ತಿ ಕೂಡ ಆಗಬಲ್ಲವು.

ಶರೀರದ ವ್ಯಾಯಾಮಕ್ಕೆ ಮನಸ್ಸನ್ನು ಸಿದ್ಧಗೊಳಿಸುವುದು ಎಲ್ಲದಕ್ಕಿಂತ ಮುಖ್ಯ! ನಮ್ಮ ದೀರ್ಘಕಾಲಿಕ ಒಳಿತನ್ನು ಬಲವಾಗಿ ಪ್ರತಿಪಾದಿಸುವ ಮನಸ್ಸು ನಮ್ಮ ಗುರುವಾದಾಗ ಬಾಹ್ಯಸ್ಫೂರ್ತಿಯ ಆಗತ್ಯವಿರುವುದಿಲ್ಲ.

(ಲೇಖಕರು ವೈದ್ಯರು)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಮೂಲ ಸಮಾನುಪಾತದ ಪ್ರಮೇಯ

ಎಸ್ಸೆಸ್ಸೆಲ್ಸಿ

ಗಣಿತ

ಪ್ರಮೇಯ: ತ್ರಿಭುಜದ ಎರಡು ಬಾಹುಗಳನ್ನು ಎರಡು ವಿಭಿನ್ನ ಬಿಂದುಗಳಲ್ಲಿ ಛೇದಿಸುವಂತೆ ಒಂದು ಬಾಹುವಿಗೆ ಸಮಾನಾಂತರವಾಗಿ ಎಳೆದ ಸರಳ ರೇಖೆಯು ಉಳಿದೆರೆಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುತ್ತದೆ.



ಸಾಧನೆ: ΔABC ಯಲ್ಲಿ BC ಗೆ ಸಮಾನಾಂತರವಾಗಿರುವಂತೆ ಎಳೆದ ರೇಖೆಯು AB ಮತ್ತು AC ಗಳನ್ನು ಕ್ರಮವಾಗಿ D ಮತ್ತು E ಬಿಂದುಗಳಲ್ಲಿ ಛೇಧಿಸಿವೆ. ನಾವು ಸಾಧಿಸಬೇಕಾಗಿರುವುದು $\frac{AD}{DB} = \frac{AE}{EC}$, BE ಮತ್ತು CD ಗಳನ್ನು ಸೇರಿಸಬೇಕು, $DM \perp AC$ ಮತ್ತು $EN \perp AB$ ಎಳೆಯಬೇಕು.

ಈಗ: ΔADE ಯ ವಿಸ್ತೀರ್ಣ

$\frac{1}{2} \times$ ಪಾದ $\times$ ಎತ್ತರ $= \frac{1}{2} \times AD \times EN$

ΔADE ಯ ವಿಸ್ತೀರ್ಣವನ್ನು ವಿ (ADE) ಎಂದು ಸೂಚಿಸಬಹುದು.

ಆದ್ದರಿಂದ ವಿ $(ADE) = {}^{1}/_{2} \times AD \times EN$

ಅದೇ ರೀತಿ ವಿ $(BDE) = {}^{1}/_{2} \times DB \times EN$

ವಿ $(ADE) = {}^{1}/_{2} \times AE \times DM$ ಮತ್ತು

ವಿ $(DEC) = {}^{1}/_{2} \times EC \times DM$

ಆದ್ದರಿಂದ $\frac{ವಿ\,(\Delta ADE)}{ವಿ\,(\Delta\ BDE)} = \frac{{}^{1}/_{2} \times AD \times EN}{{}^{1}/_{2} \times DB \times EN} = \frac{AD}{DB}$ --- (1)

ಮತ್ತು $\frac{ವಿ\,(\Delta ADE)}{ವಿ\,(\Delta\ CED)} = \frac{{}^{1}/_{2} \times AE \times DM}{{}^{1}/_{2} \times EC \times DM} = \frac{AE}{EC}$ --- (2)

ΔADE ಮತ್ತು DEC ಗಳು ಒಂದೇ ಪಾದ DE DE ಮತ್ತು BC ll DE ರೇಖೆಗಳ ನಡುವೆ ಇರುವುದನ್ನು ಗಮನಿಸಿ.

ಆದ್ದರಿಂದ ವಿ $(\Delta\, BDE) =$ ವಿ (ΔDEC) --- (3)

ಆದ್ದರಿಂದ (1), (2) ಮತ್ತು (3) ರಿಂದ

$$\frac{AD}{DB} = \frac{AE}{EC}$$

ಈ ಪ್ರಮೇಯದ ವಿಲೋಮವೂ ಸರಿಯೇ? ಅದರ ವಿಲೋಮವನ್ನು ತಿಳಿಯೋಣ.

ಪ್ರಮೇಯ: ತ್ರಿಭುಜದ ಯಾವುದಾದರೂ ಎರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುವ ರೇಖೆಯು ಅದರ ಮೂರನೇ ಬಾಹುವಿಗೆ ಸಮಾನಾಂತರವಾಗಿರುತ್ತದೆ.

$\frac{AD}{DB} = \frac{AE}{EC}$ ----ಆಗುವಂತೆ ಮತ್ತು DE ಯು BC ಗೆ



ಸಮಾನಾಂತರವಲ್ಲವೆಂದು ಭಾವಿಸಿ DE ರೇಖೆಯನ್ನು ತೆಗೆದುಕೊಂಡು ಈ ಪ್ರಮೇಯವನ್ನು ಸಾಧಿಸಬಹುದು.

DE ಯು BC ಸಮಾಂತರವಲ್ಲವಾದರೆ DE' ll BC ಎಳೆಯಿರಿ

ಆದ್ದರಿಂದ

$$\frac{AD}{DB} = \frac{AE'}{E'C}\ , \ \frac{AE}{EC} = \frac{AE'}{E'C}$$

ಮೇಲಿನ ಸಮೀಕರಣದ ಎರಡೂ ಬದಿಗೂ 1ನ್ನು ಸೇರಿಸುವುದರಿಂದ E ಮತ್ತು E' ಗಳು ಪರಸ್ಪರ ಹೊಂದಿಕೆಯಾಗುತ್ತವೆ.

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ರಸಾಯನಶಾಸ್ತ್ರ ವಿಭಾಗದ 'ಪ್ರಾಪರ್ಟೀಸ್ ಆಫ್ ಆ್ಯಸಿಡ್ಸ್ ಅಂಡ್ ಬೇಸಸ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ದ್ವಿಮಾನ ಪ್ರಕ್ರಿಯೆಗಳು

ದ್ವಿತೀಯ ಪಿಯುಸಿ

ಗಣಿತ

ಶಾಲಾ ದಿನಗಳಿಂದಲೂ ನೀವು ಮೂಲಭೂತ ಪ್ರಕ್ರಿಯೆಗಳಾದ ಸಂಕಲನ, ವ್ಯವಕಲನ, ಗುಣಾಕಾರ ಮತ್ತು ಭಾಗಾಕಾರಗಳ ಬಗ್ಗೆ ತಿಳಿದುಕೊಂಡಿದ್ದೀರಿ. ಅತಿ ಮುಖ್ಯವಾದ ಪ್ರಕ್ರಿಯೆಗಳಾಗಿ a ಮತ್ತು b ಎಂಬ ಯಾವುದಾದರೂ ಎರಡು ಸಂಖ್ಯೆಗಳನ್ನು ತೆಗೆದುಕೊಂಡು ಅವುಗಳ ಸಂಯೋಜನೆಯಿಂದ a + b ಅಥವಾ a-b ಅಥವಾ ab ಅಥವಾ a/b, $b \neq 0$ ಆಗುತ್ತದೆ. ಇದರಿಂದ ಏಕಕಾಲದಲ್ಲಿ ಮೂರು ಸಂಖ್ಯೆಗಳನ್ನು ಕೂಡಿಸಲು ಅವಶ್ಯಕತೆಯಿದ್ದರೆ ಆ ಮೊದಲು ಎರಡು ಸಂಖ್ಯೆಗಳನ್ನು ಕೂಡಿಸಬೇಕು ಮತ್ತು ಒಂದು ನಿರ್ಣಯಕ್ಕೆ 3ನೇ ಸಂಖ್ಯೆಯನ್ನು ಕೂಡಿಸಬೇಕು.

ದ್ವಿಮಾನ ಎಂದರೆ ಎರಡು ಎಂದರ್ಥ. ಈಗ ನಾವು ದ್ವಿಮಾನ ಕ್ರಿಯೆಯ ಸಾಮಾನ್ಯ ವ್ಯಾಖ್ಯಾನ ಕೊಡಬೇಕಾದರೆ ಮೇಲಿನ ಎಲ್ಲಾ 4 ಕ್ರಿಯೆಗಳನ್ನು ಒಳಗೊಂಡಂತೆ ಹಾಗೂ ಸಂಖ್ಯಾಗಣವನ್ನು ಅನಿಯಂತ್ರಿಕ ಗಣ x ಆಗಿ ಬದಲಿಸಬೇಕು. ನಂತರ ಸಾಮಾನ್ಯ ದ್ವಿಮಾನ ಕ್ರಿಯೆಯೆಂದರೆ x ಗಣದಲ್ಲಿರುವ ಯಾವುದೇ ಜೋಡಿ a ಮತ್ತು b ಗಣಾಂಶಗಳ ಸಹಯೋಗದ ಕ್ರಿಯೆಯಿಂದ ಬರುವ ಗಣಾಂಶವು ಸಹ x ನಲ್ಲಿರುತ್ತದೆ ಎನ್ನುವುದು ದ್ವಿಮಾನ ಕ್ರಿಯೆಯಾಗಿದೆ.

ವಾಖ್ಯೆ

ಒಂದು ದ್ವಿಮಾನ ಕ್ರಿಯೆ *A ಗಣದ ಮೇಲೆ $*A \times A \rightarrow A$ ಉತ್ಪನ್ನವಾಗಿರುತ್ತದೆ. *(a,b) ಯನ್ನು (a*b) ಸಂಕೇತದಿಂದ ಸೂಚಿಸುತ್ತಾರೆ.

ಉದಾಹರಣೆ: ಸಂಕಲನ, ವ್ಯವಕಲನ ಮತ್ತು ಗುಣಾಕಾರಗಳು ಗಣ R ಮೇಲೆ ದ್ವಿಮಾನ ಕ್ರಿಯೆಗಳಾಗಿವೆ. ಆದರೆ ಭಾಗಾಕಾರ R ನ ಮೇಲೆ ದ್ವಿಮಾನ ಕ್ರಿಯೆ ಆಗಿಲ್ಲವೆಂದು ತೋರಿಸಿ. ಹಾಗೆಯೇ ಭಾಗಾಕಾರವು R_0 ನ (ಶೂನ್ಯವಲ್ಲದ ವಾಸ್ತವಿಕ ಸಂಖ್ಯಾಗಣ) ಮೇಲೆ ದ್ವಿಮಾನ ಕ್ರಿಯೆಯಾಗಿದೆ ಎಂದು ತೋರಿಸಿ.

ಪರಿಹಾರ:

- $+ : R \times R \rightarrow R$ನ್ನು $(a,b) \rightarrow a + b$ ಎಂದು ಕೊಟ್ಟಿದೆ.

$- : R \times R \rightarrow R$ ನ್ನು $(a,b) \rightarrow a-b$ ಎಂದು ಕೊಟ್ಟಿದೆ.

$\times : R \times R \rightarrow R$ ನ್ನು $(a,b) \rightarrow ab$ ಎಂದು ಕೊಟ್ಟಿದೆ.

+, -, × ಗಳು ಉತ್ಪನ್ನಗಳಾಗಿರುವ ಕಾರಣದಿಂದ ಅವುಗಳ R ಮೇಲೆ ದ್ವಿಮಾನ ಕ್ರಿಯೆಗಳಾಗಿವೆ.

ಆದರೆ $\div : R \times R \rightarrow R$ ನ್ನು $(a,b) = a/b$ ಕೊಟ್ಟಾಗ ÷ ಉತ್ಪನ್ನವಾಗಿರುವುದಿಲ್ಲ.

ಆದ್ದರಿಂದ ÷ ದ್ವಿಮಾನ ಕ್ರಿಯೆಯಾಗಿರುವುದಿಲ್ಲ. b = o ಆದಾಗ a/b ವ್ಯಾಖ್ಯಾನಿಸಲ್ಪಡುವುದಿಲ್ಲ.

ಆದರೆ $\div : R_+ \times R_+ \rightarrow R_+$ ಆದಾಗ $(a,b) \rightarrow a/b$ ಎಂದು ಉತ್ಪನ್ನವಾಗುತ್ತದೆ. ಆದ್ದರಿಂದ $\div : R_+$ ಮೇಲೆ ದ್ವಿಮಾನ ಕ್ರಿಯೆಯಾಗುತ್ತದೆ.

ಉದಾಹರಣೆ: ವ್ಯವಕಲನ ಮತ್ತು ಭಾಗಾಕಾರಗಳು N ಗಣದ ಮೇಲೆ ದ್ವಿಮಾನ ಕ್ರಿಯೆಯಲ್ಲ ಎಂದು ತೋರಿಸಿ.

ಪರಿಹಾರ: $N \times N \rightarrow N$ ನ್ನು (a,b) = a-b ಎಂಬ ಕೊಟ್ಟಾಗ ದ್ವಿಮಾನ ಕ್ರಿಯೆಯಾಗಿರುವುದಿಲ್ಲ. ' -' ಕ್ರಿಯೆಯಲ್ಲಿ (3x5) ಪ್ರತಿಬಿಂಬವು3-5 ಅಲ್ಲದೆ $3-5 = -2 \notin N$ ನ್ನು ಕೊಟ್ಟಾಗ ದ್ವಿಮಾನ ಕ್ರಿಯೆಯಾಗಿಲ್ಲ. (3,5) ಪ್ರತಿಬಿಂಬವು $3 \div 5 = 3/5 \notin N$.

ಪರಿವರ್ತನೀಯ ನಿಯಮ

ಸಾಮಾನ್ಯವಾಗಿ ಗಮನಿಸಿದಾಗ 3 ಮತ್ತು 4 ಗಳನ್ನು ಯಾವುದೇ ವಿಧದಲ್ಲಿ ಕೂಡಿದಾಗ ನಿರ್ಣಯ ಒಂದೇ ಆಗಿರುತ್ತದೆ. ಅಂದರೆ 3 + 4 = 4 + 3. ಆದರೆ ಇದನ್ನು ಕಳೆದರೆ ಬೇರೆ ಬೇರೆ ನಿರ್ಣಯಗಳನ್ನು ಕೊಡುತ್ತದೆ. ಅಂದರೆ 3-4/ 4-3 ವ್ಯವಕಲನ ಮತ್ತು ಭಾಗಾಕಾರಗಳು ಬೇರೆ ಬೇರೆ ನಿರ್ಣಯಗಳನ್ನು ನೀಡುತ್ತದೆ. ಆದ ಕಾರಣ ವ್ಯವಕಲನ ಮತ್ತು ಭಾಗಾಕಾರಗಳು ಪರಿವರ್ತನೀಯವಲ್ಲ.

ವ್ಯಾಖ್ಯೆ

a*b = b*a v ಆದರೆ, ದ್ವಿಮಾನ ಕ್ರಿಯೆ * ನ್ನು ಗಣ x ನ ಮೇಲೆ ಪರಿವರ್ತನೀಯ ಎಂದು ಕರೆಯುತ್ತಾರೆ.

ಉದಾಹರಣೆ: $+ : R \times R \rightarrow R$ ಮತ್ತು $\times : R \times R \rightarrow R$ ಗಳು ಪರಿವರ್ತನೀಯ ದ್ವಿಮಾನ ಕ್ರಿಯೆಗಳು. ಆದರೆ $- : R \times R \rightarrow R$ ಮತ್ತು $\div : R_0 \times R_0 \rightarrow R_0$ ಪರಿವರ್ತನೀಯವಾಗಿಲ್ಲ ಎಂದು ತೋರಿಸಿ.

ಪರಿಹಾರ:

a + b = b + a ಮತ್ತು axb = bxa v $a,b \in R$ ಆದ್ದರಿಂದ + ಮತ್ತು x ಪರವರ್ತನೀಯ ದ್ವಿಮಾನ ಕ್ರಿಯೆಗಳು.

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಎಲೆಕ್ಟ್ರಿಕ್ ಚಾರ್ಜಸ್ ಅಂಡ್ ಫೀಲ್ಡ್ಸ್ –2' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಅತಿಭೋಗ, ಕೋಪ ಮತ್ತು ದುರಾಸೆ– ಈ ಮೂರೂ ಅತ್ಯಂತ ಪ್ರಬಲ ದುಷ್ಟಶಕ್ತಿಗಳು.

-ತುಳಸೀದಾಸ

ಜಾತಿವಾರು ಮೀಸಲಾತಿ ಹೋರಾಟ ಸಚಿವರ ಪಾಲ್ಗೊಳ್ಳುವಿಕೆ ಅನೈತಿಕ

ರಾಜ್ಯದಲ್ಲಿ ವಿವಿಧ ಸಮುದಾಯಗಳು ಮೀಸಲಾತಿಗಾಗಿ ನಡೆಸುತ್ತಿರುವ ಹೋರಾಟಗಳಲ್ಲಿ ಕರ್ನಾಟಕ ಸರ್ಕಾರದ ಸಚಿವರು ನೇರವಾಗಿ ಗುರುತಿಸಿಕೊಂಡಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯ ಜಾತ್ಯತೀತ ಸರ್ಕಾರದ ಪರಿಕಲ್ಪನೆ ಹಾಗೂ ಸಾಮಾಜಿಕ ನ್ಯಾಯದ ಆಶಯಗಳಿಗೆ ವಿರುದ್ಧವಾದುದು. ಕುರುಬ, ಪಂಚಮಸಾಲಿ, ವಾಲ್ಮೀಕಿ ಸಮುದಾಯಗಳು ನಡೆಸುತ್ತಿರುವ ಹೋರಾಟಗಳಲ್ಲಿ ಕೆಲವು ಸಚಿವರು ಮತ್ತು ಆಡಳಿತಾರೂಢ ಪಕ್ಷದ ಶಾಸಕರು ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಸಾಂವಿಧಾನಿಕ ಹುದ್ದೆಗಳನ್ನು ಅಲಂಕರಿಸಿರುವವರು ನಿರ್ದಿಷ್ಟ ಜಾತಿಯ ಪರ ಬಹಿರಂಗವಾಗಿ ವಕಾಲತ್ತು ವಹಿಸಬಾರದು ಎನ್ನುವ ಸಾಮಾನ್ಯಜ್ಞಾನವೂ ಇವರಿಗೆ ಇದ್ದಂತಿಲ್ಲ. ರಾಜಕೀಯವಾಗಿ ಪ್ರಾಬಲ್ಯ ಹೊಂದಿರುವ ಜಾತಿಗಳು ಮೀಸಲಾತಿ ದೊರಕಿಸಿಕೊಳ್ಳಲು ನಡೆಸುತ್ತಿರುವ ಹೋರಾಟಗಳಲ್ಲಿ ಸರ್ಕಾರದ ಭಾಗವಾಗಿ ಇರುವವರು ತೊಡಗಿ-ಕೊಂಡಿದ್ದಾರೆ. ಧ್ವನಿ ಇಲ್ಲದ ಸಣ್ಣಪುಟ್ಟ ಜಾತಿಗಳಲ್ಲಿ ಇದು ಆತಂಕ ಹುಟ್ಟಿಸುವಂತಿದೆ. ಸಚಿವರ ಭಾಗವಹಿಸುವಿಕೆಯು ರಾಜ್ಯ ಸರ್ಕಾರವು ಸಾಮಾಜಿಕ ನ್ಯಾಯದ ವಿರುದ್ಧವಿದೆಯೇ ಎನ್ನುವ ಅನುಮಾನ ಮೂಡಿಸುವಂತಿದೆ. ಸ್ವಜಾತಿ ಜನರನ್ನು ಸಂಘಟಿಸುವ ಕೆಲಸಗಳಲ್ಲಿ ತೊಡಗಿಕೊಳ್ಳಲೇ-ಬೇಕು ಎಂದಿದ್ದರೆ ಹಾಗೆ ಪಾಲ್ಗೊಳ್ಳುವ ಮುನ್ನ ತಾವು ಪ್ರತಿನಿಧಿಸುವ ಸಾಂವಿಧಾನಿಕ ಸ್ಥಾನಗಳಿಗೆ ರಾಜೀನಾಮೆ ನೀಡುವುದು ಅಗತ್ಯ. ಜಾತ್ಯತೀತ ಹುದ್ದೆ ಹಾಗೂ ಜಾತಿ ಸಂಘಟನೆ, ಎರಡರಲ್ಲೂ ಏಕಕಾಲದಲ್ಲಿ ಗುರುತಿಸಿಕೊಳ್ಳುವುದು ಅನೈತಿಕ ಹಾಗೂ ಸಂವಿಧಾನದ ಆಶಯಗಳಿಗೆ ವಿರುದ್ಧ. ಎಲ್ಲ ಸಮುದಾಯಗಳನ್ನು ಪ್ರತಿನಿಧಿಸಬೇಕಾದ ಸಚಿವರು ನಿರ್ದಿಷ್ಟ ಜಾತಿಯೊಂದರ ಹಿತಾಸಕ್ತಿ ರಕ್ಷಣೆಗೆ ನಿಲ್ಲುವುದು ಯಾವ ದೃಷ್ಟಿಯಿಂದಲೂ ಸಮರ್ಥ-ನೀಯವಲ್ಲ. ಕೊರೊನಾ ಸೋಂಕಿನ ಆತಂಕ ಇನ್ನೂ ಬೂದಿ ಮುಚ್ಚಿದ ಕೆಂಡದಂತಿರುವಾಗ, ಜನರಲ್ಲಿ ಸಾಮಾಜಿಕ ಜಾಗೃತಿ ಮೂಡಿಸಬೇಕಾಗಿದ್ದ ಹಾಗೂ ಜನಪರ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ತೊಡಗಿಕೊಳ್ಳಬೇಕಾಗಿದ್ದ ಸಚಿವರು ಹಾಗೂ ಶಾಸಕರು ಜಾತಿ ರಾಜಕಾರಣದಲ್ಲಿ ಸಕ್ರಿಯರಾಗಿದ್ದಾರೆ. ಇದು, ಜನಪರ ರಾಜಕಾರಣದ ಲಕ್ಷಣವಲ್ಲ; ಸರ್ಕಾರಕ್ಕೆ ಶೋಭೆ ತರುವಂತಹ ನಡವಳಿಕೆಯೂ ಅಲ್ಲ. ಕೇಂದ್ರ ಹಾಗೂ ರಾಜ್ಯ ಎರಡರಲ್ಲೂ ತಮ್ಮ ಪಕ್ಷದ್ದೇ ಸರ್ಕಾರ ಇರುವಾಗ, ಇವರು ನಡೆಸುತ್ತಿರುವ ಹೋರಾಟ ಯಾರ ವಿರುದ್ಧ ಎನ್ನುವುದೂ ಅಸ್ಪಷ್ಟವಾಗಿದೆ.

ಜಾತಿ ಆಧಾರಿತ ಹೋರಾಟಗಳಲ್ಲಿ ಭಾಗಿಯಾಗಲು ಬಯಸುವ ಸಚಿವರಿಗೆ ತಮ್ಮ ಸ್ಥಾನ ತ್ಯಜಿಸುವಂತೆ ಬಿಜೆಪಿ ವರಿಷ್ಠರು ಸ್ಪಷ್ಟವಾಗಿ ಹೇಳಬೇಕು

ಶಿಸ್ತಿನ ಪಕ್ಷವೆಂದು ಹೇಳಿಕೊಳ್ಳುವ ಬಿಜೆಪಿಯ ಪ್ರತಿನಿಧಿಗಳು ಸಮಾಜವನ್ನು ಜಾತಿ ಗುಂಪುಗಳಾಗಿ ವಿಭಜಿಸುವ ರಾಜಕಾರಣದಲ್ಲಿ ತೊಡಗಿಕೊಂಡಿದ್ದಾರೆ. ಜಾತಿಗಳ ಓಲೈಕೆಯ ರಾಜಕಾರಣವನ್ನು ವಿರೋಧಿಸುತ್ತ, ಧರ್ಮದ ಹೆಸರಿನಲ್ಲಿ ಧ್ರುವೀಕರಣ ರಾಜಕಾರಣದಲ್ಲಿ ತೊಡಗಿಕೊಂಡಿದ್ದ ಪಕ್ಷ ಇದೀಗ ತಾನೇ ಜಾತಿಗಳನ್ನು ಓಲೈಸುವ ರಾಜಕಾರಣದಲ್ಲಿ ಭಾಗಿಯಾಗಿದೆ; 'ಹಿಂದುತ್ವದ ಮಂತ್ರ'ಕ್ಕೆ ವಿರುದ್ಧವಾಗಿ ಜಾತಿ ಸಂಘಟನೆಗಳನ್ನು ಬಲಪಡಿಸುವ ಪ್ರಯತ್ನಗಳಲ್ಲಿ ತೊಡಗಿದೆ. ಈವರೆಗೆ ಪಕ್ಷ ಪ್ರತಿಪಾದಿಸಿಕೊಂಡು ಬಂದ ನಿಲುವುಗಳಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವ ಮೂಲಕ, ಜಾತಿ ರಾಜಕಾರಣದಲ್ಲಿ ತಾವು ಭಿನ್ನವೇನಲ್ಲ ಎನ್ನುವುದನ್ನು ಬಿಜೆಪಿ ನಾಯಕರು ಸಾಬೀತುಪಡಿಸಲು ಹೊರಟಂತಿದೆ. ಜಾತಿವಾರು ಮೀಸಲಾತಿ ಹೋರಾಟಗಳಲ್ಲಿ ತೊಡಗಿಕೊಂಡಿರುವ ಸಚಿವರಿಗೆ ಪಕ್ಷದ ವರಿಷ್ಠರು ಎಚ್ಚರಿಕೆ ನೀಡಿದ್ದು, ಸಂಪುಟ ಸದಸ್ಯರು ಬೀದಿಗಿಳಿಯುವ ಪ್ರಯತ್ನವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಡೆಯಬೇಕಿತ್ತು ಎಂದು ಅಭಿಪ್ರಾಯಪಟ್ಟಿದ್ದಾರೆ ಎನ್ನಲಾಗಿದೆ. ಮಗುವನ್ನು ಚಿವುಟುತ್ತಲೇ ತೊಟ್ಟಿಲು ತೂಗುವ ಇಂಥ ಸೂಚನೆ ಮತ್ತು ಎಚ್ಚರಿಕೆಗಳಿಂದ ಯಾವ ಉಪಯೋಗವೂ ಇಲ್ಲ. ಜಾತಿ ಆಧಾರಿತ ಹೋರಾಟಗಳಲ್ಲಿ ಭಾಗಿಯಾಗುವ ಸಚಿವರಿಗೆ ತಮ್ಮ ಸ್ಥಾನ ತ್ಯಜಿಸುವಂತೆ ಸ್ಪಷ್ಟವಾಗಿ ಹೇಳಬೇಕು. ಜಾತಿ ಸಂಘಟನೆ ಅಥವಾ ಹೋರಾಟದ ಚಟುವಟಿಕೆಗಳಿಂದ ಸರ್ಕಾರ ಅಂತರ ಕಾಪಾಡಿಕೊಳ್ಳಬೇಕು. ಸಮಾಜದ ಸರ್ವಾಂಗೀಣ ಅಭಿವೃದ್ಧಿಯು ಸರ್ಕಾರದ ಆದ್ಯತೆ ಆಗಿರಬೇಕೇ ವಿನಾ ಜಾತಿ ಆಧಾರಿತ ಕಾರ್ಯಕ್ರಮಗಳಲ್ಲ. ಇನ್ನು ಮುಂದಾದರೂ ಜಾತಿ ಆಧಾರಿತ ಹೋರಾಟಗಳಿಂದ ಸರ್ಕಾರದ ಪ್ರತಿನಿಧಿಗಳು ದೂರವಿರಬೇಕು. ಅದು ಸಾಧ್ಯವಾಗದೇ ಹೋದಲ್ಲಿ ಅಧಿಕಾರದಿಂದ ದೂರವಿರಬೇಕು. 'ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ' ಎನ್ನುವ ದ್ವಂದ್ವಕ್ಕೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶ ಇರಬಾರದು.

ದಿನದ ಟ್ವೀಟ್

ಜಾಗೃತಿಯಿಂದ ಯಶಸ್ಸು

ಫೆಬ್ರುವರಿ 15– ಬಾಲ್ಯದಲ್ಲಿ ಕ್ಯಾನ್ಸರ್‌ಪೀಡಿತರಾಗುವುದರ ವಿರುದ್ಧ ಜಾಗೃತಿ ಮೂಡಿಸುವ ಅಂತರರಾಷ್ಟ್ರೀಯ ದಿನ. ಮಕ್ಕಳಲ್ಲಿ ಕ್ಯಾನ್ಸರ್ ಗುಣವಾಗುವ ಸಾಧ್ಯತೆ ಅಧಿಕವಾಗಿರುತ್ತದೆ. ಜಾಗೃತಿ ಮತ್ತು ಆರಂಭಿಕ ಪತ್ತೆಯಿಂದ, ಜೀವ ಉಳಿಸುವಲ್ಲಿ ಯಶಸ್ಸು ಸಾಧಿಸಲು ಸಾಧ್ಯ. #PediatricCancer

ಮಾನಸಾ ಶೇಷಗಿರಿ, ಆಡಿಯಾಲಜಿಸ್ಟ್

25 ವರ್ಷಗಳ ಹಿಂದೆ

ಶುಕ್ರವಾರ, 16-2-1996

- **ಕನ್ನಡ ಚಿತ್ರಪ್ರದರ್ಶನ ಕಡ್ಡಾಯ ಚಿತ್ರಮಂದಿರ ಟಿಕೆಟ್ ದರ ಬಾಡಿಗೆ ದರ ಇಳಿಕೆ**

ಬೆಂಗಳೂರು, ಫೆ. 15– ಪ್ರದರ್ಶಕರು ಹಾಗೂ ನಿರ್ಮಾಪಕ-ನಿರ್ದೇಶಕರ ನಡುವಿನ ಭಿನ್ನಾಭಿಪ್ರಾಯದಿಂದ ಕನ್ನಡ ಚಲನಚಿತ್ರರಂಗದಲ್ಲಿ ಉಂಟಾಗಿದ್ದ ಬಿಕ್ಕಟ್ಟು ಅಂತ್ಯಗೊಂಡಿದೆ.

ಮುಖ್ಯಮಂತ್ರಿ ಎಚ್.ಡಿ.ದೇವೇಗೌಡ ಅವರ ಸಮ್ಮುಖದಲ್ಲಿ ನಡೆದ ತ್ರಿಪಕ್ಷೀಯ ಸಭೆಯಲ್ಲಿ, ಕನ್ನಡ ಚಿತ್ರಗಳಿಗೆ ಆದ್ಯತೆ, ಚಿತ್ರ-ಮಂದಿರಗಳ ಪ್ರವೇಶ ದರ ಹಾಗೂ ಬಾಡಿಗೆ ದರ ಇಳಿತ, ಆರು ತಿಂಗಳ ಕಾಲ ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನ ಕುರಿತಾದ ಪ್ರಮುಖ ಬೇಡಿಕೆಗಳ ಬಗ್ಗೆ ಇಂದು ಚರ್ಚೆ ನಡೆದು, ಅಂತಿಮವಾಗಿ ಸರ್ವಸಮ್ಮತ ತೀರ್ಮಾನವನ್ನು ಕೈಗೊಳ್ಳಲಾಯಿತು.

ಸಭೆಯಲ್ಲಿ ಚಿತ್ರೋದ್ಯಮದ ಪಾರ್ವತಮ್ಮ ರಾಜ್‌ಕುಮಾರ್, ಕೆ.ಎಸ್.ಎಲ್. ಸ್ವಾಮಿ (ರವಿ), ಡಾ. ರಾಜ್‌ಕುಮಾರ್, ಸಂಸದೀಯ ವ್ಯವಹಾರಗಳ ಸಚಿವ ಎಂ.ಸಿ. ನಾಣಯ್ಯ ಮೊದಲಾದವರು ಪಾಲ್ಗೊಂಡಿದ್ದರು.

- **ಬೆಳಗಾವಿ, ಮಂಗಳೂರಿಗೆ ಶೀಘ್ರ ಪೊಲೀಸ್ ಕಮಿಷನರ್ ನೇಮಕ**

ಬೆಂಗಳೂರು, ಫೆ. 15– ಬೆಳಗಾವಿ ಮತ್ತು ಮಂಗಳೂರು ನಗರಗಳು ಬೃಹತ್ತಾಗಿ ಬೆಳೆದಿರುವ ಹಿನ್ನೆಲೆಯಲ್ಲಿ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು ಈ ಎರಡೂ ನಗರಗಳಿಗೆ ಅತಿ ಶೀಘ್ರದಲ್ಲಿಯೇ ಪೊಲೀಸ್ ಕಮಿಷನರ್‌ಗಳನ್ನು ನೇಮಿಸಲಾಗುವುದು ಎಂದು ಮುಖ್ಯಮಂತ್ರಿ ಎಚ್.ಡಿ. ದೇವೇಗೌಡ ಅವರು ಪ್ರಕಟಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 16-2-1971

- **ಜನಸಂಘ ತಮ್ಮನ್ನು ಕೊಲ್ಲುವ ಮಾತಾಡುತ್ತಿದೆ ಎಂದು ಪ್ರಧಾನಿ ಆರೋಪ**

ನವದೆಹಲಿ, ಫೆ. 15– ರಾಜಕೀಯವಾಗಿ ತಮ್ಮನ್ನು ಸೋಲಿಸಲು ವಿಫಲವಾಗಿರುವ ಜನಸಂಘ ತಮ್ಮನ್ನು ಕೊಲ್ಲುವ ಮಾತನಾಡುತ್ತಿದೆ ಎಂದು ಪ್ರಧಾನಿ ಇಂದಿರಾ ಗಾಂಧಿಯವರು ಇಂದು ಇಲ್ಲಿ ಆರೋಪಿಸಿದರು.

ಮಧ್ಯ ದೆಹಲಿಯ ಅಜ್ಮಲ್ ಖಾನ್ ಪಾರ್ಕಿನಲ್ಲಿ ಬೃಹತ್ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ತಮ್ಮನ್ನು ಕೊಲ್ಲಬೇಕೆಂದಿದ್ದರೆ ಜನಸಂಘವು ಅದನ್ನು ನೇರವಾಗಿ ಹೇಳಲಿ, ಈ ಗುಸುಗುಸು ಮಾತೇಕೆ ಎಂದರು.

ಕೋಮು ಮನೋಭಾವ, ಭಾರತೀಕರಣದ ಮಾತು, ಭಾರತೀಯ ವಿಮಾನಾಪಹರಣದ ಪ್ರಶ್ನೆಯನ್ನು ರಾಜಕೀಯ ಬಂಡವಾಳ ಮಾಡಿಕೊಳ್ಳುತ್ತಿರುವುದು ಮೊದಲಾದವುಗಳಿ-ಗಾಗಿ ಜನಸಂಘವು ಪ್ರಧಾನಿಯವರ ಕಟು ವಾಕ್‌ಪ್ರಹಾರಕ್ಕೆ ಗುರಿಯಾಯಿತು.

- **ರಾಜ್ಯ ಸಂಪುಟದ ವಿಸ್ತರಣೆ ಸಂಭವ ಪಕ್ಷದ ಐಕ್ಯ ಕಾಪಾಡಲು ಕ್ರಮ**

ಬೆಂಗಳೂರು, ಫೆ. 15– ಕೆಲವು ಖಾತೆಗಳ ಬದಲಾವಣೆಗಳೊಡನೆ ಸದ್ಯದಲ್ಲೇ ರಾಜ್ಯದ ಮಂತ್ರಿಮಂಡಲದ ವಿಸ್ತರಣೆಯಾಗುವುದೆಂದು ರಾಜಕೀಯ ವಲಯಗಳಲ್ಲಿ ನಿರೀಕ್ಷಿಸಲಾಗಿದೆ.

ಸಚಿವರಾಗಿ ನೇಮಕವಾಗುವವರಲ್ಲಿ ಗುಲ್ಬರ್ಗದ ಶ್ರೀ ನೀಲಕಂಠ ರಾವ್ ಹಾಗೂ ಮದ್ದೂರಿನ ಶ್ರೀ ಮಂಚೇಗೌಡರ ಹೆಸರುಗಳು ಕೇಳಿಬರುತ್ತಿವೆ.

ಈಗ ಪೌರಾಡಳಿತದ ರಾಜ್ಯ ಸಚಿವರಾಗಿರುವ ಶ್ರೀ ಬಿ.ಎಂ.ಪಾಟೀಲ್ ಅವರಿಗೆ ಸಚಿವರಾಗಿ ಬಡ್ತಿ ದೊರಕುವುದು ಖಾತರಿಯೆಂದು ಈ ವಲಯಗಳಲ್ಲಿ ಭಾವಿಸಲಾಗಿದೆ.

ಒಡಿಶಾದ ಎರಡು ಜಿಲ್ಲೆಗಳಲ್ಲಿ ಈಗ ಸಣ್ಣ ಮಕ್ಕಳಿಗೆ ಕಾಲೇಜು ವಿದ್ಯಾರ್ಥಿಗಳೇ 'ಗುರು'ಗಳು

ಯುವಚೇತನಗಳ ಶಿಕ್ಷಣ ಕ್ರಾಂತಿ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಕೊರೊನಾ ಸೋಂಕು ಕಾರಣದಿಂದ ಶಾಲೆಗಳೆಲ್ಲ ಸಾಮೂಹಿಕವಾಗಿ ಮುಚ್ಚಿದಾಗ, ಅನುಕೂಲ ಇದ್ದವರೆಲ್ಲ ಆನ್‌ಲೈನ್ ಪಾಠಕ್ಕೆ ಮೊರೆ ಹೋದರು. ಆಗದವರು 'ಬದುಕುಳಿದರೆ ಶಾಲೆ, ಓದು' ಎಂಬ ನಿರ್ಧಾರ ತಳೆದರು. ಇಂಟರ್ನೆಟ್ ಸಂಪರ್ಕ ಇಲ್ಲದ ಹಳ್ಳಿ ಮಕ್ಕಳು ಶಾಲೆಯನ್ನು ಮರೆತೇಬಿಟ್ಟರು. ಆದರೆ ಒಡಿಶಾ ರಾಜ್ಯದ, ದೇಶದಲ್ಲೇ ಅತ್ಯಂತ ಹಿಂದುಳಿದ ಜಿಲ್ಲೆಗಳಾದ ರಾಯಗಡ ಮತ್ತು ಕಾಳಹಂದಿಯಲ್ಲಿ ಮಾತ್ರ ಪರಮಾಶ್ಚರ್ಯ ಮತ್ತು ಪವಾಡವೇನೋ ಎಂಬಂತೆ, ಕೊರೊನಾದ ಗಂಭೀರ ಪರಿಸ್ಥಿತಿಯ ನಡುವೆಯೂ 237 ಶಾಲೆಗಳಲ್ಲಿ, ಕಳೆದ ಆರು ತಿಂಗಳುಗಳಿಂದ ವಿದ್ಯಾರ್ಥಿಗಳ ಪೂರ್ತಿ ಹಾಜರಾತಿಯೊಂದಿಗೆ ಎರಡೆರಡು ಶಿಫ್ಟ್‌ಗಳಲ್ಲಿ ತರಗತಿಗಳು ನಡೆಯುತ್ತಿವೆ.

ಮಕ್ಕಳ ತಂದೆ– ತಾಯಿಗೆ ಆನ್‌ಲೈನ್ ಕ್ಲಾಸ್‌ಗಳಿಗಾಗಿ ಮೊಬೈಲು, ಟ್ಯಾಬ್ ಕೊಳ್ಳಲು ಶಕ್ತಿ ಇರಲಿಲ್ಲ. ಎರಡು ಹೊತ್ತಿನ ಊಟ ಹೊಂದಿಸುವುದೇ ದುಸ್ತರವಾಗಿತ್ತು. ಆಗ ಅವರ ಕೈ ಹಿಡಿದದ್ದು ಟಾಟಾ ಸಮೂಹದ ಲಿವೊಲಿಂಕ್ ಫೌಂಡೇಶನ್. ಈ ಸಂಸ್ಥೆಯು ಹಳ್ಳಿಗಳ ಅಂಗನವಾಡಿ, ಗ್ರಾಮ ಪಂಚಾಯಿತಿಗಳ ಸಹಯೋಗದಲ್ಲಿ 'ಕೋವಿಡ್ ಸಮುದಾಯ ಶಿಕ್ಷಣ ಗುಂಪು'ಗಳನ್ನು ರಚಿಸಿ, ಶಾಲೆ ವಂಚಿತ ಮಕ್ಕಳಿಗೆ ತರಗತಿ ನಡೆಸಲು ನಿರ್ಧರಿಸಿತು. ಸೋಂಕಿಗೆ ಹೆದರಿ ಮತ್ತು ಸರ್ಕಾರ ವಹಿಸಿದ 'ಕೋವಿಡ್ ಕರ್ತವ್ಯ'ದಲ್ಲಿ ಬ್ಯುಸಿಯಾದ ಶಿಕ್ಷಕರು ಶಾಲೆಗಳತ್ತ ಸುಳಿಯಲಿಲ್ಲ. ಆಗ ನೆರವಿಗೆ ಬಂದವರು ಕಾಲೇಜು ವಿದ್ಯಾರ್ಥಿಗಳು.

ನಗರಗಳು ಸಂಪೂರ್ಣ ಲಾಕ್‌ಡೌನ್ ಆದ ತಕ್ಷಣ ಕಾಲೇಜು ತರಗತಿಗಳು ಸ್ಥಗಿತಗೊಂಡು, ಯುವ ವಿದ್ಯಾರ್ಥಿಗಳು ತಂತಮ್ಮ ಊರು- ಹಳ್ಳಿಗಳಿಗೆ ಮರಳಿದ್ದರು. ಅವರಲ್ಲಿ ಹಲವರು ಗ್ರಾಮ ಪಂಚಾಯಿತಿ ಸದಸ್ಯ– ಅಧ್ಯಕ್ಷರ ಮಕ್ಕಳು, ಸಂಬಂಧಿಗಳೇ ಇದ್ದರು. ಕೋವಿಡ್ ಕಮ್ಯುನಿಟಿ ಎಜುಕೇಶನ್ ಗ್ರೂಪ್‌ನ ಬೇಡಿಕೆಗೆ ಸ್ಪಂದಿಸಿದ ಯುವಕರನ್ನು 'ವಿಲೇಜ್ ವಾಲಂಟೀರ್ಸ್' ಎಂದು ಕರೆದು, ಪಾಠ ಮಾಡುವ ಜವಾಬ್ದಾರಿಯನ್ನು ಅವರಿಗೆ ಒಪ್ಪಿಸಿದರು. ಕಷ್ಟಕಾಲದಲ್ಲಿ ತಮ್ಮ ಹಳ್ಳಿಯ ಎಳೆಯರಿಗೆ ಸಹಾಯ ಮಾಡುವ ಅವಕಾಶ ಸಿಕ್ಕಿದ್ದಕ್ಕೆ ಧನ್ಯವಾದ ಹೇಳಿದ ವಿದ್ಯಾರ್ಥಿಗಳು 'ತಾತ್ಕಾಲಿಕ ಶಿಕ್ಷಕ' ವೃತ್ತಿಗಿಳಿದರು.

ಕಲಿಯುವ ಮಕ್ಕಳಿಗೆ ಪಠ್ಯಪುಸ್ತಕಗಳಿರಲಿಲ್ಲ. ಎಲ್ಲ ಸರಿಯಾಗಿದ್ದರೆ ಸರ್ಕಾರವೇ ಮಕ್ಕಳಿಗೆ ಉಚಿತವಾಗಿ ಪುಸ್ತಕ ಹಂಚುತ್ತಿತ್ತು. ಜವಾಬ್ದಾರಿ ಹೊತ್ತಿದ್ದ ಲಿವೊಲಿಂಕ್ ಫೌಂಡೇಶನ್ ಜಿಲ್ಲಾ ಆಡಳಿತವನ್ನು ಸಂಪರ್ಕಿಸಿ, ಅಗತ್ಯವಾದ ಪಠ್ಯಪುಸ್ತಕಗಳನ್ನು ಸಂಗ್ರಹಿಸಿ ಮಕ್ಕಳಿಗೆ ಹಂಚಿ, ಶಾಲೆಗೆ ಬರುವಂತೆ ತಿಳಿವಳಿಕೆ ನೀಡಿತು. ತಾಲ್ಲೂಕು ಶಿಕ್ಷಣಾಧಿಕಾರಿಗಳು, 'ಹೊಸ ಶಿಕ್ಷಕರಿಗೆ' ಪ್ರಾಥಮಿಕ ತರಬೇತಿ ಮತ್ತು ಪ್ರೋಗ್ರಾಂ ಆಫ್ ವರ್ಕ್ ನೀಡಿ, ಇಂತಿಷ್ಟು ಪಾಠಗಳನ್ನು ಹೀಗೆ ಮಾಡಿ ಎಂದು ಸೂಚಿಸಿದರು.

ಸರ್ಕಾರವು ಶಾಲೆಗಳಿಗೆ ಬೀಗ ಹಾಕಿದ್ದರಿಂದ ಬಯಲಲ್ಲೇ ಶಾಲೆಗಳು ಶುರುವಾದವು. ಮನೆಯ ಚಾಪೆ, ಜಮಖಾನ, ದುಪ್ಪಟಿಗಳೆಲ್ಲ ಹೊರಬಂದು ಮರದ ನೆರಳು, ಊರಿನ ಮಂಟಪ, ಗುಡಿ ಗುಂಡಾರಗಳ ಹಾಸುಗಳಾದವು. ದಾನಿಗಳು ಚಪ್ಪರ ಹಾಕಿಸಿಕೊಟ್ಟರು. ಸಾಮುದಾಯಿಕ ಮೈದಾನದಲ್ಲಿ ಟೆಂಟ್ ಹಾಕಿ ಶಾಲೆ ಶುರು ಮಾಡಲಾಯಿತು. ಸೋಂಕಿನ ಭಯವಿದ್ದೂ ಮನೆ ಮನೆಗೆ ಓಡಾಡಿದ ಅಂಗನವಾಡಿ ಕಾರ್ಯಕರ್ತರು, ಶಾಲೆಯಿಂದ ದೂರವಾಗಿದ್ದ ಎಲ್ಲ ಮಕ್ಕಳನ್ನೂ ತರಗತಿಗೆ ಬರುವಂತೆ ಮಾಡುವಲ್ಲಿ ಯಶಸ್ವಿಯಾದರು. ಪಠ್ಯ ಪುಸ್ತಕಗಳು ಸಿಗುವುದು ತಡವಾದ ಹಳ್ಳಿಗಳಲ್ಲಿ, ಪುಸ್ತಕ-ಗಳಲ್ಲಿ ಏನೇನಿದೆ ಎಂಬುದು ಗೊತ್ತಿದ್ದ ಯುವ ಶಿಕ್ಷಕರು ನೈಸರ್ಗಿಕ ಸಂಪನ್ಮೂಲಗಳಾದ ನೆಲ, ನೀರಿನ ಝರಿ, ಹೂವು, ಎಲೆ, ಕಾಂಡ, ಬೊಡ್ಡೆಗಳನ್ನೇ ಬಳಸಿ ಪಾಠದಲ್ಲಿ ಆಸಕ್ತಿ ಹುಟ್ಟಿಸಿದರು. ತಮ್ಮ ಲ್ಯಾಪ್‌ಟಾಪ್, ಟ್ಯಾಬ್‌ಗಳಲ್ಲಿ ವಿಡಿಯೊ ತೋರಿಸಿ ಪಾಠ ಮಾಡಿ ಮಕ್ಕಳಿಗೆ ಹೊಸ ಜಗತ್ತನ್ನೇ ಪರಿಚಯಿಸಿದರು. ತಮ್ಮ ಕಾಲೇಜುಗಳ ಪ್ರಾಚಾರ್ಯರನ್ನು ಕಂಡು, ನಿರುಪಯೋಗಿ ಎನಿಸಿದ್ದ ಪ್ರಯೋಗಾಲಯದ ಸಾಮಾನು ಪಡೆದುಕೊಂಡು ಹಳ್ಳಿಗೆ ತಂದು, ಪ್ರಯೋಗ ಮಾಡಿ ತೋರಿಸಿ ಮಕ್ಕಳ ಮನಸ್ಸು ಗೆದ್ದರು. ಬಯಲಿನಲ್ಲಿ ಶಾಲೆ ನಡೆಯುತ್ತಿದ್ದುದರಿಂದ ಸಾಮಾಜಿಕ ಅಂತರ ಕಾಪಾಡಿಕೊಂಡು, ಒಬ್ಬರನ್ನೊಬ್ಬರು ನೋಡುತ್ತ, ಮಾತನಾಡಿಸುತ್ತ, ಸಂಭ್ರಮಿಸುತ್ತಾ ಕಲಿಯುವುದನ್ನು ರೂಢಿಸಿಕೊಂಡರು. ಯುವಜನರ ನಿಸ್ವಾರ್ಥ ಸೇವೆ ಕಂಡ ಹಲವು ಸ್ವಯಂಸೇವಾ ಸಂಸ್ಥೆಗಳು ಅವರ ಊಟ– ತಿಂಡಿಯ ವ್ಯವಸ್ಥೆ ನೋಡಿಕೊಂಡವು.

'ನಗರಗಳಿಂದ ಹಿಂತಿರುಗಿ ಊರಿಗೆ ಬಂದ ಯುವ ಜನರನ್ನು ಬಳಸಿಕೊಂಡು ಶಿಕ್ಷಣ ನೀಡಬೇಕೆನ್ನುವ ನಮ್ಮ ಯೋಜನೆ ಇಷ್ಟೊಂದು ಫಲಪ್ರದವಾಗುತ್ತ-ದೆಂಬ ಕಲ್ಪನೆಯೇ ನಮಗಿರಲಿಲ್ಲ' ಎಂದಿರುವ ತಿಗಡಿ ಗ್ರಾಮ ಪಂಚಾಯಿತಿಯ ಅಧ್ಯಕ್ಷೆ ಮೋಹಿನಿ ಮೋಹನ್, ಕೊರೊನಾ ಸಂಕಷ್ಟದ ಕಾಲದಲ್ಲಿ ಮಕ್ಕಳಿಗೆ ಪಾಠ ಹೇಳಿದ ಯುವಕರ ಸೇವೆಯನ್ನು ಎಷ್ಟು ಕೊಂಡಾಡಿದರೂ ಸಾಲದು ಎಂದು ಹನಿಗಣ್ಣಾಗುತ್ತಾರೆ. ಕಾಳಹಂದಿ ಜಿಲ್ಲೆಯ ಚಂಕು ಪದಾರ್ ಹಳ್ಳಿಯ ರೈತ ಕೃಷ್ಣ ವಡಾಕ, ಶಾಲೆ ನಡೆಯುವ ಜಾಗಕ್ಕೆ ಬಂದು ದಿನಕ್ಕೆ ನಾಲ್ಕು ಗಂಟೆಯಂತೆ ಸ್ವಯಂ ಸೇವಕರಾಗಿ ಕೆಲಸ ಮಾಡುತ್ತ, ಮಕ್ಕಳ ಊಟ– ತಿಂಡಿಯ ಡಬ್ಬಿಗಳನ್ನು ಸ್ವಚ್ಛ ಮಾಡಿಕೊಟ್ಟು ಅವರ ಶೈಕ್ಷಣಿಕ ಚಟುವಟಿಕೆಗಳಿಗೆ ತಮ್ಮ ಸಮಯವನ್ನು ಮೀಸಲಿಟ್ಟಿದ್ದಾರೆ. 'ದೇಶದೆಲ್ಲೆಡೆ ಪ್ರಾಥಮಿಕ ಶಾಲೆ ಬಂದ್ ಆಗಿದ್ದರೂ ಇಲ್ಲಿ ಶಾಲೆ ನಡೆಯುತ್ತಿರುವುದು ತುಂಬಾ ಖುಷಿ ನೀಡಿದೆ. ಅದರಲ್ಲೂ ಹೆಣ್ಣುಮಕ್ಕಳೂ ಕಲಿಯುತ್ತಿರುವುದು ಡಬ್ಬಲ್ ಖುಷಿ ನೀಡಿದೆ' ಎನ್ನುತ್ತಾರೆ. ಮೊದಲಿಗಿಂತ ಈ ಶಾಲೆಯೇ ಚೆನ್ನಾಗಿದೆ ಎಂದಿರುವ ಹಲವು ಮಕ್ಕಳು, ನಮಗೆ ಈಗ ಪಾಠ ಹೇಳುತ್ತಿರುವ ಶಿಕ್ಷಕರೇ ಇರಲಿ ಎನ್ನುತ್ತಿದ್ದಾರೆ.

ಅಲ್ಲಿಗೆ ಹೋಲಿಸಿದರೆ ಸಾಕಷ್ಟು ಅನುಕೂಲ ಹೊಂದಿರುವ ನಾವೆಲ್ಲ ಇಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಯಬೇಕೋ ಬೇಡವೋ ಎಂದು ಉನ್ನತ ಸಮಿತಿಗಳನ್ನು ರಚಿಸಿ ಅವುಗಳ ನಿರ್ಧಾರಕ್ಕಾಗಿ ಕಾಯುತ್ತಿದ್ದೇವೆ. ಮುಂದೊಂದು ದಿನ ದೇಶವನ್ನು 'ಜ್ಞಾನ ರಾಜಧಾನಿ'ಯನ್ನಾಗಿ ಮಾಡಬಲ್ಲ ಶಕ್ತಿಯಿರುವ ಎಳೆಯರನ್ನು ಮನೆಯಲ್ಲಿ ಕೂಡಿಹಾಕಿ ಮೊಬೈಲು, ಟ್ಯಾಬ್‌ಗಳ ದಾಸರನ್ನಾಗಿಸಿದ್ದೇವೆ. ಶಾಲೆಯ ಸಹಜ ವಾತಾವರಣದಲ್ಲಿ ಸ್ವಚ್ಛಂದವಾಗಿ ವಿಹರಿಸಿ ಗೆಳೆಯ, ಗೆಳತಿಯರ ಸಹವಾಸದಲ್ಲಿ ಇರಬೇಕಾದ ಮಕ್ಕಳು ತಂದೆ–ತಾಯಿಯರ ಒತ್ತಡ ನೋಡಿ ತಾವೂ ಗಾಬರಿಗೊಂಡಿದ್ದಾರೆ. ಗುಡಿ–ಗುಂಡಾರ, ಮಾರ್ಕೆಟ್‌ಗಳನ್ನೆಲ್ಲಾ ಅಪ್ಪ ಅಮ್ಮಂದಿರೊಂದಿಗೆ ಸುತ್ತುತ್ತಿರುವ ಅನುಕೂಲಸ್ಥ ಮಕ್ಕಳು ಈಗಾಗಲೇ ಶಾಲೆ– ಕಾಲೇಜಿಗೆ ಹೋಗುತ್ತಿರುವ ಹೈಸ್ಕೂಲು, ಕಾಲೇಜಿನ ಅಕ್ಕಂದಿರು, ಅಣ್ಣಂದಿರನ್ನು ನೋಡಿ, 'ನಮಗೇಕೆ ಶಾಲೆ ಇಲ್ಲ, ನಮ್ಮನ್ನೂ ಕಳಿಸಿ' ಎಂದು ದುಂಬಾಲು ಬಿದ್ದಿದ್ದಾರೆ.

ಹಳ್ಳಿಯ ಬಡಮಕ್ಕಳು ಹೊಲ, ಗದ್ದೆಗಳಲ್ಲಿ ಕಡಿಮೆ ಕೂಲಿಯ ಕೆಲಸ ಹಿಡಿದಿದ್ದಾರೆ. ಕೆಲಸ ಸಿಗದ ಕೆಲವರು ಭಿಕ್ಷಾಟನೆಗಿಳಿದಿದ್ದಾರೆ. ಇನ್ನೆಂದೂ ಪರಿಸ್ಥಿತಿ ಸುಧಾರಿಸುವುದಿಲ್ಲವೇನೋ ಎಂಬ ಆತಂಕದ ಕೆಲವರು ತಮ್ಮ ಎಳೆ ಪ್ರಾಯದ ಹೆಣ್ಣುಮಕ್ಕಳಿಗೆ ಬಾಲ್ಯವಿವಾಹದ ಸಂಕೋಲೆ ತೊಡಿಸಿದ್ದಾರೆ. ಸರ್ಕಾರಗಳು ತಮಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಅವಮಾನ ಆಗಿದೆಯೆಂದೋ ಪ್ರತಿನಿಧಿಗಳು ತಮಗೆ ಬೇಕಾದ ಮಂತ್ರಿಗಿರಿ ಸಿಕ್ಕಿಲ್ಲ ಅಂತಲೋ ಗಂಟಲು ಹರಿದುಕೊಳ್ಳುತ್ತಿದ್ದಾರೆಯೇ ಹೊರತು ದೇಶದ ನಿಜವಾದ ಶಕ್ತಿಯನ್ನು ಮೂಲೆಗೆ ತಳ್ಳಿ ತಮಾಷೆ ನೋಡುತ್ತಿರುವುದು ಅವರ ಅರಿವಿಗೆ ಬರುತ್ತಿಲ್ಲ ಅಥವಾ ಜಾಣ ಕಿವುಡು – ಕುರುಡು ಪ್ರದರ್ಶಿಸುತ್ತಿದ್ದಾರೇನೊ.

ಒಟ್ಟಿನಲ್ಲಿ ಇಡೀ ದೇಶದ ಶಿಕ್ಷಣ ತಜ್ಞರು ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಮಂಥನ ನಡೆಸುತ್ತಿದ್ದರೆ, ಒಡಿಶಾದ ಹಳ್ಳಿಗಳಲ್ಲಿ ಶಿಕ್ಷಣ ಕ್ರಾಂತಿಯೇ ಜರುಗಿದೆ.

ಚುರುಮುರಿ



ಗಳಗೆ ಸಿದ್ಧರು

• ಲಿಂಗರಾಜು ಡಿ.ಎಸ್.

ನೆನ್ನೆ ಬೆಳಕರಿತಿದ್ದಂಗೆ ಕರ್ನಾಟಕ ಸರ್ಕಾರದ ಜೀಪು, ಬಿಡಿಎ, ಬಿಬಿಎಂಪಿ ಅಂತ ಬರೆದಿದ್ದ ಜೆಸಿಬಿ, ಕ್ರೇನು ಬಂದು ಕಾರ್ನರ್ ಮನೆ ತಾವು ನಿಂತುಕಂಡೊ. ಒಬ್ಬ ರೋಡಿಂದ ಕಾಂಪೌಂಡು ಅಳತೆ ಮಾಡಿ 'ಬಿಲ್ಡಿಂಗು, ಪುಟ್ಪಾತು ಒತ್ತುವಾರಿ ಆಗ್ಯದೆ. ಪಾರ್ಕಿಂಗ್ ಪರ್ಮಿಸನ್ನಿಲ್ಲ' ಅಂತ ಆಪೀಸರಿಗೇಳಿದ. ಜೆಸಿಬಿ ಮುಂದೆ ಬಂದು ಕಾಂಪೋಂಡಿಗೆ ಬಾಯಿ ಹಾಕಿತು. ಮನೆ, ಓನರ್ರು, ಆಪೀಸರು ಒಳಿಕ್ಕೋಗಿ ಕಾಲುಗಂಟೆ ಆದಮ್ಯಾಲೆ ಹುಸಿನಗತಾ ಈಚೆ ಬಂದರು.

ಆಪೀಸರ್ರು ನಮ್ಮೂರ ಗೂನನ ಮಗನಂಗೆ ಕಂಡ! ನಾನು ಹತ್ರುಕ್ಕೋಗಿ 'ನಮಸ್ಕಾರ ಕಣ್ರಿ ಸಾ?' ಅಂದುದ್ದ ನೋಡಿ ಸೈಡಿಗೆ ಕರಕೋದ.

'ಅಣೈ ಚನ್ನಗದೀಯಾ? ಸೆವೆಂತು ಪೇಲಾದೋನು ನಾನ್ಯಾವ ಆಪೀಸರಣ್ಣಾ? ಬೆಂಗಳೂರಿಗೆ ಬಂದು ಬಿಡಿಎ, ಬಿಬಿಎಂಪಿ ಅಂತ ನನ್ನವೇ ಎರಡು ಪ್ರವೀಟ್ ಕಂಪನಿ ಮಾಡಿವ್ನಿ' ಅಂತ ವಿವರಿಸಿದ.

'ಅದೆಂಗ್ಲಾ ಅವು ನಿನ್ನ ಕಂಪನಿಯಾದಾವು?' ಅಂದೆ. 'ಯಣ್ಣಾ, ಬಿಡಿಎ ಅಂದ್ರೆ ಬೆಂಗಳೂರು ಡೆಮಾಲಿಶನ್ ಏಜೆನ್ಸಿ ಅಂತ. ಬಿಬಿಎಂಪಿ ಅಂದ್ರೆ ಬೆಂಗಳೂರು ಬ್ರೇಕಿಂಗ್ ಅಂಡ್ ಮೇಕಿಂಗ್ ಆಫ್ ಪ್ರಾಪರ್ಟಿ ಕಣಣ್ಣಾ'.

'ಕರ್ನಾಟಕ ಸರ್ಕಾರದ ಜೀಪೆಲ್ಲಿ ಸಿಕ್ತೋ ನಿನಗೆ?'

'ಬೋರ್ಡು ಸರಿಯಾಗಿ ನೋಡಣ್ಣ!' ಅಂದ. ಬೋರ್ಡಲ್ಲಿ ಕರ್ನಾಟಕ ಸರ್ದಾರ ಅಂತಿತ್ತು. 'ಹಿಂಗಿಯೇ ದಿನಕ್ಕೊಂದೆರಡು ಡೆಮಾಲಿಸನ್ ನಾಟಕಾಡಿ ಕಾಸು ಮಾಡಿಕತಿನಿ. ಯಾರಿಗೂ ಅನುಮಾನ ಬಂದುಲ್ಲ'.

'ಸರ್ಕಾರದ ಏಜೆನ್ಸಿಗಳೊಳಗೆ ಮೇದು ಗಳಗೆ ಸಿದ್ಧರಾಗಿರೋರು ಭಾಳ ಜನವೈ ಕನೋ. ಅಕ್ರಮಾದಿತ್ಯರ ಬಲಿ ಹಾಕಕೆ ನೀನು ಕೊಡ್ತಿರಾ ಒಳಶುಂಟಿ ಚೆನ್ನಾಗದೆ'.

'ಯಣ್ಣಾ, ನೀನಂದಂಗೆ ಗಳಗೆ ಸಿದ್ಧರ ಬಲಿ ಹಾಕಕೆ ಎಸಿಬಿ ಅಂತ ಇನ್ನೊಂದು ಕಂಪನಿ ಮಾಡುಮಾ. ನೀನು ಬಂದು, ರೈಡು ಮಾಡೋ ದೊಡ್ಡಾಪೀಸರ್ ಪಾಲ್ಟು ಮಾಡು. ತಿಂಗಳಿಗೆ ಲಕ್ಸ, ಕಾರು ಕೊಡ್ತೀನಿ. ಏನಂತೀಯ?' ಅಂದ.

ಬೆರಕೆಗಳ ಬಲಿ ಹಾಕಕೆ ಇವನ ಐಡಿಯಾ ಚನ್ನಾಗದೆ ಅಲ್ಲುವರಾ?

ಸಂಗತ

ಮುಂಚೂಣಿಯಲ್ಲಿ 'ಮುಧೋಳ ಯೋಧರು'

ವಿಶಿಷ್ಟ ಗುಣಲಕ್ಷಣ, ಅಪರಿಮಿತ ಕಾರ್ಯಕ್ಷಮತೆಯಿಂದ ಪೊಲೀಸ್ ಇಲಾಖೆ, ಗಡಿ ಭದ್ರತಾ ಪಡೆಯಲ್ಲಿ ಸ್ಥಾನ ಪಡೆದಿರುವ 'ಮುಧೋಳ ಹೌಂಡ್' ಎಲ್ಲೆಡೆ ಹೆಜ್ಜೆ ಗುರುತು ಮೂಡಿಸುತ್ತಿದೆ

• ಡಾ. ಮುರಳೀಧರ ಕಿರಣಕೆರೆ

ಮುಧೋಳ ಎಂದೊಡನೆ ಥಟ್ಟನೆ ನೆನಪಾಗುವುದು ಆದಿಕವಿ ರನ್ನ. ಬಾಗಲಕೋಟೆ ಜಿಲ್ಲೆಯ ಮುಧೋಳ ಈ ಕವಿರತ್ನನ ತವರು. ಇತ್ತೀಚಿನ ವರ್ಷಗಳಲ್ಲಿ ಈ ತಾಣ ಮತ್ತೊಂದು ಕಾರಣಕ್ಕೂ ಪ್ರಸಿದ್ಧವಾಗಿದೆ. ಕರುನಾಡಿನ ಹೆಮ್ಮೆಯ ಶ್ವಾನ ತಳಿ 'ಮುಧೋಳ ಹೌಂಡ್' ಇದೇ ನೆಲದ್ದು.

ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಕಳೆದ ವಾರ ನಾಲ್ಕು ಮುಧೋಳ ಶ್ವಾನಮರಿಗಳನ್ನು ಭಾರತೀಯ ವಾಯುಪಡೆಯ ಅಧಿಕಾರಿಗಳಿಗೆ ಹಸ್ತಾಂತರಿಸುವುದರೊಂದಿಗೆ ಮತ್ತೊಂದು ಹಿರಿಮೆಯ ಗರಿ ಮುಡಿಗೇರಿದೆ. ಈ ಹಿಂದೆ ಭಾರತೀಯ ಭೂದಳವೂ ತನ್ನ ಸೈನ್ಯಕ್ಕೆ ಮುಧೋಳದ ಈ ವಿಶೇಷ ಯೋಧರನ್ನು ಸೇರ್ಪಡೆ ಮಾಡಿಕೊಂಡಿದ್ದೂ ದೊಡ್ಡ ಸುದ್ದಿಯಾಗಿತ್ತು. ತನ್ನ ವಿಶಿಷ್ಟ ಗುಣಲಕ್ಷಣಗಳು, ಅಪರಿಮಿತ ಕಾರ್ಯಕ್ಷಮತೆಯಿಂದ ಹಲವು ರಾಜ್ಯಗಳ ಪೊಲೀಸ್ ಇಲಾಖೆಗಳು, ಇಂಡೊ- ಟಿಬೆಟನ್ ಗಡಿ ಭದ್ರತಾ ಪಡೆಯಲ್ಲಿ ಸ್ಥಾನ ಪಡೆದಿರುವ ಈ ಶ್ವಾನಗಳು ಈಗ ಎಲ್ಲೆಡೆ ಹೆಜ್ಜೆ ಗುರುತು ಮೂಡಿಸುತ್ತಿವೆ.

ಬಂಡೀಪುರ ಹುಲಿ ಯೋಜನೆ ವ್ಯಾಪ್ತಿಯ ಅರಣ್ಯದಲ್ಲಿ ಪ್ರಾಣಿಬೇಟೆ, ಕಳ್ಳಸಾಗಾಣಿಕೆ ತಡೆಯುವ ದಿಸೆಯಲ್ಲೂ ಈ ತಳಿಯ ಬಳಕೆ ಶುರುವಾಗಿದೆ. ದೂರಸಂಪರ್ಕ ಇಲಾಖೆಯು ಭಾರತೀಯ ಶ್ವಾನ ಪರಂಪರೆಯನ್ನು ಸಂಭ್ರಮಿಸಲು ಹದಿನೈದು ವರ್ಷಗಳ ಹಿಂದೆಯೇ ನಾಲ್ಕು ದೇಶಿ ಶ್ವಾನ ತಳಿಗಳ ಅಂಚೆ ಚೀಟಿಗಳನ್ನು ಹೊರತಂದಿದ್ದು, ಇದರಲ್ಲಿ ಮುಧೋಳ ತಳಿಯೂ ಒಂದು.

ಭಾರತೀಯ ರಾಷ್ಟ್ರೀಯ ಶ್ವಾನ ಸಂಸ್ಥೆಯಿಂದ ಮುಧೋಳ ಹೌಂಡ್ ಎಂದು ತಳಿ ಮನ್ನಣೆ ಪಡೆದಿರುವ ಈ ಶ್ವಾನಗಳದ್ದು ನೂರಾರು ವರ್ಷಗಳ ಇತಿಹಾಸ. ಛತ್ರಪತಿ ಶಿವಾಜಿ ಮಹಾರಾಜ ಯುದ್ಧರಂಗದಲ್ಲಿ ಇವುಗಳನ್ನು ಬಳಸಿದ್ದಕ್ಕೆ ಉಲ್ಲೇಖವಿದೆ. ಮುಧೋಳ ಸಂಸ್ಥಾನದ ಘೋರ್ಪಡೆ ಮಹಾರಾಜರ ವಿಶೇಷ ಆಸಕ್ತಿಯ ಫಲವಾಗಿ ಇವು, ಮುಂಬೈ ಪ್ರಾಂತ್ಯದಾದ್ಯಂತ ಹರಡಿದವು. ಕ್ಯಾರವಾನ್ ಹೌಂಡ್, ಪಾಶ್ಮಿ ಹೌಂಡ್, ಮರಾಠ ಹೌಂಡ್, ಕಾಥೇವರ್ ನಾಯಿ ಎಂಬುವೆಲ್ಲಾ ಈ ಶ್ವಾನದ ಬೇರೆ ಬೇರೆ ಹೆಸರುಗಳು.

ಮುಧೋಳ ಹೌಂಡ್ ಮೂಲತಃ ಬೇಟೆ ನಾಯಿ. ಜೋತಾಡುವ ಕಿವಿಗಳ ಶಿಕಾರಿ ನಾಯಿಗಳನ್ನು 'ಹೌಂಡ್' ಎಂದು ಕರೆಯುವುದು ವಾಡಿಕೆ. ಸಪೂರ ಶರೀರದ, ಉದ್ದುದ್ದ ಕಾಲುಗಳ ಇವುಗಳ ಎತ್ತರ ಎರಡರಿಂದ ಎರಡೂವರೆ ಅಡಿ. ವಯಸ್ಕ ಶ್ವಾನಗಳ ದೇಹತೂಕ 22ರಿಂದ 28 ಕೆ.ಜಿ. ಬಾಲವೋ ಚಾಟಿಯಂತೆ. ಈ ವಿಶಿಷ್ಟ ದೈಹಿಕ ರಚನೆಯ ಕಾರಣ ಗಂಟೆಗೆ ಐವತ್ತು ಕಿ.ಮೀ. ವೇಗದಲ್ಲಿ ಓಡಬಲ್ಲವು. ಉದ್ದನೆಯ ಮೂತಿಯಲ್ಲಿ ತಿವಿಯುವಂತಹ ಚುರುಕು ಕಂಗಳು. ಕಣ್ಣುಗಳ ಆಕಾರ ಮತ್ತು ಸ್ಥಾನದ ಕಾರಣ 270 ಡಿಗ್ರಿವರೆಗಿನ ದೃಷ್ಟಿಕೋನ ಹೊಂದಿರುವುದು ಈ ಶ್ವಾನಗಳ ವಿಶೇಷ. ಇದು ನಮ್ಮ ದೃಷ್ಟಿವ್ಯಾಪ್ತಿಗಿಂತಲೂ ಎರಡು ಪಟ್ಟು ಅಧಿಕ!

ಮಾಲೀಕನಿಗೆ ತುಂಬಾ ವಿಧೇಯವಾಗಿರುವ ಇವು ಅಪರಿಚಿತರನ್ನು ಗದರಿಸುತ್ತವೆ. ಜೀವಿತಾವಧಿ ಸರಾಸರಿ 13-14 ವರ್ಷಗಳು. ವರ್ಣ ವೈವಿಧ್ಯವೂ ಅಪಾರ. ಬಿಳಿ, ಕಪ್ಪು, ಕಂದು, ಕೆಂಪು, ಹಳದಿಯ ಜೊತೆಗೆ ಮಿಶ್ರ ಬಣ್ಣದ ನಾಯಿಗಳೂ ಇವೆ.

ಬೇಟೆಯ ಜೊತೆಯಲ್ಲಿ ಮುಧೋಳ ಹೌಂಡ್ ಕಾವಲು, ರಕ್ಷಣೆಯ ಕೆಲಸಕ್ಕೂ ಸೈ. ಕಾಡುಮೃಗಗಳಿಂದ ಬೆಳೆ ರಕ್ಷಿಸಿಕೊಳ್ಳಲು, ಮನೆಗಾವಲಿಗಾಗಿ ರೈತರ ಒಲವು ಹೆಚ್ಚು. ಹಾಗಾಗಿಯೇ ಇವು ತುಂಬಾ ಜನಪ್ರಿಯ. ಕಳೆದ ಆಗಸ್ಟ್‌ನ ತಮ್ಮ 'ಮನ್ ಕಿ ಬಾತ್'ನಲ್ಲಿ ಪ್ರಧಾನಿ, ದೇಶಿ ಶ್ವಾನಗಳು ಅದರಲ್ಲೂ ಮುಧೋಳ ಶ್ವಾನಗಳ ಗುಣಗಾನ ಮಾಡಿದ ಮೇಲಂತೂ ಈ ತಳಿಯ ಜನಪ್ರಿಯತೆಯ ಗ್ರಾಫ್ ಮತ್ತಷ್ಟು ಮೇಲೇರಿದೆ! ವಿದೇಶಿ ನಾಯಿಗಳ ಬದಲಿಗೆ ದೇಶಿ ನಾಯಿಗಳನ್ನು ಸಾಕಿ ಸಲಹಬೇಕೆಂಬ ಅವರ ಕರೆ ರಾಷ್ಟ್ರ ಮಟ್ಟದಲ್ಲಿ ದೊಡ್ಡ ಸುದ್ದಿಯಾಗಿ ಮುಧೋಳ ಶ್ವಾನಗಳಿಗೆ ಬೇಡಿಕೆ ಏರುತ್ತಲೇ ಇದೆ. ಹಿಮಾಲಯನ್ ಶೀಪ್‌ಡಾಗ್, ರಾಜಪಾಳಯಂ, ರಾಂಪುರ್ ಗ್ರೇಹೌಂಡ್, ಕಣ್ಣಿಯಂತಹ ಹಲವು ದೇಶಿ ತಳಿಗಳು ತಮ್ಮ ವಿಶಿಷ್ಟ ಗುಣಲಕ್ಷಣಗಳಿಂದ ಗಮನ ಸೆಳೆದರೂ ಮುಧೋಳದ ಆಕರ್ಷಣೆ ಒಂದು ತೂಕ ಹೆಚ್ಚೆ!

ಈ ತಳಿಯ ಸಂರಕ್ಷಣೆ, ಅಭಿವೃದ್ಧಿ, ಸಂಶೋಧನೆ, ಸಾಕಾಣಿಕೆ ಮತ್ತು ತರಬೇತಿಗಾಗಿ ಕರ್ನಾಟಕ ಪಶುವೈದ್ಯಕೀಯ ವಿಶ್ವವಿದ್ಯಾಲಯದ ಅಧೀನದಲ್ಲಿ ಮುಧೋಳ ಸಮೀಪದ ತಿಮ್ಮಾಪುರದಲ್ಲಿ 2009ರಲ್ಲಿ ಶ್ವಾನ ಸಂಶೋಧನೆ ಮತ್ತು ಮಾಹಿತಿ ಕೇಂದ್ರ ಸ್ಥಾಪನೆಯಾಗಿದೆ. ಇಲ್ಲಿ ಮಾರಾಟವಾಗುವ ಒಂದು ಜೊತೆ ಮುಧೋಳ ಮರಿಗಳ ಬೆಲೆ ಸುಮಾರು ಇಪ್ಪತ್ತೈದು ಸಾವಿರ ರೂಪಾಯಿ.

ಸೈನ್ಯದಲ್ಲಿ ಸ್ಫೋಟಕಗಳು, ರಹಸ್ಯ ಸುರಂಗಗಳ ಪತ್ತೆ, ಕಾವಲು, ವೈರಿಗಳ ಜಾಡು ಹಿಡಿಯಲು, ಪ್ರಾಕೃತಿಕ ವಿಕೋಪಗಳಲ್ಲಿ ಸಂತ್ರಸ್ತರ ಸುಳಿವಿಗಾಗಿ, ಮೃತದೇಹಗಳನ್ನು ಹುಡುಕಲು ಅಂತೆಲ್ಲಾ ವಿವಿಧ ಕಾರ್ಯಾಚರಣೆಗಳಿಗೆ ಶ್ವಾನಗಳನ್ನು ಬಳಸುತ್ತಾರೆ. ಎಂಥದ್ದೇ ವಿಷಮ ಪರಿಸ್ಥಿತಿಗೂ ಹೊಂದಿಕೊಳ್ಳುವ, ಅದ್ಭುತ ರೋಗನಿರೋಧಕ ಶಕ್ತಿಯಿರುವ, ವೇಗವಾಗಿ ಓಡುವ, ಉತ್ತಮ ವಾಸನಾಗ್ರಹಣ ಸಾಮರ್ಥ್ಯ ಹೊಂದಿರುವ, ಬುದ್ಧಿವಂತಿಕೆ ಮತ್ತು ಧೈರ್ಯದಲ್ಲಿ ಮುಂಚೂಣಿಯಲ್ಲಿರುವ ಮುಧೋಳದ ಈ ಯೋಧರು ಭವಿಷ್ಯದಲ್ಲಿ ನಮ್ಮ ಮಿಲಿಟರಿ, ಪೊಲೀಸ್ ಪಡೆಯ ಸಾಮರ್ಥ್ಯ ವೃದ್ಧಿಸುವುದಂತೂ ದಿಟ.

ವಾಚಕರ ವಾಣಿ

ಬದಲಾಗಲಿ ಪರಂಪರಾಗತ ದೃಷ್ಟಿಕೋನ

ಗಂಡ ಹಾಗೂ ಆತನ ಮನೆಯವರ ಕಿರುಕುಳದ ವಿರುದ್ಧ ಐಪಿಎಸ್ ಅಧಿಕಾರಿ ವರ್ತಿಕಾ ಕಟಿಯಾರ್ ಅವರು ಪೊಲೀಸರಿಗೆ ದೂರು ನೀಡಿದ್ದಾರೆ (ಪ್ರ.ವಾ., ಫೆ. 7). ಕೌಟುಂಬಿಕ ದೌರ್ಜನ್ಯ, ಹಲ್ಲೆಯಂತಹ ಅಪರಾಧಗಳನ್ನು ಕಾನೂನಿನ ಮೂಲಕ ನಿಭಾಯಿಸಿ ಹತ್ತಿಕ್ಕುವ ಅತ್ಯುನ್ನತ ಪದವಿಯ ಹುದ್ದೆ ಐಪಿಎಸ್ ಅಧಿಕಾರಿಯದು. ಅಂಥ ಒಬ್ಬ ಐಪಿಎಸ್ ಅಧಿಕಾರಿಯೇ ತಮ್ಮ ಗಂಡ ನಿತೀನ್ ಸುಭಾಷ್ ಹಾಗೂ ಆತನ ಮನೆಯವರು ವರದಕ್ಷಿಣೆ ತರುವಂತೆ ಪೀಡಿಸುತ್ತಾ ಹಲ್ಲೆ ಮಾಡಿ ಜೀವಬೆದರಿಕೆ ಹಾಕಿರುವುದಾಗಿ ದೂರಿದ್ದಾರೆ. ಇದು ನಿಜವೇ ಆಗಿದ್ದರೆ, ನಾಗರಿಕ ಸಮಾಜ ನಾಚಿಕೆಯಿಂದ ತಲೆತಗ್ಗಿಸುವಂತಹುದು.

ಅತ್ಯಂತ ಗೌರವದ, ಉನ್ನತ ಅಧಿಕಾರದ ಪ್ರತಿಷ್ಠಿತ ಹುದ್ದೆಯಲ್ಲಿರುವ ಮಹಿಳಾ ಅಧಿಕಾರಿಯನ್ನೇ ಹೀಗೆ ಶೋಷಣೆಗೆ ಗುರಿ ಮಾಡುವುದೆಂದರೆ, ಇನ್ನು ಸಾಮಾನ್ಯ ಮಹಿಳೆಯರ ಗತಿ ಏನು? ಸ್ವಾತಂತ್ರ್ಯ ಬಂದು ಏಳು ದಶಕಗಳಾದರೂ ಲಿಂಗ ಸಮಾನತೆಯನ್ನು ಪ್ರತಿಪಾದಿಸುವ ಆದರ್ಶ ಸಂವಿಧಾನವಿದ್ದರೂ ಗೌರವ, ಸ್ವಾಭಿಮಾನದ ಬದುಕು ಮಹಿಳೆಯರಿಗೆ ಮರೀಚಿಕೆಯಾಗಿಯೇ ಉಳಿದಿರುವುದು ದೇಶದ ದೌರ್ಭಾಗ್ಯ. ಹೆಣ್ಣಿನ ಘನ ವ್ಯಕ್ತಿತ್ವದ ಎಲ್ಲ ವಿಶೇಷ ಗುಣಗಳನ್ನೂ ಗೌಣವಾಗಿಸಿ, ಅವಳನ್ನು ಕೀಳಾಗಿ ಕಾಣುವ ಪುರುಷ ಪಾರಮ್ಯ, ಪರಂಪರಾಗತ ದೃಷ್ಟಿಕೋನ ಬದಲಾಗದೆ ಯಾವ ಪ್ರಗತಿಯೂ ಸಾಧ್ಯವಿಲ್ಲ.

ಪ್ರೊ. ಎನ್.ವಿ.ಅಂಬಾಮಣಿಮೂರ್ತಿ, ಬೆಂಗಳೂರು

ಅಭಿಪ್ರಾಯಕ್ಕೆ ಬಂಧನದ ಹಂಗು ಬೇಡ

'ಅಭಿವ್ಯಕ್ತಿ ಸ್ವಾತಂತ್ರ್ಯ ಎಂಬುದು ಕಡಿವಾಣವಿಲ್ಲದ ಕುದುರೆಯಂತಾಗಿದೆ' ಎಂದು ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ ಹೇಳಿದ್ದಾರೆ (ವಾ.ವಾ., ಫೆ. 13). ಅವರ ಪ್ರಕಾರ, ಅಭಿವ್ಯಕ್ತಿ ಸ್ವಾತಂತ್ರ್ಯವು ಇನ್ನೊಬ್ಬರ ಭಾವನೆಗಳಿಗೆ ಭಂಗ ತರಬಾರದು. ಆದರೆ ಅಭಿಪ್ರಾಯಗಳು, ಭಾವನೆಗಳ ಅಥವಾ ನಂಬಿಕೆಗಳ ಬಂಧನಕ್ಕೆ ಒಳಪಟ್ಟರೆ ಅವುಗಳನ್ನು ಮುಕ್ತ ಅಭಿಪ್ರಾಯಗಳೆನ್ನಲಾಗದು. ಭಾವನೆಗಳಿಗೆ ನೋವುಂಟಾಗಬಾರದು ಎನ್ನುವುದೇ ಮುಖ್ಯವಾಗಿದ್ದರೆ ಪ್ರಾಯಶಃ ವಚನಗಳ ಸೃಷ್ಟಿಯಾಗುತ್ತಿರಲಿಲ್ಲ. ಬ್ರಹ್ಮಸಮಾಜದಂತಹ ಸಮಾಜ ಸುಧಾರಣಾ ಚಳವಳಿಗಳು ಸಾಧ್ಯವಾಗು-ತ್ತಿರಲಿಲ್ಲ. ಮಧ್ಯಯುಗದ ಅಂತ್ಯದಲ್ಲಿ ಸಂಪ್ರದಾಯವಾದಿ ಕ್ರಿಶ್ಚಿಯನ್ ನಂಬಿಕೆಗಳನ್ನು ಪ್ರಶ್ನಿಸಲು ಸಾಧ್ಯವಾದದ್ದು ಯುರೋಪ್ ಕತ್ತಲ ಯುಗದಿಂದ ಮರಳಲು ಕಾರಣವಾಯಿತು. ಅಭಿಪ್ರಾಯಗಳು ತಪ್ಪಾಗಿರಬಹುದು, ಆದರೆ ಪ್ರಜ್ಞಾವಂತ ಸಮಾಜಗಳು ಅದನ್ನು ಮಂಡಿಸಲು ಮುಕ್ತ ಅವಕಾಶವನ್ನು ನೀಡುತ್ತವೆ. ಇಂತಹ ಸಮಾಜಗಳು ಸತ್ಯದಿಂದ ಸುಳ್ಳನ್ನು ಬೇರ್ಪಡಿಸಲು, ಪ್ರಚೋದನೆಗಳನ್ನು ತಿರಸ್ಕರಿಸಲು ಸಶಕ್ತವಾಗಿರುತ್ತವೆ. ಇಂದು ಅಭಿಪ್ರಾಯಗಳು ಹಿಂಸೆಗೆ ಕಾರಣವಾಗುತ್ತಿದ್ದರೆ, ಅಭಿಪ್ರಾಯ ವ್ಯಕ್ತಪಡಿಸಿದ ವ್ಯಕ್ತಿ ಬಂಧನಕ್ಕೆ ಒಳಗಾಗುತ್ತಿದ್ದರೆ ನಾವು ಕಳವಳಗೊಳ್ಳಬೇಕಿರುವುದು ಸಮಾಜ ಸಾಗುತ್ತಿರುವ ದಿಕ್ಕಿನ ಬಗ್ಗೆ.

ಸುನೀಲ ನಾಯಕ, ಬೆಂಗಳೂರು

ಕಳ್ಳಹಾದಿ... ಎಚ್ಚರ

ಸಿಗುವುದಂತೆ ಇನ್ನು ಮುಂದೆ
ಪಡಿತರದೊಂದಿಗೆ
ಅಕ್ಕಿಯ ಜೊತೆ ರಾಗಿ, ಜೋಳ,
ಹುಟ್ಟಿಕೊಳ್ಳದಿರಲಿ ಇದರ ಜೊತೆ
ಕಳ್ಳಹಾದಿಯಲಿ
ತಿಂದು ತೇಗುವ ತೋಳ!

ಮಹಾಂತೇಶ ಮಾಗನೂರ, ಬೆಂಗಳೂರು

ಎಸಿಬಿ ಮಾಹಿತಿ ಪ್ರಚಾರವಾಗಲಿ

ರಾಜ್ಯದಲ್ಲಿ ಲೋಕಾಯುಕ್ತಕ್ಕೆ ಪರ್ಯಾಯವಾಗಿ ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ಸೃಜಿಸಲಾಗಿದೆ. ಸರ್ಕಾರಿ ಕಚೇರಿಗಳಲ್ಲಿ ನೌಕರ ಅಥವಾ ಅಧಿಕಾರಿಗಳು ಲಂಚಕ್ಕಾಗಿ ಬೇಡಿಕೆ ಇಟ್ಟಲ್ಲಿ, ಎಸಿಬಿ ಅಧಿಕಾರಿಗಳನ್ನು ಸಂಪರ್ಕಿಸಲು ಅಗತ್ಯವಾದ ವಿಳಾಸ ಹಾಗೂ ಮೇಲಧಿಕಾರಿಗಳ ದೂರವಾಣಿ ಸಂಖ್ಯೆಯನ್ನು ಕಚೇರಿಯ ಮುಖ್ಯದ್ವಾರದ ಬಳಿ ಬರೆಯುವುದು ಕಡ್ಡಾಯವಾಗಿದೆ. ಆದರೆ ಎಸಿಬಿ ರಚನೆಯಾಗಿ ವರ್ಷಗಳೇ ಕಳೆದರೂ ಬಹುತೇಕ ಸರ್ಕಾರಿ ಕಚೇರಿಗಳಲ್ಲಿ ಇಂತಹ ಮಾಹಿತಿಯುಳ್ಳ ಫಲಕ ಅಳವಡಿಕೆ ಕಾರ್ಯ ಅನುಷ್ಠಾನಕ್ಕೆ ಬಂದಿಲ್ಲ. ಇದರಿಂದ ಅಧಿಕಾರಿ, ನೌಕರರ ಭ್ರಷ್ಟಾಚಾರದಿಂದ ನೊಂದ ನಾಗರಿಕರಿಗೆ ಎಸಿಬಿ ರಚನೆ ಮತ್ತು ಕಾರ್ಯವ್ಯಾಪ್ತಿಯ ಮಾಹಿತಿ ಇಲ್ಲದಂತಾಗಿದೆ. ಹೀಗಾಗಿ, ಸರ್ಕಾರಿ ಕೆಲಸಕ್ಕೆ ಲಂಚ ಕೇಳಿದ ನೌಕರ ಅಥವಾ ಅಧಿಕಾರಿಯ ವಿರುದ್ಧ ದೂರು ನೀಡಲು ಅವರಿಗೆ ಸಾಧ್ಯವಾಗುತ್ತಿಲ್ಲ. ಈ ಕುರಿತು ಎಸಿಬಿ ಮುಖ್ಯಸ್ಥರು ಗಮನಹರಿಸಿ, ಎಲ್ಲ ಕಚೇರಿಗಳಲ್ಲಿ ಅಗತ್ಯ ಮಾಹಿತಿಯನ್ನು ಪ್ರಚುರಪಡಿಸಲಿ.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ದಾರಿ ತೋರಬೇಕಾದವರೇ ಹಾದಿ ತಪ್ಪಿದರೆ...?

ಕುಣಿಗಲ್‌ನ ಯೋಗವನ ಬೆಟ್ಟದ ಪೀಠಾಧ್ಯಕ್ಷ ಸ್ಥಾನ ಕೈತಪ್ಪಿದ್ದರಿಂದ ಮನನೊಂದ ಶರಣರ ಸುಜ್ಞಾನ ಮಂಟಪದ ತಿಪ್ಪೇರುದ್ರ ಸ್ವಾಮೀಜಿ ಅವರು ಸಮಾಜ ಕಲ್ಯಾಣ ಸಚಿವರ ಎದುರೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿರುವುದು ವರದಿಯಾಗಿದೆ (ಪ್ರ.ವಾ., ಫೆ. 14). ಆತ್ಮಹತ್ಯೆ ಮಹಾಪಾಪ ಎಂದು ಬೋಧಿಸಿ ಜನರಿಗೆ ಸೂಕ್ತ ಮಾರ್ಗವನ್ನು ತೋರಿಸಬೇಕಾದ ಸ್ವಾಮಿಗಳೇ ಈ ಮಾರ್ಗ ಹಿಡಿದರೆ ಜನ ಯಾರನ್ನು ನಂಬಬೇಕು? ಸರ್ವಸಂಗ ಪರಿತ್ಯಾಗಿಗಳಾಗ-ಬೇಕಾದ ಸ್ವಾಮಿಗಳು ಒಂದು ಪೀಠದ ಅಧ್ಯಕ್ಷ ಸ್ಥಾನಕ್ಕೆ ಮುಗಿಬಿದ್ದರೆ ಇವರು ಮಾದರಿ ಹೇಗಾದಾರು? ಅಧಿಕಾರಕ್ಕಾಗಿ ಹಾತೊರೆಯುವ ಇವರಿಗೂ ರಾಜಕಾರಣಿಗಳಿಗೂ ವ್ಯತ್ಯಾಸವಾದರೂ ಏನು ಉಳಿದೀತು?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಪರೀಕ್ಷಾ ಶುಲ್ಕ ಏರಿಕೆ ಖಂಡನೀಯ

ಮೈಸೂರು ವಿಶ್ವವಿದ್ಯಾಲಯವು ಕೆ– ಸೆಟ್ ಪರೀಕ್ಷೆ ನಡೆಸಲು ಅಧಿಕೃತ ಅಧಿಸೂಚನೆಯನ್ನು ಪ್ರಕಟಿಸಿದೆ. ಆದರೆ ಪರೀಕ್ಷಾ ಶುಲ್ಕದಲ್ಲಿ ಏರಿಕೆ ಕಂಡಿರುವುದು ಪರೀಕ್ಷಾರ್ಥಿಗಳಿಗೆ ಬೇಸರ ತಂದಿದೆ. ಮೊದಲೇ ಕೊರೊನಾ ಸಾಂಕ್ರಾಮಿಕದ ಕಾರಣದಿಂದ ಜನರು ಕೆಲಸವಿಲ್ಲದೆ ಪರಿತಪಿಸುತ್ತಿರುವಾಗ ಈ ನಡೆ ಖಂಡನೀಯ. ಇದರಂತೆಯೇ ಎನ್‌ಟಿಎಯು ಪರೀಕ್ಷೆಯನ್ನು ನಡೆಸುತ್ತದೆ. ಆದರೆ ಅದರಲ್ಲಿ ಶುಲ್ಕದ ಯಾವುದೇ ವ್ಯತ್ಯಾಸ ಕಂಡಿಲ್ಲ. ಕೆ– ಸೆಟ್ ಪರೀಕ್ಷಾ ಶುಲ್ಕ ಏರಿಕೆಯಿಂದ ಎಷ್ಟೋ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸುವ ಆಸಕ್ತಿ ಕುಂದಿದೆ. ಉನ್ನತ ಶಿಕ್ಷಣ ಇಲಾಖೆ ಕೂಡಲೇ ಇತ್ತ ಗಮನಹರಿಸಿ ಶುಲ್ಕದ ಹೊರೆಯನ್ನು ಇಳಿಸಬೇಕು.

ಜೆ.ಚಂದ್ರಶೇಖರ, ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕ್ರಿಪ್ಟೋಕರೆನ್ಸಿ ನೆತ್ತಿ ಮೇಲೆ ತೂಗುಗತ್ತಿ

ಭಾರತದಲ್ಲಿ ಕ್ರಿಪ್ಟೋಕರೆನ್ಸಿಯನ್ನು ನಿಷೇಧಿಸಲು ಕೇಂದ್ರ ಸರ್ಕಾರವು ಸಿದ್ಧತೆ ನಡೆಸಿದೆ. ಈ ಸಂಬಂಧ ಈಗಾಗಲೇ ಕರಡು ಮಸೂದೆಯನ್ನು ಸಿದ್ಧಪಡಿಸಿದ್ದು, ಅದನ್ನು ಕೇಂದ್ರ ಸಚಿವ ಸಂಪುಟದ ಒಪ್ಪಿಗೆಗೆ ಕಳುಹಿಸಲಾಗುತ್ತದೆ ಎಂದು ಕೇಂದ್ರ ಸರ್ಕಾರವು ಸಂಸತ್ತಿಗೆ ಮಾಹಿತಿ ನೀಡಿದೆ. ಈಗ ಭಾರತದಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಸ್ವರೂಪದ ಕ್ರಿಪ್ಟೋಕರೆನ್ಸಿ/ಡಿಜಿಟಲ್ ಹಣವನ್ನು ಈ ಮಸೂದೆಯು ಸಂಪೂರ್ಣವಾಗಿ ನಿಷೇಧಿಸುತ್ತದೆ. ಅಲ್ಲದೆ, ಭಾರತೀಯ ರಿಸರ್ವ್ ಬ್ಯಾಂಕ್ ತನ್ನದೇ ಆದ ಕ್ರಿಪ್ಟೋಕರೆನ್ಸಿಯನ್ನು ಜಾರಿಗೆ ತರಲು ಈ ಮಸೂದೆಯು ಅವಕಾಶ ಮಾಡಿಕೊಡುತ್ತದೆ ಎಂದು ತಜ್ಞರು ಹೇಳಿದ್ದಾರೆ.

ಭಾರತದಲ್ಲಿ ಐದಾರು ವರ್ಷಗಳಿಂದ ಕ್ರಿಪ್ಟೋಕರೆನ್ಸಿ ಚಲಾವಣೆಯಲ್ಲಿ ಇದೆ. ಆದರೆ, 2017-2018ರ ಅವಧಿಯಲ್ಲಿ ಕ್ರಿಪ್ಟೋಕರೆನ್ಸಿಯ ಮೂಲಕ ನಡೆಯುವ ವಹಿವಾಟಿನ ಪ್ರಮಾಣ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿತ್ತು. 2018ರಲ್ಲಿ ಬೆಂಗಳೂರಿನಲ್ಲಿ ವ್ಯಕ್ತಿಯೊಬ್ಬರು ಬಿಟ್‌ಕಾಯಿನ್ ಎಟಿಎಂ ಘಟಕವನ್ನು ಆರಂಭಿಸಿದ್ದರು. ಆದರೆ, ಮೂರೇ ದಿನಗಳಲ್ಲಿ ಆ ಎಟಿಎಂ ಘಟಕವನ್ನು ಮುಚ್ಚಿಸಲಾಯಿತು. 2018ರ ಏಪ್ರಿಲ್‌ನಲ್ಲಿ ಆರ್‌ಬಿಐ ಭಾರತದಲ್ಲಿ ಎಲ್ಲಾ ಸ್ವರೂಪದ ಕ್ರಿಪ್ಟೋಕರೆನ್ಸಿಯ ಮೂಲಕ ನಡೆಸುವ ವಹಿವಾಟನ್ನು ಮಾನ್ಯ ಮಾಡಬಾರದು ಎಂದು ಎಲ್ಲಾ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಸೂಚನೆ ನೀಡಿತು. ಆ ಮೂಲಕ ದೇಶದಲ್ಲಿ ಕ್ರಿಪ್ಟೋಕರೆನ್ಸಿಯನ್ನು ಸಂಪೂರ್ಣವಾಗಿ ನಿಷೇಧಿಸಿತು.

ಅಲ್ಲದೆ, 2018ರಲ್ಲೇ ಕ್ರಿಪ್ಟೋಕರೆನ್ಸಿಯ ಸಾಧಕ-ಬಾಧಕಗಳ ಬಗ್ಗೆ ವರದಿ ನೀಡಲು ತಜ್ಞರ ಸಮಿತಿಯನ್ನು ಕೇಂದ್ರ ಸರ್ಕಾರವು ರಚಿಸಿತ್ತು. ಈ ಸಮಿತಿಯು 2019ರ ಫೆಬ್ರುವರಿಯಲ್ಲಿ ವರದಿ ನೀಡಿತು. ವರದಿಯನ್ನು ಆಧರಿಸಿ ಕ್ರಿಪ್ಟೋಕರೆನ್ಸಿಯನ್ನು ನಿಷೇಧಿಸಲು ಮತ್ತು ಭಾರತದ್ದೇ ಸ್ವಂತ ಕ್ರಿಪ್ಟೋಕರೆನ್ಸಿಯನ್ನು ಜಾರಿಗೆ ತರುವ ಉದ್ದೇಶದಿಂದ ಮಸೂದೆ ರಚಿಸಲು ಸಿದ್ಧತೆ ನಡೆಸಲಾಗಿತ್ತು. ಈ ಎಲ್ಲವೂ ಕಾರ್ಯರೂಪಕ್ಕೆ ಬರುವ ಹೊತ್ತಿಗೆ ಕೋವಿಡ್ ಲಾಕ್‌ಡೌನ್ ಜಾರಿಗೆ ಬಂದಿತು. ಆದರೆ, ಇದೇ ಅವಧಿಯಲ್ಲಿ ಕ್ರಿಪ್ಟೋಕರೆನ್ಸಿ ನಿಷೇಧವನ್ನು ಪ್ರಶ್ನಿಸಿ ಕೆಲವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಇದನ್ನು ಸುಪ್ರೀಂ ಕೋರ್ಟ್ ಮಾನ್ಯ ಮಾಡಿತು. ಜತೆಗೆ ನಿಷೇಧವನ್ನು ತೆಗೆದುಹಾಕಿತು. ಆ ನಂತರ ಕ್ರಿಪ್ಟೋಕರೆನ್ಸಿ ದೇಶದಲ್ಲಿ ಮತ್ತೆ ಚಲಾವಣೆಗೆ ಬಂದಿತು.

ಜಗತ್ತಿನ ಹಲವು ಪ್ರಮುಖ ಆರ್ಥಿಕತೆಗಳು ಕ್ರಿಪ್ಟೋಕರೆನ್ಸಿಯನ್ನು ಮಾನ್ಯ ಮಾಡಿವೆ. ಇಲಾನ್ ಮಸ್ಕ್ ಅವರಂತಹ ಉದ್ಯಮಿಗಳು ಕ್ರಿಪ್ಟೋಕರೆನ್ಸಿಯಲ್ಲಿ ಹೂಡಿಕೆ ಮಾಡಲು ಮುಂದಾಗಿದ್ದಾರೆ. ಭಾರತದಲ್ಲೂ ಕ್ರಿಪ್ಟೋಕರೆನ್ಸಿಯಲ್ಲಿ ವಹಿವಾಟು ನಡೆಯುತ್ತಿದೆ. ಆದರೆ, ಇಂತಹ ಸಂದರ್ಭದಲ್ಲಿ ಕ್ರಿಪ್ಟೋಕರೆನ್ಸಿಯನ್ನು ನಿಷೇಧಿಸುವ ನಡೆಯು ವಿಶ್ವದಾದ್ಯಂತ ಆಶ್ಚರ್ಯಕ್ಕೆ ಕಾರಣವಾಗಿದೆ.

ದೇಶದಲ್ಲಿ ಕ್ರಿಪ್ಟೋಕರೆನ್ಸಿ ಕ್ಷೇತ್ರದಲ್ಲಿ ದುಡಿಯುತ್ತಿರುವ ಎಲ್ಲರೂ, ಈ ನಿಷೇಧ ಜಾರಿಗೆ ಬಂದ ನಂತರ ಕೆಲಸ ಕಳೆದುಕೊಳ್ಳಲಿದ್ದಾರೆ. ಭಾರತದಲ್ಲಿ ಕ್ರಿಪ್ಟೋಕರೆನ್ಸಿ ರೂಪದಲ್ಲಿ ಹೂಡಿಕೆ ಮಾಡಿರುವವರು, ಅವನ್ನು ಮಾರಾಟ ಮಾಡಲು ಮುಂದಾಗಿದ್ದಾರೆ. ನಿಷೇಧ ಹತ್ತಿರವಾಗುತ್ತಿದ್ದಂತೆ ಕ್ರಿಪ್ಟೋಕರೆನ್ಸಿಯ ಮೌಲ್ಯ ಕುಸಿಯುವ ಅಪಾಯವಿದೆ. ಹೀಗಾಗಿ ಹೂಡಿಕೆದಾರರು, ಬಂದಷ್ಟು ಹಣಕ್ಕೆ ಅವನ್ನು ಮಾರಾಟ ಮಾಡುತ್ತಿದ್ದಾರೆ. ಇದರಿಂದ ಹೂಡಿಕೆದಾರರಿಗೆ ನಷ್ಟವಾಗಲಿದೆ. ಭಾರತದಲ್ಲಿ ನಿಷೇಧವಿದ್ದರೂ ವಿಶ್ವದ ಬೇರೆಡೆ ಚಲಾವಣೆಯಲ್ಲಿ ಇರುವ ಕಾರಣ, ಭಾರತೀಯರು ಕಾಳಸಂತೆಯಲ್ಲಿ ಕ್ರಿಪ್ಟೋಕರೆನ್ಸಿಯ ವಹಿವಾಟು ನಡೆಸುವ ಸಾಧ್ಯತೆ ಇದೆ. ಭಾರತದಲ್ಲಿ ಕ್ರಿಪ್ಟೋಕರೆನ್ಸಿಯ ಭೂಗತ ಮಾರುಕಟ್ಟೆಯೇ ರೂಪುಗೊಳ್ಳುವ ಅಪಾಯವಿದೆ. ಕ್ರಿಪ್ಟೋಕರೆನ್ಸಿಯನ್ನು ನಿಷೇಧಿಸಬಾರದು ಎಂದು ಸರ್ಕಾರದ ಮೇಲೆ ಒತ್ತಡ ತರಲು ಸಿದ್ಧತೆ ನಡೆಸಲಾಗುತ್ತಿದೆ. ಈ ಕ್ಷೇತ್ರದಲ್ಲಿ ದುಡಿಯುವವರು ಈ ಸಂಬಂಧ ಒತ್ತಡ ತರಲು ಸಹಿಸಂಗ್ರಹ ಅಭಿಯಾನ ಆರಂಭಿಸಿದ್ದಾರೆ.

ಭಾರತವು ತನ್ನದೇ ಕ್ರಿಪ್ಟೋಕರೆನ್ಸಿಯನ್ನು ಚಲಾವಣೆಗೆ ತಂದರೆ, ಈ ಸ್ವರೂಪದಲ್ಲಿ ನಡೆಯುವ ವಹಿವಾಟು ಸರ್ಕಾರದ ನಿಯಂತ್ರಣಕ್ಕೆ ಬರುತ್ತದೆ. ಕ್ರಿಪ್ಟೋಕರೆನ್ಸಿಯ ಮೂಲಕ ನಡೆಯುವ ಎಲ್ಲಾ ವಹಿವಾಟುಗಳ ಮೇಲೆ ನಿಗಾ ಇರಿಸಲು ಅವಕಾಶವಾಗುತ್ತದೆ. ಈ ಕ್ಷೇತ್ರದಲ್ಲಿನ ಕಾಳದಂಧೆಯ ನಿಯಂತ್ರಣವೂ ಸಾಧ್ಯ ಎಂಬ ವಾದವೂ ಇದೆ. ಆದರೆ, ಸರ್ಕಾರವು ತರಲು ಹೊರಟಿರುವ ಮಸೂದೆಯು ಸಂಸತ್ತಿನಲ್ಲಿ ಮಂಡನೆಯಾದಾಗ ಇದು ಸ್ಪಷ್ಟವಾಗುತ್ತದೆ.

ಅನುಕೂಲಗಳು

- ಹಣದುಬ್ಬರ ಕ್ರಿಪ್ಟೋ ಕರೆನ್ಸಿ ಮೇಲೆ ಪರಿಣಾಮ ಬೀರುವುದಿಲ್ಲ. ಇಂಥ ಕರೆನ್ಸಿಯನ್ನು ನಿಗದಿತ ಪ್ರಮಾಣದಲ್ಲಿ ಮಾತ್ರ ಬಿಡುಗಡೆ ಮಾಡುವುದರಿಂದ ಬೇಡಿಕೆ ಹೆಚ್ಚಾದಂತೆ ಮೌಲ್ಯವೂ ಹೆಚ್ಚುತ್ತದೆ
- ಕ್ರಿಪ್ಟೋ ಕರೆನ್ಸಿ ವ್ಯವಹಾರ ವಿವರಗಳನ್ನು ಅದರ ನಿರ್ವಹಣೆ ಮಾಡುವವರು ಸಂಗ್ರಹಿಸಿ ಇಡುತ್ತಾರೆ. ಹಾಗೆ ಮಾಡಲು ಅವರು ವಹಿವಾಟು ಶುಲ್ಕವನ್ನು ಪಡೆಯುತ್ತಾರೆ. ಆದ್ದರಿಂದ ವ್ಯವಹಾರದ ನಿರ್ವಹಣೆಯು ಕ್ರಮಬದ್ಧವಾಗಿರುತ್ತದೆ. ಈ ದಾಖಲೆಗಳು ವಿಕೇಂದ್ರೀಕರಣಗೊಂಡಿರುವುದರಿಂದ ಹೆಚ್ಚು ವಿಶ್ವಾಸಾರ್ಹವೆನಿಸುತ್ತವೆ
- ಕ್ರಿಪ್ಟೋ ಕರೆನ್ಸಿಗಳ ಬ್ಲಾಕ್‌ಚೇನ್ ಲೆಡ್ಜರ್ ಅನ್ನು ಅತ್ಯಂತ ಕ್ಲಿಷ್ಟಕರ ಕೋಡ್‌ಗಳನ್ನು ಬಳಸಿ ನಿರ್ವಹಿಸಲಾಗುತ್ತದೆ. ಇದನ್ನು ಡೀಕೋಡ್ ಮಾಡುವುದು ಸುಲಭವಲ್ಲ. ಇದರಿಂದಾಗಿ ಕ್ರಿಪ್ಟೋ ಕರೆನ್ಸಿಗಳು ಸಾಮಾನ್ಯ ಎಲೆಕ್ಟ್ರಾನಿಕ್ ವ್ಯವಹಾರಕ್ಕಿಂತ ಹೆಚ್ಚು ಸುರಕ್ಷಿತ ಮತ್ತು ಗೋಪ್ಯವೆನಿಸುತ್ತವೆ
- ಡಾಲರ್, ಯೂರೊ, ಪೌಂಡ್, ರೂಪಾಯಿ, ಯೆನ್ ಹೀಗೆ ಯಾವ ಕರೆನ್ಸಿಯನ್ನು ಕೊಟ್ಟಾದರೂ ಕ್ರಿಪ್ಟೋ ಕರೆನ್ಸಿಯನ್ನು ಖರೀದಿಸಬಹುದು. ಇದರಲ್ಲಿ ವ್ಯವಹಾರ ನಡೆಸುವ ಮೂಲಕ ಒಂದು ಕರೆನ್ಸಿಯನ್ನು ಇನ್ನೊಂದು ಕರೆನ್ಸಿಗೆ ಸುಲಭವಾಗಿ ಪರಿವರ್ತಿಸಬಹುದು
- ಕ್ರಿಪ್ಟೋ ಕರೆನ್ಸಿಯ ಬಹು ಮುಖ್ಯ ಬಳಕೆ ಎಂದರೆ ವಿದೇಶಗಳಿಗೆ ಹಣವನ್ನು ವರ್ಗಾವಣೆ ಮಾಡುವುದು. ಈ ವ್ಯವಸ್ಥೆಯ ಮೂಲಕ ಅತ್ಯಂತ ಕನಿಷ್ಠ ಅಥವಾ ಶೂನ್ಯ ವಹಿವಾಟು ಶುಲ್ಕದೊಂದಿಗೆ ಹಣದ ವರ್ಗಾವಣೆ ಸಾಧ್ಯವಾಗುತ್ತದೆ. ವರ್ಗಾವಣೆಗೆ ಮಧ್ಯವರ್ತಿ ಸಂಸ್ಥೆಯ ಅಗತ್ಯವೂ ಇರುವುದಿಲ್ಲ.

ಅನನುಕೂಲಗಳು

- ಡಾರ್ಕ್ ವೆಬ್‌ಗಳ ಮೂಲಕ ಮಾದಕವಸ್ತುಗಳ ಖರೀದಿಯಂತಹ ಕಾನೂನುಬಾಹಿರ ವ್ಯವಹಾರಗಳಲ್ಲಿ ಹಣ ಪಾವತಿಗಾಗಿ ಕ್ರಿಪ್ಟೋ ಕರೆನ್ಸಿಯನ್ನು ಬಳಸಿದ ಉದಾಹರಣೆಗಳಿವೆ. ಹಲವರು ತಮ್ಮ ಅಕ್ರಮ ಸಂಪಾದನೆಯನ್ನು ಈ ದಾರಿಯ ಮೂಲಕ ಸಕ್ರಮಗೊಳಿಸಿದ್ದಿದೆ
- ಹ್ಯಾಕರ್‌ಗಳಿಂದ ರಕ್ಷಣೆ ಒದಗಿಸಲು ಈ ವ್ಯವಸ್ಥೆಯಲ್ಲಿ ವಾಸ್ತವಿಕವಾಗಿ ಗುರುತಿಸಲು ಸಾಧ್ಯವಾಗದಂಥ ಕೋಡ್ ಅನ್ನು ರಚಿಸಿರುತ್ತಾರೆ. ಬಳಕೆದಾರರು ತಮ್ಮ ವಾಲೆಟ್‌ನ ಕೋಡ್ ಅನ್ನು ಕಳೆದುಕೊಂಡರೆ ಅದನ್ನು ಮರಳಿ ಪಡೆಯಲು ಸಾಧ್ಯವೇ ಇಲ್ಲ. ಹೂಡಿದ ಹಣವನ್ನು ಪೂರ್ತಿಯಾಗಿ ಕಳೆದುಕೊಳ್ಳಬೇಕಾಗುತ್ತದೆ
- ಕೆಲವು ಕರೆನ್ಸಿಗಳನ್ನು ಎಲ್ಲಾ ದೇಶಗಳ ಕರೆನ್ಸಿಯ ಜತೆಗೆ ಬದಲಿಸಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಮೊದಲು ಯಾವುದಾದರೊಂದು ಕರೆನ್ಸಿಗೆ ಬದಲಿಸಿ, ಅಲ್ಲಿಂದ ಮತ್ತೆ ಮಧ್ಯವರ್ತಿ ಸಂಸ್ಥೆಯ ಸಹಾಯದಿಂದ ತಮಗೆ ಬೇಕಾದ ಕರೆನ್ಸಿಗೆ ಬದಲಿಸಬೇಕಾಗುತ್ತದೆ. ಇದಕ್ಕೆ ಹೆಚ್ಚುವರಿ ಶುಲ್ಕ ತಗಲುತ್ತದೆ.
- ಕ್ರಿಪ್ಟೋ ಕರೆನ್ಸಿ ಸುಭದ್ರ ಎನ್ನಿಸಿಕೊಂಡಿದ್ದರೂ, ಅವುಗಳ ಹ್ಯಾಕಿಂಗ್ ಅಸಾಧ್ಯವೇನೂ ಅಲ್ಲ. ಪ್ರಮುಖ ಕ್ರಿಪ್ಟೋ ಕರೆನ್ಸಿಗಳನ್ನೂ ಹ್ಯಾಕರ್‌ಗಳು ಕಳ್ಳತನ ಮಾಡಿರುವ ಉದಾಹರಣೆಗಳು ಇವೆ
- ಬಳಕೆದಾರ-ಸಂಸ್ಥೆಯ ಮಧ್ಯೆ ವಿವಾದ ಉಂಟಾದಲ್ಲಿ ಅಥವಾ ಬಳಕೆದಾರರು ತಪ್ಪಿ ಬೇರೆ ಯಾವುದಾದರೂ ಖಾತೆಗೆ ಹಣವನ್ನು ವರ್ಗಾಯಿಸಿದಲ್ಲಿ ಹಣವನ್ನು ಮರಳಿ ಪಡೆಯುವ ಅಕವಾಶವೇ ಈ ವ್ಯವಸ್ಥೆಯಲ್ಲಿ ಇಲ್ಲ

ಬಿಟ್‌ಕಾಯಿನ್ —ಎಎಫ್‌ಪಿ ಚಿತ್ರ

ಕ್ರಿಪ್ಟೋಕರೆನ್ಸಿ ಎಂಬ ಡಿಜಿಟಲ್ ದುಡ್ಡು

ಕ್ರಿಪ್ಟೋಕರೆನ್ಸಿ ಎಂಬುದು ಒಂದು ರೀತಿಯ ಖಾಸಗಿ ಡಿಜಿಟಲ್ ದುಡ್ಡು. ರೂಪಾಯಿ, ಡಾಲರ್ ಮೊದಲಾದ ಕರೆನ್ಸಿಗಳು ಭೌತಿಕವಾಗಿದ್ದರೆ, ಇದು ಅಂತರ್ಜಾಲದ ಮೂಲಕ ನಿರ್ವಹಣೆಯಾಗುವ, ವಿನಿಮಯವಾಗುವ ಹಣದ ವ್ಯವಸ್ಥೆ. ಯಾವುದೇ ದೇಶದ ಕೇಂದ್ರೀಯ ಬ್ಯಾಂಕ್‌ನೊಂದಿಗೆ ಈ ಕರೆನ್ಸಿ ಸಂಪರ್ಕ ಹೊಂದಿರುವುದಿಲ್ಲ. ಕ್ರಿಪ್ಟೋ ಕರೆನ್ಸಿಯಲ್ಲಿ ಬಿಟ್‌ಕಾಯಿನ್ ಹೆಚ್ಚು ಜನಪ್ರಿಯವಾಗಿದೆ.

ಸುಲಭವಾಗಿ ಅಂತರ್ಜಾಲದ ಮೂಲಕ ಹಣ ವರ್ಗಾವಣೆ ಮಾಡಲು ಇಂದು ಕ್ರಿಪ್ಟೋ ಕರೆನ್ಸಿಯನ್ನು ಹಲವು ದೇಶಗಳಲ್ಲಿ ಬಳಸಲಾಗುತ್ತಿದೆ. ಅಂತರ್ಜಾಲದಲ್ಲಿ ನಡೆಯುವ ಈ ಹಣಕಾಸು ವಹಿವಾಟಿಗೆ ಇರುವ ಶುಲ್ಕ ಕಡಿಮೆ. ಇದನ್ನು ಆನ್‌ಲೈನ್ ವ್ಯಾಲೆಟ್‌ನಲ್ಲಿ ಸಂಗ್ರಹಿಸಿಡಬಹುದು. ವಹಿವಾಟಿನ ಬಳಿಕ ಈ ಹಣವನ್ನು ರೂಪಾಯಿ, ಡಾಲರ್‌ಗೆ ವಿನಿಮಯ ಮಾಡಿಕೊಳ್ಳಬಹುದು. ಷೇರು ಮಾರುಕಟ್ಟೆಯ ರೀತಿಯಲ್ಲಿ ಇದರ ವಹಿವಾಟು ಸಹ ನಡೆಯುತ್ತದೆ.

ಸುರಕ್ಷಿತ: ಬಿಟ್‌ಕಾಯಿನ್ ಮೊದಲಾದ ಕ್ರಿಪ್ಟೋ ಕರೆನ್ಸಿಗಳಿಗೆ ಬಳಕೆದಾರರ ಜಾಲವಿರುತ್ತದೆ. ಇದು ಎನ್‌ಕ್ರಿಪ್ಷನ್ ಮೂಲಕ ಸುರಕ್ಷಿತವಾಗಿರುವ ಹಣ. ನೇರವಾಗಿ ತಲುಪಬೇಕಾದವರಿಗೆ ತಲುಪುವ ವ್ಯವಸ್ಥೆ. ಇದರ ಬಳಕೆದಾರ ಜಾಲದಲ್ಲಿರುವವರಿಗೆ ವ್ಯವಹಾರ ನಡೆಯುತ್ತಿರುವ ಮಾಹಿತಿ ರವಾನೆಯಾಗುತ್ತದೆ. ಈ ವಹಿವಾಟು ಪೂರ್ಣಗೊಂಡ ಬಳಿಕ ಅದನ್ನು ಬದಲಿಸಲು, ತಿದ್ದಲು, ನಕಲು ಮಾಡಲಾಗದು. ಈ ರೀತಿಯ ಪ್ರಕ್ರಿಯೆ ಸಾಧ್ಯವಾಗಿಸಿರುವುದು ‘ಬ್ಲಾಕ್‌ಚೈನ್’ ಎಂಬ ಸುರಕ್ಷಿತ ಅಂತರ್ಜಾಲ ತಂತ್ರಜ್ಞಾನ.

ಕ್ರಿಪ್ಟೋ ಕರೆನ್ಸಿ ವಿಧಗಳು

ನೂರಾರು ಕ್ರಿಪ್ಟೋ ಕರೆನ್ಸಿಗಳು ಅಸ್ತಿತ್ವದಲ್ಲಿವೆ. ಬಿಟ್‌ಕಾಯಿನ್, ರಿಪಲ್, ಕಾರ್ಡನ್, ಲಿಬ್ರಾ, ನೇಮ್‌ಕಾಯಿನ್, ಲೈಟ್‌ಕಾಯಿನ್, ಪೀರ್‌ಕಾಯಿನ್, ಡೋಜ್‌ಕಾಯಿನ್, ಗ್ರಿಡ್‌ಕಾಯಿನ್, ಇಟಿಎಚ್, ಕಾರ್ಡನೊ, ಸ್ಟೆಲ್ಲರ್, ಚೈನ್‌ಲಿಂಕ್, ಟೆದರ್, ಪ್ರೈಮ್‌ಕಾಯಿನ್, ಝಡ್‌ಕ್ಯಾಶ್ ಮೊದಲಾದವು ಚಲಾವಣೆಯಲ್ಲಿವೆ. ಜಗತ್ತಿನಾದ್ಯಂತ 4000ಕ್ಕೂ ಹೆಚ್ಚು ತರದ ಕ್ರಿಪ್ಟೋ ಕರೆನ್ಸಿಗಳು ಚಾಲ್ತಿಯಲ್ಲಿವೆ.

ಕ್ರಿಪ್ಟೋ ಮಾರುಕಟ್ಟೆ

ಕ್ರಿಪ್ಟೋ ಕರೆನ್ಸಿ ಮಾರುಕಟ್ಟೆ ಮೌಲ್ಯವು ಸುಮಾರು ₹72 ಲಕ್ಷ ಕೋಟಿಗಳಷ್ಟಿದೆ ಎಂದು ಅಂದಾಜಿಸಲಾಗಿದೆ. ಒಂದು ಬಿಟ್‌ಕಾಯಿನ್‌ನ ಈಗಿನ ಬೆಲೆ ಸುಮಾರು ₹5.50 ಲಕ್ಷ. ಬಿಟ್‌ಕಾಯಿನ್‌ನ ಮಾರುಕಟ್ಟೆ ಮೌಲ್ಯವೇ ಅಂದಾಜು ₹9 ಲಕ್ಷ ಕೋಟಿ ಆಗಿದೆ.

ಅಮೆರಿಕವು ಕ್ರಿಪ್ಟೋ ಕರೆನ್ಸಿ ಚಟುವಟಿಕೆಯ ಕೇಂದ್ರವಾಗಿದೆ. ಇಲ್ಲಿ ಹೆಚ್ಚಿನ ಸಂಖ್ಯೆಯ ವಿನಿಮಯ ಕೇಂದ್ರಗಳು, ವ್ಯಾಪಾರ ವೇದಿಕೆಗಳು, ನಿಧಿಗಳು, ಕ್ರಿಪ್ಟೋ ಮೈನಿಂಗ್ ಸೌಲಭ್ಯಗಳು ಮತ್ತು ಬ್ಲಾಕ್‌ಚೈನ್ ಆಧಾರಿತ ಯೋಜನೆಗಳು ಚಾಲ್ತಿಯಲ್ಲಿವೆ. ಚೀನಾ, ರೊಮೇನಿಯಾ, ಸ್ಪೇನ್, ಜಪಾನ್, ಸ್ವಿಟ್ಜರ್ಲೆಂಡ್, ದಕ್ಷಿಣ ಕೊರಿಯಾಗಳೂ ಮುಂಚೂಣಿಯಲ್ಲಿವೆ.

ಅಮೆರಿಕ, ಬ್ರಿಟನ್ ಮೊದಲಾದ ದೇಶಗಳಲ್ಲಿ ಇದಕ್ಕೆ ಮಾನ್ಯತೆಯಿದೆ. ನೇಪಾಳ, ಪಾಕಿಸ್ತಾನ, ವಿಯೆಟ್ನಾಂ ಸೇರಿದಂತೆ ಕೆಲವು ದೇಶಗಳು ಕ್ರಿಪ್ಟೋ ಕರೆನ್ಸಿಯನ್ನು ನಿಷೇಧಿಸಿವೆ.

ಇಲ್ಲಿಯವರೆಗೆ, ತಮ್ಮದೇ ಆದ ಕ್ರಿಪ್ಟೋಕರೆನ್ಸಿಗಳನ್ನು ಬಿಡುಗಡೆ ಮಾಡಿದ ದೇಶಗಳಲ್ಲಿ ಈಕ್ವೆಡಾರ್, ಚೀನಾ, ಸೆನೆಗಲ್, ಸಿಂಗಾಪುರ, ಟ್ಯುನಿಶಿಯಾ ಸೇರಿವೆ. ಎಸ್ಟೋನಿಯಾ, ಜಪಾನ್, ಪ್ಯಾಲೆಸ್ತೀನ್, ರಷ್ಯಾ, ಸ್ವೀಡನ್ ಮೊದಲಾದ ದೇಶಗಳು ತಮ್ಮದೇ ಕ್ರಿಪ್ಟೋ ಕರೆನ್ಸಿ ಹೊಂದಲು ಯತ್ನಿಸುತ್ತಿವೆ.

ಆಧಾರ: ಪಿಟಿಐ, ಬಿಬಿಸಿ

ನಿತೀಶ್ ಆಪ್ತ ಅಶೋಕ್ ಚೌಧರಿ ಜತೆ ಸಭೆ; ಕುತೂಹಲ ಮೂಡಿಸಿದ ನಡೆ

ಜೆಡಿಯುನತ್ತ ಕನ್ಹಯ್ಯ?

ಪ್ರಜಾವಾಣಿ ವಾರ್ತೆ

ಪಟ್ನಾ: ಸಿಪಿಐ ಮುಖಂಡ ಹಾಗೂ ಜೆಎನ್‌ಯು ವಿದ್ಯಾರ್ಥಿ ಸಂಘದ ಮಾಜಿ ಅಧ್ಯಕ್ಷ ಕನ್ಹಯ್ಯ ಕುಮಾರ್ ಅವರು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಆಪ್ತ, ಸಚಿವ ಅಶೋಕ್ ಚೌಧರಿ ಅವರನ್ನು ಭೇಟಿ ಮಾಡಿದ್ದು, ಮುಂದಿನ ರಾಜಕೀಯ ನಡೆಯ ಬಗ್ಗೆ ಕುತೂಹಲ ಮೂಡಿದೆ.

ಕನ್ಹಯ್ಯ ಕುಮಾರ್

ನಿತೀಶ್ ಕುಮಾರ್

ಇತ್ತೀಚೆಗೆ ಹೈದರಾಬಾದ್‌ನಲ್ಲಿ ನಡೆದ ಪಕ್ಷದ ಸಭೆಯಲ್ಲಿ, ಸಿಪಿಐನ ಪಟ್ನಾ ಕಚೇರಿಯಲ್ಲಿ ಪದಾಧಿಕಾರಿ ಜೊತೆ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ಕನ್ಹಯ್ಯ ಕುಮಾರ್ ವಿರುದ್ಧ ಖಂಡನಾ ನಿರ್ಣಯ ಅಂಗೀಕರಿಸಲಾಗಿತ್ತು. ಈ ಸಭೆಯ ಬೆನ್ನಲ್ಲೇ ಕನ್ಹಯ್ಯ ಅವರು ನಿತೀಶ್ ಅಪ್ತರನ್ನು ಭೇಟಿ ಮಾಡಿದ್ದಾರೆ.

ಕನ್ಹಯ್ಯ ಹಾಗೂ ಚೌಧರಿ ಅವರ ಭೇಟಿಯನ್ನು ಔಪಚಾರಿಕ ಎಂದು ಉಭಯ ಮುಖಂಡರು ಹೇಳಿದ್ದಾರೆ. ಭೇಟಿಗೆ ಬೇರೆ ಯಾವ ಉದ್ದೇಶವೂ ಇಲ್ಲ ಎಂದು ಅವರು ಸ್ಪಷ್ಟಪಡಿಸಿದ್ದರೂ, ಭೇಟಿಗೆ ಹಲವು ಕಾರಣಗಳಿವೆ ಎಂದು ಮೂಲಗಳು ತಿಳಿಸಿವೆ.

ಚೌಧರಿ ಅವರು ಬಿಹಾರ ಸರ್ಕಾರದಲ್ಲಿ ಕಟ್ಟಡ ನಿರ್ಮಾಣ ಸಚಿವರು. ಮೇಲಾಗಿ ಜೆಡಿಯು ಪಕ್ಷದ ರಾಜ್ಯ ಘಟಕದ ಕಾರ್ಯಾಧ್ಯಕ್ಷರೂ ಆಗಿದ್ದಾರೆ. ಇತ್ತೀಚೆಗೆ ಬಿಎಸ್‌ಪಿ ಶಾಸಕ ಜಮಾ ಖಾನ್ ಅವರನ್ನು ನಿತೀಶ್ ಅವರಿಗೆ ಭೇಟಿ ಮಾಡಿಸಿ, ಪಕ್ಷಕ್ಕೆ ಸೇರುವಂತೆ ಮಾಡಿದ್ದರು. ಬಳಿಕ ಅವರು ನಿತೀಶ್ ಸರ್ಕಾರದಲ್ಲಿ ಸಚಿವರೂ ಆದರು. ಪಕ್ಷೇತರ ಶಾಸಕ ಸುಮಿತ್ ಸಿಂಗ್ ಅವರನ್ನೂ ನಿತೀಶ್‌ಗೆ ಭೇಟಿ ಮಾಡಿಸಿದ್ದರು. ಕಳೆದ ವಾರ ನಡೆದ ಸಂಪುಟ ವಿಸ್ತರಣೆಯಲ್ಲಿ ಸುಮಿತ್ ಸ್ಥಾನ ಪಡೆದರು. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ತೃಪ್ತಿಕರ ಫಲಿತಾಂಶ ಕಾಣದ ಜೆಡಿಯು ತನ್ನ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳಲು ಯತ್ನಿಸುತ್ತಿದೆ. ಕನ್ಹಯ್ಯ ಅವರ ಭೇಟಿಯು ಈ ಕಾರಣದಿಂದ ಮುಖ್ಯ ಎನಿಸಿದೆ.

2019ರ ಲೋಕಸಭಾ ಚುನಾವಣೆಯಲ್ಲಿ ಕನ್ಹಯ್ಯ ಅವರು ಬೇಗುಸರಾಯ್ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಬಿಜೆಪಿ ಅಭ್ಯರ್ಥಿ ಗಿರಿರಾಜ್ ಸಿಂಗ್ ವಿರುದ್ಧ ಸೋತಿದ್ದರು. ಕನ್ಹಯ್ಯ ಅವರು ಬಿಜೆಪಿಯನ್ನು ವಿರೋಧಿಸಿಕೊಂಡು ಬಂದವರು. ಹಾಗಿದ್ದರೂ ನಿತೀಶ್ ಬಗ್ಗೆ ಮೃದು ಧೋರಣೆ ಹೊಂದಿದ್ದಾರೆ ಎನ್ನಲಾಗಿದೆ.

ಕನ್ಹಯ್ಯ ಹಾಗೂ ಚೌಧರಿ ಇಬ್ಬರಿಗೂ ಜೆಎನ್‌ಯು ನಂಟು ಇದೆ. ಇಬ್ಬರೂ ಅಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡಿದ್ದರು. ಇದರ ಹೊರತಾಗಿ, ರಾಜಕೀಯ ವಲಯದಲ್ಲಿ ಇರುವ ಮಾತಿನ ಪ್ರಕಾರ, ನಿತೀಶ್ ಭೇಟಿ ಮಾಡಲು ಇಚ್ಛಿಸುವವರು ಮೊದಲು ಚೌಧರಿ ಅವರನ್ನು ಭೇಟಿ ಮಾಡಬೇಕಿದೆ.

ನಿತೀಶ್–ಕನ್ಹಯ್ಯ ಸಂಬಂಧ

- 2019ರಲ್ಲಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ್ದ ಕನ್ಹಯ್ಯ ಕುಮಾರ್, ನಿತೀಶ್ ಕುಮಾರ್ ವಿರುದ್ಧ ಮಾತನಾಡಿರಲಿಲ್ಲ
- 2016ರಲ್ಲಿ ಜೆಎನ್‌ಯು ವಿವಾದ ಭುಗಿಲೆದ್ದಾಗ ನಿತೀಶ್ ಕುಮಾರ್ ಅವರು ಕನ್ಹಯ್ಯ ಅವರನ್ನು ಬೆಂಬಲಿಸಿದ್ದರು. ಆಗ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಭಾಗವಾಗಿ ಜೆಡಿಯು ಇರಲಿಲ್ಲ
- ನಿತೀಶ್ ಕುಮಾರ್ ಅವರು 2017ರಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಮರಳಿದ ನಂತರವೂ ಇಬ್ಬರೂ ಪರಸ್ಪರ ಮೃದು ಧೋರಣೆ ಉಳಿಸಿಕೊಂಡಿದ್ದರು
- ಲೋಕಸಭಾ ಚುನಾವಣೆಯಲ್ಲಿ ಕನ್ಹಯ್ಯ ವಿರುದ್ಧ ಆರ್‌ಜೆಡಿ ಅಭ್ಯರ್ಥಿಯನ್ನು ಕಣಕ್ಕಿಳಿಸಿತ್ತು. ಆರ್‌ಜೆಡಿ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುವುದನ್ನು ತಡೆಯಲು ಸಿಪಿಐ ಯತ್ನಿಸಲಿಲ್ಲ ಎಂಬ ಅತೃಪ್ತಿಯೂ ಕನ್ಹಯ್ಯ ಅವರಿಗೆ ಇದೆ ಎನ್ನಲಾಗುತ್ತಿದೆ

> **ಕನ್ಹಯ್ಯ ಕುಮಾರ್ ಅವರು ಕಮ್ಯುನಿಸ್ಟ್ ಸಿದ್ಧಾಂತವನ್ನು ತ್ಯಜಿಸಲು ಮತ್ತು ಜೆಡಿಯುನ ಶಿಸ್ತಿನ ಸೈನಿಕನಾಗಲು ಸಿದ್ಧರಾಗಿದ್ದರೆ, ಅವರನ್ನು ಸ್ವಾಗತಿಸುತ್ತೇವೆ**
> **ಅಜಯ್ ಅಲೋಕ್,** ಜೆಡಿಯು ವಕ್ತಾರ

> **ಬುದ್ಧಿ ಭ್ರಮಣೆಯಾಗಿರುವ ಕನ್ಹಯ್ಯ ಕುಮಾರ್ ಜತೆ ಮೈತ್ರಿಕೂಟದ ಪಾಲುದಾರ ಪಕ್ಷದ ಹಿರಿಯ ಮುಖಂಡರು ಸಭೆ ನಡೆಸಿದ್ದು ಸರಿಯಲ್ಲ**
> **ಸುಭಾಷ್ ಸಿಂಗ್,** ಬಿಹಾರದ ಸಚಿವ, ಬಿಜೆಪಿ ಮುಖಂಡ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಅಸಾದುದ್ದೀನ್ ಓವೈಸಿ ಜತೆ ವೇದಿಕೆಯಲ್ಲಿ ಇದ್ದಾಗ, ‘ಪಾಕಿಸ್ತಾನ ಜಿಂದಾಬಾದ್’ ಎಂದು ಘೋಷಣೆ ಕೂಗಿದ್ದ ಅಮೂಲ್ಯ ಎಂಬ ದೇಶದ್ರೋಹಿ ಯುವತಿ ಈಗ ರೈತರ ಪ್ರತಿಭಟನೆಯಲ್ಲೂ ಭಾಗಿಯಾಗಿದ್ದಾಳೆ. ಈ ದೇಶದ್ರೋಹಿ ಯುವತಿ ಮತ್ತು ಪ್ರತಿಭಟನೆನಿರತ ರೈತರ ನಡುವಣ ಸಂಬಂಧವೇನು? ಇವರೆಲ್ಲರ ಹಿಂದೆ ಇರುವವರು ಯಾರು? ಎಲ್ಲಾ ದೇಶವಿರೋಧಿ ಪ್ರತಿಭಟನೆಗಳಲ್ಲಿ ಈ ಮುಖಗಳೇ ಕಾಣಿಸಿಕೊಳ್ಳುತ್ತವೆ ಎಂಬ ಪೋಸ್ಟರ್ ಟ್ವಿಟರ್ ಮತ್ತು ಫೇಸ್‌ಬುಕ್‌ನಲ್ಲಿ ವೈರಲ್ ಆಗಿದೆ. ಅಮೂಲ್ಯ ಅವರು ರೈತರ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದಾರೆ ಎಂದು ಹಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಸಂಬಂಧಿಸಿದ ಚಿತ್ರವೂ ವೈರಲ್ ಆಗಿದೆ.

ಆದರೆ, ಈ ಎರಡೂ ಚಿತ್ರಗಳಲ್ಲಿ ಇರುವವರು ಬೇರೆ-ಬೇರೆ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ವೈರಲ್ ಆಗಿರುವ ಚಿತ್ರದಲ್ಲಿ ಇರುವ ಯುವತಿ ಅಮೂಲ್ಯ ಅಲ್ಲ. ಅವರು, ತಮಿಳುನಾಡಿನ ರೈತ ಹೋರಾಟಗಾರ್ತಿ ವಲಾರ್‌ಮತಿ ಎಂದು ಹಲವರು ಟ್ವೀಟ್ ಮಾಡಿದ್ದಾರೆ. ರೈತರ ಜತೆಗಿನ ತಮ್ಮ ಚಿತ್ರವನ್ನು ವಲಾರ್‌ಮತಿ ಅವರು, ತಮ್ಮ ಟ್ವಿಟರ್ ಮತ್ತು ಫೇಸ್‌ಬುಕ್ ಖಾತೆಗಳಲ್ಲಿ ಹಂಚಿಕೊಂಡಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಗ್ರಹಣದಿಂದ ಮೋಕ್ಷ

ರದನೋದಯಜ್ವರಕೆ ಸಿಲುಕದಿಹ ಶಿಶುವಿರದು |
ವಿಧಿಯೊದೆಗೆ ಸಿಕ್ಕದಿಹ ನರಜಂತುವಿರದು
ಒದೆಪೆಟ್ಟು ಮುಗಿದಂದು ರಾಹುದಂಷ್ಟ್ರದೆ ಹೊರಟ |
ವಿಧುಬಿಂಬವೋ ನೀನು – ಮಂಕುತಿಮ್ಮ || 387 ||

ಪದ-ಅರ್ಥ: ರದನೋದಯ = ಹೊಸ ಹಲ್ಲು ಬರುವ ಸಮಯ, ವಿಧಿಯೊದೆಗೆ = ವಿಧಿಯ + ಒದೆಗೆ, ರಾಹುದಂಷ್ಟ್ರದೆ = ರಾಹುವಿನ ಕೋರೆಹಲ್ಲುಗಳಿಂದ, ವಿಧುಬಿಂಬ = ವಿಧು(ಚಂದ್ರ) + ಬಿಂಬ

ವಾಚ್ಯಾರ್ಥ: ಮಗುವಿಗೆ ಹಲ್ಲು ಬರುವಾಗ ಜ್ವರ ಬಂದೇ ಬರುತ್ತದೆ. ಅಂತೆಯೇ ವಿಧಿಯ ಒದೆಗಳಿಗೆ ಸಿಲುಕದಿರುವ ಮನುಷ್ಯನಿಲ್ಲ. ಆದರೆ ಈ ಒದೆಗಳ ಪೆಟ್ಟು ನಿಂತಂದು ಮನುಷ್ಯ ರಾಹುವಿನ ದಾಡೆಗಳಿಂದ ಹೊರಬಂದ ಚಂದ್ರಬಿಂಬದಂತಾಗುತ್ತಾನೆ.

ವಿವರಣೆ: ಮಗುವಿಗೆ ಹಲ್ಲು ಮೂಡುವಾಗ ತುಂಬ ಕಷ್ಟವಾಗುತ್ತದೆ, ಜ್ವರ ಬರುತ್ತದೆ, ಭೇದಿಯಾಗುತ್ತದೆ. ಮಗುವಿಗೆ ಈ ಯಾವ ತೊಂದರೆಯೂ ಆಗುವುದು ಬೇಡವೆಂದರೆ ಹಲ್ಲು ಬರಬಾರದು. ಹಲ್ಲು ಬರುವುದು ನೈಸರ್ಗಿಕ ಕ್ರಿಯೆಯಾದ್ದರಿಂದ, ಹಲ್ಲು ಬಂದೇ ತೀರಬೇಕು ಮತ್ತು ಜ್ವರ ಬರಲೇಬೇಕು.

ಅದರಂತೆಯೇ ಮನುಷ್ಯರಾಗಿ ಭೂಮಿಗೆ ಬಂದ ಮೇಲೆ ವಿಧಿಯ ನಿಯಮಗಳಿಗೆ ನಮ್ಮನ್ನು ಒಡ್ಡಿಕೊಳ್ಳಲೇಬೇಕು. ವಿಧಿ ನಮ್ಮನ್ನು ಸಂತೋಷ, ದುಃಖಗಳ ಹಾವು-ಏಣಿಯಾಟದಲ್ಲಿ ತಳ್ಳುತ್ತದೆ. ಸುಖ, ದುಃಖಗಳೆರಡೂ ಒದೆಗಳೇ. ಆ ಒದೆಗಳನ್ನು ತಿನ್ನದ ಮನುಷ್ಯನೇ ಇಲ್ಲ. ಸಾಮಾನ್ಯನಾಗಲಿ, ಮಹಾತ್ಮನಾಗಲಿ ವಿಧಿಯ ಚಕ್ರದಲ್ಲಿ ಸಿಕ್ಕು ಘಾಸಿಗೊಳ್ಳದೆ ಇಲ್ಲ. ವಿಧಿ, ಮರ್ಯಾದಾ ಪುರುಷೋತ್ತಮನಾದ ಶ್ರೀರಾಮನನ್ನು ವನವಾಸಕ್ಕೆ ಕಳುಹಿಸಿತು, ಪತ್ನಿಯಿಂದ ದೂರ ಮಾಡಿತು. ಕೂಡಿ ಕೆಲಕಾಲ ಸಂತೋಷವಿದ್ದರು ಎನ್ನುವುದರಲ್ಲಿ ಮತ್ತೆ ಬೇರ್ಪಡಿಸಿ ನೋವು ನೀಡಿತು. ಪಾರ್ಥಸಾರಥಿಯಾದ ಕೃಷ್ಣನಿಗೆ ಎಷ್ಟೊಂದು ಕಂಟಕಗಳು! ತಾಯಿ ಹೋದರೂ ಸೋದರಮಾವ ಇರಬೇಕು ಎಂಬ ಮಾತಿದೆ. ಅಂದರೆ ತಾಯಿಯಷ್ಟೇ ಅಂತಃಕರಣಿ ಸೋದರಮಾವ ಎಂದರ್ಥ. ಆದರೆ ಶ್ರೀಕೃಷ್ಣನನ್ನು ಕೊಲ್ಲಲು ಸೋದರಮಾವನೇ ಹೊಂಚು ಹಾಕಿದ್ದ. ಕೃಷ್ಣನಿಗೆ ಕಳ್ಳತನದ ಅಪವಾದ ಬರಲಿಲ್ಲವೆ? ಮಥುರೆಯಿಂದ ಬಿಡುಗಡೆ ಹೊಂದಿ ದ್ವಾರಕೆಗೆ ಹೋದರೂ ತೊಂದರೆಗಳು ತಪ್ಪಿದವೆ? ಅತ್ಯಂತ ಶ್ರದ್ಧೆಯ ಭಕ್ತನಾದ ಅಂಬರೀಷನಿಗೆ ಎಂಥ ಕಂಟಕ ಬಂದಿತಲ್ಲ!

ಸತ್ಯಸಂಧತೆಗೆ ಮತ್ತೊಂದು ಹೆಸರೇ ಎಂಬಂತಿದ್ದ ಹರಿಶ್ಚಂದ್ರನನ್ನು ವಿಧಿ ಕಾಡಿದ್ದು ಪರಿಪರಿಯಿಂದ. ಹೆಂಡತಿ ಮಕ್ಕಳನ್ನು ಮಾರಿಕೊಂಡು, ತಾನು ಸುಡುಗಾಡು ಕಾಯ್ದು, ಹಾವು ಕಚ್ಚಿ ಸತ್ತ ಮಗನ ಅಂತ್ಯಸಂಸ್ಕಾರಕ್ಕೆ ಹಣವಿಲ್ಲದ ಹೆಂಡತಿಯನ್ನು ಕೊನೆಗೆ ಕೊಲ್ಲಬೇಕಾದ ಪ್ರಮೇಯ ಬಂದದ್ದನ್ನು ಹರಿಶ್ಚಂದ್ರ ತಡೆದುಕೊಂಡದ್ದು ಅದ್ಭುತ.

ಆದರೆ ಈ ಕಗ್ಗ ಒಂದು ಬಹುದೊಡ್ಡ ನಿರೀಕ್ಷೆಯನ್ನು, ಆಶಾವಾದವನ್ನು ನೀಡುತ್ತದೆ. ವಿಧಿ ನೀಡುವ ಕಷ್ಟಗಳು ನಮ್ಮನ್ನು ಹಣ್ಣು ಮಾಡುತ್ತವೆ, ನಿಜ. ಆದರೆ ಉಸಿರು ಬಿಗಿಹಿಡಿದು ಕಷ್ಟಗಳ ಕಣಿವೆಗಳನ್ನು, ಧರ್ಮಮಾರ್ಗದಿಂದ ದಾಟಿ ಹೊರಬಂದರೆ ವ್ಯಕ್ತಿತ್ವ ಮೊದಲಿಗಿಂತ ಉಜ್ವಲವಾಗುತ್ತದೆ. ರಾಹುವಿನ ದವಡೆಯಿಂದ ಪಾರಾಗಿ, ಗ್ರಹಣದ ನಂತರ, ಹೊರಬಂದ ಚಂದ್ರನಂತೆ ಪ್ರಕಾಶಮಾನವಾಗುತ್ತದೆ. ಮೇಲೆ ಹೇಳಿದ ರಾಮ, ಕೃಷ್ಣ, ಅಂಬರೀಷ, ಹರಿಶ್ಚಂದ್ರ ಇವರೆಲ್ಲ ಇಂದು ನಮ್ಮ ಮನುಷ್ಯ ಜೀವನದ ಧ್ರುವತಾರೆಗಳಾಗಿ ನಿಂತದ್ದು, ವಿಧಿಯ ಪೆಟ್ಟುಗಳನ್ನು ಧೈರ್ಯದಿಂದ, ನೀತಿಯಿಂದ ಎದುರಿಸಿ ನಿಂತು ದಾಟಿ ಬಂದದ್ದಕ್ಕೆ. ವಿಧಿ ನಮ್ಮನ್ನು ಕಷ್ಟದ ಆಳಕ್ಕೆ ಸೆಳೆದೊಯ್ಯುವುದು ಕೊಲ್ಲಲಿಕ್ಕಲ್ಲ, ನಮ್ಮನ್ನು ಮತ್ತಷ್ಟು ಶುದ್ಧಗೊಳಿಸಲಿಕ್ಕೆ ಎಂಬ ನಂಬಿಕೆ ಒಳ್ಳೆಯದು.

ದಿನ ಭವಿಷ್ಯ

ಮಂಗಳವಾರ 16 ಫೆಬ್ರುವರಿ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಮಾಘ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಧನಿಷ್ಠ ಪಂಚಮಿ ಗಂ. 54-10 (ರಾ. 4-29) ಮಂಗಳವಾರ ನಿತ್ಯ ನಕ್ಷತ್ರ ರೇವತಿ ಗಂ 33-19 (ರಾ. 8-08) ಶುಭ ನಾಮ ಯೋಗ ಗಂ 46-8 ಬವ ಕರಣ ಗಂ 21-56 ವಿಷ. ಗಂ. 0-53 ಅಮೃತ ಗಂ. 27-15: ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-45 ಸೂರ್ಯಾಸ್ತ: 6-22 ಅದೃಷ್ಟ ಸಂಖ್ಯೆ 5

ಮೇಷ: ವ್ಯವಹಾರಸ್ಥರಿಗೆ ಉತ್ತಮ ಫಲ. ವೃತ್ತಿಯಲ್ಲಿ ಬದಲಾವಣೆ ಸಾಧ್ಯತೆ ಕಂಡುಬರುತ್ತಿದೆ. ನೆರೆಹೊರೆಯವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು ಸೂಕ್ತವಾಗಲಿದೆ. ಕುಟುಂಬದಲ್ಲಿ ವೈಮನಸ್ಸು.

ವೃಷಭ: ವೃತ್ತಿಯಲ್ಲಿ ವರ್ಗಾವಣೆ ಅಥವಾ ಸ್ಥಾನ ಬದಲಾವಣೆ ಸಾಧ್ಯತೆ. ಸಾಲಕ್ಕಾಗಿ ಜಾಮೀನು ನೀಡದಿರುವುದು ಒಳ್ಳೆಯದು. ನಿರುದ್ಯೋಗಿಗಳಿಗೆ ಉದ್ಯೋಗ ಪ್ರಾಪ್ತವಾಗುವ ಸಾಧ್ಯತೆ.

ಮಿಥುನ: ಮಕ್ಕಳ ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನ ಹರಿಸುವುದು ಸೂಕ್ತ. ವ್ಯವಹಾರದಲ್ಲಿ ಹೆಚ್ಚಿನ ಜಾಗರೂಕತೆ ವಹಿಸಿ. ನ್ಯಾಯಾಲಯದಲ್ಲಿರುವ ಕಟ್ಟಳೆಗಳು ವಿಳಂಬವಾಗುವ ಸಾಧ್ಯತೆ. ಅಮೂಲ್ಯ ವಸ್ತುಗಳನ್ನು ಸಂಗ್ರಹಿಸುವಿರಿ.

ಕರ್ಕಾಟಕ: ಬಟ್ಟೆ, ಹತ್ತಿ ವ್ಯಾಪಾರಿಗಳಿಗೆ ವಿಶೇಷ ಲಾಭವಾಗುವ ಸಾಧ್ಯತೆ. ಉದ್ಯೋಗಸ್ಥರಿಗೆ ಮೇಲಧಿಕಾರಿಗಳಿಂದ ಪ್ರಶಂಸೆ. ಸ್ವಯಂ ಉದ್ಯೋಗಿಗಳಿಗೆ ಯಶಸ್ಸು ದೊರಕಲಿದೆ. ತಾಯಿಯ ಆರೋಗ್ಯದಲ್ಲಿ ಏರುಪೇರಾದೀತು.

ಸಿಂಹ: ವಿದ್ಯುತ್ ಉಪಕರಣಗಳನ್ನು ಬಳಸುವಾಗ ಬಹಳ ಎಚ್ಚರಿಕೆ ವಹಿಸುವುದು ಅವಶ್ಯ. ಮಹಿಳೆಯರು ಶುಭ ಸಮಾರಂಭಗಳಲ್ಲಿ ಭಾಗವಹಿಸುವ ಸಾಧ್ಯತೆ. ಮಿತ್ರರಿಂದ ಧನ ಲಾಭ. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ.

ಕನ್ಯಾ: ದೀರ್ಘಕಾಲದಿಂದ ಕಾಡುತ್ತಿದ್ದ ಅನಾರೋಗ್ಯದಿಂದ ಮುಕ್ತಿ ದೊರಕುವ ಸಾಧ್ಯತೆ. ಅಮೂಲ್ಯ ವಸ್ತುಗಳನ್ನು ಪಡೆದುಕೊಳ್ಳಲಿದ್ದೀರಿ. ವ್ಯವಹಾರ ಉತ್ತಮಗೊಳ್ಳುವ ಸಾಧ್ಯತೆ. ಗೃಹದಲ್ಲಿ ಧಾರ್ಮಿಕ ಕಾರ್ಯ ನೆರವೇರುವ ಸಾಧ್ಯತೆ.

ತುಲಾ: ಗೃಹೋಪಯೋಗಿ ವಸ್ತುಗಳನ್ನು ಖರೀದಿಸುವ ಸಾಧ್ಯತೆ. ವ್ಯಾಪಾರದಲ್ಲಿ ಹೆಚ್ಚು ಆಸಕ್ತಿ ವಹಿಸುವುದು ಅವಶ್ಯ. ಹಿರಿಯರ ಮಾತುಗಳಿಗೆ ಮನ್ನಣೆ ನೀಡಿ ಉತ್ತಮ ಫಲ ಪ್ರಾಪ್ತಿ. ಸಂತೃಪ್ತಿದಾಯಕ ದಾಂಪತ್ಯ ಜೀವನ ನಿಮ್ಮದಾಗಲಿದೆ.

ವೃಶ್ಚಿಕ: ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಬಿಡುವಿಲ್ಲದ ಕೆಲಸ. ಸೋದರರಿಂದ ಸಹಕಾರ ದೊರಕಲಿದೆ. ಮಧುಮೇಹದಂತಹ ರೋಗ ಬಾಧೆ ಹೆಚ್ಚಾಗುವ ಸಾಧ್ಯತೆ. ವಿದೇಶ ಪ್ರಯಾಣ ಸಾಧ್ಯತೆ ಕಂಡುಬರುವುದು.

ಧನು: ದೈನಂದಿನ ಕೆಲಸ–ಕಾರ್ಯಗಳಲ್ಲಿ ಉತ್ಸಾಹ ಮತ್ತು ಗಣನೀಯ ಸಾಧನೆ. ದೂರದ ಪ್ರಯಾಣ ಸಾಧ್ಯತೆ. ಮಕ್ಕಳ ಬಗ್ಗೆ ವಿಶೇಷ ಗಮನ ಅಗತ್ಯ. ವಸ್ತ್ರಾಭರಣಗಳನ್ನು ಖರೀದಿಸುವ ಸಾಧ್ಯತೆ. ಕಲಾವಿದರಿಗೆ ಉತ್ತಮ ಪ್ರೋತ್ಸಾಹ.

ಮಕರ: ಹಿತಶತ್ರುಗಳ ವಿಚಾರದಲ್ಲಿ ಬಹಳ ಜಾಗ್ರತೆ ವಹಿಸುವುದು ಅವಶ್ಯಕ. ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಯ ಸಾಧ್ಯತೆ. ವ್ಯವಹಾರದಲ್ಲಿ ಎಚ್ಚರಿಕೆಯ ನಡೆ ಅಗತ್ಯ. ವಾಹನ ಚಾಲಕರಿಗೆ ತೊಂದರೆ ಎದುರಾಗುವ ಸಾಧ್ಯತೆ ಇದೆ.

ಕುಂಭ: ಪ್ರಿಯ ವ್ಯಕ್ತಿಗಳೆಂದು ನಂಬಿ ವಿಚಾರಗಳನ್ನು ಹಂಚಿಕೊಳ್ಳುವುದು ಸೂಕ್ತವಾಗಲಾರದು. ಬಂಧುಗಳ ನಡುವಿನ ಭಿನ್ನಾಭಿಪ್ರಾಯಗಳು ದೂರವಾಗಿ ಒಮ್ಮತ ಮೂಡಲಿದೆ. ಸಂತೃಪ್ತ ದಾಂಪತ್ಯ ಜೀವನ ಅನುಭವಿಸಲಿದ್ದೀರಿ.

ಮೀನ: ಆರೋಗ್ಯದ ಕಡೆಗೆ ಹೆಚ್ಚು ಗಮನ ಅಗತ್ಯ. ಬಂಧುಗಳೊಡನೆ ಆಕಸ್ಮಿಕ ಪ್ರಯಾಣ ಸಾಧ್ಯತೆ. ಪ್ರಾಪ್ತ ವಯಸ್ಕರಿಗೆ ವಿವಾಹ ಯೋಗ ಕೂಡಬರಲಿದೆ. ಆಸ್ತಿ ವಿವಾದಕ್ಕಾಗಿ ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆ.

ನಿಮ್ಮ ಜನ್ಮದಿನ 16-ಫೆಬ್ರುವರಿ ಈ ದಿನ ಅತ್ಯಂತ ಶುಭಕರ. ಈ ದಿನದ ಕೆಲಸ–ಕಾರ್ಯಗಳು ಸರಾಗವಾಗಿ ಸಾಗಿ ನೆಮ್ಮದಿಯ ಬದುಕಿನತ್ತ ನಿಮ್ಮ ಪಯಣ. ಕೃಷಿಕರಿಗೆ ಅನುಕೂಲ. ಬೇರೆಯವರಿಗೆ ಸಹಾಯ ಮಾಡುವಲ್ಲಿ ನಿಷ್ಠೂರವಾಗಿ ವರ್ತಿಸುವಿರಿ. ಬಹುಮುಖ ಪ್ರತಿಭೆ ಇದ್ದರೂ ಸಮಚಿತ್ತದ ಅಭಾವದಿಂದಾಗಿ ಕಾರ್ಯಗಳಲ್ಲಿ ಎಡರು ತೊಡರುಗಳನ್ನು ಎದುರಿಸಬೇಕಾದೀತು.

ಪದಬಂಧ 4510

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗಿದ್ದ ದೇಹವನ್ನು ನೋಡಿದಾಗಲೇ ಈ ಅನುಮಾನ! (3)
3.ಕಚಕ್ಕನೆ ಕತ್ತರಿಸಿರುವ ತಲೆಗೂದಲು (2)
5.ವಿಷಯದಲ್ಲಿರುವ ಗರಳ (2)
6.ಕತ್ತಿಯ ಅಲುಗಿದು (4)
7.ನದಿ ಸಮುದ್ರಕ್ಕೆ ಸೇರುವಡೆಯ ಮೆಕ್ಕಲು ಭೂಮಿ (7)
10.ಬುಡದಿಂದ ಬಂದಿರುವ ಗ್ರಾಮ ರಕ್ಷಕ (4)
11.ಬಡಿವಾರ ತೋರುವಾಗ ಆವರಿಸಿರುವ ಕ್ಷಾಮ (2)
13.ಹಲ್ಲು ಮುಂತಾದವುಗಳ ರಾಶಿ (2)
14.ಮರಮುಟ್ಟು ಇತ್ಯಾದಿಗಳನ್ನೆಲ್ಲಾ ನಾಶ ಮಾಡುವ ಕೀಟ (3)

ಮೇಲಿಂದ ಕೆಳಕ್ಕೆ
1.ಸಂಕೇತ ಅಥವಾ ಸುಳಿವು (2)
2. ಹರ್ಷವಿಲ್ಲಿ ವಿರಳವಾಗಿ ಬಂದಿದೆ (3)
4.ಈಕೆ ಬಲು ನಿಪುಣೆ (3)
5.ಸಂವಿಧಾನದಲ್ಲಿ ರೀತಿಯನ್ನು ಹುಡುಕಿ (3)
6.ಗಣಿಯಲ್ಲಿ ಹುಟ್ಟಿದುದು (3)
8.ಮೂಗಿನ ಆಭರಣ (3)
9.ಮಿರ ಮಿರ ಮಿನುಗುತ್ತಿರುವ ಸೂರ್ಯ (3)
10.ಅನುವಾದವನ್ನು ಹೀಗೆನ್ನಿ (3)
11.ಬಡಿಯಲು ಹಿಡಿದಿರುವ ಕೋಲು (3)
12.ಟಪಾಲು ಬಂದ ಮೇಲೆ ಆದ ಹಿಸ್ಸೆ (2)



4509ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಾಜಿತ 3.ವಿದ್ಯಾಲಯ5.ಕವಿ7.ಕೆರಸಿ 8.ನಳ10.ಜಾತ್ರೆ11.ಸಂಭ್ರಮ 13.ಕಪಿ15.ತತ್ವಜ್ಞಾನ16.ನಪುಂಸಕ
ಮೇಲಿಂದ ಕೆಳಕ್ಕೆ: 1.ಪದಕ2. ತಡಿಕೆ3.ವಿಲಾಸಿ4.ಯಮಳ6. ವಿಜಯಯಾತ್ರೆ 8.ನಯವಂಚಕ10.ಜಾಗೃತ11. ಸಂಧಾನ12.ಮರ್ದನ14.ಪಿನಾಕ

ಸುಡೊಕು 4896

	7			2				5
3		6	5		8			
	4			7		2		
	6				5			
9		1		8			6	2
4			2			1	3	
		2	3		7		5	
7	1			5		6		3
5		3	4					1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4895 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

‘ಪ್ರತಿಭಟನೆ ಪಿತೂರಿ ಎನಿಸಿದರೆ ಪ್ರಜಾಪ್ರಭುತ್ವವೇ ಇಲ್ಲ’

ನವದೆಹಲಿ (ಪಿಟಿಐ): ರೈತರ ಹೋರಾಟಕ್ಕೆ ಬೆಂಬಲ ಕ್ರೋಡೀಕರಿಸಲು ‘ಟೂಲ್‌ಕಿಟ್’ ರೂಪಿಸಿದ ಆರೋಪದಲ್ಲಿ ಬಂಧಿಸಲಾಗಿರುವ ಪರಿಸರ ಹೋರಾಟಗಾರ್ತಿ ದಿಶಾ ರವಿ ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಪ್ರತಿಭಟನೆ ನಿರತ ರೈತ ಸಂಘಟನೆಗಳ ಒಕ್ಕೂಟ ಕಿಸಾನ್ ಸಂಯುಕ್ತ ಮೋರ್ಚಾ ಒತ್ತಾಯಿಸಿದೆ.

‘ರೈತರ ಹೋರಾಟವನ್ನು ಹತ್ತಿಕ್ಕಲು ಸರ್ಕಾರವು ಪೊಲೀಸ್ ಬಲವನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ. ಇದು ಕಳವಳಕಾರಿ ಬೆಳವಣಿಗೆ. ಯಾವುದೇ ಕ್ರಮಗಳನ್ನು ಪಾಲಿಸದೆಯೇ ಪರಿಸರ ಹೋರಾಟಗಾರ್ತಿ ದಿಶಾ ಅವರನ್ನು ಬಂಧಿಸಲಾಗಿದೆ. ಇದನ್ನು ನಾವು ಖಂಡಿಸುತ್ತೇವೆ. ದಿಶಾ ಅವರನ್ನು ರಕ್ಷಣವೇ ಬೇಷರತ್ ಆಗಿ ಬಿಡುಗಡೆ ಮಾಡಬೇಕು’ ಎಂದು ಕಿಸಾನ್ ಸಂಯುಕ್ತ ಮೋರ್ಚಾ ಒತ್ತಾಯಿಸಿದೆ.

ದಿಶಾ ಅವರನ್ನು ಬಿಡುಗಡೆ ಮಾಡಬೇಕು ಎಂದು ಸಾಮಾಜಿಕ ಹೋರಾಟಗಾರರು ಮತ್ತು ಪರಿಸರ ಕಾರ್ಯಕರ್ತರು ಕೂಡ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ದಿಶಾ ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಮತ್ತು ಪೊಲೀಸರು ಇತರರನ್ನು ಬೇಟೆಯಾಡುವುದನ್ನು ನಿಲ್ಲಿಸಬೇಕು ಎಂದು ಅಖಿಲ ಭಾರತ ಪ್ರಗತಿಪರ ಮಹಿಳಾ ಸಂಘಟನೆಯ ಕಾರ್ಯದರ್ಶಿ ಕವಿತಾ ಕೃಷ್ಣನ್ ಆಗ್ರಹಿಸಿದ್ದಾರೆ.

‘ದಿಶಾ ಅವರಂತಹ ಯುವತಿಯರು ಭಾರತದ ಭರವಸೆ. ಅವರು ತಮ್ಮ ಬಗ್ಗೆ ಮಾತ್ರ ಯೋಚಿಸದೆ ಭವಿಷ್ಯದ ತಲೆಮಾರುಗಳ ಬಗ್ಗೆಯೂ ಕಳಕಳಿ ಹೊಂದಿದ್ದಾರೆ. ಈಗ ನಾವು ಪ್ರಜಾಪ್ರಭುತ್ವದ ರೀತಿಯಲ್ಲಿ ವರ್ತಿಸುತ್ತಲೇ ಇಲ್ಲ. ಪ್ರತಿಭಟನೆಯನ್ನು ಪಿತೂರಿ ಎಂದು ಪರಿಗಣಿಸಿದರೆ, ಪ್ರತಿಭಟನೆ ಸಂಘಟಿಸುವುದು ಷಡ್ಯಂತ್ರ ಎಂದಾದರೆ, ನಾವು ಪ್ರಜಾಪ್ರಭುತ್ವವಾಗಿ ಉಳಿದಿಲ್ಲ ಎಂದೇ ಅರ್ಥ’ ಎಂದು ಅವರು ಹೇಳಿದ್ದಾರೆ.

‘ಪ್ರಧಾನಿಯವರ ಪ್ರಚಾರದ ಟೂಲ್‌ಕಿಟ್ ಅನ್ನು ನಾವು ನೋಡಬೇಕು. ನಾವು ಅಸಂಬದ್ಧದ ಎಲ್ಲೆಯನ್ನು ಮೀರುತ್ತಿದ್ದೇವೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ನಗೆಪಾಟಲಿಗೆ ಈಡಾಗುತ್ತಿದ್ದೇವೆ’ ಎಂದು ಮಾನವ ಹಕ್ಕುಗಳ ಕಾರ್ಯಕರ್ತೆ ಶಬ್ನಂ ಹಾಶ್ಮಿ ಹೇಳಿದ್ದಾರೆ.

‘ಹವಾಮಾನ ಬದಲಾವಣೆಯು ನಮ್ಮ ಅಸ್ತಿತ್ವಕ್ಕೇ ಬೆದರಿಕೆ ಎಂಬುದು ನಮಗೆ ಗೊತ್ತಿದೆ. ಹವಾಮಾನ ಬದಲಾವಣೆ ತಡೆಗೆ ಯುವ ಜನರ ಬದ್ಧತೆ ಮತ್ತು ಹುರುಪನ್ನು ನಾವು ಹತಾಶವಾಗಿ ಎದುರು ನೋಡುತ್ತಿದ್ದೇವೆ. ಹವಾಮಾನ ಬದಲಾವಣೆ ತಡೆಗೆ ಅವರ ಗಟ್ಟಿ ದನಿ ಬೇಕಾಗಿದೆ. ದಿಶಾ ರವಿ ಅವರನ್ನು ಬಿಡುಗಡೆ ಮಾಡಿ’ ಎಂದ ದೆಹಲಿಯ ಸೆಂಟರ್ ಫಾರ್ ಸೈನ್ಸ್ ಎಂಡ್ ಎನ್‌ವಿರಾನ್‌ಮೆಂಟ್‌ನ ಮುಖ್ಯಸ್ಥೆ ಸುನಿತಾ ನಾರಾಯಣ್ ಟ್ವೀಟ್ ಮಾಡಿದ್ದಾರೆ.

‘ಇದು ಹೆಣ್ಣು ಮಕ್ಕಳು ಮತ್ತು ಮಹಿಳೆಯರ ದನಿಯನ್ನು ಹತ್ತಿಕ್ಕುವ ಯತ್ನ. ನಮ್ಮ ಗ್ರಹ ಮತ್ತು ಭವಿಷ್ಯಕ್ಕಾಗಿ ಹೋರಾಡುವುದನ್ನು ಇದು ತಡೆಯದು’ ಎಂದು ಒಂಬತ್ತು ವರ್ಷದ ಪರಿಸರ ಕಾರ್ಯಕರ್ತೆ ಲಿಸಿಪ್ರಿಯಾ ಕಂಗುಜಂ ಹೇಳಿದ್ದಾಳೆ.

50ಕ್ಕೂ ಹೆಚ್ಚು ವಿದ್ವಾಂಸರು, ಕಲಾವಿದರು ಮತ್ತು ಹೋರಾಟಗಾರರು ಜಂಟಿ ಹೇಳಿಕೆ ಬಿಡುಗಡೆ ಮಾಡಿ, ದಿಶಾ ಅವರಿಗೆ ಬೆಂಬಲ ಸೂಚಿಸಿದ್ದಾರೆ. ‘ಈ ಅಕ್ರಮ ಬಂಧನವು ಪ್ರಭುತ್ವದ ಅತಿರೇಕ’ ಎಂದು ಈ ಹೇಳಿಕೆಯಲ್ಲಿ ಟೀಕಿಸಲಾಗಿದೆ.

ಬಿಜೆಪಿ ದೇಶದಲ್ಲಿ ತುರ್ತುಪರಿಸ್ಥಿತಿ ಜಾರಿಗೆ ತಂದಿದೆ. ಸರ್ಕಾರದ ವಿರುದ್ಧ ಗಟ್ಟಿಯಾಗಿ ಮಾತನಾಡುವ ಯುವಜನರನ್ನು ಕಂಡರೆ ಬಿಜೆಪಿಗೆ ಆಗುವುದಿಲ್ಲ
ರಾಘವ್ ಛಡ್ಡಾ, ಎಎಪಿ ವಕ್ತಾರ

ಸರ್ಕಾರದ ನೀತಿಗಳ ವಿರುದ್ಧ ಪ್ರತಿಭಟಿಸುವವರನ್ನು ಬಂಧಿಸುವುದು ತರವಲ್ಲ. ಸರ್ಕಾರ, ಸುಳ್ಳು ಸುದ್ದಿ ಹರಡುತ್ತಿರುವ ಬಿಜೆಪಿ ಐ.ಟಿ. ಘಟಕದ ವಿರುದ್ಧ ಕ್ರಮ ತೆಗೆದುಕೊಳ್ಳಲಿ
ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ದಿಶಾ ರವಿ ಅವರನ್ನು ಕ್ಷುಲ್ಲಕ ಆರೋಪದ ಮೇಲೆ ಬಂಧಿಸಲಾಗಿದೆ. ತನ್ನ ವಿರುದ್ಧ ಮಾತನಾಡುವ ದನಿಯನ್ನು ಬಲದ ಮೂಲಕ ಹತ್ತಿಕ್ಕುವುದು ಸರ್ವಾಧಿಕಾರವೇ ಸರಿ
ಎಂ.ಕೆ.ಸ್ಟಾಲಿನ್, ಡಿಎಂಕೆ ಮುಖ್ಯಸ್ಥ

‘ದೇಶದ್ರೋಹದ ಬೀಜ ಸಮೂಲ ನಾಶ ಮಾಡಬೇಕು’

(ಚಂಡೀಗಡ ವರದಿ): ದಿಶಾ ರವಿ ಅವರ ಬಂಧನದ ಬಗ್ಗೆ ಹೇಳಿಕೆ ನೀಡಿರುವ ಹರಿಯಾಣದ ಗೃಹಸಚಿವ ಅನಿಲ್ ವಿಜ್ ಅವರು ‘ರಾಷ್ಟ್ರವಿರೋಧದ ಬೀಜ ಕಂಡು ಬಂದಾಗ ಅದನ್ನು ಬೇರುಸಹಿತ ಕಿತ್ತೆಸೆಯಬೇಕು’ ಎಂದಿದ್ದಾರೆ.

‘ದಿಶಾ ರವಿ ಆಗಿರಲಿ ಅಥವಾ ಬೇರೇ ಯಾರೇ ಆಗಿರಲಿ, ತಮ್ಮ ಮನಸ್ಸಿನೊಳಗೆ ರಾಷ್ಟ್ರದ್ರೋಹದ ಬೀಜವನ್ನು ಮೊಳೆಯುವಂತೆ ಮಾಡಿದರೆ, ಅದನ್ನು ಸಮೂಲ ನಾಶ ಮಾಡಬೇಕು’ ಎಂದು ಅವರು ಹಿಂದಿ ಭಾಷೆಯಲ್ಲಿ ಮಾಡಿರುವ ಟ್ವೀಟ್‌ನಲ್ಲಿ ಹೇಳಿದ್ದಾರೆ.

ಆದರೆ, ಈ ಟ್ವೀಟ್ ಬಗ್ಗೆ ಜರ್ಮನಿಯ ವ್ಯಕ್ತಿಯೊಬ್ಬರು ಟ್ವಿಟರ್ ಸಂಸ್ಥೆಯ ಜತೆ ಆಕ್ಷೇಪ ಎತ್ತಿದ್ದರು. ಸ್ವಲ್ಪಹೊತ್ತಿನಲ್ಲೇ ‘ದೇಶ ವಿರೋಧದ ಬಗ್ಗೆ ನೀವು ಮಾಡಿರುವ ಟ್ವೀಟ್ ಬಗ್ಗೆ ನಮಗೆ ದೂರುಗಳು ಬಂದಿವೆ’ ಎಂದು ಟ್ವಿಟರ್ ಸಂಸ್ಥೆ ವಿಜ್ ಅವರಿಗೆ ತಿಳಿಸಿತ್ತು.

ಅದಾಗಿ ಸ್ವಲ್ಪ ಹೊತ್ತಿನ ಬಳಿಕ ಇನ್ನೊಂದು ಸ್ಪಷ್ಟನೆಯನ್ನು ನೀಡಿದ ಟ್ವಿಟರ್, ‘ನಿಮ್ಮ ಟ್ವೀಟ್ ಬಗ್ಗೆ ನಾವು ತನಿಖೆ ನಡೆಸಿದ್ದೇವೆ. ಟ್ವಿಟರ್ ಕಾನೂನಿನ ಅಡಿಯಾಗಲಿ, ಜರ್ಮನಿಯ ಕಾನೂನಿನ ಅಡಿಯಾಗಲಿ ನಿಮ್ಮ ಟ್ವೀಟ್ ಆಕ್ಷೇಪಾರ್ಹ ಎಂದು ಕಂಡುಬಂದಿಲ್ಲ. ಆದ್ದರಿಂದ ಅದರ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ತಿಳಿಸಿದೆ.

8ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಕೆ.ಎಸ್.ಹನುಮಂತಪ್ಪ (M.A., K.S.A.S)
01–06–1955 – 16–02–2013
ನಿಮ್ಮ ಸವಿ ನೆನಪುಗಳು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.
ನೀವು ನಮ್ಮೆಲ್ಲರ ಬಾಳಿನಲ್ಲಿ ನಂದಾದೀಪವಾಗಿ ಬೆಳಗುತ್ತಿದ್ದೀರಿ
ಇಂತಿ: ಶ್ರೀಮತಿ ಮಂಜುಳಾ ಹೆಚ್, ಮಕ್ಕಳು ಮತ್ತು ಬಂಧು–ಮಿತ್ರರು

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business to Business
Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು/ ಎನ್.ಪಿ.ಎ/ ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 96257-68775.

BEST FINANCIAL Deals !!! MSME, Agriculture, Property, Business, Personal,Takeover, Purchase,Home Loans,5 Lakhs to 5 Cr, Farmers / NPA/ CIBIL Cases Welcome. 7814273476

★॥(ಉಚಿತ ಭವಿಷ್ಯ)॥★ ಶ್ರೀಬನಶಂಕರಿದೇವಿ ಜ್ಯೋತಿಷ್ಯಾಲಯ ರಾಘವೇಂದ್ರಭಟ್ ವ್ಯಾಪಾರ, ಹಣಕಾಸು,ಪ್ರೇಮ ವಿಚಾರ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮೂಲಕ ಕ್ಷಣಮಾತ್ರದಲ್ಲಿ ಪರಿಹಾರ. 8105852273

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀ ಪುರುಷ ವಶೀಕರಣ, ದಾಂಪತ್ಯ ಕಲಹ ಪರಿಹಾರಕ್ಕೆ ಶ್ರೀಕಾಂತ್ ದಾಸ್. 8217472895

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 9ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ಹೊಸದಾಗಿ ಪ್ರಾರಂಭವಾಗುತ್ತಿರುವ ಧಾರಾವಾಹಿ ಹಾಗೂ ಚಲನಚಿತ್ರದಲ್ಲಿ ನಟಿಸಲು ಆಸಕ್ತಿಯುಳ್ಳವರು ಸಂಪರ್ಕಿಸಿ. ಮಕ್ಕಳಿಗೂ ಅವಕಾಶ.ಆಕ್ಟಿಂಗ್ ಕ್ಲಾಸ್, ಫೋಟೊ ಶೂಟ್‌ಗೆ ಚಾರ್ಜ್ ಮಾಡಲಾಗುತ್ತದೆ. ಫೋ.: 8088233523, 7257999369

ಸುವರ್ಣಾವಕಾಶ ಪ್ರತಿಷ್ಠಿತ ಕಂಪನಿಗಳಿಗೆ ಹಾಗೂ ಖಾಸಗಿ ಆಫೀಸ್‌ಗಳ ಹುದ್ದೆಗಳಿಗೆ 7th, SSLC, PUC,ITI, Diploma Any Degree Pass/Fail ಆದ ಯುವಕಯುವತಿಯರು ಬೇಕಾಗಿದ್ದಾರೆ.ವಸತಿಯೂಟದೊಂದಿಗೆ ESI/PF +[OT-150/Hour] ಸಂಬಳ 15,600/- ರೂರಿಂದ 34,200/- ರೂವರೆಗೆ.7406000347, 7406000369

CONNECT

CREDENCE IAS
An Institute for Civil Service Examination
PSI (Civil) Batch-2021
Starting from Feb 1st 2021, Online/Offine
Kannada / English Medium
CLASSES & TEST SERIES | CORE BATCH
“Be the early bird to get Success”
More than 150+ Selection-Since 2015
www.credenceias.com
Join Telegram : @crispycurrentaffairs
Vijayanagar, Bengaluru - 96545 06161

ಭವಿಷ್ಯ
Astrology

★ಕೊಳ್ಳೆಗಾಲದಿಂದ★ ನೇರಪರಿಹಾರ.ಕೊಳ್ಳೆಗಾಲದ ನಂ.1ಸ್ಪೆಷಲಿಸ್ಟ್ ಪಂಡಿತ್.ಕಾಳಿಪ್ರಸಾದ್ ಗುರೂಜಿ.9740286807 ವಿದ್ಯೆ,ಉದ್ಯೋಗ,ಸ್ತ್ರೀಪುರುಷ ಪ್ರೇಮ,ಸಂತಾನ,ವಿವಾಹ, ಶತ್ರುದೋಷ,ಸಾಲಬಾಧೆ, ವ್ಯಾಪಾರ,ಪ್ರೇತಬಾಧೆ, ದೈವದೋಷ,ನಾಗದೋಷ, ದಾಂಪತ್ಯ ಸಮಸ್ಯೆ ಇನ್ನೂ ಅನೇಕ ಕಠಿಣವಾದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ತಿಳಿಸುತ್ತಾರೆ.#12,ಅಂಬೇಡ್ಕರ್ ಮುಖ್ಯರಸ್ತೆ,ಗೀತಭವನ,ಕೊಳ್ಳೆಗಾಲ

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★ಕೆಲಸಆದ ನಂತರಕಾಣಿಕೆ★ ಎಲ್ಲಿಯೂ ಪರಿಹಾರವಾಗದ ಕಠಿಣ, ನಿಗೂಢ ಗುಪ್ತಸಮಸ್ಯೆಗಳಿಗೆ ಶ್ರೀಸಾಯಿರಾಮ್ ದೀಕ್ಷಿತ್‌ರವರಿಂದ 2ದಿನದಲ್ಲಿ ಗ್ಯಾರಂಟಿ ಪರಿಹಾರ. ಹನುಮಂತನಗರ,ಬೆಂಗಳೂರು. 9880382711

★॥ಸಿಗಂದೂರು ಚೌಡೇಶ್ವರಿ॥★ ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ,ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕವಶೀಕರಣ, ಸ್ತ್ರೀಯರಿಗೆ7ಗಂಟೆಗಳಲ್ಲಿ ಉಚಿತ ಪರಿಹಾರ. 9845153558

ಉದ್ಯೋಗಾವಕಾಶ
General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ.9739993386, 9916016092

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಕೆಲಸ ಖಾಲಿಯಿದೆ ಪ್ರತಿಷ್ಠಿತ ಲಿಮಿಟೆಡ್ ಕಂಪನಿಯೊಂದಕ್ಕೆ SSLC,PUC, ITI,Degree ಯಾದ 800ಯುವಕರಿಗೆ ನೇರ ಆಯ್ಕೆ ESI,PF,OT ಸೇರಿ 13,000- 39,000/- 9742711372, 9742740812

Office Boys/ Peon

COURIER BOYS 3 years exp & Bike 10,000+fuel Call 07498999950/52

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9663959295, 9686523337.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಕೆಲಸಕ್ಕೆ ಬೇಕಾಗಿದ್ದಾರೆ.ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿರುವ MNC ಕಂಪನಿಗಳಿಗೆ,ಆಫೀಸ್ ಗಳಿಗೆ ಕನ್ನಡಬಲ್ಲಂತಹ ಯುವಕರು, ಯುವತಿಯರಿಗೆ ವಸತಿಯೊಂದಿಗೆ +OT 15,800 -86,000 8884054160, 9739544856

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಬೆಂಗಳೊರಿನಲ್ಲಿ ಉಳಿದುಕೊಂಡು ಮನೆಗೆಲಸ, ಅಡುಗೆ, ಮಕ್ಕಳು ನೋಡಿಕೊಳ್ಳಲು ಹಿಂದಿ/ ಕನ್ನಡಬಲ್ಲ ಮಹಿಳೆಯರು ಬೇಕಾಗಿದ್ದಾರೆ. ಊಟ, ವಸತಿ ಸಂಬಳ. 8496922812/ 8073088585

ಸಮಾಜಸೇವೆ
Others

ಪಾರಂಪರಿಕ ವೈದ್ಯ ಪದ್ಧತಿ ಹಾಗೂ ನಾಟಿ ಆಯುರ್ವೇದ ಅದ್ಭುತ ಪ್ರಾವೀಣ್ಯತೆ ಪಡೆದ ವೈದ್ಯರುಗಳ ಕಿರುಪುಸ್ತಕ ಪ್ರಕಟಿಸುತ್ತೇವೆ ನೊಂದಾಯಿಸುವವರು ಸಂಪರ್ಕಿಸಿ: 8892501007/ 9606701007

ಪ್ರವಾಸ
Travel

'ಕೃಷ್ಣ ಹೆರಿಟೇಜ್ ಟೂರ್ಸ್' ಊಟ ರೂಮಿನೊಂದಿಗೆ 5/6 ದಿನಗಳು. 19.03.2021 ನವಗ್ರಹದರ್ಶನದೊಂದಿಗೆ 18ಕ್ಷೇತ್ರಗಳು. 24.03.2021 ರಾಮೇಶ್ವರ,ಕನ್ಯಾಕುಮಾರಿ 10ಕ್ಷೇತ್ರಗಳು. 30.03.2021 ಅಹೋಬಿಲಂ,ಶ್ರೀಶೈಲ, ಮಂತ್ರಾಲಯ,ನವನರಸಿಂಹ 14ಕ್ಷೇತ್ರಗಳು. 08.04.2021 ಸಮಗ್ರಕೇರಳ. 26.02.2021 ಮಾಘಸ್ನಾನ ಭಾಗಮಂಡಲ. 9448390735

ಮಾರ್ಚ್, ಏಪ್ರಿಲ್,ಮೇನಲ್ಲಿ 5 ದಿನಗಳು ಅಂಡಮಾನ್ ಹವಳದ್ವೀಪ. 26/03/2021 15ದಿನಗಳು ರೈಲು/ಬಸ್ಸುನಲ್ಲಿ ದೆಹಲಿ, ಅಗ್ರ,ಅಲಹಾಬದ್, ಕಾಶಿ,ಗಯ, ಹರಿದ್ವರ್, ಇತ್ಯಾದಿ 15000/=(ಕೆಲವೇ ಸೀಟುಗಳಿವೆ). ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219.

ರಿಯಾಯಿತಿ ದರದಲ್ಲಿ 12 ದಿನಗಳ ಕಾಶಿ,ದೆಹಲಿ ಪ್ರವಾಸ. 17 ದಿನಗಳ ಚಾರ್‌ಧಾಮ್, 6 ದಿನಗಳ ಅಂಡಮಾನ್ ಮತ್ತು 6 ದಿನಗಳ ದಕ್ಷಿಣಭಾರತ ಪ್ರವಾಸ. ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರಿ ಸೇವಸಂಘ, ಗಿರಿನಗರ,ಬೆಂಗಳೂರು. 9916473906, 8861111568

★ರೈಲು, ವಿಮಾನ ಮತ್ತು* 2+2AC ಬಸ್ಸಿನಲ್ಲಿ 16.05.2021 ಸಂಪೂರ್ಣ ಕಾಶಿ.,02.05.2021 ಕುಲುಮನಾಲಿ,ಸಪ್ತಶಕ್ತಿಪೀಠ., 16.04.2021 ಸಂಪೂರ್ಣ ಗುಜರಾತ್.ಆರ್.ಗಾಂಧಿ ಟೂರ್ಸ್.9902433500, 9945445809

ವಾಹನ
Four Wheelers Selling
Others

INTRA V10 ವಾಹನ ಈಗ
3.99% ಬಡ್ಡಿದರ ಲಾಭದ ಭರವಸೆಯೊಂದಿಗೆ
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

33 kW ಇಂಜಿನ್
₹50,000/-* ದವರೆಗೆ ಗ್ರಾಹಕರ ಕೊಡುಗೆಗಳು
ಅಥವಾ
3.99%* ಬಡ್ಡಿದರ / 47 ತಿಂಗಳು
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore -7259784441
Bangalore/Mysore 95384 14448
Tumkur/Davanagere/ Chitradurga-7829055525
Mangalore/Shivamogga/ Udupi/Hassan/ Chikkamagalur/Karwar 96208 63338
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223
* ಷರತ್ತುಗಳು ಅನ್ವಯಿಸುತ್ತದೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಹೆಚ್ಚು ಹೇಳಲಾರೆ– ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೈತರ ಪ್ರತಿಭಟನೆಯನ್ನು ಹೇಗೆ ಬೆಂಬಲಿಸಬೇಕು ಎಂಬುದನ್ನು ವಿವರಿಸುವ ‘ಟೂಲ್‌ಕಿಟ್’ ಸಿದ್ಧಪಡಿಸಿದ ಪ್ರಕರಣದಲ್ಲಿ ದಿಶಾ ರವಿ ವಿರುದ್ಧ ದೆಹಲಿಯಲ್ಲಿ ದೂರು ದಾಖಲಾಗಿತ್ತು. ಅಲ್ಲಿನ ಪೊಲೀಸರ ಬಳಿ ಕೆಲವು ಸಾಕ್ಷ್ಯಗಳಿದ್ದವು. ಪ್ರಕರಣ ಈಗ ದೆಹಲಿ ನ್ಯಾಯಾಲಯದಲ್ಲಿದೆ. ಹೀಗಾಗಿ, ಈ ವಿಷಯದಲ್ಲಿ ಹೆಚ್ಚು ಹೇಳಲಾರೆ’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

ಬೆಂಗಳೂರು ಪೊಲೀಸರಿಗೆ ಮಾಹಿತಿ ನೀಡದೆ ದೆಹಲಿ ಪೊಲೀಸರು ದಿಶಾ ರವಿ ಅವರನ್ನು ಬಂಧಿಸಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, ‘ಬೇರೆ ಬೇರೆ ರೀತಿಯ ಪ್ರಕರಣಗಳಿರುತ್ತವೆ. ಕೆಲವು ಪ್ರಕರಣಗಳಲ್ಲಿ ಶಿಷ್ಟಾಚಾರ ಅನುಸರಿಸುವುದಿಲ್ಲ. ನಮ್ಮ ಪೊಲೀಸರು ಕೂಡಾ ರಾಜ್ಯದ ಹೊರಗೆ ಹೋಗಿ ಹಲವರನ್ನು ಬಂಧಿಸುತ್ತಾರೆ’ ಎಂದು ಸ್ಪಷ್ಟನೆ ನೀಡಿದರು.

ಸಮಾವೇಶಕ್ಕೆ ಭದ್ರತೆ: ‘ಅರಮನೆಮೈದಾನದಲ್ಲಿ ಇದೇ 21ರಂದು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನಡೆಯಲಿರುವ ಪಂಚಮಸಾಲಿ ಸಮಾವೇಶದ ಸಂದರ್ಭದಲ್ಲಿ ಸಾರ್ವಜನಿಕರು ಹಾಗೂ ವಾಹನ ಸಂಚಾರಕ್ಕೆ ತೊಂದರೆ ಆಗದಂತೆ ಪೊಲೀಸರು ಭದ್ರತೆ ಕೈಗೊಳ್ಳಲಿದ್ದಾರೆ’ ಎಂದು ಸ್ಪಷ್ಟಪಡಿಸಿದರು.

‘ಒಂದೂವರೆ ವರ್ಷದಿಂದ ಹಲವು ಹೋರಾಟಗಳು ನಡೆದಿವೆ. ಇಂಥ ಹೋರಾಟಗಳ ಸಂದರ್ಭದಲ್ಲಿ ಸಮಸ್ಯೆ ಆಗದಂತೆ ನಮ್ಮ ಪೊಲೀಸರು ನಿಭಾಯಿಸಿದ್ದಾರೆ. ಈಗಲೂ ದಕ್ಷತೆಯಿಂದ ಭದ್ರತಾ ವ್ಯವಸ್ಥೆ ನೋಡಿಕೊಳ್ಳುತ್ತಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಬಂಧನವೇ ಅಕ್ರಮ’

ಒಂದನೇ ಪುಟದಿಂದ...

ಆದರೆ, ಸಂವಿಧಾನದ 22ನೇ ವಿಧಿಯ ಸೆಕ್ಷನ್ 2ರ ಪ್ರಕಾರ ಅತ್ಯಂತ ಹತ್ತಿರದಲ್ಲಿ ಇರುವ ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸಬೇಕು. ಬಂಧನಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ರೂಪಿಸಿರುವ ಮಾರ್ಗಸೂಚಿಗಳಲ್ಲಿ ಯಾವುದನ್ನೂ ದೆಹಲಿ ಪೊಲೀಸರು ಪಾಲಿಸಿಲ್ಲ ಎಂದೂ ಹೇಳಿದೆ.

ಮ್ಯಾಜಿಸ್ಟ್ರೇಟ್ ಅವರು ನಿಯಮಗಳನ್ನು ಉಲ್ಲಂಘಿಸಿರುವುದು ಅಸಮಾಧಾನಕರ. ಅವರು ಅತ್ಯಂತ ‘ಯಾಂತ್ರಿಕ’ವಾಗಿ ಕೆಲಸ ಮಾಡಿದ್ದಾರೆ. ಈ ಮೂಲಕ ಮಾನವ ಹಕ್ಕುಗಳ ಗಂಭೀರ ಉಲ್ಲಂಘನೆ ನಡೆದಿದೆ. ದಿಶಾ ಅವರನ್ನು ‘ಅಕ್ರಮ ಬಂಧನ’ದಿಂದ ತಕ್ಷಣವೇ ಬಿಡುಗಡೆ ಮಾಡಬೇಕು. ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ದೆಹಲಿ ಹೈಕೋರ್ಟ್ ಈ ಪ್ರಕರಣವನ್ನು ಸ್ವಯಂಪ್ರೇರಿತವಾಗಿ ಕೈಗೆತ್ತಿಕೊಳ್ಳಬೇಕು. ತಮ್ಮ ಸಾಂವಿಧಾನಿಕ ಕರ್ತವ್ಯವನ್ನು ‘ಅಸಡ್ಡೆ ಮತ್ತು ಅಸಂಬದ್ಧ’ವಾಗಿ ನಡೆಸಿದ ಮ್ಯಾಜಿಸ್ಟ್ರೇಟ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಸಿಜೆಎಆರ್ ಒತ್ತಾಯಿಸಿದೆ.

‘ಕಸ್ಟಡಿಗೆ ಒಪ್ಪಿಸುವ ಸಂದರ್ಭದಲ್ಲಿ ಮ್ಯಾಜಿಸ್ಟ್ರೇಟ್ ಅವರು ಸಂವಿಧಾನದ 22ನೇ ವಿಧಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ವಿಚಾರಣೆ ಸಂದರ್ಭದಲ್ಲಿ ಆರೋಪಿ ಪರ ವಕೀಲರು ಬರುವ ತನಕ ಮ್ಯಾಜಿಸ್ಟ್ರೇಟ್ ಕಾಯಬೇಕಿತ್ತು. ಇಲ್ಲವೇ ಬೇರೊಬ್ಬ ವಕೀಲರ ನೆರವು ಅವರಿಗೆ ದೊರೆಯುವಂತೆ ಮಾಡಬೇಕಿತ್ತು’ ಎಂದು ಪ್ರಸಿದ್ಧ ವಕೀಲೆ ರೆಬೆಕಾ ಮಾಮನ್ ಜಾನ್ ಹೇಳಿದ್ದಾರೆ.

‘21 ವರ್ಷ ವಯಸ್ಸಿನ ದಿಶಾ ರವಿ ಅವರ ಬಂಧನವು ಪ್ರಜಾಪ್ರಭುತ್ವದ ಮೇಲೆ ಹಿಂದೆಂದೂ ಆದಂತಹ ದಾಳಿ. ನಮ್ಮ ರೈತರನ್ನು ಬೆಂಬಲಿಸುವುದು ಅಪರಾಧ ಅಲ್ಲ’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಟ್ವೀಟ್ ಮಾಡಿದ್ದಾರೆ. ದಿಶಾ ಅವರ ಬಂಧನದ ‘ನೀಚ ಕ್ರಮವನ್ನು ಅತ್ಯಂತ ಕಠಿಣ ಪದಗಳಲ್ಲಿ ಖಂಡಿಸಬೇಕು’ ಎಂದು ಸಿಪಿಎಂ ಪಾಲಿಟ್ ಬ್ಯೂರೊ ಹೇಳಿದೆ. ಆರೋಪಗಳನ್ನು ಕೈಬಿಟ್ಟು ತಕ್ಷಣವೇ ಅವರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದೆ.

ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ವ್ಯಂಗ್ಯ

‘ರೈತರ ಕಡೆಗಣಿಸಿ, ವಿಮಾನ ಖರೀದಿಸಿದ ಮೋದಿ’

ಲಖನೌ(ಪಿಟಿಐ): ‘ಕಬ್ಬು ಬೆಳೆಗಾರರ ಬಾಕಿ ಪಾವತಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಬಳಿ ಹಣವಿಲ್ಲ, ಆದರೆ, ವಿಶ್ವ ಪ್ರವಾಸ ಮಾಡಲು ಎರಡು ವಿಮಾನಗಳನ್ನು ಖರೀದಿಸಲು ಅವರಲ್ಲಿ ಹಣವಿದೆ’ ಎಂದು ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಲೇವಡಿ ಮಾಡಿದ್ದಾರೆ.

ಉತ್ತರದ ಪ್ರದೇಶದ ಬಿಜನೋರ್ ಜಿಲ್ಲೆಯಲ್ಲಿ ಸೋಮವಾರ ಪಕ್ಷ ಆಯೋಜಿಸಿದ್ದ ‘ಕಿಸಾನ್ ಮಹಾಸಭಾ’ದಲ್ಲಿ ಮಾತನಾಡಿದ ಅವರು ಪ್ರಧಾನಿ ಮೋದಿ ವಿರುದ್ಧ ಆಕ್ರೋಶ ಹೊರಹಾಕಿದರು.

ದೇಶದ ರೈತರ ಕಬ್ಬಿನ ₹15 ಸಾವಿರ ಕೋಟಿಯನ್ನು ಬಾಕಿ ಉಳಿಸಿಕೊಂಡು, ಇನ್ನೂ ಪಾವತಿಸುತ್ತಿಲ್ಲ. ಆದರೆ, ಮೋದಿಯವರ ವಿಶ್ವ ಪ್ರವಾಸಕ್ಕೆ ಸುಮಾರು ₹16 ಸಾವಿರ ಕೋಟಿ ಮೊತ್ತದ ಎರಡು ವಿಮಾನಗಳನ್ನು ಸರ್ಕಾರ ಖರೀದಿಸಿದೆ. ಕಳೆದ ಎರಡು ಚುನಾವಣೆಗಳಲ್ಲಿ ಮೋದಿಯವರು ಜನತೆಗೆ ನೀಡಿದ ಭರವಸೆಗಳನ್ನು ಈಡೇರಿಸದೆ, ಜನರ ನಂಬಿಕೆಗೆ ದ್ರೋಗ ಬಗೆದಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಉತ್ತರದ ಪ್ರದೇಶದ ಬಿಜನೋರ್ ಜಿಲ್ಲೆಯ ಚಾಂದ್‌ಗಂಜ್‌ನಲ್ಲಿ ನಡೆದ ‘ಕಿಸಾನ್ ಮಹಾಸಭಾ’ದಲ್ಲಿ ಭಾಗವಹಿಸಿದ್ದ ಪ್ರಿಯಾಂಕಾ ಗಾಂಧಿ – ಪಿಟಿಐ ಚಿತ್ರ

‘ಕೇಂದ್ರ ಸರ್ಕಾರದ ಹೊಸ ಕೃಷಿ ಕಾಯ್ದೆಗಳು ರೈತರ ಮರಣಶಾಸನ ಬರೆಯುವಂತಿವೆ’ ಎಂದು ಪ್ರಿಯಾಂಕಾ ಟೀಕಿಸಿದರು.

ರೈತರಿಗೆ ಅವಮಾನ: ‘ನಿಮ್ಮ ಮನೆಯ ಬಾಗಿಲಲ್ಲಿ ರೈತರು ನಿಂತಿದ್ದಾರೆ, ಗಡಿಯಲ್ಲಿ ರೈತರ ಮಕ್ಕಳು ಯೋಧರಾಗಿ ನಿಂತಿದ್ದಾರೆ. ಆದರೆ, ಪ್ರತಿಭಟನೆ ನಡೆಸಿದ ರೈತರನ್ನು ಹರಿಯಾಣದ ಸಚಿವ ಜೆ.ಪಿ. ದಲಾಲ್ ದೇಶದ್ರೋಹಿಗಳು ಎಂದು ಜರಿದಿದ್ದಾರೆ. ಸಂಸತ್‌ನಲ್ಲೂ ರೈತರನ್ನು ಅಪಹಾಸ್ಯ ಮಾಡಲಾಗುತ್ತಿದೆ. ಮೋದಿ ನೇತೃತ್ವದ ಕೇಂದ್ರ ಸರ್ಕಾರ ರೈತರನ್ನು ನಿಜಕ್ಕೂ ಅವಮಾನಿಸುತ್ತಿದೆ’ ಎಂದು ಪ್ರಿಯಾಂಕಾ ಕಿಡಿಕಾರಿದರು.

ಐ.ಟಿ ದಾಳಿ: ₹1500 ಕೋಟಿ ಲೆಕ್ಕವಿಲ್ಲದ ವಹಿವಾಟು ಪತ್ತೆ

ನವದೆಹಲಿ (ಪಿಟಿಐ): ಗುಟ್ಕಾ ಮತ್ತು ಪಾನ್ ಮಸಾಲಾ ತಯಾರಿಸುವುದರಲ್ಲಿ ತೊಡಗಿರುವ ಮುಂಬೈ ಮೂಲದ ಕಂಪನಿ ಮೇಲೆ ದಾಳಿ ನಡೆಸಿರುವ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು, ಸುಮಾರು ₹1500 ಕೋಟಿಯಷ್ಟು ಲೆಕ್ಕವಿಲ್ಲದ ವಹಿವಾಟು ಪತ್ತೆ ಮಾಡಿದ್ದಾರೆ.

ಅಧಿಕಾರಿಗಳು ಈ ಕಂಪನಿಯ ಹೆಸರನ್ನು ಬಹಿರಂಗಪಡಿಸಿಲ್ಲ. ಆದರೆ, ಈ ಕಂಪನಿ 'ಜೆಎಂಜೆ' ಸಮೂಹಕ್ಕೆ ಸೇರಿದ್ದು, ಉದ್ಯಮಿ ಜೆ.ಎಂ. ಜೋಶಿ ಪ್ರವರ್ತಕರಾಗಿದ್ದಾರೆ ಎಂದು ಆದಾಯ ತೆರಿಗೆ ಇಲಾಖೆಯ ಅಧಿಕೃತ ಮೂಲಗಳು ತಿಳಿಸಿವೆ.

ಈ ಸಮೂಹದದ ವಿರುದ್ಧ ಹಲವು ನಗರಗಳಲ್ಲಿ ಆರು ದಿನಗಳ ಕಾಲ ಶೋಧ ಮತ್ತು ಸಮೀಕ್ಷೆ ಕಾರ್ಯ ಕೈಗೊಳ್ಳಲಾಗಿತ್ತು. ಫೆಬ್ರುವರಿ 13ರಂದು ಈ ಕಾರ್ಯ ಮುಕ್ತಾಯಗೊಂಡಿದ್ದು, ₹1500 ಕೋಟಿ ಲೆಕ್ಕ ಇಲ್ಲದ ವಹಿವಾಟು ಪತ್ತೆಯಾಗಿದೆ. ದಾಳಿ ಸಂದರ್ಭದಲ್ಲಿ ₹13 ಲಕ್ಷ ನಗದು ಮತ್ತು ₹7 ಕೋಟಿ ಮೌಲ್ಯದ ಆಭರಣಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬ್ರಿಟನ್ ಸೇರಿದಂತೆ ವಿದೇಶದಲ್ಲೂ ಆಸ್ತಿ ಇರುವುದು ಪತ್ತೆಯಾಗಿದೆ. ದುಬೈನಲ್ಲಿ ಕಚೇರಿಯೂ ಇದೆ. ಈ ಎಲ್ಲ ಆಸ್ತಿಗಳ ನಿಯಂತ್ರಣ ಮತ್ತು ನಿರ್ವಹಣೆಯನ್ನು ಸಮೂಹದ ಅಧ್ಯಕ್ಷರೇ ಕೈಗೊಂಡಿದ್ದಾರೆ. ಬ್ರಿಟಿಷ್ ವರ್ಜಿನ್ ದ್ವೀಪದಲ್ಲಿರುವ ಆಸ್ತಿಯ ಮೌಲ್ಯ ₹830 ಕೋಟಿ ಎಂದು ಅಂದಾಜಿಸಲಾಗಿದೆ ಎಂದು ತಿಳಿಸಿದೆ.

ಜೆ.ಎಂ. ಜೋಶಿ ಪುತ್ರ ಮತ್ತು ನಟ ಸಚಿನ್ ಜೋಶಿ ಅವರನ್ನು ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಭಾನುವಾರ ಬಂಧಿಸಿತ್ತು. ಫೆಬ್ರುವರಿ 18ರವರೆಗೆ ಜಾರಿ ನಿರ್ದೇಶನಾಲಯ ವಶಕ್ಕೆ ಒಪ್ಪಿಸಲು ನ್ಯಾಯಾಲಯ ಆದೇಶಿಸಿದೆ. ಈ ಬೆಳವಣಿಗೆ ನಡೆದ ಮರುದಿನವೇ ಅಕ್ರಮ ವಹಿವಾಟು ನಡೆದಿರುವುದು ಪತ್ತೆಯಾಗಿದೆ.



ಸಂಕ್ಷಿಪ್ತ ಸುದ್ದಿ

ಟ್ರಕ್ ಉರುಳಿ 16 ಕಾರ್ಮಿಕರ ಸಾವು

ಜಲಗಾಂವ್ (ಪಿಟಿಐ): ಮಹಾರಾಷ್ಟ್ರದಲ್ಲಿ ಟ್ರಕ್ ಉರುಳಿ ಸಂಭವಿಸಿದ ದುರ್ಘಟನೆಯಲ್ಲಿ 16 ಕಾರ್ಮಿಕರು ಸಾವನ್ನಪ್ಪಿದ್ದಾರೆ.

ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯಲ್ಲಿ ಭಾನುವಾರ ತಡ ರಾತ್ರಿ ಅವಘಡ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತಪಟ್ಟವರೆಲ್ಲರೂ ಅಭೋದಾ, ಕೆರ್ಹಾಲಾ ಮತ್ತು ರಾವರ್ ಪ್ರದೇಶಕ್ಕೆ ಸೇರಿದ ಕಾರ್ಮಿಕರು ಎಂದು ಗುರುತಿಸಲಾಗಿದೆ. ಪಪ್ಪಾಯಿ ತುಂಬಿದ ಟ್ರಕ್, ಕಿಂಗಾವ್ ಗ್ರಾಮದ ದೇವಾಲಯ ಮೊಂದರ ಬಳಿ ಉರುಳಿತ್ತು.

ಘಟನೆಯಲ್ಲಿ ಐವರು ಕಾರ್ಮಿಕರಿಗೆ ಗಂಭೀರ ಗಾಯಗಳಾಗಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸುಶಾಂತ್ ಸಹೋದರಿಯ ಮನವಿ ತಿರಸ್ಕರಿಸಿದ ಹೈಕೋರ್ಟ್

ಮುಂಬೈ (ಪಿಟಿಐ): ದಿವಂಗತ ನಟ ಸುಶಾಂತ್ ಸಿಂಗ್ ರಜಪೂತ್ ಅವರ ಅಕ್ಕ ಪ್ರಿಯಾಂಕಾ ಸಿಂಗ್ ಅವರ ವಿರುದ್ಧದ ಎಫ್‌ಐಆರ್ ಅನ್ನು ರದ್ದುಪಡಿಸಲು ಬಾಂಬೆ ಹೈಕೋರ್ಟ್ ಸೋಮವಾರ ನಿರಾಕರಿಸಿತು. ಸಹೋದರ ಸುಶಾಂತ್ ಸಿಂಗ್ ಅವರ ವೈದ್ಯಕೀಯ ಸಲಹೆಗೆ ಸಂಬಂಧಿಸಿದ ದಾಖಲೆಗಳನ್ನು ತಿದ್ದಿರುವ ಆರೋಪ ಇವರ ಮೇಲಿದೆ.

ನ್ಯಾಯಮೂರ್ತಿಗಳಾದ ಎಸ್.ಎಸ್.ಶಿಂಧೆ ಮತ್ತು ಎಂ.ಎಸ್.ಕಾರ್ಣಿಕ್ ಅವರಿದ್ದ ಪೀಠವು, ಸುಶಾಂತ್‌ಅವರ ಇನ್ನೊಬ್ಬ ಅಕ್ಕ ಮೀತೂ ಸಿಂಗ್ ವಿರುದ್ಧದ ಎಫ್‌ಐಆರ್ ಅನ್ನು ರದ್ದುಪಡಿಸಿತು. ಪ್ರಿಯಾಂಕಾ ಸಿಂಗ್ ವಿರುದ್ಧದ ಆರೋಪ ಸಂಬಂಧಿಸಿದ ಸಾಕ್ಷ್ಯವಿದೆ. ಮೀತೂಸಿಂಗ್ ವಿರುದ್ಧದ ಎಫ್‌ಐಆರ್‌ಗೆ ಸಂಬಂಧಿಸಿ ಸೂಕ್ತ ಆಧಾರಗಳಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

ಡಿವೈಎಫ್‌ಐ ಕಾರ್ಯಕರ್ತ ಸಾವು

ಕೋಲ್ಕತ್ತ (ಪಿಟಿಐ): ಕಳೆದ ಗುರುವಾರ ಎಡಪಕ್ಷಗಳು ಆಯೋಜಿಸಿದ್ದ ‘ಸಚಿವಾಲಯ ಚಲೋ’ ಮೆರವಣಿಗೆ ವೇಳೆ ಪೊಲೀಸರೊಂದಿಗೆ ನಡೆದ ಸಂಘರ್ಷದಲ್ಲಿ ಗಾಯಗೊಂಡಿದ್ದ ಡಿವೈಎಫ್‌ಐ ಕಾರ್ಯಕರ್ತ ಮೃತಪಟ್ಟಿದ್ದಾರೆ. ಹೀಗಾಗಿ ಟಿಎಂಸಿ ಮತ್ತು ಎಡಪಕ್ಷಗಳ ನಡುವಿನ ರಾಜಕೀಯ ವಿರಸ ತೀವ್ರಗೊಂಡಿದೆ.

ಡಿವೈಎಫ್‌ಐ ಕಾರ್ಯಕರ್ತನ ಸಾವನ್ನು ಕೊಲೆ ಎಂದು ಸಿಪಿಎಂ ಕರೆದರೆ, ಇದೊಂದು ‘ಆತ್ಮಹತ್ಯೆ’ ಎಂದು ಟಿಎಂಸಿ ಹೇಳಿದೆ.

ಬಂಕುರ ಜಿಲ್ಲೆಯ ಕೊತುಲ್‌ಪುರದ ನಿವಾಸಿ ಮೈದುಲಾ ಇಸ್ಲಾ ಮಿಡ್ಡಾ ಸಾವನ್ನಪ್ಪಿದ ಕಾರ್ಯಕರ್ತ. ಅವರ ಸಾವಿಗೆ ಸಂಬಂಧಿಸಿದಂತೆ ಷೇಕ್ಸ್‌ಪಿಯರ್ ಸರಾನಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಷೇರುಪೇಟೆ ವಹಿವಾಟು 610



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,164
ಇಂದಿನ ಅಂತ್ಯ	15,315
▲	151
ದಿನದ ಗರಿಷ್ಠ	15,340

ವಿನಿಮಯ ದರ

$ ಡಾಲರ್	72.68
£ ಪೌಂಡ್	100.93
€ ಯುರೊ	88.05
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹473

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1450 (1450)
ಸೋಯಾ (ರಿಫೈನ್ಡ್)	₹1140 (1130)
ಸೂರ್ಯಕಾಂತಿ (ರಿಫೈನ್ಡ್)	₹1395 (1380)
ಪಾಮೋಲಿನ್	₹1117 (1100)

ಕೊಬ್ಬರಿ ಧಾರಣೆ

ಬೆಂಗಳೂರು	₹10000-18000
ಮಂಗಳೂರು	₹8500-12000
ತುರುವೇಕೆರೆ	₹14600-14650

ಕಿಗರ್ ಬುಕಿಂಗ್ ಆರಂಭ

ರೆನೊ ಕಿಗರ್ —ಎಎಫ್‌ಪಿ ಚಿತ್ರ

ಮುಂಬೈ (ಪಿಟಿಐ): ರೆನೊ ಕಂಪನಿ ತನ್ನ ಹೊಸ ಎಸ್‌ಯುವಿ 'ಕಿಗರ್'ನ ಬುಕಿಂಗ್‌ಗೆ ಚಾಲನೆ ನೀಡಿದೆ. ಈ ಕಾರಿನ ಎಕ್ಸ್ ಷೋರೂಂ ಬೆಲೆಯು ₹ 5.45 ಲಕ್ಷದಿಂದ ₹ 9.55 ಲಕ್ಷದ ನಡುವೆ ಇದೆ.

ಡೀಲರ್‌ಗಳ ಮೂಲಕ ಅಥವಾ ಕಂಪನಿಯ ವೆಬ್‌ಸೈಟ್ ಮೂಲಕ ಬುಕಿಂಗ್ ಮಾಡಲು ಅವಕಾಶ ಇದೆ. ನಾಲ್ಕು ಮೀಟರ್‌ಗಿಂತ ಕಡಿಮೆ ಇರುವ ಈ ಎಸ್‌ಯುವಿ ವಾಹನದ ವಿನ್ಯಾಸವನ್ನು ಭಾರತ ಮತ್ತು ಫ್ರಾನ್ಸ್‌ನ ತಂಡಗಳು ಜೊತೆಯಾಗಿ ಮಾಡಿವೆ.

'ಇದು ಆಧುನಿಕ ಕಾಲದ ಎಸ್‌ಯುವಿ. ಭಾರತದ ಮಾರುಕಟ್ಟೆಗೆ ಅತ್ಯಂತ ಸೂಕ್ತವಾಗಿದೆ' ಎಂದು ಕಂಪನಿಯ ಭಾರತದ ಕಾರ್ಯಾಚರಣೆಗಳ ಸಿಇಒ ವೆಂಕಟರಾಮ್ ಎಂ. ಹೇಳಿದ್ದಾರೆ.

ಖಾಸಗೀಕರಣ: ನಾಲ್ಕು ಬ್ಯಾಂಕ್‌ಗಳ ಪಟ್ಟಿ ಸಿದ್ಧ

ಒಂದನೇ ಪುಟದಿಂದ

ಕೇಂದ್ರ ಸರ್ಕಾರವು ಮಧ್ಯಮ ಹಾಗೂ ಸಣ್ಣ ಗಾತ್ರದ ಬ್ಯಾಂಕ್‌ಗಳನ್ನು ಮೊದಲ ಹಂತದಲ್ಲಿ ಖಾಸಗಿಯವರಿಗೆ ಒಪ್ಪಿಸಿ, ಅದಕ್ಕೆ ಪ್ರತಿಕ್ರಿಯೆಗಳು ಹೇಗೆ ಬರುತ್ತವೆ ಎಂಬುದನ್ನು ಪರೀಕ್ಷಿಸಲಿದೆ. ಮುಂದಿನ ವರ್ಷಗಳಲ್ಲಿ ಅದು ದೇಶದ ಕೆಲವು ದೊಡ್ಡ ಬ್ಯಾಂಕ್‌ಗಳನ್ನೂ ಖಾಸಗೀಕರಣ ಪ್ರಕ್ರಿಯೆಗೆ ಒಳಪಡಿಸಬಹುದು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಈ ವಿಚಾರವಾಗಿ ಪ್ರತಿಕ್ರಿಯೆ ನೀಡಲು ಕೇಂದ್ರ ಹಣಕಾಸು ಸಚಿವಾಲಯದ ವಕ್ತಾರರು ನಿರಾಕರಿಸಿದ್ದಾರೆ.

ನಾಲ್ಕೂ ಬ್ಯಾಂಕ್‌ಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲು ಕೇಂದ್ರ ಬಯಸಿತ್ತು. ಆದರೆ, ಬ್ಯಾಂಕ್ ನೌಕರರ ಸಂಘಗಳಿಂದ ಪ್ರತಿರೋಧ ವ್ಯಕ್ತವಾಗಬಹುದು ಎಂಬ ಕಾರಣಕ್ಕೆ ಎಚ್ಚರಿಕೆಯ ಹೆಜ್ಜೆ ಇರಿಸಲು ಅಧಿಕಾರಿಗಳು ಸಲಹೆ ನೀಡಿದರು ಎನ್ನಲಾಗಿದೆ.

ಬ್ಯಾಂಕ್ ಆಫ್ ಮಹಾರಾಷ್ಟ್ರದಲ್ಲಿ ನೌಕರರ ಸಂಖ್ಯೆ ಕಡಿಮೆ ಇರುವ ಕಾರಣ, ಆ ಬ್ಯಾಂಕನ್ನು ಖಾಸಗಿಯವರಿಗೆ ಮಾರಾಟ ಮಾಡುವುದು ಸುಲಭ ಆಗಬಹುದು. ಹಾಗಾಗಿ, ಮೊದಲಿಗೆ ಮಾರಾಟ ಆಗುವ ಬ್ಯಾಂಕ್ ಅದೇ ಆಗಬಹುದು ಎಂದು ಮೂಲಗಳು ಹೇಳಿವೆ. ಖಾಸಗೀಕರಣ ಪ್ರಕ್ರಿಯೆ ಆರಂಭವಾಗಲು ಐದರಿಂದ ಆರು ತಿಂಗಳು ಬೇಕಾಗಬಹುದು ಎನ್ನಲಾಗಿದೆ.

'ನೌಕರರ ಸಂಖ್ಯೆ, ನೌಕರರ ಸಂಘಟನೆಗಳು ತರುವ ಒತ್ತಡ, ರಾಜಕೀಯ ಪರಿಣಾಮಗಳು... ಇವುಗಳು ಕೂಡ ಅಂತಿಮ ತೀರ್ಮಾನದ ಮೇಲೆ ಪ್ರಭಾವ ಬೀರಲಿವೆ' ಎಂದು ಅಧಿಕಾರಿಯೊಬ್ಬರು ಹೇಳಿದರು. ಸಣ್ಣ ಬ್ಯಾಂಕ್‌ಗಳನ್ನು ಮಾರಾಟ ಮಾಡುವುದರಿಂದ ಹೆಚ್ಚಿನ ಸಂಪನ್ಮೂಲ ಸಂಗ್ರಹಿಸಲು ಸರ್ಕಾರಕ್ಕೆ ಸಾಧ್ಯವಾಗದಿರಬಹುದು ಎಂದು ಅರ್ಥಶಾಸ್ತ್ರಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಿರಿಕಿರಿ ಕರೆ: ಕಠಿಣ ಕ್ರಮಕ್ಕೆ ಸೂಚನೆ

ನವದೆಹಲಿ (ಪಿಟಿಐ): ಕಿರಿಕಿರಿ ಉಂಟುಮಾಡುವ ದೂರವಾಣಿ ಕರೆಗಳ ಸಮಸ್ಯೆ ನಿವಾರಿಸಲು, ದೂರವಾಣಿ ಕರೆ ಹಾಗೂ ಎಸ್‌ಎಂಎಸ್ ಮೂಲಕ ನಡೆಸುವ ಹಣಕಾಸಿನ ವಂಚನೆಗಳ ವಿರುದ್ಧ ಕಠಿಣ ಕ್ರಮ ಜರುಗಿಸುವ ಉದ್ದೇಶದಿಂದ ದೂರಸಂಪರ್ಕ ಸಚಿವಾಲಯವು ಪ್ರತ್ಯೇಕ ವ್ಯವಸ್ಥೆಯೊಂದನ್ನು ರೂಪಿಸಲಿದೆ.

ದೂರಸಂಪರ್ಕ ಸಚಿವ ರವಿಶಂಕರ್ ಪ್ರಸಾದ್ ಅವರ ಸೂಚನೆ ಆಧರಿಸಿ ಈ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಗಿದೆ.

'ಟೆಲಿಮಾರ್ಕೆಟಿಂಗ್ ಕಂಪನಿಗಳು ತಪ್ಪು ಮಾಡಿದರೆ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು, ದೂರಸಂಪರ್ಕ ಸೇವೆಗಳ ಗ್ರಾಹಕರಿಗೆ ಕಿರುಕುಳ ನೀಡುವವರ ವಿರುದ್ಧವೂ ಕಠಿಣ ಕ್ರಮ ಜರುಗಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು' ಎಂದು ಪ್ರಕಟಣೆ ತಿಳಿಸಿದೆ.

ಇಂಧನ ಬೆಲೆ ಏರಿಕೆ



ಬೆಂಗಳೂರು: ಪೆಟ್ರೋಲ್ ಬೆಲೆ ಸೋಮವಾರ 27 ಪೈಸೆಯಷ್ಟು ಹೆಚ್ಚಾಗಿದ್ದು, ಲೀಟರ್‌ಗೆ ₹ 91.97ರಂತೆ ಮಾರಾಟವಾಗಿದೆ. ಡೀಸೆಲ್ ಬೆಲೆಯನ್ನು 31 ಪೈಸೆಯಷ್ಟು ಹೆಚ್ಚಿಸಲಾಗಿದ್ದು, ಲೀಟರ್ ಡೀಸೆಲ್ ₹ 84.12ರಂತೆ ಮಾರಾಟವಾಗಿದೆ.

ಆಹಾರೇತರ ತಯಾರಿಕಾ ಉತ್ಪನ್ನಗಳ ಬೆಲೆಯಲ್ಲಿ ಹೆಚ್ಚಳ ಪರಿಣಾಮ

ಸಗಟು ಹಣದುಬ್ಬರ ಏರಿಕೆ

ನವದೆಹಲಿ (ಪಿಟಿಐ): ಸಗಟು ಹಣದುಬ್ಬರ ದರವು ಜನವರಿ ತಿಂಗಳಿನಲ್ಲಿ ಶೇಕಡ 2.03ಕ್ಕೆ ಹೆಚ್ಚಳವಾಗಿದೆ. ಇದಕ್ಕೆ ಮುಖ್ಯ ಕಾರಣ ಆಹಾರೇತರ ತಯಾರಿಕಾ ಉತ್ಪನ್ನಗಳ ಬೆಲೆಯಲ್ಲಿ ಆದ ಹೆಚ್ಚಳ. ಮುಂದಿನ ಕೆಲವು ತಿಂಗಳುಗಳಲ್ಲಿ ಬೆಲೆ ಹೆಚ್ಚಳದ ಪ್ರಮಾಣವು ಇನ್ನಷ್ಟು ಜಾಸ್ತಿ ಆಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಸಗಟು ಹಣದುಬ್ಬರ ಪ್ರಮಾಣವು ಡಿಸೆಂಬರ್ ತಿಂಗಳಲ್ಲಿ ಶೇ 1.22ರಷ್ಟಿತ್ತು. ಹಿಂದಿನ ವರ್ಷದ ಜನವರಿಯಲ್ಲಿ ಇದು ಶೇ 3.52ರ ಮಟ್ಟದಲ್ಲಿ ಇತ್ತು. ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ತಗ್ಗಿದೆ. ಆದರೆ, ಆಹಾರೇತರ ತಯಾರಿಕಾ ಉತ್ಪನ್ನಗಳು, ಇಂಧನ, ವಿದ್ಯುತ್, ನೈಸರ್ಗಿಕ ಅನಿಲದ ಬೆಲೆ ಹೆಚ್ಚಳವು ಸಗಟು ಹಣದುಬ್ಬರ ಹೆಚ್ಚಳವಾಗಲು ಕಾರಣವಾಗಿದೆ

ಎಂಬುದನ್ನು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

ಈ ವರ್ಷದ ಜನವರಿಯಲ್ಲಿ ಆಹಾರೇತರ ವಸ್ತುಗಳ ಹಣದುಬ್ಬರವು 27 ತಿಂಗಳುಗಳ ಗರಿಷ್ಠ ಮಟ್ಟವಾದ ಶೇ 5.1ಕ್ಕೆ ಏರಿಕೆ ಕಂಡಿದೆ.

'ಬೇಡಿಕೆ ಹೆಚ್ಚಾಗುತ್ತಿರುವ ಕಾರಣದಿಂದಾಗಿ ಆಹಾರೇತರ ವಸ್ತುಗಳ ಹಣದುಬ್ಬರ ಪ್ರಮಾಣವು ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ 7ರಿಂದ ಶೇ 7.5ರ ಮಟ್ಟಕ್ಕೆ ಏರಿಕೆ ಕಾಣಲಿದೆ' ಎಂದು ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಅಂದಾಜಿಸಿದೆ.

ಮುಖ್ಯಾಂಶಗಳು

- 27 ತಿಂಗಳ ಗರಿಷ್ಠ ಮಟ್ಟಕ್ಕೆ ಆಹಾರೇತರ ವಸ್ತುಗಳ ಹಣದುಬ್ಬರ
- ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಗರಿಷ್ಠ ಮಟ್ಟಕ್ಕೆ ಏರಿಕೆ

ಈಚಿನ ದಿನಗಳಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯು ಮಾರುಕಟ್ಟೆಯಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಹೆಚ್ಚಳವಾಗಿದೆ, ಆಂತರಿಕ ಮಾರುಕಟ್ಟೆಯಲ್ಲಿ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಪರೋಕ್ಷ ತೆರಿಗೆ ಪ್ರಮಾಣ ತಗ್ಗಿಸಿಲ್ಲ. ಇವುಗಳ ಜೊತೆಯಲ್ಲೇ, ಕೈಗಾರಿಕೆಗಳ ಕಚ್ಚಾ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ಆಗಿರುವ ಕಾರಣ ಸೇವೆಗಳು ಹಾಗೂ ಸರಕುಗಳ ಬೆಲೆ ಈಚಿನ ತಿಂಗಳುಗಳಲ್ಲಿ ಹೆಚ್ಚಾಗುವಂತೆ ಆಗಿದೆ.

ಚಿಲ್ಲರೆ ಹಣದುಬ್ಬರ ಪ್ರಮಾಣವು ಜನವರಿಯಲ್ಲಿ ಶೇ 4.06ಕ್ಕೆ ತಗ್ಗಿದೆ ಎಂದು ಸರ್ಕಾರ ಹೇಳಿದೆ.

'ಚಿಲ್ಲರೆ ಹಣದುಬ್ಬರ ಪ್ರಮಾಣವು ಇನ್ನೂ ಕಡಿಮೆ ಆಗಲಿಕ್ಕಿಲ್ಲ ಎಂಬುದು ನಮ್ಮ ಅಂದಾಜು. ಮುಂದಿನ ತಿಂಗಳುಗಳಲ್ಲಿ ಇದು ಮತ್ತೆ ಹೆಚ್ಚಳ ಕಾಣಲಿದೆ. ಹಾಗಾಗಿ, ರೆಪೊ ದರ ತಗ್ಗಿಸಲು ಆರ್‌ಬಿಐಗೆ ಹೆಚ್ಚಿನ ಅವಕಾಶಗಳು ಇದ್ದಂತೆ ಕಾಣುತ್ತಿಲ್ಲ' ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಜಿಎಸ್‌ಟಿ ನೋಂದಣಿ ಅಮಾನತಿಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಕುಗಳ ಪೂರೈಕೆದಾರ ನೀಡಿದ ಜಿಎಸ್‌ಟಿ ವಿವರ ಮತ್ತು ಖರೀದಿದಾರ ನೀಡಿದ ಜಿಎಸ್‌ಟಿ ವಿವರಗಳ ಮಧ್ಯೆ ಗಮನಾರ್ಹ ವ್ಯತ್ಯಾಸಗಳಿದ್ದರೆ ಅಂತಹ ವರ್ತಕರ ನೋಂದಣಿಯನ್ನು ತಕ್ಷಣವೇ ಅಮಾನತು ಮಾಡುವ ಕ್ರಮಕ್ಕೆ ವಾಣಿಜ್ಯೋದ್ಯಮಿಗಳು ತೀವ್ರ ವಿರೋಧ ವ್ಯಕ್ತಪಡಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು (ಎಫ್‌ಕೆಸಿಸಿಐ) ಜಿಎಸ್‌ಟಿ ಮಂಡಳಿಯ ಸದಸ್ಯ, ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರೊಂದಿಗೆ 'ಜಿಎಸ್‌ಟಿ ಸಮಸ್ಯೆಗಳು' ಕುರಿತು ಸೋಮವಾರ ಸಂವಾದ ಆಯೋಜಿಸಿತ್ತು. ಜಾಲತಾಣದಲ್ಲಿ ಇರುವ ಸಮಸ್ಯೆ, ಎಚ್‌ಎಸ್‌ಎನ್ ಕೋಡ್ ಸೃಷ್ಟಿಸುತ್ತಿರುವ ಗೊಂದಲ, ಮರುಪಾವತಿ ವಿಳಂಬ ಸೇರಿದಂತೆ ಹಲವು ಸಮಸ್ಯೆಗಳ ಬಗ್ಗೆ ಬೊಮ್ಮಾಯಿ ಅವರ ಗಮನ ಸೆಳೆಯಲಾಯಿತು.

'ನೋಂದಣಿ ಅಮಾನತು ಮಾಡಿದರೆ ವಹಿವಾಟು ಅಲ್ಲಿಗೇ ಸ್ಥಗಿತಗೊಳ್ಳುತ್ತದೆ. ಇದರಿಂದ ಉದ್ಯಮಿಗಳ ವಿಶ್ವಾಸಾರ್ಹತೆಗೆ ಧಕ್ಕೆ ಆಗಲಿದೆ. ಹೀಗಾಗಿ ಅಮಾನತು ಮಾಡುವ ಮುನ್ನ ಆಗಿರುವ ವ್ಯತ್ಯಾಸ ಸರಿಪಡಿಸಿಕೊಳ್ಳಲು ಅವಕಾಶ ನೀಡಬೇಕು. ಈ ವಿಷಯವನ್ನು ಜಿಎಸ್‌ಟಿ ಮಂಡಳಿಯ ಗಮನಕ್ಕೆ ತರಬೇಕು' ಎಂದು ಎಫ್‌ಕೆಸಿಸಿಐನ ಜಿಎಸ್‌ಟಿ ಸಮಿತಿಯ ಅಧ್ಯಕ್ಷ ಬಿ.ಟಿ. ಮನೋಹರ್, ಬೊಮ್ಮಾಯಿ ಅವರಿಗೆ ಮನವಿ ಮಾಡಿದರು.

'ತೆರಿಗೆದಾರರ ಕುಂದುಕೊರತೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಾದೇಶಿಕ ಮತ್ತು ರಾಜ್ಯ ಮಟ್ಟದಲ್ಲಿ ಸಮಿತಿಗಳನ್ನು (ಜಿಎಸ್‌ಟಿ ಜಿಆರ್‌ಸಿ) ರಚಿಸಲಾಗಿದೆ. ತೆರಿಗೆ ಸುಧಾರಣೆಗಳನ್ನು ಜಾರಿಗೊಳಿಸುವ ಮುನ್ನ ಆ ಸಮಿತಿಯ ಸಲಹೆಗಳನ್ನು ಪಡೆಯುವಂತೆ ನಿಮ್ಮ ಮೂಲಕ ಜಿಎಸ್‌ಟಿ ಮಂಡಳಿಗೆ ಮನವಿ ಮಾಡುತ್ತೇವೆ' ಎಂದರು.

ಜಿಎಸ್‌ಟಿ ವ್ಯವಸ್ಥೆಯಲ್ಲಿ ಇರುವ ಸಮಸ್ಯೆಗಳು ಮತ್ತು ಅವುಗಳನ್ನು ಬಗೆಹರಿಸಲು ಸಲಹೆಗಳನ್ನು ಒಳಗೊಂಡಿರುವ ಪತ್ರವನ್ನು ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ಅವರು ಬೊಮ್ಮಾಯಿ ಅವರಿಗೆ ನೀಡಿದರು.

'ಶೀಘ್ರದಲ್ಲೇ ಸರಳೀಕೃತ ರಿಟರ್ನ್ಸ್'

'ಜಿಎಸ್‌ಟಿ ವ್ಯವಸ್ಥೆಯಲ್ಲಿ ಸರ್ವರ್ ಜಾಮ್ ಸಮಸ್ಯೆ ಇದೆ. ಇದರಿಂದ ಸಕಾಲಕ್ಕೆ ರಿಟರ್ನ್ಸ್ ಸಲ್ಲಿಸಲು ಆಗುತ್ತಿಲ್ಲ. ಇದನ್ನು ತಪ್ಪಿಸಲು, ಬೇರೆ ಬೇರೆ ವಲಯಗಳಿಗೆ ಬೇರೆ ಬೇರೆ ದಿನಾಂಕದಂದು ರಿಟರ್ನ್ಸ್ ಸಲ್ಲಿಸಲು ಅವಕಾಶ ನೀಡುವ ಕುರಿತು ಪರಿಶೀಲಿಸಲಾಗುತ್ತಿದೆ. ಶೀಘ್ರವೇ ಇದು ಜಾರಿಗೆ ಬರಲಿದೆ' ಎಂದು ಬೊಮ್ಮಾಯಿ ಹೇಳಿದರು.

'ತಯಾರಿಕೆ ಮತ್ತು ಬಳಕೆ ಹೀಗೆ ಎರಡು ರೀತಿಯಲ್ಲಿಯೂ ಕರ್ನಾಟಕ ರಾಜ್ಯವು ಜಿಎಸ್‌ಟಿಗೆ ಕೊಡುಗೆ ನೀಡುತ್ತಿದೆ. ಜಿಎಸ್‌ಟಿ ವ್ಯವಸ್ಥೆಯನ್ನು ಸರಿಯಾಗಿ ಜಾರಿಗೊಳಿಸುವಲ್ಲಿ ಸಹಕರಿಸುತ್ತಿರುವವರಿಗೆ ಉತ್ತೇಜನ ನೀಡುವ ಅಗತ್ಯವಿದೆ. ಇಂತಹ ರಾಜ್ಯಗಳನ್ನು ಗುರುತಿಸಿ ಬಹುಮಾನ ನೀಡದೇ ಇದ್ದರೂ ಶಿಕ್ಷಿಸದೇ ಇರುವಂತೆ ಜಿಎಸ್‌ಟಿ ಮಂಡಳಿಯನ್ನು ಒತ್ತಾಯಿಸುತ್ತಿದ್ದೇನೆ' ಎಂದು ಅವರು ತಿಳಿಸಿದರು.

ಹೊಸ ಎತ್ತರಕ್ಕೆ ಸೆನ್ಸೆಕ್ಸ್

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯು ಇದೇ ಮೊದಲ ಬಾರಿಗೆ 52 ಸಾವಿರದ ಗಡಿ ದಾಟಿವಹಿವಾಟು ಅಂತ್ಯಗೊಳಿಸಿತು. 610 ಅಂಶ ಜಿಗಿತ ಕಂಡು 52,154 ಅಂಶಗಳ ಗರಿಷ್ಠ ಮಟ್ಟ ತಲುಪಿತು.

'ಜಾಗತಿಕ ವಿದ್ಯಮಾನಗಳು ಪೂರಕವಾಗಿರುವುದು ಮತ್ತು ಕಾರ್ಪೊರೇಟ್ ಗಳಿಕೆ ಸುಧಾರಿಸುತ್ತಿರುವುದು ಈ ಏರಿಕೆಗೆ ಕಾರಣ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವೀಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ	15-2-2021
ಜಾವಾ 70/80(ಹೊಸ)	10850-10900
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	8800-8900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1460 (1460)
ಒಂದು ವಾರದ ಡೆಲಿವರಿ	1455 (1455)
ಸೋಯಾ ಕಚ್ಚಾ	1100 (1090)
ಪಾಮ್ ವಾರದ ಡೆಲಿವರಿ	1115 (1098)
ಸೂರ್ಯಕಾಂತಿ ಎಣ್ಣೆ ಕಚ್ಚಾ	1360 (1350)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	47,050 (47,400)
ಬೆಳ್ಳಿ ಕೆ.ಜಿ	69,400 (68,750)

ಆವರಣದಲ್ಲಿ ಶನಿವಾರದ ಧಾರಣೆ

ಬ್ಯಾಡಗಿ ಮಾರುಕಟ್ಟೆಗೆ ಸೋಮವಾರ ದಾಖಲೆಯ ಪ್ರಮಾಣದಲ್ಲಿ ಮಾರಾಟಕ್ಕೆ ತಂದಿರುವ ಮೆಣಸಿನಕಾಯಿ

ಬ್ಯಾಡಗಿ ಮಾರುಕಟ್ಟೆಗೆ ದಾಖಲೆಯ ಆವಕ

ಪ್ರಜಾವಾಣಿ ವಾರ್ತೆ

ಬ್ಯಾಡಗಿ (ಹಾವೇರಿ): ಇಲ್ಲಿಯ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಸೋಮವಾರ 2,12,266 ಚೀಲ (53,066 ಕ್ವಿಂಟಲ್) ಮೆಣಸಿನಕಾಯಿ ಆವಕವಾಗಿದೆ. ಇದು ಪ್ರಸಕ್ತ ಹಂಗಾಮಿನಲ್ಲಿನ ದಾಖಲೆಯ ಆವಕ.

ಹೀಗಾಗಿ ರಸ್ತೆಯ ಮೇಲೆಯೇ ಮೆಣಸಿನಕಾಯಿ ಚೀಲಗಳನ್ನು ಟೆಂಡರ್‌ಗೆ ಇಡಲಾಗಿತ್ತು. ಕಳೆದ ಸೋಮವಾರ 1,97,770 ಚೀಲ (49,500 ಕ್ವಿಂಟಲ್) ಆವಕವಾಗಿತ್ತು.

ಸಾವಯವ ಪದ್ಧತಿಯಲ್ಲಿ ಬೆಳೆದ ಒಂದು ಚೀಲ (25 ಕೆ.ಜಿ) ಬ್ಯಾಡಗಿ ಡಬ್ಬಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹ 60,111ರಂತೆ ಮಾರಾಟವಾಗಿದೆ.

ಸೋಮವಾರದ ದರ ಪ್ರತಿ ಕ್ವಿಂಟಲ್‌ಗೆ

	ಕನಿಷ್ಠ	ಗರಿಷ್ಠ
ಬ್ಯಾಡಗಿ ಕಡ್ಡಿ	₹1,209	₹25,510
ಬ್ಯಾಡಗಿ ಡಬ್ಬಿ	₹2,089	₹60,111
ಗುಂಟೂರು ತಳಿ	₹700	₹10,209

ಉಳಿದಂತೆ ಬ್ಯಾಡಗಿ ಕಡ್ಡಿ ಮತ್ತು ಗುಂಟೂರು ತಳಿ ಮೆಣಸಿನಕಾಯಿ ಕನಿಷ್ಠ ಹಾಗೂ ಗರಿಷ್ಠ ಬೆಲೆಯಲ್ಲಿ ಸ್ಥಿರತೆ ಕಾಯ್ದುಕೊಂಡಿವೆ. ಒಟ್ಟು 332 ಖರೀದಿ ವರ್ತಕರು ಇಂದಿನ ಟೆಂಡರ್‌ನಲ್ಲಿ ಭಾಗವಹಿಸಿದ್ದರು. ಗುಣಮಟ್ಟದ ಕೊರತೆ ಇರುವ 489 ಲಾಟ್‌ಗಳಿಗೆ ಟೆಂಡರ್ ನಿರಾಕರಿಸಲಾಗಿದೆ ಎಂದು ಮಾರುಕಟ್ಟೆಯ ಮೂಲಗಳು ತಿಳಿಸಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-42500
ಹಳತು	42500-51000
ಕುಮಟ	
ಚಿಪ್ಪು	25169-29599
ಕೋಕ	18569-28999
ಫ್ಯಾಕ್ಟರಿ	14509-18761
ಹಳೆಚಾಲಿ	39689-42599
ಹೊಸಚಾಲಿ	34099-39099
ಪುತ್ತೂರು	
ಕೋಕ	9500-24000
ಹೊಸತು	29000-42500
ಸಿದ್ದಾಪುರ	
ಬಿಳಿಗೋಟು	24108-30599
ಕೋಕ	19990-29799
ಹಳೆಚಾಲಿ	36099-41899
ಹೊಸಚಾಲಿ	35199-41133
ಕೆಂಪುಗೋಟು	28089-31089
ರಾಶಿ	41089-44209
ಸುಳ್ಯ	
ಕೋಕ	10000-23000
ಹೊಸತು	23000-41500
ಶಿವಮೊಗ್ಗ	
ಬೆಟ್ಟೆ	44099-45599
ಗೊರಬಲು	17000-32859
ರಾಶಿ	40000-44869
ಸರಕು	44499-74396
ಸಾಗರ	
ಬಿಳಿಗೋಟು	16099-29009
ಚಾಲಿ	3009-37019
ಕೋಕ	28399-31899
ಕೆಂಪುಗೋಟು	15899-36099
ರಾಶಿ	31219-45069
ಸಿಪ್ಪೆಗೋಟು	8892-20000
ಚನ್ನಗಿರಿ, ತುಮ್ಕೋಸ್	
ರಾಶಿ	43449-44799
ಬೆಟ್ಟೆ	34069-36569
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	271-422
ದ್ವಿತಳಿ (ಬಿ.ವಿ)	344-556

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	9900
ಎಸಿ	3850
ಆರ್‌ಪಿ	5200
ಆರ್‌ಸಿ	3050

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ,
(ಜಿಲ್ಲಾ ನಗರಾಭಿವೃದ್ಧಿ ಕೋಶ) ಹಾವೇರಿ ಜಿಲ್ಲೆ, ಹಾವೇರಿ–581110
ದೂರವಾಣಿ ಸಂಖ್ಯೆ : 08375–249097 (ಆಫೀಸ್)
ಫ್ಯಾಕ್ಸ್ : 08375–249088 e-mail : dc_haveri@yahoo.co.in
ನಂ./ಪುಸ-3 /ವಹಿ–30/2016–17 ದಿನಾಂಕ: 10–02–2021.

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಹಾವೇರಿ ನಗರಸಭೆಯ ವ್ಯಾಪ್ತಿಯಲ್ಲಿ ಸಮಗ್ರ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಸನ್ 2016–17ನೇ ಸಾಲಿನ ವಿಶೇಷ ಅನುದಾನದಲ್ಲಿ ಈ ಕೆಳಗಿನ ಇಂಡೆಂಟ್ ನಂಬರನ 01 ಕಾಮಗಾರಿಗೆ ಐಟಂವಾರು ಟೆಂಡರನ್ನು ದ್ವಿ–ಲಕೋಟೆ ಪದ್ಧತಿ (Two Covers System) KW-3ರ ನಿಬಂಧನೆಗಳೊಂದಿಗೆ ಇ–ಪ್ರಕ್ಯೂರಮೆಂಟ್ ಮೂಲಕ ಆಹ್ವಾನಿಸಲಾಗಿದೆ.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ. ಲಕ್ಷಗಳಲ್ಲಿ)
1	Vegetable Market Package-4 DMA/ 2020-21/BD/Work-Indent 112378	96.80	2.00

ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ	26–02–2021 ರಂದು ಸಂಜೆ 4.00 ಘಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	01–03–2021 ಬೆಳಿಗ್ಗೆ 11.00 ಘಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	02–03–2021 ಬೆಳಿಗ್ಗೆ 11.00 ಘಂಟೆಗೆ

ಸದರಿ ಕಾಮಗಾರಿಗಳ ವಿವರ, ಹಾಗೂ ಇತರೇ ಷರತ್ತುಗಳನ್ನು, ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ http://eproc.karnataka.gov.in ಮೂಲಕ ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಜಿಲ್ಲಾ ನಗರಾಭಿವೃದ್ಧಿ ಕೋಶದ ತಾಂತ್ರಿಕ ಶಾಖೆಯಿಂದ ಪಡೆದುಕೊಳ್ಳಬಹುದಾಗಿದೆ.
ಸಹಿ/– ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/345/2020–21

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ
ರೈಲ್ವೆ ನಿಲ್ದಾಣ ಎದುರುಗಡೆ, ಹಳೆ ಪಿಬಿ. ರಸ್ತೆ, ದಾವಣಗೆರೆ – 577002.
ದೂ: 08192–252899, 212008, ಫ್ಯಾಕ್ಸ್: 08192–252899
ಸಂಖ್ಯೆ: ದಾಮಪಾ/ಕಾಅ2/ಇ/ಟೆಂಡರ್/36/2020–21 ದಿನಾಂಕ: 10–02–2021

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2020–21 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ – 06 ಕಾಮಗಾರಿ 2020–21 ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್ (2ನೇ ಕರೆ) – 06 ಕಾಮಗಾರಿಗಳು, 2020–21 ನೇ ಸಾಲಿನ 15ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್ –03 ಕಾಮಗಾರಿ, 2019–20ನೇ ಸಾಲಿನ ಡೇ–ನಲ್ಮ್ ಯೋಜನೆ –01 ಕಾಮಗಾರಿ, 2020–21ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (2ನೇ ಕರೆ) –03 ಕಾಮಗಾರಿ 2017–18ನೇ ಸಾಲಿಗೆ 14ನೇ ಹಣಕಾಸು ಆಯೋಗದ ಜನರಲ್ ಫರ್‌ಫಾರ್ಮೆನ್ಸ್ ಗ್ರಾಂಟ್ (3ನೇ ಕರೆ) –01 ಕಾಮಗಾರಿ, ಸ್ವಚ್ಛ ಭಾರತ್ ಮಿಷನ್ ಯೋಜನೆ –01 ಕಾಮಗಾರಿ, 2019–20ನೇ ಸಾಲಿನ 14 ನೇ ಹಣಕಾಸು ಆಯೋಗದ ಜನರಲ್ ಬೇಸಿಕ್ ಗ್ರಾಂಟ್ –01 ಕಾಮಗಾರಿ ಒಟ್ಟು 22 ಕಾಮಗಾರಿಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜೆನ್ಸಿದಾರರು/ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ www.eproc.karnatak.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್‌ಸೈಟ್ www.davanagerecity.mrc.gov.in ರಲ್ಲಿ ಹಾಗೂ ಪ್ರಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ: +91–8046010000 +91–8022631200 +91–8068948777 ರಿಂದ ಮಾಹಿತಿ ಪಡೆಯಬಹುದು.

(1) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 01–03–2021 ಸಮಯ: 16.30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ & ವೇಳೆ : 01–03–2021 ಸಮಯ: 17.00 (3) ತಾಂತ್ರಿಕ ಬಿಡ್/ಟೆಂಡರ್ ತೆರೆಯುವ ದಿನಾಂಕ & ವೇಳೆ : 03–03–2021 ಸಮಯ: 11.00 (4) ಆರ್ಥಿಕ ಬಿಡ್ ತೆರೆಯುವ ದಿನಾಂಕ & ವೇಳೆ (ಡಬಲ್ ಕವರ್): 04–03–2021 ಸಮಯ: 11.00

ಸಹಿ/– ಆಯುಕ್ತರು, ಮಹಾನಗರಪಾಲಿಕೆ, ದಾವಣಗೆರೆ
ವಾಸಾಸಂಇ/ದಾವಣಗೆರೆ/ಶಿರಡಿ ಸಾಯಿ/675/2020–21

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕೇಂದ್ರೀಯ ಉಗ್ರಾಣ, ಶಾಂತಿನಗರ, ಬೆಂಗಳೂರು-27
ಸಂ: ಬೆಂಮಸಾಸಂ/ಕೇಕ/ಉಖನಿ/ಟೆಂಡರ್/010/2020–21 ದಿನಾಂಕ 15.02.2021

ಟೆಂಡರ್ ಆಹ್ವಾನ ಪ್ರಕಟಣೆ (2ನೇ ಕರೆ)

ಬೆಂ.ಮ.ನ.ಸಾ. ಸಂಸ್ಥೆಗೆ ಅವಶ್ಯಕವಿರುವ ಈ ಕೆಳಗೆ ತೋರಿಸಲಾಗಿರುವ ಸರಕು/ಸೇವೆಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್‌ನ ಮೂಲಕ ಟೆಂಡರ್ ಕರೆಯಲಾಗಿದ್ದು ಟೆಂಡರ್ ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.
ಟೆಂಡರ್ ಸಂಖ್ಯೆ ಮತ್ತು ದಿನಾಂಕ: BMTC/2020/023 Dtd: 15.02.2021.
ವಿಷಯ: ಬಿಎಂಟಿಸಿ ಉದ್ಯೋಗಿಗಳಿಗೆ ಗುಂಪು ವೈದ್ಯಕೀಯ ವಿಮಾ ಯೋಜನೆ.
ಟೆಂಡರ್‌ನ ಅಂದಾಜು ಮೊತ್ತ: ರೂ.1200.00 ಲಕ್ಷಗಳು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: 25.02.2021, 14.30 ಗಂಟೆಗೆ. ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು https://eproc.karnataka.gov.in ನಿಂದ ಪಡೆಯಬಹುದು.
ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)
ವಾಸಾಸಂಇ/ಉ.ನಿ.ನ/2805/ಎಂಸಿಎ/2020–21
ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ನಂ. 5&6, ಜಲಭವನ, ಬಿಟಿಎಂ ಲೇಔಟ್, ಬನ್ನೇರ್‌ಘಟ್ಟ ರಸ್ತೆ, ಬೆಂಗಳೂರು–560029
ದೂ.: 080 – 41106504 – 18/26 ಫ್ಯಾಕ್ಸ್: 080 – 26539206
ಇ–ಮೇಲ್: cekwbbng@gmail.com ವೆಬ್‌ಸೈಟ್: https://eproc.karnataka.gov.in
ನಂ.: ಕೆಡಬ್ಲ್ಯುಬಿ/ಸಿಇ(ಬಿ)/ಆರ್‌ಎಂಎನ್ ಆರ್‌ಸಿಸಿ ಡಬ್ಲ್ಯುಐಆರ್/2197/2020–21 ದಿನಾಂಕ: 15.02.2021

ಟೆಂಡರ್ ಅಧಿಸೂಚನೆ
(ಎಲೆಕ್ಟ್ರಾನಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಕೆಳಕಂಡ ಕಾಮಗಾರಿಗಳಿಗೆ ಆರ್ಥಿಕ ಮತ್ತು ತಾಂತ್ರಿಕ ಅರ್ಹತೆಯನ್ನು ಪೂರೈಸುವ ಏಜೆನ್ಸಿ / ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಐಟಂವಾರು ಟೆಂಡರನ್ನು (ದ್ವಿ ಲಕೋಟೆ ಪದ್ಧತಿ) ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು ಮತ್ತು ವಿವರ: ಟಿ.ಕೆ. ಹಳ್ಳಿಯ ಮೂಲದಿಂದ ರಾಮನಗರ ಮತ್ತು ಚನ್ನಪಟ್ಟಣ ನಗರಗಳಿಗೆ 18 ಎಂಎಲ್‌ಡಿ ಯಿಂದ 26 ಎಂಎಲ್‌ಡಿಗೆ ಬಲ್ಕ್ ನೀರು ಸರಬರಾಜನ್ನು ಅಭಿವೃದ್ಧಿಪಡಿಸುವ ಯೋಜನೆಯಡಿಯಲ್ಲಿ ಅರ್ಕಾವತಿ ನದಿಗೆ ಅಡ್ಡಲಾಗಿ ಇನ್‌ಫಿಲ್ಟ್ರೇಷನ್ ಬಾವಿಯ ಹತ್ತಿರ ಆರ್‌ಸಿಸಿ ಬ್ಯಾರೇಜ್‌ನ ವಿನ್ಯಾಸ ಮತ್ತು ನಿರ್ಮಾಣದ ಕಾಮಗಾರಿ.
ಕಾಮಗಾರಿಯ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ): 362.17
ಭದ್ರತಾ ಠೇವಣಿ (ರೂ. ಲಕ್ಷಗಳಲ್ಲಿ): 5.44
ಟೆಂಡರ್ ಪ್ರಕ್ರಿಯೆ ಶುಲ್ಕ (ರೂ.): ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಂತೆ.
ಮಳೆಗಾಲ ಸೇರಿ ಪೂರ್ಣಗೊಳಿಸುವ ಅವಧಿ (ತಿಂಗಳು): 9 ತಿಂಗಳು.
ಟೆಂಡರ್ ವೇಳಾಪಟ್ಟಿ: (1) ದಸ್ತಾವೇಜುಗಳು 16.02.2021ರ 11:00 ಗಂಟೆಯ ನಂತರ ಲಭ್ಯವಾಗಲಿದೆ. (2) ಪೂರ್ವಭಾವಿ ಸಭೆಯ ದಿನಾಂಕ: 02.03.2021ರ 11:30 ಗಂಟೆಗೆ. (3) ಟೆಂಡರನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು / ಅಪ್‌ಲೋಡ್‌ಮಾಡಲು ಕೊನೆಯ ದಿನಾಂಕ: 16.03.2021ರ 17:30 ಗಂಟೆವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 19.03.2021ರ 11:00 ಗಂಟೆಯ ನಂತರ. ಹೆಚ್ಚಿನ ವಿವರಗಳನ್ನು ಮುಖ್ಯ ಅಭಿಯಂತರರ ಕಛೇರಿ, ಕನನೀಸ ಮತ್ತು ಒ.ಚ. ಮಂಡಳಿ, ಬೆಂಗಳೂರುರನ್ನು ಸಂಪರ್ಕಿಸುವುದು ಅಥವಾ ವೆಬ್‌ಸೈಟ್: https://eproc.karnataka.gov.in ಅಥವಾ ಇ–ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ 080–22371090/22373788, ಇಮೇಲ್: hphelpdesk.blr@intarvo.com ನಿಂದ ಪಡೆಯಬಹುದಾಗಿರುತ್ತದೆ.
ಸಹಿ/–, ಮುಖ್ಯ ಅಭಿಯಂತರರು ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು
ವಾಸಾಸಂಇ/ಉನಿನ/ಎಲ್‌ಸಿ/2817/2020–21
ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು–560070.
ಸಂ:ಕಾಅ/ಗ್ರಾ.ಕುನೀ&ನೈವಿ/ಬೆಂ.ನ/TND/03/2020-21 ದಿನಾಂಕ: 15.02.2021

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ನೋಟೀಸ್

2020–21ನೇ ಸಾಲಿನ JJM ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 02.03.2021 ರ ಸಂಜೆ 5.30 ಗಂಟೆಯವರೆಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ http://www.eproc.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ, ಬೆಂಗಳೂರು
ವಾಸಾಸಂಇ/ಬೆಂ.ನ/ಶಿರಡಿ ಸಾಯಿ/2818/2020–21
ಕೋವಿಡ್–19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ಕೇಂದ್ರ–5,
ಬೃಬೆಂಮಪಾ ಅನೆಕ್ಸ್ ಕಟ್ಟಡ–02, ನರಸಿಂಹರಾಜ ಚೌಕ, ಬೆಂಗಳೂರು–02.
ಸಂಖ್ಯೆ: ಕಾಪಾಅ/ಯೋಕೇ–5/ಟೆಂಡರ್/02/2020–21 ದಿನಾಂಕ: 15.02.2021

ಪ್ರಸ್ತಾವನೆಗಾಗಿ ಕೋರಿಕೆ (ಆರ್‌ಎಫ್‌ಪಿ)
(ದ್ವಿಲಕೋಟೆ ಪದ್ಧತಿ) (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಅಲ್ಪಾವಧಿ ಟೆಂಡರ್ ಪ್ರಕಟಣೆ – 2ನೇ ಕರೆ

ಕಾರ್ಯಪಾಲಕ ಅಭಿಯಂತರರು, (ಯೋಜನೆ ಕೇಂದ್ರ–5) ಅನೆಕ್ಸ್–2 ಕಟ್ಟಡ, ನೆಲ ಮಹಡಿ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಪರವಾಗಿ ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಪ್ರಿನ್ಸಿಪಲ್ ಕಾಮಗಾರಿಯ ಟೆಂಡರಿಗಿಟ್ಟ ಮೊತ್ತ (₹ ಲಕ್ಷಗಳಲ್ಲಿ)	ಇಎಂಡಿ (₹ಗಳಲ್ಲಿ)
ಬೆಂಗಳೂರು ನಗರದಲ್ಲಿ ಹಂತ–2, ಪ್ಯಾಕೇಜ್ 7ರಡಿಯಲ್ಲಿ ಆಯ್ದ ರಸ್ತೆಗಳಿಗೆ ವೈಟ್ ಟಾಪಿಂಗ್ ಮಾಡುವ ಕಾಮಗಾರಿಗಾಗಿ ಪುರಾವೆ ತಪಾಸಣೆ ಒಳಗೊಂಡಂತೆ ನಿರ್ಮಾಣ ಉಸ್ತುವಾರಿ, ಯೋಜನೆ ನಿರ್ವಹಣೆ ಮತ್ತು ಗುಣಮಟ್ಟ ನಿಯಂತ್ರಣಕ್ಕಾಗಿ ಸಮಾಲೋಚಕ ಸೇವೆಗಳನ್ನು ಒದಗಿಸುವುದು. 2ನೇ ಕರೆ	3088.00	ಆದೇಶ ಸಂಖ್ಯೆ: ಆಯುಕ್ತರು/ಪಿಆರ್/ಇ–9251/2020–21, ದಿ: 30.01.2021 ರಂತೆ ವಿನಾಯಿತಿ ನೀಡಲಾಗಿದೆ.

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ 16.02.2021ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಆಕ್ಷೇಪಣೆ/ವಿವರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.02.2021ರ ಸಂಜೆ 4:00 ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯ ದಿನಾಂಕ 22.02.2021ರ ಸಂಜೆ 4:00 ಗಂಟೆಗೆ. (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 23.02.2021ರ ಸಂಜೆ 4:00 ಗಂಟೆಯವರೆಗೆ. (5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 24.02.2021ರ ಸಂಜೆ 4:30 ಗಂಟೆಗೆ. (6) ಆರ್ಥಿಕ ಬಿಡ್ ತೆರೆಯುವುದು. (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತಿಳಿಸಲಾಗುವುದು). ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–5
ಕೋವಿಡ್–19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಉಪನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ,
ವಿಜಯಪುರ. ದೂರವಾಣಿ ಸಂ: 08352–276124,ಫ್ಯಾಕ್ಸ್:08352–276045
ಇ–ಮೇಲ್: dswobijpr-swd-ka@nic.in, dswovjp@gmail.com
ಸಂಖ್ಯೆ: ಉನಿಸಕಇ/ನಿ.ಪ.ಕೇಂ.ವಿ/ಲೆಕ್ಕ/ಸಿಆರ್/2020–21 ದಿನಾಂಕ:08.02.2021

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ)

2021–21 ನೇ ಸಾಲಿಗೆ ವಿಜಯಪುರದ ನಿರಾಶ್ರಿತ ಪರಿಹಾರ ಕೇಂದ್ರಕ್ಕೆ ಆಹಾರ ಪದಾರ್ಥಗಳು ಮತ್ತು ಇತರೆ ಸಾಮಗ್ರಿಗಳನ್ನು ಅರ್ಹ ಟೆಂಡರ್‌ದಾರರಿಂದ ಪಡೆಯುವ ಬಗ್ಗೆ.
Calender of Events:

1	Tender Reference No and Date	No.SWD/2020-21/IND 1398 dt.08.02.2021
2	Amount Put to Tender	Rs.60,00,000/-
3	Last Date & Time for Submission of Tender	24.02.2021 at 5.00pm
4	Sample Submission	23.02.2021 upto 4.30pm
5	Date & Time of opening of Technical bid	26.02.2021 at 11.00am
6	Date & Time of opening of Financial bid	01.03.2021 at 11.00am
7	EMD Amount	Rs.1,20,000/-
8	Venue of opening of tenders & address for communication	Deputy Director, Social welfare Department, Kanakadas Badavene Vijayapura - 586109

Interested eligible Registered in e-procurement portal bidders can download the bid documents with visiting the web site http://e-proc.karnataka.gov.in
Sd/- Deputy Director, Social Welfare Dept, Vijayapura
ವಾಸಾಸಂಇ/ವಿಜಯಪುರ/ಆರ್.ಒ.ಸಂ.537/ಎಂಸಿಎ/2020–21

ಬೆವಿಕಂ BESCOM
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)
ಸಂಖ್ಯೆ: ಅಇಂ(ವಿ)/ಬೆಂಗ್ರಾವೃ/ಉಲೆನಿ/ಲೆ/ಸಲೆ/ಹಿಆಸ/5590 ದಿನಾಂಕ: 06.02.2021

ನೋಟಿಸ್

ಶ್ರೀಯುತ ಆರ್.ಯೋಗೇಶ್, ಕಿರಿಯ ಸಹಾಯಕ, ನಂದಗುಡಿ ಉಪ ವಿಭಾಗರವರ ಇಲಾಖಾ ವಿಚಾರಣೆಯ ಅಂತ್ಯದಲ್ಲಿ ಹಾಜರಾಗದೇ ಇರುವುದು ಹಾಗೂ ಮುಂದುವರೆದು ದಿನಾಂಕ 01.10.2020 ರಿಂದ 04.02.2021 (ಇಲ್ಲಿಯವರೆಗೂ) ಅನಧಿಕೃತವಾಗಿ ಗೈರು ಹಾಜರಾಗಿರುವ ಬಗ್ಗೆ.
ಉಲ್ಲೇಖ: ಈ ಕಚೇರಿ ಆದೇಶ ಸಂಖ್ಯೆ: ಅಇಂ(ವಿ)/ಬೆಂ.ಗ್ರಾ.ವೃ/ಉಲೆನಿ/ಹಿಆಸ/81–85/06.05.2020.

ಶ್ರೀ. ಆರ್. ಯೋಗೇಶ್, ಕಿರಿಯ ಸಹಾಯಕ, ನಂದಗುಡಿ ಉಪ ವಿಭಾಗ, ಬೆ.ವಿ.ಕಂ. ನೀವು, ಉಲ್ಲೇಖಿತ ಇಲಾಖಾ ವಿಚಾರಣೆ ಮುಂದುವರೆದಂತೆ, ವಿಚಾರಣಾಧಿಕಾರಿರವರ ವರದಿಯನ್ವಯ ವಿಚಾರಣೆಯ ಮುಕ್ತಾಯ ಹಂತದಲ್ಲಿನ ಇಲಾಖಾ ವಿಚಾರಣಾ ದಿನಾಂಕಗಳಾದ 19.10.2020, 27.10.2020 ಮತ್ತು 06.11.2020ಗಳಂದು ಇಲಾಖಾ ವಿಚಾರಣೆಗೆ ಗೈರುಹಾಜರಾಗಿದ್ದೀರಿ.
ಅದಾಗ್ಯೂ ವಿಚಾರಣಾಧಿಕಾರಿಗಳ ವರದಿಯನ್ನು ಹಾಗೂ ಈ ವಿಚಾರಣಾ ವರದಿಯಾಧಾರ ನೀಡಲಾದ ಅಂತಿಮ ನೋಟೀಸ್‌ನ ಪ್ರತಿಯನ್ನು ನೋಂದಾಯಿತ ಅಂಚೆ ಮೂಲಕ ನಿಮಗೆ ರವಾನಿಸಲಾಗಿದ್ದು, ಅದನ್ನು ದಿನಾಂಕ 10.12.2020ರಲ್ಲಿ ನಿಮ್ಮ ವಾಸ ಸ್ಥಳವಾದ ವಿಜಯಪುರ, ಕೆ.ಪಿ.ಟಿ.ಸಿ.ಎಲ್. ಕ್ವಾರ್ಟರ್ಸ್‌ನಲ್ಲಿ ಸದರಿ ನೋಟೀಸ್ ಜಾರಿ ಮಾಡಿ ರುಜು ಪಡೆಯಲಾಗಿದೆ. ಆದರೆ, ವಿಚಾರಣಾ ವರದಿಗಾಗಲೀ, ಅಂತಿಮ ನೋಟೀಸ್‌ಗಾಗಲೀ ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲ. ಮುಂದುವರೆದು, ಇಲಾಖಾ ವಿಚಾರಣೆಯಲ್ಲಿ ಸಾಬೀತಾಗಿರುವ ಆರೋಪಗಳಿಗೆ ದಂಡ ವಿಧಿಸುವ ಜೊತೆಗೆ ವಿಚಾರಣೆ ನಡೆಯುವ ಅವಧಿಯನ್ನು ಒಳಗೊಂಡಂತೆ ದಿನಾಂಕ: 04.02.2021ರವರೆಗೆ (ಇಲ್ಲಿಯವರೆಗೂ) ನೀವು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವ ಕಾರಣ, ಸದರಿ ಅನಧಿಕೃತ ಗೈರು ಹಾಜರಿಯನ್ನು, ಈಗಾಗಲೇ ಆದೇಶಿಸಿರುವ ಇಲಾಖಾ ವಿಚಾರಣೆ ಮುಂದುವರಿದ ಭಾಗವಾಗಿ ಪರಿಗಣಿಸಿ ಶಿಸ್ತು ಕ್ರಮ ಜರುಗಿಸುವುದಾಗಿ ನಿಮ್ಮ ಗಮನಕ್ಕೆ ತರಬಯಸುತ್ತೇನೆ.
ಆದ್ದರಿಂದ ಈ ನೋಟೀಸ್ ದಿನಾಂಕದಿಂದ 7 ದಿನಗಳೊಳಗಾಗಿ ಅಧೀಕ್ಷಕ ಇಂಜಿನಿಯರ್(ವಿ), ವಾಣಿಜ್ಯ ಕಾರ್ಯ ಮತ್ತು ಪಾಲನೆ, ಬೆ.ವಿ.ಕಂ. ಬೆಂಗಳೂರು ಗ್ರಾಮೀಣ ವೃತ್ತ, ಟಿ.ಟಿ.ಎಂ.ಸಿ. ಕಟ್ಟಡ, 1ನೇ ಮಹಡಿ, ಕೆಂಗೇರಿ, ಬೆಂಗಳೂರು–60 ರವರಲ್ಲಿ ಹಾಜರಾಗಲು ಅಂತಿಮ ಕರೆಯನ್ನು ನೀಡಿದೆ.
ತಪ್ಪಿದ್ದಲ್ಲಿ, ಸದರಿ ಅನಧಿಕೃತ ಗೈರು ಹಾಜರಾತಿಯನ್ನು ಈಗಾಲೇ ಆದೇಶಿಸಿರುವ ಇಲಾಖಾ ವಿಚಾರಣೆ ಮುಂದುವರಿದ ಭಾಗವಾಗಿ ಪರಿಗಣಿಸಿಲಾಗುವುದು ಹಾಗೂ ಕ.ವಿ.ಪ್ರ.ನಿ.ನಿ. ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ–81/26057/2011–12 ದಿನಾಂಕ: 14.09.2011ರಲ್ಲಿ ಹೇಳಿರುವಂತೆ, ನಿಮ್ಮನ್ನು ಕಂಪನಿ ಸೇವೆಯಿಂದ ವಜಾಗೊಳಿಸಲಾಗುವುದು.
ಶ್ರೀ. ಆರ್. ಯೋಗೇಶ್, ಕಿರಿಯ ಸಹಾಯಕ, ಕೆ.ಪಿ.ಟಿ.ಸಿ.ಎಲ್. ಕ್ವಾರ್ಟರ್ಸ್ ನಂ.23, ವಿಜಯಪುರ ಟೌನ್, ದೇವನಹಳ್ಳಿ ತಾಲ್ಲೂಕು, ವಿಜಯಪುರ–562135
ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಬೆಂಗಳೂರು ಗ್ರಾಮೀಣ ವೃತ್ತ, ಬೆ.ವಿ.ಕಂ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912 ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಇಂಗ್ಲೆಂಡ್ ಎದುರಿನ ಎರಡನೇ ಟೆಸ್ಟ್: ನಾಯಕ ವಿರಾಟ್ ಕೊಹ್ಲಿಯೊಂದಿಗೆ 96 ರನ್‌ಗಳ ಜೊತೆಯಾಟ

ಅಶ್ವಿನ್ ಶತಕ: ಜಯದ ಸನಿಹ ಭಾರತ

ಚೆನ್ನೈ (ಪಿಟಿಐ): ಮಾಂತ್ರಿಕ ಸ್ಪಿನ್ ದಾಳಿ ಮೂಲಕ ಭಾನುವಾರ ಇಂಗ್ಲೆಂಡ್ ತಂಡದ ಬ್ಯಾಟ್ಸ್‌ಮನ್‌ಗಳ ಲಯ ತಪ್ಪಿಸಿದ ರವಿಚಂದ್ರನ್ ಅಶ್ವಿನ್ ಅದೇ ಪಿಚ್‌ನಲ್ಲಿ ಸೋಮವಾರ ಮೋಹಕ ಬ್ಯಾಟಿಂಗ್ ಪ್ರದರ್ಶಿಸಿ ಶತಕದ ಸಂಭ್ರಮದ ಅಲೆಯಲ್ಲಿ ತೇಲಾಡಿದರು. ಭಾರತಕ್ಕೆ ಬೃಹತ್ ಮುನ್ನಡೆ ಗಳಿಸಿಕೊಟ್ಟು ಭರ್ಜರಿ ಗೆಲುವಿನ ಭರವಸೆ ಮೂಡಿಸಿದರು.

ಎರಡನೇ ಟೆಸ್ಟ್ ಪಂದ್ಯದಲ್ಲಿ 482 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿರುವ ಪ್ರವಾಸಿ ತಂಡ ಮೂರನೇ ದಿನದಾಟದ ಮುಕ್ತಾಯಕ್ಕೆ 53 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡಿದೆ.

ಐದನೇ ಶತಕ ಸಿಡಿಸಿದ ಅಶ್ವಿನ್ (106; 148 ಎಸೆತ, 14 ಬೌಂಡರಿ, 1 ಸಿಕ್ಸರ್) ಮತ್ತು ಸೊಗಸಾದ ಅರ್ಧಶತಕ ಗಳಿಸಿದ ನಾಯಕ ವಿರಾಟ್ ಕೊಹ್ಲಿ (62; 149 ಎ, 7 ಬೌಂ) ಏಳನೇ ವಿಕೆಟ್‌ಗೆ ಸೇರಿಸಿದ 96 ರನ್‌ಗಳ ನೆರವಿನಿಂದ ಭಾರತ ಎರಡನೇ ಇನಿಂಗ್ಸ್‌ನಲ್ಲಿ 286 ರನ್ ಗಳಿಸಿತು. ಮೊದಲ ಇನಿಂಗ್ಸ್‌ನಲ್ಲಿ ತಂಡಕ್ಕೆ 195 ರನ್‌ಗಳ ಮುನ್ನಡೆ ಲಭಿಸಿತ್ತು.

ಎರಡನೇ ದಿನ ಒಂದು ವಿಕೆಟ್ ಕಳೆದುಕೊಂಡು 54 ರನ್ ಗಳಿಸಿದ್ದ ಕೊಹ್ಲಿ ಬಳಗ ಸೋಮವಾರ ಬೆಳಿಗ್ಗೆ ರನೌಟ್‌ಗಳ ಸುಳಿಯಲ್ಲಿ ಸಿಲುಕಿ ಸಂಕಷ್ಟಕ್ಕೆ ಒಳಗಾಯಿತು. ದಿನದ ಮೊದಲ ಓವರ್‌ನ ಕೊನೆಯ ಎಸೆತದಲ್ಲಿ ಒಂದು ರನ್‌ಗಾಗಿ ಓಡಲು ಮುಂದಾಗಿ ವಾಪಸ್ ಬಂದ ಚೇತೇಶ್ವರ್ ಪೂಜಾರ ಅವರ ಬ್ಯಾಟ್ ಕ್ರೀಸ್‌ನ ಒಳಗೆ ಸೇರುವ ಮುನ್ನ ನೆಲಕ್ಕೆ ಒತ್ತಿ ಕೈಯಿಂದ ಜಾರಿತು. ಕಾಲು ಮತ್ತು ಕೈಯನ್ನು ಕ್ರೀಸ್ ಒಳಗೆ ಇರಿಸಿ ಬಚಾವಾಗಲು ಪ್ರಯತ್ನಿಸುವಷ್ಟರಲ್ಲಿ ಒಲಿ ಪೋಪ್ ಮತ್ತು ವಿಕೆಟ್ ಕೀಪರ್ ಬೆನ್ ಫೋಕ್ಸ್ ಚಾಕಚಕ್ಯತೆ ತೋರಿಸಿ ಆಗಿತ್ತು. ಎರಡು ಓವರ್‌ಗಳ ನಂತರ ರೋಹಿತ್ ಶರ್ಮಾ ರನ್ ಔಟ್ ಆಗಿ ಮರಳಿದರು. ಲೀಚ್ ಎಸೆತದಲ್ಲಿ ಭರ್ಜರಿ ಹೊಡೆತಕ್ಕಾಗಿ ಮುನ್ನುಗ್ಗಿದ ರಿಷಭ್ ಪಂತ್ ವಾಪಸ್ ಆಗುವಷ್ಟರಲ್ಲಿ ಬೆನ್ ಫೋಕ್ಸ್ ಬೇಲ್ಸ್ ಎಗರಿಸಿದ್ದರು.

ವಿರಾಟ್ ಕೊಹ್ಲಿ ಜೊತೆ ಅಜಿಂಕ್ಯ ರಹಾನೆ ಮತ್ತು ಅಕ್ಷರ್ ಪಟೇಲ್ ಅಲ್ಪಕಾಲದ ಜೊತೆಯಾಟ ಆಡಿದರು. ನಂತರ ಬಂದ ಅಶ್ವಿನ್ ಆರಂಭದಲ್ಲೇ ಭರ್ಜರಿ ಹೊಡೆತಗಳಿಗೆ ಮುಂದಾದರು. ಹೀಗಾಗಿ ರನ್ ಗಳಿಕೆ ಏರುಗತಿಯಲ್ಲಿ ಸಾಗಿತು. ಮೋಹಕ ಡ್ರೈವ್‌ಗಳ ಮೂಲಕ ಕೊಹ್ಲಿ ಸುಲಭವಾಗಿ ರನ್ ಗಳಿಸಿದರೆ ಸ್ವೀಪ್, ಸ್ಕ್ವೇರ್ ಕಟ್ ಮತ್ತು ಪುಲ್ ಶಾಟ್‌ಗಳ ಮೂಲಕ ಅಶ್ವಿನ್ ಮಿಂಚಿದರು.

ಅಶ್ವಿನ್ ಮತ್ತು ಕೊಹ್ಲಿ 177 ಎಸೆತಗಳನ್ನು ಎದುರಿಸಿದರು. ಕೊಹ್ಲಿ ಔಟಾದ ನಂತರ ಕುಲದೀಪ್ ಯಾದವ್, ಇಶಾಂತ್ ಶರ್ಮಾ ಮತ್ತು ಮೊಹಮ್ಮದ್ ಅವರ ಬೆಂಬಲ ಪಡೆದ ಅಶ್ವಿನ್ ಕ್ರೀಸ್‌ನಲ್ಲಿ ನೆಲೆಯೂರಿ ಬೌಲರ್‌ಗಳನ್ನು ಕಂಗೆಡಿಸಿದರು. ಇಶಾಂತ್ ಶರ್ಮಾ ಜೊತೆ 27 ರನ್ ಸೇರಿಸಿದ ಅವರು ಮೊಹಮ್ಮದ್ ಸಿರಾಜ್ ಜೊತೆ 10ನೇ ವಿಕೆಟ್‌ಗೆ 49 ರನ್ ಗಳಿಸಿದರು. ಸಿರಾಜ್ ಅವರನ್ನು ಕ್ರೀಸ್‌ನ ಮತ್ತೊಂದು ತುದಿಯಲ್ಲಿ ಉಳಿಸಿಕೊಂಡು ಶತಕದತ್ತ ಹೆಜ್ಜೆ ಹಾಕಿದ ಅಶ್ವಿನ್ 91 ರನ್ ಗಳಿಸಿದ್ದಾಗ ಸಿಕ್ಸರ್ ಎತ್ತಿದರು. ಬೌಂಡರಿ ಮೂಲಕ ಶತಕವನ್ನೂ ಪೂರೈಸಿದರು. ಎರಡು ಸಿಕ್ಸರ್ ಮೂಲಕ ಮಿಂಚಿದ ಮೊಹಮ್ಮದ್ ಸಿರಾಜ್, ಸಹ ಆಟಗಾರ ಶತಕ ಗಳಿಸಿದಾಗ ಕುಣಿದು ಕುಪ್ಪಳಿಸಿದರೆ ತಂಡದ ಡ್ರೆಸಿಂಗ್ ಕೊಠಡಿಯಲ್ಲೂ ಸಂಭ್ರಮ ಮೇಳೈಸಿತು.

ತವರು ಅಂಗಣದಲ್ಲಿ ಪಂದ್ಯವೊಂದರಲ್ಲಿ ಐದು ವಿಕೆಟ್ ಗೊಂಚಲು ಮತ್ತು ಶತಕ ಗಳಿಸಿದ ಮೊದಲ ಭಾರತೀಯ ಆಟಗಾರ ಎನಿಸಿದ ಅಶ್ವಿನ್ ಒಟ್ಟು ಮೂರು ಬಾರಿ ಐದು ವಿಕೆಟ್ ಮತ್ತು ಶತಕದ ಸಾಧನೆ ಮಾಡಿದ ವಿಶ್ವದ ಎರಡನೇ ಆಟಗಾರ ಆದರು. ಇಂಗ್ಲೆಂಡ್‌ನ ಇಯಾನ್ ಬಾಥಮ್ ಐದು ಬಾರಿ ಈ ಸಾಧನೆ ಮಾಡಿದ್ದಾರೆ.

ರವಿಚಂದ್ರನ್ ಅಶ್ವಿನ್ ಮತ್ತು ವಿರಾಟ್ ಕೊಹ್ಲಿ —ಪಿಟಿಐ ಚಿತ್ರಗಳು

ಐದು ವಿಕೆಟ್–ಶತಕ ಗಳಿಸಿದ ಭಾರತದ ಆಟಗಾರರು

ಆಟಗಾರ	ಎದುರಾಳಿ ತಂಡ	ಸ್ಥಳ	ರನ್	ವಿಕೆಟ್	ವರ್ಷ
ವಿನೂ ಮಂಕಡ್	ಇಂಗ್ಲೆಂಡ್	ಲಾರ್ಡ್ಸ್	184	196ಕ್ಕೆ5	1952
ಪಾಲಿ ಉಮ್ರಿಗರ್	ವೆಸ್ಟ್ ಇಂಡೀಸ್	ಟ್ರಿನಿಡಾಡ್	172*	107ಕ್ಕೆ5	1962
ಆರ್.ಅಶ್ವಿನ್	ವೆಸ್ಟ್ ಇಂಡೀಸ್	ಮುಂಬೈ	103	156ಕ್ಕೆ5	2011
ಆರ್.ಅಶ್ವಿನ್	ವೆಸ್ಟ್ ಇಂಡೀಸ್	ನಾರ್ತ್ ಸೌಂಡ್	113	83ಕ್ಕೆ7	2016
ಆರ್.ಅಶ್ವಿನ್	ಇಂಗ್ಲೆಂಡ್	ಚೆನ್ನೈ	106	43ಕ್ಕೆ5	2021

ಟೆಸ್ಟ್ ಕ್ರಿಕೆಟ್‌ನಲ್ಲಿ ಅಶ್ವಿನ್ ಶತಕಗಳು

ರನ್	ಎದುರಾಳಿ	ಸ್ಥಳ	ವರ್ಷ
103	ವೆಸ್ಟ್ ಇಂಡೀಸ್	ಮುಂಬೈ	2011
124	ವೆಸ್ಟ್ ಇಂಡೀಸ್	ಕೋಲ್ಕತ್ತ	2013
113	ವೆಸ್ಟ್ ಇಂಡೀಸ್	ನಾರ್ತ್ ಸೌಂಡ್	2016
118	ವೆಸ್ಟ್ ಇಂಡೀಸ್	ಗ್ರಾಸ್ ಐಲೆಟ್	2016
106	ಇಂಗ್ಲೆಂಡ್	ಚೆನ್ನೈ	2021

ಮಾಹಿತಿ: ಎಚ್.ಆರ್.ಗೋಪಾಲಕೃಷ್ಣ

ಸ್ಕೋರ್‌ಕಾರ್ಡ್

ಭಾರತ ಮೊದಲ ಇನಿಂಗ್ಸ್ 329 (95.5 ಓವರ್‌ಗಳಲ್ಲಿ)
ಇಂಗ್ಲೆಂಡ್ ಮೊದಲ ಇನಿಂಗ್ಸ್ 134 (59.5 ಓವರ್‌ಗಳಲ್ಲಿ)
ಭಾರತ ಎರಡನೇ ಇನಿಂಗ್ಸ್ 286 (85.5 ಓವರ್‌ಗಳಲ್ಲಿ)
(ಭಾನುವಾರ 18 ಓವರ್‌ಗಳಲ್ಲಿ 1 ವಿಕೆಟ್‌ಗೆ 54)

ರೋಹಿತ್ ಶರ್ಮಾ ಸ್ಟಂಪ್ಡ್ ಬೆನ್ ಫೋಕ್ಸ್ ಬಿ ಜ್ಯಾಕ್ ಲೀಚ್	26
ಚೇತೇಶ್ವರ್ ಪೂಜಾರ ರನೌಟ್ (ಒಲಿ ಪೋಪ್/ಬೆನ್ ಫೋಕ್ಸ್)	7
ವಿರಾಟ್ ಕೊಹ್ಲಿ ಎಲ್‌ಬಿಡಬ್ಲ್ಯು ಬಿ ಮೋಯಿನ್ ಅಲಿ	62
ರಿಷಭ್ ಪಂತ್ ಸ್ಟಂಪ್ಡ್ ಬೆನ್ ಫೋಕ್ಸ್ ಬಿ ಜ್ಯಾಕ್ ಲೀಚ್	8
ಅಜಿಂಕ್ಯ ರಹಾನೆ ಸಿ ಒಲಿ ಪೋಪ್ ಬಿ ಮೋಯಿನ್ ಅಲಿ	10
ಅಕ್ಷರ್ ಪಟೇಲ್ ಎಲ್‌ಬಿಡಬ್ಲ್ಯು ಬಿ ಮೋಯಿನ್ ಅಲಿ	7
ರವಿಚಂದ್ರನ್ ಅಶ್ವಿನ್ ಬಿ ಒಲಿ ಸ್ಟೋನ್	106
ಕುಲದೀಪ್ ಯಾದವ್ ಎಲ್‌ಬಿಡಬ್ಲ್ಯು ಬಿ ಮೋಯಿನ್ ಅಲಿ	3
ಇಶಾಂತ್ ಶರ್ಮಾ ಸಿ ಒಲಿ ಸ್ಟೋನ್ ಬಿ ಜ್ಯಾಕ್ ಲೀಚ್	7
ಮೊಹಮ್ಮದ್ ಸಿರಾಜ್ ಔಟಾಗದೆ	16
ಇತರೆ (ಬೈ 5, ಲೆಗ್‌ಬೈ 15)	20

ವಿಕೆಟ್ ಪತನ: 2-55 (ಪೂಜಾರ, 18.6), 3-55 (ರೋಹಿತ್, 21.1), 4-65 (ರಿಷಭ್, 25.3), 5-86 (ಅಜಿಂಕ್ಯ, 30.3), 6-106 (ಅಕ್ಷರ್, 36.1), 7-202 (ವಿರಾಟ್, 65.4), 8-210 (ಕುಲದೀಪ್, 67.6), 9-237 (ಇಶಾಂತ್, 76.4), 10-286 (ಅಶ್ವಿನ್, 85.5)

ಬೌಲಿಂಗ್: ಒಲಿ ಸ್ಟೋನ್ 6.5–1–21–1, ಜ್ಯಾಕ್ ಲೀಚ್ 33–6–100–4, ಮೋಯಿನ್ ಅಲಿ 32–7–98–4, ಜೋ ರೂಟ್ 4–0–15–0, ಸ್ಟುವರ್ಟ್ ಬ್ರಾಡ್ 9–3–25–0, ಡ್ಯಾನ್ ಲಾರೆನ್ಸ್ 1–0–7–0

ಇಂಗ್ಲೆಂಡ್ ಎರಡನೇ ಇನಿಂಗ್ಸ್ 3ಕ್ಕೆ 53 (19 ಓವರ್‌ಗಳಲ್ಲಿ)

ರೋರಿ ಬರ್ನ್ಸ್ ಸಿ ವಿರಾಟ್ ಕೊಹ್ಲಿ ಬಿ ರವಿಚಂದ್ರನ್ ಅಶ್ವಿನ್	25
ಡಾಮ್ ಸಿಬ್ಲಿ ಎಲ್‌ಬಿಡಬ್ಲ್ಯು ಬಿ ಅಕ್ಷರ್ ಪಟೇಲ್	3
ಡ್ಯಾನ್ ಲಾರೆನ್ಸ್ ಬ್ಯಾಟಿಂಗ್	19
ಜ್ಯಾಕ್ ಲೀಚ್ ಸಿ ರೋಹಿತ್ ಶರ್ಮಾ ಬಿ ಅಕ್ಷರ್ ಪಟೇಲ್	0
ಜೋ ರೂಟ್ ಬ್ಯಾಟಿಂಗ್	2
ಇತರೆ (ಬೈ 4)	4

ವಿಕೆಟ್ ಪತನ: 1-17 (ಸಿಬ್ಲಿ, 8.2), 2-49 (ಬರ್ನ್ಸ್, 15.6), 3-50 (ಜ್ಯಾಕ್, 16.6)

ಬೌಲಿಂಗ್: ಇಶಾಂತ್ ಶರ್ಮಾ 2–1–6–0, ಅಕ್ಷರ್ ಪಟೇಲ್ 9–3–15–2, ರವಿಚಂದ್ರನ್ ಅಶ್ವಿನ್ 8–1–28–1

ಸುದ್ದಿ 2 ನಿಮಿಷ

ರ‍್ಯಾಂಕಿಂಗ್: ರಾಹುಲ್‌ಗೆ ಬಡ್ತಿ

ದುಬೈ (ಪಿಟಿಐ): ಭಾರತ ತಂಡದ ಬ್ಯಾಟ್ಸ್‌ಮನ್, ಕನ್ನಡಿಗ ಕೆ.ಎಲ್. ರಾಹುಲ್ ಐಸಿಸಿ ಟ್ವೆಂಟಿ–20 ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ಒಂದು ಸ್ಥಾನ ಬಡ್ತಿ ಪಡೆದಿದ್ದು, ಎರಡನೇ ಸ್ಥಾನಕ್ಕೇರಿದ್ದಾರೆ. ಐಸಿಸಿ ಸೋಮವಾರ ಪ್ರಕಟಿಸಿರುವ ರ‍್ಯಾಂಕಿಂಗ್‌ನಲ್ಲಿ ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಏಳನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ರಾಹುಲ್ ಬಳಿ ಸದ್ಯ ರೇಟಿಂಗ್ 816 ಪಾಯಿಂಟ್‌ಗಳಿವೆ. ಬ್ಯಾಟ್ಸ್‌ಮನ್‌ಗಳ ಪಟ್ಟಿಯ ಮೊದಲ ಸ್ಥಾನದಲ್ಲಿ ಇಂಗ್ಲೆಂಡ್‌ನ ಡೇವಿಡ್ ಮಲಾನ್ (915) ಇದ್ದಾರೆ. ಕೊಹ್ಲಿ 697 ಪಾಯಿಂಟ್ಸ್ ಕಲೆಹಾಕಿದ್ದಾರೆ.

ಆಸ್ಟ್ರೇಲಿಯಾದ ಆ್ಯರನ್ ಫಿಂಚ್ (808) ಮೂರನೇ ಸ್ಥಾನಕ್ಕೆ ಜಿಗಿದಿದ್ದರೆ, ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ (801) ನಾಲ್ಕನೇ ಸ್ಥಾನಕ್ಕೆ ಜಾರಿದ್ದಾರೆ.

ಅಗ್ರ 10 ಬ್ಯಾಟ್ಸ್‌ಮನ್‌ಗಳ ಪಟ್ಟಿಯಲ್ಲಿ ಭಾರತದ ಆಟಗಾರರಾಗಿ ರಾಹುಲ್ ಮತ್ತು ವಿರಾಟ್ ಮಾತ್ರ ಕಾಣಿಸಿಕೊಂಡಿದ್ದಾರೆ.

ಬೌಲರ್‌ಗಳ ವಿಭಾಗದಲ್ಲಿ ದಕ್ಷಿಣ ಆಫ್ರಿಕಾದ ಸ್ಪಿನ್ನರ್ ತಬ್ರೇಜ್ ಶಂಸಿ ಜೀವನಶ್ರೇಷ್ಠ ಎರಡನೇ ಸ್ಥಾನಕ್ಕೆ ತಲುಪಿದ್ದಾರೆ. ಪಾಕಿಸ್ತಾನದ ವಿರುದ್ಧದ ಸರಣಿಯಲ್ಲಿ ತಬ್ರೇಜ್ ಒಟ್ಟು ಆರು ವಿಕೆಟ್ ಗಳಿಸಿದ್ದು, ಅವರು ಈ ಸ್ಥಾನ ತಲುಪಲು ಕಾರಣವಾಗಿದೆ. ಈ ವಿಭಾಗದಲ್ಲಿ ಅಫ್ಗಾನಿಸ್ತಾನ ರಶೀದ್‌ಖಾನ್ ಅಗ್ರಸ್ಥಾನದಲ್ಲಿದ್ದಾರೆ.

ತಂಡಗಳ ರ‍್ಯಾಂಕಿಂಗ್‌ನಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಅಂಧರ ಕ್ರಿಕೆಟ್: ಫೈನಲ್‌ಗೆ ಒಡಿಶಾ

ಬೆಂಗಳೂರು: ಆರಂಭದ ಆಟಗಾರ ಪ್ರಕಾಶ್ ಜಯರಾಮಯ್ಯ (ಔಟಾಗದೆ 105) ಅವರ ಕೆಚ್ಚೆದೆಯ ಶತಕದ ಹೊರತಾಗಿಯೂ ಕರ್ನಾಟಕ, ಇಲ್ಲಿ ನಡೆಯುತ್ತಿರುವ ನಾಗೇಶ್ ಟ್ರೋಫಿ ರಾಷ್ಟ್ರೀಯ ಟಿ20 ಅಂಧರ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಒಡಿಶಾ ತಂಡಕ್ಕೆ 42 ರನ್‌ಗಳಿಂದ ಮಣಿಯಿತು.

ಸೋಮವಾರ ಆಲ್ವಾಯರ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ರನ್‌ಗಳ ಹೊಳೆಯೇ ಹರಿಯಿತು. ಮೊದಲು ಬ್ಯಾಟ್ ಮಾಡಿದ ಒಡಿಶಾ ನಿಗದಿತ ಓವರ್‌ಗಳಲ್ಲಿ ಮೂರು ವಿಕೆಟ್ ನಷ್ಟಕ್ಕೆ 224 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಮೂರನೇ ವಿಕೆಟ್ ಜೊತೆಯಾಟದಲ್ಲಿ ಸುಖರಾಮ್ ಮಜಿ (87, 47 ಎಸೆತ, 13 ಬೌಂಡರಿ) ಮತ್ತು ಪ್ರಕಾಶ್ ಬುವೆ (88, 54 ಎಸೆತ, 13 ಬೌಂ.) 152 ರನ್ ಸೇರಿಸಿ ತಂಡದ ಮೊತ್ತವನ್ನು 200ರ ಗಡಿ ದಾಟಿಸಿದರು.

ಕರ್ನಾಟಕದ ಪ್ರಕಾಶ್ ಜಯರಾಮಯ್ಯ ಆಕ್ರಮಣಕಾರಿ ಆಟವಾಡಿದರೂ ಇನ್ನೊಂದು ಕಡೆಯಿಂದ ಬೆಂಬಲ ದೊರೆಯಲಿಲ್ಲ. 65 ಎಸೆತಗಳನ್ನು ಎದುರಿಸಿದ ಅವರ ಇನಿಂಗ್ಸ್‌ನಲ್ಲಿ 16 ಬೌಂಡರಿಗಳಿದ್ದವು. ತಂಡವು 3 ವಿಕೆಟ್ ಕಳೆದುಕೊಂಡು 182 ರನ್ ಗಳಿಸಿತು. ಇನ್ನೊಂದು ಸೆಮಿಫೈನಲ್‌ನಲ್ಲಿ ಆಂಧ್ರಪ್ರದೇಶ ತಂಡವು ಹರಿಯಾಣ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿತು. ಫೈನಲ್ ಪಂದ್ಯ ಮಂಗಳವಾರ ನಡೆಯಲಿದೆ.

ಸಂಕ್ಷಿಪ್ತ ಸ್ಕೋರುಗಳು: ಒಡಿಶಾ: 20 ಓವರ್‌ಗಳಲ್ಲಿ 3ಕ್ಕೆ 224 (ಸುಖರಾಂ ಮಜಿ ಔಟಾಗದೆ 87, ಪಂಕಜ್ ಬುವೆ 88). ಕರ್ನಾಟಕ: 20 ಓವರ್‌ಗಳಲ್ಲಿ 3ಕ್ಕೆ 182 (ಪ್ರಕಾಶ್ ಜಯರಾಮಯ್ಯ ಔಟಾಗದೆ 105). ಫಲಿತಾಂಶ: ಒಡಿಶಾ ತಂಡಕ್ಕೆ 42 ರನ್‌ಗಳ ಜಯ.

ಹರಿಯಾಣ: 20 ಓವರ್‌ಗಳಲ್ಲಿ 5ಕ್ಕೆ 198 (ದೀಪಕ್ ಮಲಿಕ್ 90, ರೋಹಿತ್ ಶರ್ಮಾ 68). ಆಂಧ್ರಪ್ರದೇಶ: 18.4 ಓವರ್‌ಗಳಲ್ಲಿ 3 ವಿಕೆಟ್‌ಗೆ 199 (ಅಜಯಕುಮಾರ್ ರೆಡ್ಡಿ 60). ಫಲಿತಾಂಶ: ಆಂಧ್ರಪ್ರದೇಶ ತಂಡಕ್ಕೆ ಏಳು ವಿಕೆಟ್‌ಗಳ ಜಯ.

ಕ್ಯಾಚ್ ಇಟ್ ನೋಡಿ...! ನಿಮ್ಮ Prajavani.net ನಲ್ಲಿ ವಿಶೇಷ ಸರಣಿ
ಕ್ರೀಡಾ ಕಥೆಗಳು
QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಐಎಸ್‌ಎಲ್: ಎರಡು ಗೋಲು ಗಳಿಸಿದ ಕ್ಲೀಟನ್ ಸಿಲ್ವ

ಚೆಟ್ರಿಗೆ 200; ಬಿಎಫ್‌ಸಿಗೆ ಜಯ

ಬ್ಯಾಂಬೊಲಿಮ್ (ಪಿಟಿಐ): ಆಕ್ರಮಣಕಾರಿ ಆಟವಾಡಿದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಸೋಮವಾರ ಭರ್ಜರಿ ಗೆಲುವು ದಾಖಲಿಸಿತು. ಆರಂಭದಲ್ಲಿ ಕ್ಲೀಟನ್ ಸಿಲ್ವಾ ಎರಡು ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರೆ ತಂಡಕ್ಕಾಗಿ 200ನೇ ಪಂದ್ಯ ಆಡಿದ ನಾಯಕ ಸುನಿಲ್ ಚೆಟ್ರಿ (ಐಎಸ್‌ಎಲ್‌ನಲ್ಲಿ 91 ಪಂದ್ಯ) ಎರಡು ಗೋಲು ದಾಖಲಿಸಿದರು. ಇವರಿಬ್ಬರ ಆಟದ ನೆರವಿನಿಂದ ಮುಂಬೈ ಸಿಟಿ ಎಫ್‌ಸಿಯನ್ನು ಬಿಎಫ್‌ಸಿ 4–2ರಲ್ಲಿ ಮಣಿಸಿತು.

ಮೊದಲ ನಿಮಿಷದಲ್ಲೇ ಕ್ಲೀಟನ್ ಸಿಲ್ವಾ ಚೆಂಡನ್ನು ಗುರಿ ಮುಟ್ಟಿಸಿ ಬೆಂಗಳೂರಿಗೆ ಮುನ್ನಡೆ ತಂದುಕೊಟ್ಟರು. ಅಂಗಣದ ಮಧ್ಯದಲ್ಲಿ ಬಿಎಫ್‌ಸಿಯ ಅಜಿತ್ ಕುಮಾರ್ ಚೆಂಡನ್ನು ನಿಯಂತ್ರಿಸಿ ಮುನ್ನಡೆಯಲು ಪ್ರಯತ್ನಿಸಿದರು. ಆದರೆ ಎದುರಾಳಿ ತಂಡದ ರೇನಿಯರ್ ಫರ್ನಾಂಡಿಸ್ ಅದನ್ನು ತಡೆದರು. ಮೇಲೆ ಚಿಮ್ಮಿದ ಚೆಂಡು ಸುನಿಲ್ ಚೆಟ್ರಿ ಬಳಿಗೆ ಸಾಗಿತು. ಅವರು ಅದನ್ನು ಬಲಭಾಗದಲ್ಲಿದ್ದ ಉದಾಂತ ಸಿಂಗ್ ಅವರತ್ತ ಅಟ್ಟಿದರು. ಉದಾಂತ ಸಿಂಗ್ ನೇರವಾಗಿ ಗೋಲುಪೆಟ್ಟಿಗೆಯತ್ತ ತಳ್ಳಿದರು. ಓಡಿ ಬಂದ ಕ್ಲೀಟನ್ ಸಿಲ್ವಾ ಮೋಹಕವಾಗಿ ಗುರಿ ಮುಟ್ಟಿಸಿದರು.

3ನೇ ನಿಮಿಷದಲ್ಲಿ ಸುನಿಲ್ ಚೆಟ್ರಿ ಚೆಂಡಿನೊಂದಿಗೆ ಮುನ್ನುಗ್ಗಿ ಗೋಲುಪೆಟ್ಟಿಗೆಯತ್ತ ಒದ್ದರು. ಆದರೆ ಹರ್ಮನ್ ಸಂತಾನ ಚುರುಕಿನ ಆಟ ಪ್ರದರ್ಶಿಸಿ ಅದನ್ನು ತಡೆದರು. ಸಮಯ ಸಾಗಿದಂತೆ ಉಭಯ ತಂಡಗಳು ಆಕ್ರಮಣ ಮತ್ತು ರಕ್ಷಣೆಗೆ ಒತ್ತು ನೀಡಿ ಆಡಿದವು. 22ನೇ ನಿಮಿಷದಲ್ಲಿ ಕ್ಲೀಟನ್ ಸಿಲ್ವಾ ಮತ್ತೊಮ್ಮೆ ಮ್ಯಾಜಿಕ್ ಮಾಡಿದರು. ಬಲಭಾಗದಿಂದ ಸಿಸ್ಕೊ ಹರ್ನಾಂಡಸ್ ಫ್ರೀ ಕಿಕ್ ಮೂಲಕ ನೀಡಿದ ಚೆಂಡಿಗೆ ಓಡಿ ಬಂದು ತಲೆಯೊಡ್ಡಿದ ಕ್ಲೀಟನ್ ಗೋಲು ಗಳಿಸಿ ಸಂಭ್ರಮಿಸಿದರು.

ಬಿಎಫ್‌ಸಿಗೆ ದ್ವಿತೀಯಾರ್ಧದ ಆರಂಭದಲ್ಲಿ ಆ್ಯಡಂ ಲೀ ಫಾಂಡ್ರೆ ಪೆಟ್ಟು ನೀಡಿದರು. 50ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿದರು. ಆದರೆ 57ನೇ ನಿಮಿಷದಲ್ಲಿ ಸುನಿಲ್ ಚೆಟ್ರಿ ಮಿಂಚಿನ ಗೋಲು ಗಳಿಸಿ ಮುನ್ನಡೆ ಹೆಚ್ಚಿಸಿದರು. 72ನೇ ನಿಮಿಷದಲ್ಲಿ ಫಾಂಡ್ರೆ ಮತ್ತೊಂದು ಗೋಲು ಗಳಿಸಿ ಬಿಎಫ್‌ಸಿ ಪಾಳಯದಲ್ಲಿ ಆತಂಕ ಮೂಡಿಸಿದರು. ಆದರೆ ಇಂಜುರಿ ಅವಧಿಯಲ್ಲಿ ಚೆಟ್ರಿ ಏಕಾಂಗಿಯಾಗಿ ಚೆಂಡನ್ನು ಡ್ರಿಬಲ್ ಮಾಡುತ್ತ ಸಾಗಿ ಮೋಹಕ ಗೋಲು ಗಳಿಸಿದರು.

ಸುನಿಲ್ ಚೆಟ್ರಿ ಗೋಲು ಗಳಿಸಲು ಮುನ್ನುಗ್ಗಿದರು –ಐಎಸ್‌ಎಲ್ ಮೀಡಿಯಾ ಚಿತ್ರ

ದಾಖಲೆಯತ್ತ ನಡಾಲ್

ಮೆಲ್ಬರ್ನ್ (ಎಎಫ್‌ಪಿ): ಸ್ಪೇನ್‌ನ ರಫೆಲ್ ನಡಾಲ್ ದಾಖಲೆಯ ಗ್ರ್ಯಾನ್‌ಸ್ಲಾಂ ಪ್ರಶಸ್ತಿಯತ್ತ ತಮ್ಮ ನಾಗಾಲೋಟವನ್ನು ಮುಂದುವರಿಸಿದರು. ಆಸ್ಟ್ರೇಲಿಯಾ ಓಪನ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಸೋಮವಾರ ಅಮೋಘ ಆಟವಾಡಿದ ಅವರು ಇಟಲಿಯ ಫ್ಯಾಬಿಯೊ ಫಾಗ್ನಿನಿ ಎದುರು 6-3, 6-4, 6-2ರ ಜಯ ಗಳಿಸಿ ಎಂಟರ ಘಟ್ಟ ಪ್ರವೇಶಿಸಿದರು.

ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದರೆ ಅತಿ ಹೆಚ್ಚು ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಮುಡಿಗೇರಿಸಿಕೊಂಡಿರುವ ರೋಜರ್ ಫೆಡರರ್ (20) ದಾಖಲೆಯನ್ನು ಅವರು ಮುರಿಯಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅಮೆರಿಕದ ಶೆಲ್ಬಿ ರಾಜರ್ಸ್ ಸವಾಲು ಮೀರಿನಿಂತ ಆಸ್ಟ್ರೇಲಿಯಾದ ಆ್ಯಷ್ಲಿ ಬಾರ್ಟಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದು 43 ವರ್ಷಗಳ ನಂತರ ಈ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ಸ್ಥಳೀಯ ಆಟಗಾರ್ತಿ ಎಂಬ ಗರಿಮೆ ತಮ್ಮದಾಗಿಸುವತ್ತ ಹೆಜ್ಜೆ ಹಾಕಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಇಟಲಿಯ ಮಟಿಯೊ ಬರೆಟನಿ ಅವರಿಂದ ವಾಕ್ ಓವರ್ ಪಡೆದ ಗ್ರೀಸ್‌ನ ಸ್ಟೆಫನೊಸ್ ಸಿಸಿಪಸ್ ಎಂಟರ ಘಟ್ಟದಲ್ಲಿ ನಡಾಲ್ ವಿರುದ್ಧ ಸೆಣಸುವರು.

ಪುರುಷರ ಸಿಂಗಲ್ಸ್ ಇನ್ನೊಂದು ಪಂದ್ಯದಲ್ಲಿ ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ 6-4, 6-2, 6-3ರಿಂದ ಅಮೆರಿಕದ ಮೆಕೆಂಜಿ ಮೆಕ್‌ಡೊನಾಲ್ಡ್ ಎದುರು ಗೆದ್ದರು.

ಮಾಜಿ ಫ್ರೆಂಚ್ ಓಪನ್ ಚಾಂಪಿಯನ್ ಆ್ಯಷ್ಲಿ ಬಾರ್ಟಿ ಸೋಮವಾರ ಶೆಲ್ಬಿ ರಾಜರ್ಸ್ ವಿರುದ್ಧ 6-3, 6-4ರಲ್ಲಿ ಗೆಲುವು ಸಾಧಿಸಿದರು. ಟೂರ್ನಿಯಲ್ಲಿ ಚಾಂಪಿಯನ್ ಆದರೆ 1978ರಲ್ಲಿ ಕ್ರಿಸ್ ಒನೀಲ್ ಅವರ ನಂತರ ಪ್ರಶಸ್ತಿ ಗೆಲ್ಲುವ ಆಸ್ಟ್ರೇಲಿಯಾದ ಮೊದಲ ಮಹಿಳೆ ಅವರಾಗಲಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನ ಮತ್ತೊಂದು ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬೆಲ್ಜಿಯಂನ ಎಲಿಸ್ ಮರ್ಟೆನ್ಸ್ ಅವರನ್ನು ಜೆಕ್ ಗಣರಾಜ್ಯದ ಕರೊಲಿನಾ ಮುಚೋವ 7-6 (7/5), 7-5ರಲ್ಲಿ ಮಣಿಸಿದರು.

ಶ್ರೇಯಾಂಕರಹಿತ ಆಟಗಾರ್ತಿ ಅಮೆರಿಕದ ಜೆಸ್ಸಿಕಾ ಪೆಗುಲಾ 6-4, 3-6, 6-3ರಿಂದ ಐದನೇ ಶ್ರೇಯಾಂಕದ ಎಲಿನಾ ಸ್ವಿಟೋಲಿನಾ ಎದುರು ಗೆದ್ದು ಎಂಟರಘಟ್ಟ ತಲುಪಿದರು.



ರಫೆಲ್ ನಡಾಲ್

ಕ್ರಿಕೆಟ್‌ಗೆ ನಮನ್ ವಿದಾಯ

ಭೋಪಾಲ್ (ಪಿಟಿಐ): ಭಾರತ ತಂಡದ ಮಾಜಿ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ನಮನ್ ಓಜಾ ಅವರು ಸೋಮವಾರ ಎಲ್ಲಾ ಮಾದರಿಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ.

37ರ ಹರೆಯದ ಓಜಾ ಮಧ್ಯಪ್ರದೇಶದವರು. ಭಾರತ ಕ್ರಿಕೆಟ್ ತಂಡದ ಪರ ತಲಾ ಒಂದು ಟೆಸ್ಟ್, ಏಕದಿನ ಪಂದ್ಯ ಮತ್ತು ಎರಡು ಟಿ–20 ಪಂದ್ಯಗಳನ್ನು ಆಡಿದ್ದಾರೆ. ಬಲಗೈ ಬ್ಯಾಟ್ಸ್‌ಮನ್ ಆಗಿದ್ದ ಓಜಾ 146 ಪ್ರಥಮ ದರ್ಜೆ ಪಂದ್ಯಗಳಿಂದ 41.67ರ ಸರಾಸರಿಯಲ್ಲಿ 9,753 ರನ್ ಕಲೆಹಾಕಿದ್ದಾರೆ. ಅದರಲ್ಲಿ 22 ಶತಕಗಳು ಸೇರಿವೆ.

‘ನಾನು ಕ್ರಿಕೆಟ್‌ಗೆ ನಿವೃತ್ತಿ ಹೇಳಲು ಇದು ಸಕಾಲ. ಇದೊಂದು ಸುದೀರ್ಘ ಪಯಣ. ರಾಷ್ಟ್ರೀಯ ಹಾಗೂ ರಾಜ್ಯ ತಂಡವನ್ನು ಪ್ರತಿನಿಧಿಸುವ ಕನಸು ನನಸಾಗಿದೆ. ಇಂತಹ ಅವಕಾಶ ಸಿಕ್ಕಿದ್ದಕ್ಕೆ ಹೆಮ್ಮೆಯಿದೆ’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಓಜಾ ತಿಳಿಸಿದರು.



ನಮನ್ ಓಜಾ —ಪಿಟಿಐ ಚಿತ್ರ

ಯುವರಾಜ್ ಮೇಲೆ ಎಫ್‌ಐಆರ್ ದಾಖಲು

ಹಿಸ್ಸಾರ್, ಹರಿಯಾಣ: ಲೆಗ್ ಸ್ಪಿನ್ನರ್ ಯಜುವೇಂದ್ರ ಚಾಹಲ್ ಬಗ್ಗೆ ಜಾತಿ ನಿಂದನೆಯ ಹೇಳಿಕೆ ನೀಡಿದ ಆರೋಪದ ಮೇಲೆ ಮಾಜಿ ಕ್ರಿಕೆಟಿಗ ಯುವರಾಜ್ ಸಿಂಗ್ ವಿರುದ್ಧ ಹರಿಯಾಣ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ರಜತ್ ಕಲ್ಸಾನ್ ಎಂಬ ವಕೀಲರು ನೀಡಿದ ದೂರಿನ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಕಳೆದ ವರ್ಷ ರೋಹಿತ್ ಶರ್ಮಾ ಜೊತೆ ನಡೆಸಿದ ಇನ್‌ಸ್ಟಾಗ್ರಾಂ ಸಂವಾದದಲ್ಲಿ ಸಾಮಾಜಿಕ ತಾಣಗಳಲ್ಲಿ ಚಾಹಲ್ ಹಾಕುವ ಪೋಸ್ಟ್‌ಗಳ ಬಗ್ಗೆ ಮಾತನಾಡುತ್ತ ಯುವರಾಜ್ ವಿವಾದಾಸ್ಪದ ಹೇಳಿಕೆ ನೀಡಿದ್ದರು. ಇದಕ್ಕೆ ವಿರೋಧ ವ್ಯಕ್ತವಾಗುತ್ತಿದ್ದಂತೆ ಕ್ಷಮೆ ಕೋರಿದ್ದರು.

ಕಿಂಗ್ಸ್ ಇಲೆವನ್ ಇನ್ನು ಪಂಜಾಬ್ ಕಿಂಗ್ಸ್?

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕಿಂಗ್ಸ್ ಇಲೆವನ್ ಪಂಜಾಬ್ ತಂಡದ ಹೆಸರು ಮುಂದಿನ ಆವೃತ್ತಿಯಿಂದ ಪಂಜಾಬ್ ಕಿಂಗ್ಸ್ ಎಂದು ಕರೆಸಿಕೊಳ್ಳಲಿದೆ. ದೀರ್ಘ ಕಾಲ ಚಿಂತನೆ ನಡೆಸಿ ಹೆಸರು ಬದಲಿಸಲು ನಿರ್ಧರಿಸಿರುವ ಫ್ರಾಂಚೈಸ್‌ನ ಮನವಿಯನ್ನು ಬಿಸಿಸಿಐ ಮಾನ್ಯ ಮಾಡಿದೆ.

‘ತಂಡದ ಹೆಸರು ಬದಲಿಸಲು ಕೆಲ ಕಾಲದಿಂದ ಪ್ರಯತ್ನ ನಡೆದಿತ್ತು. ಮುಂದಿನ ಐಪಿಎಲ್ ಟೂರ್ನಿಗಿಂತ ಮೊದಲು ಇದನ್ನು ಕಾರ್ಯಗತಗೊಳಿಸುವುದು ಫ್ರಾಂಚೈಸ್ ಉದ್ದೇಶವಾಗಿತ್ತು. ಇದೊಂದು ಅವಸರದ ತೀರ್ಮಾನವಾಗಿರಲಿಲ್ಲ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಇಸ್ರೇಲ್–ಯುಎಇ ತೈಲ ಒಪ್ಪಂದ: ಹವಳದ ದಿಬ್ಬಗಳಿಗೆ ಕಂಟಕ?

ಐಲಾಟ್ (ಇಸ್ರೇಲ್) (ಎಎಫ್‌ಪಿ): ಸಂಯುಕ್ತ ಅರಬ್ ಒಕ್ಕೂಟದ (ಯುಎಇ) ಜತೆಗೆ ಇಸ್ರೇಲ್ ಮಾಡಿಕೊಂಡಿರುವ ಪೈಪ್‌ಲೈನ್ ಮೂಲಕ ಕಚ್ಚಾತೈಲ ಸರಬರಾಜು ಮಾಡುವ ಐತಿಹಾಸಿಕ ಒಪ್ಪಂದದಿಂದ ಕೆಂಪು ಸಮುದ್ರದ ಅಪರೂಪದ ಹವಳದ ದಿಬ್ಬಗಳ ಮೇಲೆ ತೀವ್ರ ಪರಿಣಾಮ ಬೀರಲಿದೆ ಎಂದು ಇಸ್ರೇಲ್ ಪರಿಸರವಾದಿಗಳು ಎಚ್ಚರಿಸಿದ್ದಾರೆ.

ಕಳೆದ ವರ್ಷದ ಅಂತ್ಯದಲ್ಲಿ ಇಸ್ರೇಲ್–ಯುಎಇ ನಡುವ ಈ ಐತಿಹಾಸಿಕ ತೈಲ ಸರಬರಾಜು ಒಪ್ಪಂದ ನಡೆದಿತ್ತು. ಅದು ಜಾರಿಗೆ ಬರುವ ದಿನಗಳು ಸಮೀಪಿಸುತ್ತಿದ್ದಂತೆಯೇ ಪರಿಸರವಾದಿಗಳಿಂದ ಈ ಆಕ್ಷೇಪ ವ್ಯಕ್ತವಾಗಿದೆ.

ಟ್ಯಾಂಕರ್‌ನಿಂದ ಪೈಪ್‌ಲೈನ್‌ಗೆ ಕಚ್ಚಾತೈಲ ತುಂಬಿಸುವ ಸ್ಥಳದಿಂದ ಕೇವಲ 200 ಮೀಟರ್ ದೂರದಲ್ಲೇ ಹವಳದ ದಿಬ್ಬ ಇದೆ. ತೈಲ ಸೋರಿಕೆಯಿಂದ ದಿಬ್ಬಗಳಿಗೆ ತೊಂದರೆ ಆಗುವುದು ಮಾತ್ರವಲ್ಲ, ಮೇಲಿಂದ ಮೇಲೆ ಬರುವ ಟ್ಯಾಂಕರ್‌ಗಗಳಿಂಲೂ ಈ ಪ್ರದೇಶದಲ್ಲಿ ದಟ್ಟಣೆ ಉಂಟಾಗಿ ಈ ಅಪರೂಪದ ಕಡಲ ಜೀವಿಗಳಿಗೆ ತೊಂದರೆಯಾಗಲಿದೆ ಎಂದು ಪರಿಸರವಾದಿಗಳು ಹೇಳಿದ್ದಾರೆ.

‘ಸುದ್ದಿ ಪಡೆಯುವ ಗೂಗಲ್, ಫೇಸ್‌ಬುಕ್ ದುಡ್ಡು ಕೊಡಬೇಕು’

ಕ್ಯಾನ್‌ಬೆರಾ (ಎಪಿ): ‘ಸುದ್ದಿ, ಲೇಖನ ಸೇರಿದಂತೆ ಇತರೆ ವಿಷಯಗಳನ್ನು ಬಳಸಿಕೊಳ್ಳಲು ಗೂಗಲ್ ಮತ್ತು ಫೇಸ್‌ಬುಕ್ ಇನ್ನು ಮುಂದೆ ಮಾಧ್ಯಮಗಳಿಗೆ ಹಣ ಪಾವತಿಸಬೇಕು ಎಂಬ ವಿಶ್ವದ ಮೊದಲ ಕಾನೂನು ಜಾರಿಗೆ ತರಲು ಆಸ್ಟ್ರೇಲಿಯಾ ಸಜ್ಜಾಗಿದೆ.

‘ಈ ಕುರಿತ ಮಾತುಕತೆ ಅಂತಿಮ ಹಂತದಲ್ಲಿದೆ. ಈ ಒಪ್ಪಂದದ ಬಗ್ಗೆ ವಾರಾಂತ್ಯದಲ್ಲಿ ಫೇಸ್‌ಬುಕ್ ಮುಖ್ಯಸ್ಥ ಮಾರ್ಕ್ ಜುಕರ್‌ಬರ್ಗ್ ಮತ್ತು ಗೂಗಲ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಸುಂದರ್ ಪಿಚೈ ಅವರ ಜತೆಗೆ ಚರ್ಚೆ ನಡೆಸಿದ್ದೇವೆ. ಅಲ್ಲದೆ ಈ ಬಗ್ಗೆ ಆಸ್ಟ್ರೇಲಿಯಾ ಸುದ್ದಿ ಮಾಧ್ಯಮಗಳ ಕಾರ್ಯನಿರ್ವಹಣಾಧಿಕಾರಿಗಳೊಂದಿಗೂ ಮಾತುಕತೆ ನಡೆಸಲಾಗಿದೆ’ ಎಂದು ಸಚಿವ ಜೋಶ್ ಫ್ರೈಡೆನ್‌ಬರ್ಗ್ ಅವರು ಮಾಹಿತಿ ನೀಡಿದರು.

‘ಈ ಒಪ್ಪಂದದ ಬಗ್ಗೆ ಕಳೆದ 48 ರಿಂದ 72 ಗಂಟೆಗಳಲ್ಲಿ ಪ್ರಗತಿ ಸಾಧಿಸಿದ್ದೇವೆ. ಗೂಗಲ್ ಮತ್ತು ಫೇಸ್‌ಬುಕ್‌ನೊಂದಿಗೆ ಮಹತ್ವದ ವಾಣಿಜ್ಯ ಒಪ್ಪಂದ ನಡೆಯಲಿದೆ ಎಂಬ ಭರವಸೆಯಿದೆ. ಈ ಒಪ್ಪಂದ, ದೇಶಿಯ ಮಾಧ್ಯಮಗಳಿಗೆ ಸಹಾಯ ಮಾಡಲಿದೆ’ ಎಂದು ಫ್ರೈಡೆನ್‌ಬರ್ಗ್ ಹೇಳಿದರು.

‘ಬೇರೆ ಯಾವುದೇ ರಾಷ್ಟ್ರ ಈ ರೀತಿಯ ಕ್ರಮಗಳನ್ನು ಕೈಗೊಂಡಿಲ್ಲ. ಇದು ತುಂಬಾ ಕಠಿಣ ಪ್ರಕ್ರಿಯೆಯಾಗಿದೆ’ ಎಂದು ಅವರು ಅಭಿಪ್ರಾಯಪಟ್ಟರು. ಈ ಒಪ್ಪಂದದ ಬಗ್ಗೆ ಗೂಗಲ್ ಅಥವಾ ಫೇಸ್‌ಬುಕ್ ಸಂಸ್ಥೆಗಳು ಪ್ರತಿಕ್ರಿಯೆ ನೀಡಿಲ್ಲ.

ಸೂಕಿಗೆ 17ರವರೆಗೆ ನ್ಯಾಯಾಂಗ ಬಂಧನ

ಯಾಂಗೂನ್ (ರಾಯಿಟರ್ಸ್/ಎಪಿ): ‘ಮ್ಯಾನ್ಮಾರ್‌ನ ಉಚ್ಚಾಟಿತ ನಾಯಕಿ ಆಂಗ್ ಸಾನ್ ಸೂಕಿ ಅವರು ಸೋಮವಾರದ ಬದಲಿಗೆ ಬುಧವಾರ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗಲಿದ್ದಾರೆ. ಅಲ್ಲಿಯವರೆಗೆ ಅವರನ್ನು ಬಂಧನದಲ್ಲೇ ಇರಿಸಲು ಸೇನಾಡಳಿತ ನಿರ್ಧರಿಸಿದಂತಿದೆ’ ಎಂದು ಸೂಕಿ ಪರ ವಕೀಲರು ತಿಳಿಸಿದ್ದಾರೆ.

‘ಪ್ರಾರಂಭದ ವಿಚಾರಣೆ ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆಯಲಿದೆ, ಆದರೆ ಈ ವಿಚಾರಣೆ ನ್ಯಾಯಸಮ್ಮತವಾಗಿ ನಡೆಯುತ್ತದೆಯೇ ಎಂಬುದನ್ನು ನೀವೇ ಊಹಿಸಿ’ ಎಂದು ವಕೀಲ ಖಿನ್ ಮಾಂಗ್ ಜಾವ್ ಅವರು ಮಾಧ್ಯಮದವರಿಗೆ ತಿಳಿಸಿದರು.

ಮಿಲಿಟರಿ ಆಡಳಿತದ ವಿರುದ್ಧ ಪ್ರತಿಭಟನೆ: ಮ್ಯಾನ್ಮಾರ್‌ನ ಯಾಂಗೂನ್‌ನಲ್ಲಿ ಮಿಲಿಟರಿ ಆಡಳಿತವನ್ನು ವಿರೋಧಿಸಿ ಭಾನುವಾರ ರಾತ್ರಿ ಪ್ರತಿಭಟನೆ ನಡೆದಿದೆ. ಈ ಹಿನ್ನೆಲೆಯಲ್ಲಿ ನಗರದೆಲ್ಲೆಡೆ ಸೇನಾ ಪಡೆಯನ್ನು ನಿಯೋಜಿಸಲಾಗಿದ್ದು, ಇಂಟರ್‌ನೆಟ್ ಸೇವೆ ಸ್ಥಗಿತಗೊಳಿಸಲಾಗಿದೆ. ಅಮೆರಿಕ, ಕೆನಡಾ ಮತ್ತು 12 ಯುರೋಪಿಯನ್ ರಾಷ್ಟ್ರಗಳ ರಾಯಭಾರಿಗಳು ಪ್ರತಿಭಟನಕಾರರ ಮೇಲೆ ಹಿಂಸಾತ್ಮಕ ನಡೆಯನ್ನು ಕೈಗೊಳ್ಳಬಾರದು. ನ್ಯಾಯಯುತವಾಗಿ ಸರ್ಕಾರದ ವಿರುದ್ಧ ಪ್ರತಿಭಟಿಸಲು ಬಿಡಬೇಕು ಎಂದು ಮ್ಯಾನ್ಮಾರ್ ಸೇನೆಗೆ ಮನವಿ ಮಾಡಿದ್ದಾರೆ. ರಾಜಕೀಯ ನಾಯಕರು ಮತ್ತು ಕಾರ್ಯಕರ್ತರನ್ನು ತಕ್ಷಣವೇ ಬಿಡುಗಡೆಗೊಳಿಸಬೇಕು ಎಂದು ಪ್ರತಿಭಟನಕಾರರು ಒತ್ತಾಯಿಸಿದ್ದಾರೆ.

ಮ್ಯಾನ್ಮಾರ್‌ನ ನಾಯ್ಪಿಟಾವ್‌ನಲ್ಲಿ ಮಿಲಿಟರಿ ಆಡಳಿತವನ್ನು ವಿರೋಧಿಸಿ ಪ್ರತಿಭಟನೆ ನಡೆಯಿತು— ರಾಯಿಟರ್ಸ್ ಚಿತ್ರ

ಕ್ಯಾಪಿಟಲ್ ಹಿಲ್ ಹಿಂಸಾಚಾರ: ಸ್ವತಂತ್ರ ತನಿಖೆಗೆ ಹೆಚ್ಚಿದ ಒತ್ತಡ

ವಾಷಿಂಗ್ಟನ್(ಎಪಿ): ಕ್ಯಾಪಿಟಲ್ ಹಿಲ್ ಕಟ್ಟಡದಲ್ಲಿ ಜನವರಿ 6ರಂದು ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಸ್ವತಂತ್ರ ತನಿಖೆ ನಡೆಸಬೇಕು ಎನ್ನುವ ಒತ್ತಾಯಕ್ಕೆ ಅಪಾರ ಬೆಂಬಲ ವ್ಯಕ್ತವಾಗುತ್ತಿದೆ.

ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಖುಲಾಸೆಗೊಳಿಸಿ ಸೆನೆಟ್ ತೀರ್ಪು ನೀಡಿದ ಬಳಿಕ, ಈ ವಿಷಯವನ್ನು ಹಲವು ಸಂಸದರು ಮತ್ತು ಸಂಘಟನೆಗಳ ಪ್ರಮುಖರು ಪ್ರಸ್ತಾಪಿಸಿದ್ದಾರೆ.

2001ರ ಸೆಪ್ಟೆಂಬರ್ 11ರ ಘಟನೆಯ ರೀತಿಯಲ್ಲಿ ತನಿಖೆಯನ್ನು ಕೈಗೊಳ್ಳಬೇಕು ಎನ್ನುವ ಅಭಿಪ್ರಾಯ ವ್ಯಕ್ತವಾಗಿದ್ದು, ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರು ಸಹ ಇದೇ ರೀತಿಯ ತನಿಖೆಗೆ ಬೆಂಬಲ ಸೂಚಿಸಿದ್ದಾರೆ.

ಟ್ರಂಪ್ ಅವರ ಆಪ್ತ ಸೆನೆಟರ್ ಲಿಂಡ್ಸೆ ಗ್ರಹಾಂ ಸಹ ಈ ಬಗ್ಗೆ ಪ್ರತಿಕ್ರಿಯಿಸಿದ್ದು, ‘ಸೆಪ್ಟೆಂಬರ್ 11ರ ದುರಂತದ ಬಗ್ಗೆ ಕೈಗೊಂಡ ತನಿಖೆಯ ರೀತಿಯಲ್ಲೇ ಈ ಹಿಂಸಾಚಾರದ ತನಿಖೆಯನ್ನು ಕೈಗೊಳ್ಳಬೇಕು. ಇದಕ್ಕಾಗಿ ಆಯೋಗವನ್ನು ರಚಿಸಬೇಕು. ಜತೆಗೆ, ಇಂತಹ ಹಿಂಸಾಚಾರ ಭವಿಷ್ಯದಲ್ಲಿ ನಡೆಯದಂತೆಯೂ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಹೇಳಿದ್ದಾರೆ.

ಲೈಂಗಿಕ ಸಮಸ್ಯೆ!
ನಮ್ಮ ಆಯುರ್ವೇದಿಕ ಔಷಧವನ್ನು ಉಪಯೋಗ ಮಾಡಿ ಲೈಂಗಿಕ ಸಮಯ ಬಯಸಿದಂತೆ ಹೆಚ್ಚಿಸಿಕೊಳ್ಳಿ. ಹಾಗೂ ಲಿಂಗವರ್ಧಕದಿಂದ ನಿಮ್ಮ ಲಿಂಗದ ಗಾತ್ರವನ್ನು ಹೆಚ್ಚಿಸಿಕೊಳ್ಳಿ. ಕೂಡಲೇ ಕರೆ ಮಾಡಿ.
08809409921



ನಿಮಗೆ ಮೆಟ್ಟಿಲುಗಳನ್ನು ಏರಲು ಸಮಸ್ಯೆ ಆಗುತ್ತಿದೆಯೇ?
ಕೀಲು ಮತ್ತು ಸ್ನಾಯುಗಳ ನೋವು, ಮಂಡಿ ನೋವು, ಸೊಂಟ ನೋವು, ತಲೆ ನೋವು, ಸೆಳೆತ, ಉಳುಕು, ಊತ, ಹಳೆಯ ಏಟಿನ ನೋವು, ಕತ್ತು ಸೆಳೆತ, ಮೀನಗಂಡ ನೋವು, ಭುಜದ ನೋವು, ಹಿಮ್ಮಡಿ ನೋವು, ಮಣಿಕಟ್ಟು ನೋವು, ನರಗಳಿಗೆ ಸಂಬಂಧಿತ ತೊಂದರೆಗಳು, ಶೀತದಿಂದ ಉಂಟಾಗುವ ನೋವು, ಹಳೆಯ ನೋವುಗಳಿಗೆ ಕೂಡ ಇದು ಪ್ರಯೋಜನಕಾರಿ.
ಸೂಚನೆ: ಸಾರ್ವಜನಿಕರ ಪ್ರಯೋಜನಕ್ಕಾಗಿ ಈ ಮಾಹಿತಿ ನೀಡಲಾಗುತ್ತಿದ್ದು, ಕೀಲುಗಳ ನೋವಿನಿಂದ ಮುಕ್ತರಾಗಿರಿ.
ಸೊಂಟ ನೋವು
ಮಂಡಿ ನೋವು
ಕತ್ತು ನೋವು
ಆಯುರ್ವೇದಿಕ ಔಷಧಿ
ಚತುರ್ಭುಜ® ತೈಲ ಮತ್ತು ಟ್ಯಾಬ್ಲೆಟ್
ಬಳಸುವ ವಿಧಾನ : ಪ್ರತಿದಿನ ಮೂರು ಬಾರಿ 8–10 ಮಿ.ಲೀ. ತೈಲದಿಂದ 15–20 ನಿಮಿಷಗಳ ಕಾಲ ಮಾಲಿಶ್ ಮಾಡಿರಿ, ತೈಲವನ್ನು ಧಾರಾಳವಾಗಿ ಬಳಸಲು ಹಿಂಜರಿಯದಿರಿ. ನೋವುಗಳು ತ್ವಚೆಯ ಮೇಲ್ಭಾಗದಲ್ಲಿ ಇರುವುದಿಲ್ಲ, ಮೂಳೆ ಮತ್ತು ಸ್ನಾಯುಗಳಲ್ಲಿ ಹುದುಗಿರುತ್ತದೆ. ಹೀಗಾಗಿ, ಸಾಕಷ್ಟು ಪ್ರಮಾಣದ ತೈಲದಿಂದ ಮಾಲಿಶ್ ಮಾಡುವುದರಿಂದ ತೈಲವು ಆಳಕ್ಕೆ ಇಳಿದು ಆರಾಮ ನೀಡುತ್ತದೆ. ಕಡಿಮೆ ತೈಲ ಬಳಸುವುದರಿಂದ ಆಳಕ್ಕೆ ತಲುಪುವುದಿಲ್ಲ. ಅಧಿಕ ಪರಿಣಾಮ ಪಡೆಯಲು ಚತುರ್ಭುಜ ತೈಲದ ಜೊತೆಗೆ ನಿಯಮಿತವಾಗಿ ಬೆಳಗ್ಗೆ 1 ರಾತ್ರಿ 1 ಚತುರ್ಭುಜ ಟ್ಯಾಬ್ಲೆಟ್ ಕೂಡ ಸೇವಿಸಿರಿ. ನಿಯಮಿತವಾಗಿ ಉಪಯೋಗಿಸಿದ ಬಹುತೇಕ ರೋಗಿಗಳಿಗೆ ಸಾಕಷ್ಟು ಲಾಭವಾಗಿದೆ.
ಎಲ್ಲಾ ಮೆಡಿಕಲ್ ಮತ್ತು ಆಯುರ್ವೇದಿಕ ಮಳಿಗೆಗಳಲ್ಲಿ ಲಭ್ಯ.